ಭಾಷೆ : ಸ್ವರೂಪ-ವ್ಯಾಪ್ತಿ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಸಂಶೋಧನಾ ನಿಬಂಧ)

ಸಂಶೋಧಕರು

ಸೌಮ್ಯ ಸಿ.ಆರ್.

ಎಂ.ಫಿಲ್. ಅಭ್ಯರ್ಥಿ
ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ,
ಕರ್ನಾಟಕ ಸಂಘ (ರಿ), ಮಂಡ್ಯ.

ಮಾರ್ಗದರ್ಶಕರು

ಡಾ. ಹಾ.ತಿ. ಕೃಷ್ಣೇಗೌಡ

ಕಾರ್ಯ ನಿರ್ವಾಹಕ ಸಂಪಾದಕ
ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ.), ಮಂಡ್ಯ.
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

೨೦೦೭-೦೮

462

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

462

AKSHARA GRANTHALAYA
ACC.NO. 130099

ಭಾಷೆ : ಸ್ವರೂಪ-ವ್ಯಾಪ್ತಿ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ನಿಬಂಧ)

ಸಂಶೋಧಕರು

ಸೌಮ್ಯ ಸಿ.ಆರ್.

ಎಂ.ಫಿಲ್. ಅಭ್ಯರ್ಥಿ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ.

ಮಾರ್ಗದರ್ಶಕರು

ಡಾ. ಹಾ.ತಿ. ಕೃಷ್ಣೇಗೌಡ

ಕಾರ್ಯ ನಿರ್ವಾಹಕ ಸಂಪಾದಕ
ಕನ್ನಡ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬.

ಕನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ.), ಮಂಡ್ಯ.
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

೨೦೦೭-೦೮

400
SOU b
130099

ಮಾರ್ಗದರ್ಶಕರ ದೃಢೀಕರಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭-೦೮ನೇ ಸಾಲಿಗೆ ಕನ್ನಡ ಎಂ.ಫಿಲ್. ಅಭ್ಯರ್ಥಿಯಾಗಿ ಇವರು ಪ್ರವೇಶ ಪಡೆದಿರುತ್ತಾರೆ. ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಭಾಷೆ : ಸ್ವರೂಪ -ವ್ಯಾಪ್ತಿ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತಾರೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯವನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸಿರುತ್ತಾರೆ.

ಡಾ. ಹಾ.ತಿ. ಕೃಷ್ಣೇಗೌಡ
ಕಾರ್ಯ ನಿರ್ವಾಹಕ ಸಂಪಾದಕ
ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು - ೫೭೦ ೦೦೬.

ದಿನಾಂಕ : ೨೧.೧.೨೦೦೮
ಸ್ಥಳ : ಮೈಸೂರು

ಸಂಶೋಧಕರ ದೃಢೀಕರಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭-೦೮ನೇ ಸಾಲಿಗೆ ಕನ್ನಡ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಭಾಷೆ : ಸ್ವರೂಪ - ವ್ಯಾಪ್ತಿ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ. ಹಾ.ತಿ. ಕೃಷ್ಣೇಗೌಡ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯವನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸೌಮ್ಯ ಸಿ.ಆರ್.

ಸೌಮ್ಯ ಸಿ.ಆರ್.

ಎಂ.ಫಿಲ್. ಅಭ್ಯರ್ಥಿ

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ,

ಕರ್ನಾಟಕ ಸಂಘ (ರಿ), ಮಂಡ್ಯ.

ದಿನಾಂಕ: ೨೬/೦೬/೨೦೦೮

ಸ್ಥಳ : ಮಂಡ್ಯ.

ಪರಿವಿಡಿ

ಒಂದು. ಭಾಷೆ ಎಂದರೇನು ?

ವ್ಯಾಖ್ಯಾನ ಹಾಗೂ ಭಾಷೆಯ ಸ್ವಭಾವ ೧-೭

ಎರಡು. ಭಾಷೆಯ ರೂಪಗಳು ೮-೩೦

* ವ್ಯಕ್ತಿ ಭಾಷೆ
* ಉಪ ಭಾಷೆ
* ಪ್ರಮಾಣ ಭಾಷೆ

ಮೂರು. ಭಾಷೆಯ ವಿವಿಧ ಅಂಗಗಳು ೩೧-೫೪

* ಧ್ವನಿ
* ಧ್ವನಿಮಾ
* ಆಕೃತಿಮಾ
* ವಾಕ್ಯ

ನಾಲ್ಕು. ಭಾಷೆಯ ವ್ಯಾಪ್ತಿ ೫೫-೯೦

* ಭಾಷೆ ಮತ್ತು ಸಾಹಿತ್ಯ
* ಭಾಷೆ ಮತ್ತು ಸಮಾಜ
* ಭಾಷೆ ಮತ್ತು ಸಂಸ್ಕೃತಿ
* ಭಾಷೆ ಮತ್ತು ಭಾಷಾಂತರ

ಐದು. ಭಾಷೆಯ ಪ್ರಸ್ತುತತೆ ಮತ್ತು ಪ್ರಯೋಜನ ೯೧-೧೦೦

ಗ್ರಂಥಾಲಯ, ವಿಶ್ವವಿದ್ಯಾಲಯ. ಹಂಪಿ

ಅಧ್ಯಾಯ-ಒಂದು

ಭಾಷೆ ಎಂದರೇನು ? ವ್ಯಾಖ್ಯಾನ ಹಾಗೂ ಭಾಷೆಯ ಸ್ವಭಾವ.



ಪ್ರವೇಶಿಕೆ : ನೀವೇಕೆ ಭಾಷೆಯನ್ನು ಬಳಸುವಿರಿ ? ಎಂಬ ಪ್ರಶ್ನೆಯನ್ನು ಯಾರಾದರೂ ಒಮ್ಮೆ ಕೇಳಿದರೆ ಅದರಲ್ಲಿ ಹುರುಳಿಲ್ಲವೆಂದು ಸುಮ್ಮನಾಗುತ್ತೇವೆ. ಏಕೆಂದರೆ ಭಾಷೆ ನಮ್ಮೊಡನೆ ಅಷ್ಟು ಸಹಜವಾಗಿ ಬೆರೆತು ಹೋಗಿದೆ. ಚಿಂತನೆ, ಕನಸು, ಮನಸ್ಸು, ಬುದ್ಧಿ, ನೆನಪು ಈ ಪರಿಚಿತ ವಿಷಯಗಳನ್ನು ಸಮರ್ಪಕವಾಗಿ ನಾವು ವ್ಯಾಖ್ಯಾನಿಸುವಲ್ಲಿ ವಿಫಲರಾಗಿದ್ದೇವೆ. ಆದರೆ ಯಾವ ಸೂತ್ರೀಕರಣವೂ ಇಲ್ಲದೆ ಅವುಗಳ ಪರಿಕಲ್ಪನೆ ನಮಗಿದೆ. ಈ ನಿಟ್ಟಿನಲ್ಲಿ ಭಾಷೆಯೂ ಒಂದು 'ಪರಿಕಲ್ಪನೆ' ಎಂದು ಹೇಳಬಹುದು. ಸಾಮಾನ್ಯವಾಗಿ ನಾವು ಸಂಶೋಧನೆಯಲ್ಲಿ ಅನ್ವೇಷಣೆ (Discover), ಸಂಶೋಧನೆ (Research), ಆವಿಷ್ಕಾರ (Invention) ಎನ್ನುವ ಪದಗಳನ್ನು ಬಳಸುತ್ತಿರುತ್ತೇವೆ. ಈ ನಿಟ್ಟಿನಲ್ಲಿ 'ಇಡೀ ಮಾನವ ಪ್ರಪಂಚದ ಸಂಶೋಧನೆಗಳಲ್ಲಿ ಅದ್ಭುತವಾದದ್ದು ಭಾಷಾಶೋಧನೆ' ಎಂಬ ಡಾರ್ವಿನ್ನರ ಹೇಳಿಕೆಯ ಮೇರೆಗೆ ಭಾಷೆಯು ಮನುಷ್ಯರಿಂದ ಆವಿಷ್ಕಾರಗೊಂಡದ್ದು ಎನ್ನುವುದನ್ನು ತಿಳಿಯಬಹುದು.

ಮಾತಿಗೆ ವಾಸ್ತವ ಜಗತ್ತನ್ನು ನಿಯಂತ್ರಿಸುವ ಶಕ್ತಿ ಇದೆ. ಇದು ಮಾನವ ಜೀವನದ ಅವಿಭಾಜ್ಯ ಅಂಗವೆಂಬುದು ತಿಳಿದ ವಿಷಯ. ಮನುಷ್ಯನ ಎಲ್ಲಾ ಕಾರ್ಯಗಳಿಗೂ,ವಿಚಾರಗಳಿಗೂ ಅನಿವಾರ್ಯವೂ, ಸಮರ್ಪಕವೂ, ಸಾರ್ಥಕವೂ, ಆಕರ್ಷಕವೂ, ಪ್ರಯೋಜಕವೂ ಆದುದು ಭಾಷೆ. ಮಾನವನ ಬುದ್ಧಿ ಶಕ್ತಿಯ ಪ್ರಚೋದನೆಗೆ ಮತ್ತು ವಿಕಾಸಕ್ಕೆ ಭಾಷೆಯ ನೆರವು ಅಗತ್ಯ. ದಂಡಿಯ ಕಾವ್ಯದರ್ಶದಲ್ಲಿ ಬರುವ ಭಾಷೆಯ ಮಹತ್ವವನ್ನು ಕುರಿತ ಸಾಲುಗಳು ಹೀಗಿವೆ:

'ಇದಮಂಧಂ ತಂಮ ಕೃತ್ಸ್ನಂ ಜಾಯತೇ ಭುವನತ್ರಯಂ ।
ಯದಿ ಶಬ್ದಾಹ್ವಯಂ ಜ್ಯೋತಿ : ಆಸಂಸಾರಂನ ದೀಪ್ಯತೇ॥'[೧] (ದಂಡಿ)

ಮಾತೆಂಬ ಜ್ಯೋತಿ ಸಂಸಾರದ ಉದ್ದಕ್ಕೂ ಬೆಳಗದೆ ಇದ್ದರೆ ಅಶೇಷ ಭುವನತ್ರಯವು ಕಗ್ಗತ್ತಲಾಗಿ ಬಿಡುತ್ತಿತ್ತು' ಎನ್ನುವ ಮಾತನ್ನು ಅಲಂಕಾರಿಕನಾದ 'ದಂಡಿ' ಮೇಲಿನಂತೆ ಸೂತ್ರಪ್ರಾಯವಾಗಿ ತಿಳಿಸಿದ್ದಾನೆ.

ಅಗತ್ಯತೆ ಮನುಷ್ಯನನ್ನು ಕಾರ್ಯಪ್ರವೃತನನ್ನಾಗಿಸುತ್ತದೆ ಎಂಬುದು ಅಕ್ಷರ ಸಹ ಸತ್ಯ. ಇಂತಹ ಒತ್ತಡವೇ ಮನುಷ್ಯನು ಭಾಷೆಯನ್ನು ಕಲಿಯುವಂತೆ ಪ್ರೇರೇಪಿಸಿತು. ಭಾಷೆ ಒಂದು ಅರ್ಥಪೂರ್ಣ ಸಂವಹನ ಮಾಧ್ಯಮ. ಭಾಷೆ ಒಂದು ಸಾಮಾಜಿಕ ಕ್ರಿಯೆ, ಸಮಾಜವನ್ನು ಕಟ್ಟಿರುವಂತಹದ್ದು ಭಾಷೆ. ಈ ಭಾಷೆಗೆ ಯಾವುದೇ ವರ್ಗ, ವರ್ಣ, ಲಿಂಗ, ಜಾತಿಯ ಸೋಂಕು ಇಲ್ಲ. ೧೨ನೆಯ ಶತಮಾನದ ಪ್ರಸಿದ್ಧ ವಚನಕಾರ, ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಕರಾದ ಬಸವಣ್ಣನವರು :

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ।

---

೧. ಎಂ.ಎಚ್. ಕೃಷ್ಣಯ್ಯ:ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ: ಸುವಿದ್ಯಾಪ್ರಕಾಶನ, ಬೆಂಗಳೂರು:ಪ್ರ:ವರ್ಷ-೧೯೯೩,ಪು.ಸಂ.೩

ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು ॥

ಎಂದು ಮಾತಿನ ಬಳಕೆಯ ಮಹತ್ವವನ್ನು ಹೇಳಿ, ಸಾಮಾಜಿಕ ಪರಿವರ್ತನೆಯಲ್ಲಿ ಭಾಷೆಯ ಪ್ರಾಮುಖ್ಯತೆಯನ್ನು ತಿಳಿಸುತ್ತಾರೆ. ಅಷ್ಟೇ ಅಲ್ಲದೇ ಆಯಾಯ ಸಂದರ್ಭಕ್ಕೆ ತಕ್ಕಂತೆ ಮಾತುಗಳನ್ನು ಬಳಸಬೇಕೆಂಬ ನೀತಿಯನ್ನು ಪರೋಕ್ಷವಾಗಿ ತಿಳಿಸಿಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಭಾಷೆಯು ಸಾರ್ವತ್ರಿಕವಾದ 'ಸಾಮಾಜಿಕ ಪ್ರಕ್ರಿಯೆ' ಎಂದು ಹೇಳಬಹುದು.

ಸಮಾಜದಲ್ಲಿ ವ್ಯಕ್ತಿ ತನ್ನಷ್ಟಕ್ಕೆ ಸರ್ವ ಸ್ವತಂತ್ರನಾಗಿರದೆ, ಆಯಾ ಸಮುದಾಯದ ಅವಿಚ್ಛಿನ್ನ ಘಟಕವಾಗಿರುತ್ತಾನೆ. ವ್ಯಕ್ತಿಯ ದೈನಂದಿನ ವ್ಯವಹಾರಗಳಿಗೆ, ಭಾವನೆ, ಆಲೋಚನೆ, ಅಭಿಪ್ರಾಯಗಳ ಅಭಿವ್ಯಕ್ತಿಗೆ, ಶಿಕ್ಷಣ ಮತ್ತು ಆಡಳಿತ ವ್ಯವಹಾರಗಳಿಗೆ, ಸಂಸ್ಕೃತಿ ಐಕ್ಯತೆಗೆ ಸಾಹಿತ್ಯ ಮತ್ತು ಕಲೆಯ ಬೆಳವಣಿಗೆಗೆ, ವಿಜ್ಞಾನ ಮತ್ತು ಸಂಶೋಧನೆಗಳ ವಿಕಾಸಕ್ಕೆ, ಜ್ಞಾನಾರ್ಜನೆಗಾಗಿ, ವ್ಯಕ್ತಿತ್ವ ವಿಕಾಸಕ್ಕೆ, ಆಧುನಿಕ ಜಗತ್ತಿನ ವಿದ್ಯಮಾನ ತಿಳಿಯಲು ಆಧುನಿಕ ಜೀವನ ಶೈಲಿಗೆ ಹೊಂದಾಣಿಕೆಯಾಗಲು, ಮಾಹಿತಿ ಮತ್ತು ಜ್ಞಾನವನ್ನು ದಾಖಲು ಮಾಡಲು ಸರ್ವಕ್ಷೇತ್ರಗಳಿಗೂ ಭಾಷೆ ಅತ್ಯಗತ್ಯ. ಭಾಷೆ ಇಂದು ಮನುಷ್ಯನ ಸ್ವಭಾವವೇ ಆಗಿದೆ. ಇಂತಹ ಭಾಷೆ ಮತ್ತು ಸ್ವರೂಪ ವ್ಯಾಪ್ತಿಗಳನ್ನು ಕುರಿತ ಅಧ್ಯಯನ ಹಾಗೂ ಅದರ ಮಹತ್ವವನ್ನು ಈ ಮುಂದಿನಂತೆ ವಿವೇಚಿಸಲಾಗಿದೆ.

'ಭಾಷೆ' ಎನ್ನುವುದು 'ಭಾಷ್' ಎನ್ನುವ ಸಂಸ್ಕೃತ ಧಾತುವಿನಿಂದ ಬಂದಿರುವಂತಹದ್ದು. ಇದಕ್ಕೆ ಇಂಗ್ಲೀಷ್‌ನಲ್ಲಿ Language ಎನ್ನುವ ಸಂವಾದಿ ಪದ ಇದೆ. ಲ್ಯಾಟಿನ್‌ನಲ್ಲಿ Lingua, ಕನ್ನಡದಲ್ಲಿ ಮಾತು, ನುಡಿ ಎಂದು ಕರೆಯಲಾಗುತ್ತದೆ. ಭಾಷೆಯನ್ನು 'ಇದಮಿತ್ಥಂ' ಎಂದು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಭಾಷೆಯನ್ನು ಸಂವಹನ ಮಾಧ್ಯಮವಾಗಿ ಬಳಸುವ ನಾವೆಲ್ಲರು ಭಾಷೆಯ ಬಗ್ಗೆ, ಅದರ ಸ್ವರೂಪ-ಲಕ್ಷಣ, ವ್ಯಾಕರಣದ ನಿಯಮಗಳ ಬಗ್ಗೆ ನಮ್ಮದೇ ಆದ ಕಲ್ಪನೆಯನ್ನು ಇಟ್ಟುಕೊಂಡಿರುತ್ತೇವೆ. ಈ ಕಲ್ಪನೆಯಷ್ಟೇ ಭಾಷೆಯನ್ನು ಸೂತ್ರೀಕರಿಸುವ ಸಾಧನವಾಗಲಾರದು. ಭಾಷಾ ವಿಜ್ಞಾನಿಗಳು, ಅಧ್ಯಯನಕಾರರು ಭಾಷೆಯ ಬಗೆಗೆ ಚಿಂತಿಸಿ ಭಾಷೆಯ ಸ್ವರೂಪವನ್ನು ವ್ಯಾಖ್ಯಾನಗಳ ಮೂಲಕ ಹೇಳಲು ಪ್ರಯತ್ನಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಈ ಮುಂದೆ ಪರಿಶೀಲಿಸಬಹುದು.

ವಿದ್ವಾಂಸರ ವ್ಯಾಖ್ಯಾನಗಳು :

"೧. **ಪ್ಲೇಟೋ :** ಭಾಷೆ ಎಂದರೇನು ಎಂಬುದನ್ನು ಮೊದಲಿಗೆ ಸೂತ್ರೀಕರಿಸಲು ಪ್ರಯತ್ನಿಸಿದ ಈತ 'ಧ್ವನಿಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಸಾಧನವೇ ಭಾಷೆ' ಎಂದಿದ್ದಾನೆ.

೨. **ಎಡ್ವರ್ಡ್ ಸಫೀರ್ :** Language is purely human and non-instictive method of communicating ideas. emotions and desires by means of a system of Volunterilly produced symbols. 'ತಮ್ಮ ಭಾವ-ಭಾವನೆಗಳನ್ನೂ, ಭಾವಾವೇಶಗಳನ್ನು ಬಯಕೆಗಳನ್ನೂ

ಸ್ವಪ್ರೇರಿತ ಧ್ವನಿಸಂಕೇತಗಳಿಂದ ಮನುಷ್ಯರು ಇನ್ನೊಬ್ಬರಿಗೆ ತಿಳಿಸುವ ವಿಧಾನವೇ ಭಾಷೆ' ಎಂದಿದ್ದಾನೆ.

೩. ಫರ್ಡಿನೆಂಟ್-ಡಿ-ಸಸ್ಸೂರ್: 'ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ ' ಎಂದಿದ್ದಾರೆ.

೪. ಹೆನ್ರಿಸ್ವೀಟ್ : 'ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವುದೇ ಭಾಷೆ' ಎಂದಿದ್ದಾರೆ.

೫. ಸ್ಟುಟೇವಾಂಟ್ : 'Langauge is a system of arbitrary vocal symbols by which members of a society act and react' ಎಂದಿದ್ದಾರೆ.

೬. ಬ್ಲಾಕ್ ಮತ್ತು ಟ್ರೇಗರ್ : 'Language is a system of arbitrary vocal symbols by means of which a social group co-operates' ಎಂದಿದ್ದಾರೆ.'' [೧]

ಯಾದೃಚ್ಛಿಕ ಧ್ವನಿಸಂಕೇತಗಳ ವ್ಯವಸ್ಥೆಯೇ ಭಾಷೆ ಎಂಬ ವಿವರಣೆಯು ಬಹುಜನರ ಒಪ್ಪಿಗೆಯನ್ನು ಪಡೆದಿರುವುದಲ್ಲದೆ, ಉಳಿದ ಸೂತ್ರಗಳಿಗಿಂತ ಹೆಚ್ಚು ಸಮರ್ಪಕವಾಗಿದೆ.

ಭಾಷೆಯ ಉಗವನ್ನು ಕುರಿತು ಭಾಷಾ ವಿಜ್ಞಾನಿಗಳು ಬಹಳಷ್ಟು ಚರ್ಚಿಸಿದ್ದಾರೆ. ಭಿನ್ನ-ಭಿನ್ನ ವಾದಗಳು, ತರ್ಕಗಳು ಸಿದ್ಧಾಂತಗಳು ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ. ''೧೮೬೬ರಲ್ಲಿ ಸ್ಥಾಪಿತವಾದ ಫ್ರಾನ್ಸಿನ ಭಾಷಾಪರಿಷತ್ತು ತನ್ನ ಸಭೆಯಲ್ಲಿ ಭಾಷೆಯ ಉಗಮುವನ್ನು ಕುರಿತ ಪ್ರಬಂಧಗಳನ್ನು ಓದಬಾರದೆಂಬ ವಿಧಿಯನ್ನು ಕಲ್ಪಿಸಿಕೊಂಡಿತ್ತು''[೨] ಇದರಿಂದ ಭಾಷೆಯ ಉಗಮದ ಬಗ್ಗೆ ವಿವರಿಸುವುದು ಎಷ್ಟು ಜಟಿಲವಾದ ಸಮಸ್ಯೆ ಎಂಬುದು ತಿಳಿಯುತ್ತದೆ. ಭಗವಂತನೇ ಭಾಷೆಯನ್ನು ಸೃಷ್ಟಿಸಿದ್ದಾನೆ ಎಂದು ವೇದಗಳ ಕಾಲದಲ್ಲಿ ನಂಬಲಾಗಿತ್ತು. ಈ ಕುರಿತು 'ದೇವಿಂ ವಾಚಮಜಯಂತ ದೇವಾಃ' ಎಂಬ ವಾಕ್ಯವಿದೆ. ಭಾಷಾ ವಿಜ್ಞಾನಿಯಾದ ಲೀಬ್ನಿಜ಼್ ಎಂಬಾತನು ಭಾಷೆ ಅನುಕರಣೆಯಿಂದ ಲಭಿಸಿತು ಎಂದಿದ್ದಾನೆ. ಆದರೇ ಗುಡುಗು, ಮಿಂಚು ಇವುಗಳ ಸದ್ದಿನ ಅನುಕರಣೆಯಿಂದ ಭಾಷೆ ಹುಟ್ಟಿತು ಎಂಬುದನ್ನು ರೆನಸ್ ಎಂಬಾತ ಒಪ್ಪುವುದಿಲ್ಲ. ಆದಿಮಾನವರ ಉದ್ಗಾರಗಳೇ ಭಾಷೆಗಳಾದವು ಎಂದು ಕೆಲವರು ನಂಬಿದ್ದರು. ಹರ್ಡರ್ ಎಂಬ ಭಾಷಾ ವಿಜ್ಞಾನಿ ಈ ವಾದವನ್ನು ತಳ್ಳಿಹಾಕುತ್ತಾನೆ. ಪ್ರಕೃತಿಯಲ್ಲಿನ ಯಾವ ವಸ್ತುಗಳನ್ನು ಬಡಿದರು ಅದು ಅನುರಣನೆಯನ್ನು ಮಾಡುತ್ತದೆ. ಇಂತಹ ಅನುರಣನೆಯೇ ಭಾಷೆಯ ಹುಟ್ಟಿಗೆ ಕಾರಣ ಎಂದು ಮಾಕ್ಸ್‌ಮುಲ್ಲರ್ ಹೇಳಿ ಮತ್ತೆ ಆತನೇ ಅದನ್ನು ಕೈಬಿಡುತ್ತಾನೆ. ನೋರಿ ಎಂಬ ಭಾಷಾ ವಿಜ್ಞಾನಿಯು ಶ್ರಮಪರಿಹಾರಕ್ಕೆಂದು ವ್ಯಕ್ತಿಗಳು ಉದ್ಗರಿಸುವ ಧ್ವನಿಗಳಿಂದ ಭಾಷೆ ಉಗಮವಾಯಿತು ಎಂದಿದ್ದಾನೆ. ಇವನ ಈ ವಾದ ಯೊ-ಹೆ-ಹೊ ವಾದ ಎಂಬುದಾಗಿ ಪ್ರಸಿದ್ಧಿ ಪಡೆದಿದೆ. ವುಂಡ್ತ್ ಎಂಬ ಭಾಷಾವಿಜ್ಞಾನಿಯು ಆಂಗಿಕ ಸಂಜ್ಞೆಗಳಿಂದ ಭಾಷೆ

---

೧. ಡಾ.ಕೆ.ಕೆಂಪೇಗೌಡ :ಸಾಮಾನ್ಯಭಾಷಾ ವಿಜ್ಞಾನ: ಪ್ರಸಾಂಗ ಮೈಸೂರು ವಿಶ್ವವಿದ್ಯಾನಿಲಯ:ಪ್ರ.ವ.:೧೯೯೬ ಪು.ಸಂ.:೪

೨. ಡಾ. ಎಂ.ಚಿದಾನಂದ ಮೂರ್ತಿ: ಭಾಷಾ ವಿಜ್ಞಾನದ ಮೂಲ ತತ್ವಗಳು : ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು:ಪ್ರ.ವ.೧೯೯೮ ಪು.ಸಂ. ೨೬

ಹುಟ್ಟಿತು ಎಂದಿದ್ದಾರೆ. ಹಲವರು ತೊದಲ್ನುಡಿಯಿಂದ ಭಾಷೆ ಹುಟ್ಟಿತು ಎಂದು ಹೇಳುತ್ತಾರೆ. ಆದರೇ ಭಾಷೆಯು ಮನುಷ್ಯನ ಸ್ವಪ್ರಯತ್ನದಿಂದ ಹುಟ್ಟಿ ಕಲಿಕೆಯಿಂದ ಮುಂದುವರೆದದ್ದು ಎಂಬುದೇ ವಾಸ್ತವ ವಿಚಾರವಾಗಿದೆ.

ಭಾಷೆಯ ಸ್ವಭಾವ :

ಭಾಷೆಯ ಸ್ವಭಾವ ಅಥವಾ ಲಕ್ಷಣವನ್ನು ಇದಿಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಇದರ ವ್ಯಾಪ್ತಿ ವಿಸ್ತೃತವಾದದ್ದು. ಹಲವಾರು ಭಾಷಾವಿಜ್ಞಾನಿಗಳು ಈ ನಿಟ್ಟಿನಲ್ಲಿ ಪ್ರಯತ್ನಿಸಿದ್ದಾರೆ. ಸ್ಥೂಲವಾಗಿ ಭಾಷೆಯ ಸ್ವಭಾವ ಕುರಿತು ಈ ಕೆಳಕಂಡಂತೆ ವಿವೇಚಿಸಬಹುದು.

೧. ಭಾಷೆ ಒಂದು ವ್ಯವಸ್ಥೆ : ಭಾಷೆ ಸುವ್ಯವಸ್ಥಿತವಾಗಿಲ್ಲದಿದ್ದರೆ ಯಾವುದೇ ವಿಚಾರವನ್ನು ಬೇರೊಬ್ಬರಿಗೆ ತಿಳಿಸುವುದು ಕಷ್ಟವಾಗುತ್ತದೆ. ಭಾಷೆಯಲ್ಲಿ ಶಬ್ದ, ಅರ್ಥ, ವಾಕ್ಯ, ಕರ್ತೃ, ಕರ್ಮ, ಕ್ರಿಯೆ, ಪ್ರತ್ಯೆಯಗಳು, ಲಿಂಗ, ವಚನ, ವಿಭಕ್ತಿಗಳು ಸರಿಯಾಗಿ ಜೋಡಣೆಯಾಗಿರಬೇಕು. ಇದು ಭಾಷೆಯ ಅಂತರಂಗದ ನಿರ್ಮಾಣಕ್ಕೆ ಸಂಬಂಧಪಟ್ಟ ಗುಣವಾಗಿದೆ.

ಉದಾ: ಗೌರಿ ಸೀರೆಯನ್ನು ಉಡುತ್ತಾನೆ ಎಂದು ಕನ್ನಡದಲ್ಲಿ ಹೇಳಲಾಗುವುದಿಲ್ಲ. ಇಲ್ಲಿ ಲಿಂಗಕ್ಕೆ ಸಂಬಂಧ ಪಟ್ಟಂತೆ 'ಉಡುತ್ತಾಳೆ' ಎನ್ನುವುದು ಬರಬೇಕು. ಅಂತೆಯೇ 'ಗೌರಿ ಸೀರೆಯಿಂದ ಉಡುತ್ತಾಳೆ' ಎಂದು ಹೇಳಲಾಗುವುದಿಲ್ಲ. ಇಲ್ಲಿ ತೃತೀಯ ವಿಭಕ್ತಿ ಪ್ರತ್ಯಯ 'ಇಂದ'ಕ್ಕೆ ಬದಲಾಗಿ ದ್ವಿತೀಯ ವಿಭಕ್ತಿ ಪ್ರತ್ಯಯವಾದ 'ಅನ್ನು' ಎಂಬುದು ಬಂದು 'ಗೌರಿ ಸೀರೆಯನ್ನು ಉಡುತ್ತಾಳೆ' ಎಂದಾದರೆ ಒಂದು ಅರ್ಥಪೂರ್ಣ ವಾಕ್ಯ ರಚನೆಯಾದಂತಾಗುತ್ತದೆ. ಯಾವುದೇ ಸಾಮಾಜಿಕ ವ್ಯವಸ್ಥೆ ಭಾಷೆಯಲ್ಲಿ ಇಂತಹ ವ್ಯವಸ್ಥೆಯನ್ನು ಅಪೇಕ್ಷಿಸುತ್ತದೆ.

೨. ಭಾಷೆ ಧ್ವನಿ-ಸಂಕೇತಗಳ ವ್ಯವಸ್ಥೆ : ಕನ್ನಡ ಭಾಷೆಯಲ್ಲಿ 'ಹಾಲು' ಎಂಬ ಒಂದು ಪದವಿದೆ. ಇದರಲ್ಲಿ ಹ್+ಆ+ಲ್+ಉ ಎಂಬ ನಾಲ್ಕು ಧ್ವನಿಗಳಿವೆ. ಈ ಧ್ವನಿಗಳು ಒಟ್ಟುಗೂಡಿ ಅರ್ಥ ಬದ್ಧವಾಗಿ ಬಳಕೆಯಲ್ಲಿವೆ. ಸಂಕೇತಗಳಲ್ಲಿ ಎರಡು ವಿಧ ದೃಶ್ಯಸಂಕೇತ ಮತ್ತು ಶ್ರವ್ಯ ಸಂಕೇತಗಳು. ರೈಲನ್ನು ಹೊರಡಿಸಲು ತೋರಿಸುವ ಹಸುರು ಬಾವುಟ, ನಿಲ್ಲಿಸಲು ತೋರಿಸುವ ಕೆಂಪು ಬಾವುಟ, ಸಂಚಾರೀ ವ್ಯವಸ್ಥೆಯ ದೀಪಗಳು, ಫಲಕಗಳು, ಕೈಮುಗಿಯುವುದು ದೃಶ್ಯ ಸಂಕೇತಗಳಾದರೆ, ಚಪ್ಪಾಳೆ ತಟ್ಟುವುದು, ಸಿಳ್ಳೆ ಹೊಡೆಯುವುದು, ಸೈರನ್, ಓಲಗ, ಗಂಟೆ ಮುಂತಾದವು ಶ್ರವ್ಯಸಂಕೇತಗಳಾಗಿವೆ. ಇಲ್ಲಿ ಕೈಮುಗಿವುದು ಗೌರವ ಸಂಕೇತವಾದರೆ, ಚಪ್ಪಾಳೆ ತಟ್ಟುವುದು ಮೆಚ್ಚುಗೆಯ ಸಂಕೇತ. ಇವುಗಳು ಕೆಲವೊಮ್ಮೆ ವ್ಯಂಗ್ಯವನ್ನೂ ಧ್ವನಿಸುತ್ತವೆ.

೩. ಭಾಷೆಯ ಧ್ವನಿ ಸಂಕೇತಗಳು ಯಾದೃಚ್ಛಿಕವಾದವು : ಆದ್ದರಿಂದಲೇ ಅನೇಕ ಪದಗಳು ಹುಟ್ಟಿಕೊಳ್ಳಲು ಸಾಧ್ಯ. ಯಾದೃಚ್ಚಿಕ ಎಂದರೆ ಇಚ್ಛೆಯನ್ನು ಅನುಸರಿಸಿದ್ದು, ಇಚ್ಛೆಗೆ ಒಳಪಟ್ಟದ್ದು ಎಂಬ ಅರ್ಥವನ್ನು ಕೊಡುತ್ತದೆ. ಉದಾ: ಹುಲಿಯಲ್ಲಿರುವ ಧ್ವನಿಗೂ, ಮತ್ತು ಅದರ ಹೆಸರಿಗೂ ಯಾವುದೇ

ಸಂಬಂಧವಿಲ್ಲ. ಹುಲಿ ಎಂದಾಕ್ಷಣ ನಾವು ಆ ಪ್ರಾಣಿಯನ್ನು ನೆನಪಿಸಿಕೊಳ್ಳಲು ಕಾರಣ ರೂಢಿ. ಇಂತಹ ವಸ್ತುವಿಗೆ ಇಂತಹದ್ದೇ ಧ್ವನಿ ಸಂಕೇತ ಪ್ರತ್ಯೇಕ-ಪ್ರತ್ಯೇಕವಾಗಿ ಇರಬೇಕೆಂಬ ನಿಯಮವಿಲ್ಲ. ಒಂದು ಧ್ವನಿ ಸಂಕೇತ ಒಂದಕ್ಕಿಂತ ಹೆಚ್ಚು ಅರ್ಥಗಳನ್ನು ಹೊಂದಿರಬಹುದು. ಉದಾ: ಕವಿ-ಲೇಖಕ, ಆವರಿಸು. ಕರಿ-ಕಪ್ಪು, ಆನೆ, ಕೂಗು ಎನ್ನುವ ಕ್ರಿಯಾವಾಚಕ. ಹೀಗೆ ಸಂದರ್ಭಕ್ಕನುಗುಣವಾಗಿ ಆಯಾ ಅರ್ಥಗಳು ಅನ್ವಯಿಸುತ್ತವೆ.

೪. ಭಾಷೆ ದೈವದತ್ತವಾದುದಲ್ಲ-ಕಲಿಕೆಯಿಂದ ಬಂದದ್ದು: ಪ್ರಾಚೀನ ಕಾಲದಲ್ಲಿ ದೇವರು ಬೆಟ್ಟ-ಗುಡ್ಡಗಳನ್ನು ಸೃಷ್ಟಿಸಿದ, ಅಂತೆಯೇ ಭಾಷೆಯನ್ನೂ ಸೃಷ್ಟಿಸಿದ ಎಂದು ಜನ ಬಲವಾಗಿ ನಂಬಿದ್ದರು. ಈ ವಾದವನ್ನು ಪುಷ್ಟಿಕರಿಸಲು ವೇದ-ಉಪನಿಷತ್ತುಗಳು. ಬ್ರಾಹ್ಮಣಕಗಳು, ಕೆಲವು ವ್ಯಾಕರಣಕಾರರ ಹೇಳಿಕೆಗಳನ್ನು ಉದಾಹರಿಸಬಹುದು. ಹದಿನೆಂಟನೆಯ ಶತಮಾನದಿಂದ ಈಚೆಗೆ ವೈಚಾರಿಕವಾಗಿ ಚಿಂತನೆ ಮಾಡಿದ ವಿದ್ವಾಂಸರು 'ಭಾಷೆಯು ದೈವದತ್ತವಾಗಿದ್ದರೇ ಅದು ಎಲ್ಲಾ ಕಡೆಯೂ ಸ್ವಲ್ಪ ವ್ಯತ್ಯಾಸದೊಂದಿಗೆ ಒಂದೇ ರೀತಿ ಇರಬೇಕಿತ್ತು. ಆದರೆ ಕೆಲವು ಭಾಷೆಗಳು ಒಂದಕ್ಕೊಂದು ಸಂಬಂಧವಿಲ್ಲದಷ್ಟು ವ್ಯತ್ಯಾಸವನ್ನು ಹೊಂದಿವೆ'. ಆದ್ದರಿಂದ ಭಾಷೆ ಕಲಿಸಿದ್ದರಿಂದ, ಕಲಿತುದ್ದರಿಂದ ಮಾತ್ರ ಬಂದಿರುವುದು. ಹೀಗೆ ಮಾನವ ಭಾಷೆಯನ್ನು ಕಲಿಯಲು, ಕಲಿಸಲು ಧ್ವನ್ಯಂಗಗಳು ಸಹಾಯ ಮತ್ತು ಸಮಾಜದ ಸಹಕಾರ ಅತ್ಯಗತ್ಯವಾದುದು ಎನ್ನುತ್ತಾರೆ.

೫. ಭಾಷೆ ಆನುವಂಶಿಕ ಆಸ್ತಿಯಲ್ಲ : ಮನುಷ್ಯನಿಗೆ ರೂಪ, ಗುಣ ಮುಂತಾದ ಲಕ್ಷಣಗಳು ಅನುವಂಶಿಕವಾಗಿ ಲಭಿಸಬಹುದು. ಆದರೆ ಭಾಷೆಯನ್ನು ಪ್ರತಿಯೊಬ್ಬ ವ್ಯಕ್ತಿಯೂ ಶ್ರಮವಹಿಸಿ ಕಲಿಯಬೇಕು. ಭಾಷೆಯು ಸಮಾಜದ ಆಸ್ತಿ ಮತ್ತು ಅದನ್ನು ಆಡುವವನ ಆಸ್ತಿಯಾಗಿದೆ. ಉದಾ: ಆಗ ತಾನೇ ಹುಟ್ಟಿದ ಒಂದು ಮಗುವನ್ನು ಬೇರೆ ಪ್ರದೇಶದಲ್ಲಿ ಬೆಳೆಸಿದರೆ. ಮಗು ಆ ಪ್ರದೇಶದ ಭಾಷೆಯನ್ನು ಕಲಿಯುತ್ತದೆಯೇ ಹೊರತು ತನ್ನ ವಂಶದ ಭಾಷೆಯನ್ನಲ್ಲ.

೬. ಭಾಷೆ ನಿತ್ಯ ಪರಿವರ್ತನಶೀಲವಾದುದು: ಭಾಷೆಯು ಸದಾ ಹರಿಯುತ್ತಿರುವ ಜೀವನದಿ. ಇದು ವ್ಯಕ್ತಿಯಿಂದ ವ್ಯಕ್ತಿಗೆ, ಸ್ಥಳದಿಂದ-ಸ್ಥಳಕ್ಕೆ, ಕಾಲದಿಂದ-ಕಾಲಕ್ಕೆ ಬದಲಾಗುತ್ತಿರುತ್ತದೆ. ಇಂತಹ ಪರಿವರ್ತನ ಗುಣವಿಲ್ಲದಿದ್ದರೇ ಇಂದು ಆರು ಸಾವಿರಕ್ಕೂ ಹೆಚ್ಚು ಭಾಷೆಗಳು, ಹತ್ತು ಸಾವಿರಕ್ಕೂ ಹೆಚ್ಚು ಉಪಭಾಷೆಗಳು ಕಾಣಿಸಿಕೊಳ್ಳುತ್ತಿರಲಿಲ್ಲ.

ಮನುಷ್ಯನೊಂದಿಗೆ ಭಾಷೆಯೂ ಬೆಳೆದಿರುವುದರಿಂದ ಅದೊಂದು ಜೀವಂತಶಕ್ತಿ. ಕಾಲದಿಂದ-ಕಾಲಕ್ಕೆ, ದೇಶದಿಂದ-ದೇಶಕ್ಕೆ ಅದರಲ್ಲಾಗುವ ವಿಕಾಸ, ವ್ಯತ್ಯಾಸಗಳು ಆಗಿಂದಾಗ್ಗೆ ಅರಿವಿಗೆ ಬಾರದಿದ್ದರೂ ಒಂದೊಂದು ಕಾಲಘಟ್ಟದಲ್ಲಿ ಅವಸ್ಥಾನದಲ್ಲಿ ಗೋಚರವಾಗುತ್ತವೆ. ಮನುಷ್ಯನ ದೇಹದ ಬೆಳವಣಿಗೆಯಂತೆ, ಭಾಷೆಯು ಬೆಳೆಯುತ್ತದೆ. ಶತಮಾನಗಳ ದೀರ್ಘ ಕಾಲಗತಿಯಲ್ಲಿ ನಡೆದು ಬಂದ ಹೆಜ್ಜೆ ಗುರುತುಗಳು ಲಿಖಿತ ಭಾಷೆಯಿಂದ ಮಾತ್ರ ತಿಳಿಯಲು ಸಾಧ್ಯ. ಲಿಪಿಬದ್ಧವಲ್ಲದ ಭಾಷೆಯ ನಡೆಯನ್ನು ಗುರುತಿಸಲು ಆಧಾರಗಳಿಲ್ಲದಿರುವುದರಿಂದ ಅವುಗಳನ್ನು ಕುರಿತು ಸಂಶೋಧಿಸುವುದು ಕಷ್ಟಸಾಧ್ಯ. ಕನ್ನಡ ಮೊದಲಾದ

ಭಾಷೆಗಳು ಸಾವಿರಾರು ವರ್ಷಗಳಿಂದ ಲಿಪಿಬದ್ಧವಾಗಿ ಸಾಗಿ ಬಂದಿರುವುದರಿಂದ ಅವುಗಳ ವಿಕಾಸದ ಹಂತಗಳನ್ನು ಗುರುತಿಸಬಹುದು. ಇದರಿಂದಲೇ ಕನ್ನಡ ಭಾಷೆಗೆ ಪೂರ್ವದ ಹಳಗನ್ನಡ > ಹಳಗನ್ನಡ > ನಡುಗನ್ನಡ ಮತ್ತು ಹೊಸಗನ್ನಡವೆಂಬ ಅವಸ್ಥ ಭೇದಗಳನ್ನು ಹೊಂದಿದೆ ಎಂದು ತಿಳಿಯುತ್ತದೆ.

೨. ಭಾಷೆ ಒಂದು ಸಾಮಾಜಿಕ ಕ್ರಿಯೆ : ಮಾನವ ಸಮಾಜ ಜೀವಿ (ಅರಿಸ್ಟಾಟಲ್). ಆತ ಸಮಾಜದ ಚೌಕಟ್ಟಿಗೆ ಬದ್ಧನಾಗಿರುತ್ತಾನೆ. ಭಾಷೆಯನ್ನು ಮಾನವ ಕಲಿಯುವುದು ಸಮಾಜದಿಂದಲೇ. ಅದನ್ನು ಉಪಯೋಗಿಸುವುದೂ ಸಮಾಜದಲ್ಲಿಯೇ ಒಂದು ಭಾಷೆಯ ಅಳಿವು-ಉಳಿವು ಅವನು ಬಾಳಿ ಬದುಕುವ ಸಮಾಜಕ್ಕೆ ಸೇರಿದ್ದು, ಆಗತಾನೇ ಹುಟ್ಟಿದ ಶಿಶುವನ್ನು ಆ ಸಮಾಜದಿಂದ ಬೇರೆ ಮಾಡಿದರೆ ಆ ಮಗು ಯಾವ ಭಾಷೆಯನ್ನೂ ಕಲಿಯಲಾರದು. ವ್ಯಕ್ತಿಯೂ ತನ್ನ ಅನುಭವಗಳನ್ನು ಆಲೋಚನೆಗಳನ್ನು ಮತ್ತು ಅನಿಸಿಕೆಗಳನ್ನು ಸಮಾಜದ ಇತರ ವ್ಯಕ್ತಿಗೆ ತಿಳಿಸಲು ಭಾಷೆ ಅತ್ಯಗತ್ಯ.

ಭಾಷೆ ಯಾವುದೇ ಸಮಾಜದಲ್ಲಿ ಒಬ್ಬವ್ಯಕ್ತಿಯಿಂದ ಸೃಷ್ಟಿಯಾದುದಲ್ಲ. ಒಂದೊಂದು ಸಮಾಜದ ಭಾಷಿಕರಚನೆಯು ಭಿನ್ನವಾಗಿರುತ್ತದೆ. ಸಮಾಜದಲ್ಲಿ ಮಾತಿನ ಮಹತ್ವ ಎಷ್ಟು ಎಂಬುದನ್ನು ಸರ್ವಜ್ಞ ಈ ರೀತಿ ತಿಳಿಸಿದ್ದಾರೆ.

ಮಾತಿನಿಂ ನಗೆ ನುಡಿಯು ಮಾತಿನಿಂ ಹಗೆ ಕೆಳೆಯು
ಮಾತಿನಿಂ ಸರ್ವ ಸಂಪದವು ಲೋಕಕ್ಕೆ
ಮಾತೆ ಮಾಣಿಕ್ಯ ಸರ್ವಜ್ಞ.

ಕಣ್ಣು, ನಾಲಗೆ, ಮನ ಇವು ಕೆಲವೊಮ್ಮೆ ನಮ್ಮದಲ್ಲದಂತೆ-ನಮ್ಮ ಹಿಡಿತ ಮೀರಿ ವರ್ತಿಸಿದರೆ ತನ್ನನ್ನೇ ಕೊಲ್ಲುತ್ತದೆ ಎಂದು ಎಚ್ಚರಿಸಿದ್ದಾರೆ. ತನ್ನ ಒಳಿತು-ಕೆಡಕುಗಳನ್ನು ತಾನೇ ರೂಪಿಸುವ ಮನುಷ್ಯನಿಗೆ ಭಾಷೆ ಎಂದು ಸಂವಹನ ಮಾಧ್ಯಮ. ಅರಿತು ಬಳಸಿದರೆ ಭಾಷೆ ವರ, ಅರಿಯದೇ ಬಳಸಿದರೆ ಭಾಷೆ ಶಾಪವಾಗುತ್ತದೆ. ಹೀಗೆ ಭಾಷೆ ಒಂದು ಸಾಮಾಜಿಕ ಕ್ರಿಯೆ. ಭಾಷೆಯು ಮಾನವ ಮತ್ತು ಪ್ರಾಣಿ ಸಮಾಜವನ್ನು ಬೇರ್ಪಡಿಸುತ್ತದೆ. ಮಾನವೇ ಪ್ರಾಣಿ ಪ್ರಪಂಚದಲ್ಲಿ ಸರ್ವಶ್ರೇಷ್ಠನೆನ್ನಲು ಅವನ ಭಾಷೆಯ ಬಳಕೆಯೇ ಮುಖ್ಯವಾದ ಕಾರಣ. ಪ್ರಾಣಿ, ಪಶು, ಪಕ್ಷಿಗಳಿಗೂ ಅವುಗಳದೇ ಆದ ಧ್ವನಿ ಭಾವಸೂಚನಾಕ್ರಮಗಳಿದ್ದರೂ ಅವು ಕೇವಲ ಸೀಮಿತ ಮತ್ತು ಅ ಸ್ಪಷ್ಟ. ಪ್ರಾಣಿ ಪಕ್ಷಿ ಬದಲಿಗೆ ಪ್ರೀತಿ, ಕೋಪ-ತಾಪಾದಿಗಳನ್ನು ಅಂಗಚಲನೆಯಿಂದ, ಬೇರೆ-ಬೇರೆ ರೀತಿಯ ಧ್ವನಿಗಳಿಂದ ಅವು ತಮ್ಮೊಳಗೆ ವ್ಯಕ್ತಪಡಿಸಬಲ್ಲವೆಂಬುದು ಅವುಗಳ ವೈಜ್ಞಾನಿಕ ಅಧ್ಯಯನದಿಂದ ತಿಳಿಯುತ್ತದೆ. ಕಲಿಸಿದ್ದನ್ನು ಕಲಿಯುವ ಬುದ್ಧಿಶಕ್ತಿಯೂ ಪ್ರಾಣಿಗಳಲ್ಲಿದೆ. ಮಾನವನಲ್ಲಿ ಇದಕ್ಕಿಂತ ಉತ್ತಮವಾಗಿ ಸ್ಪಷ್ಟವಾಗಿ ಭಾವನೆಯನ್ನು ವ್ಯಕ್ತಪಡಿಸುವ ಧ್ವನಿ ಸಂಕೇತಗಳು ಇವೆ. ಮಾನವನು ತಲೆಮಾರಿನಿಂದ ತಲೆಮಾರಿಗೆ ಗಳಿಸಿಟ್ಟ ಜ್ಞಾನಜ್ಯೋತಿ ಭಾಷೆಯ ಮಾಧ್ಯಮದಿಂದ ಹರಿದುಬಂದಿದೆ. ಇದರಿಂದ ಮನುಷ್ಯನ ಸುಸಂಸ್ಕೃತ, ನಾಗರಿಕನಾಗಿದ್ದಾನೆ. ಮನುಷ್ಯನ ಬುದ್ಧಿ

ಶಕ್ತಿಯ ಬೆಳವಣಿಗೆಯೇ ಭಾಷೆಯ ಬೆಳವಣಿಗೆಯೂ ಆಗಿದೆ.

೮. ಭಾಷೆಗೆ ತನ್ನದೇ ಆದ ಇತಿಹಾಸ ಮತ್ತು ಭೌಗೋಳಿಕ ಎಲ್ಲೆ ನಿಶ್ಚಿತವಾಗಿರುತ್ತದೆ : ಭಾಷೆಯನ್ನು ಆಡುಭಾಷೆ ಮತ್ತು ಬರೆಹಭಾಷೆ ಎಂದು ಎರಡು ಭಾಗ ಮಾಡಲಾಗುತ್ತದೆ. ಆಡು ಭಾಷೆಯ ಇತಿಹಾಸವನ್ನು ಕಂಡು ಹಿಡಿಯುವುದು ಕಷ್ಟ. ಬರೆಹ ಭಾಷೆಯನ್ನು ದಾಖಲೆಗಳು, ಶಾಸನಗಳು, ಸಾಹಿತ್ಯಕೃತಿಗಳು ಹಾಗೂ ಮತ್ತಿತರ ವಿವರಗಳಿಂದ ಆ ಭಾಷೆಯ ಇತಿಹಾಸವನ್ನು ಗುರುತಿಸಬಹುದು.

ಪ್ರತಿಯೊಂದು ಭಾಷೆಯ ಭೌಗೋಳಿಕ ಕ್ಷೇತ್ರ ಆ ಭಾಷೆಯನ್ನು ಆಡುವ ಜನರ ಪ್ರಮಾಣವನ್ನು ಅವಲಂಬಿಸಿ ನಿರ್ಧರಿತವಾಗಿರುತ್ತದೆ. ಉದಾ: ಕರ್ನಾಟಕದಲ್ಲಿ ಕನ್ನಡ, ಕೊಂಕಣಿ, ಬಡಗ, ಕೊಡವ, ತುಳು, ಹವ್ಯಕ, ಸೋಲಿಗ, ಕುರುಬ ಇತ್ಯಾದಿ ಭಾಷೆಗಳನ್ನು ಹಾಗೂ ಇತರ ಉಪ ಭಾಷೆಗಳನ್ನು ಆಡುವವರಿದ್ದಾರೆ. ಆದರೆ ಕರ್ನಾಟಕದಲ್ಲಿನ ಬಹುಸಂಖ್ಯಾತರ ಭಾಷೆಯು ಕನ್ನಡವಾದುದರಿಂದ ಕರ್ನಾಟಕ ಕನ್ನಡ ಭಾಷೆಯ ನಿಶ್ಚಿತವಾದ ಕ್ಷೇತ್ರವೆಂದು ಹೇಳಬಹುದು.


೯. ಭಾಷೆ ಸಾಮಾನ್ಯವಾಗಿ ಸಂಕೀರ್ಣತೆಯಿಂದ ಸರಳತೆಯೆಡೆಗೆ ಹರಿಯುವುದು: ಈ ಸೌಲಭ್ಯಾಕಾಂಕ್ಷೆ ಭಾಷೆಯ ಪ್ರಧಾನ ಲಕ್ಷಣಗಳಲ್ಲಿ ಒಂದಾಗಿದೆ. ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ ಭಾಷೆಯನ್ನು ಗಮನಿಸಿದಾಗ ಈ ವಿಚಾರ ಮನಗೆ ಸ್ಪಷ್ಟವಾಗುತ್ತದೆ. ಮನುಷ್ಯ ಉಚ್ಚಾರದಲ್ಲಿ ಕ್ಲಿಷ್ಟತೆಯನ್ನು ಹೆಚ್ಚು ಬಯಸುವುದಿಲ್ಲ. ಉದಾ: ಉಚ್ಚಾರದಲ್ಲಿ, ಅರ್ಥೈಸಿಕೊಳ್ಳುವಲ್ಲಿ ಕ್ಲಿಷ್ಟವಾದ ಭಾಷೆ ಸಂಸ್ಕೃತ. ಇಂದು ಇದು ಆಡುಭಾಷೆಯಾಗಿಲ್ಲ. ಕನ್ನಡವೂ ಪೂರ್ವದ ಹಳಗನ್ನಡ> ಹಳಗನ್ನಡ> ನಡುಗನ್ನಡ> ಹೊಸಗನ್ನಡ ಹೀಗೆ ಕಾಲ-ಕಾಲಕ್ಕೆ ಬದಲಾಗುತ್ತಾ ಆಯಾಯ ಕಾಲಮಾನದ ಜನರಿಗೆ ಅರ್ಥವಾಗುವ ಹಾಗೇ ಇರುವುದರಿಂದ ವಿಚಾರ ಸ್ಪಷ್ಟತೆಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ಮತ್ತು ಇದು ಕರ್ನಾಟಕಾದ್ಯಂತ ಪ್ರಚಲಿತ ಭಾಷೆಯಾಗಿದೆ.

೧೦. ಭಾಷೆಗೆ ಅಂತಿಮ ಸ್ವರೂಪವೆಂಬುದಿಲ್ಲ: ಬೀಜವೃಕ್ಷ ನ್ಯಾಯವು ಹೇಗೋ-ಹಾಗೇ ಜೀವಂತ ಭಾಷೆಗೆ ಇದೇ ಅಂತಿಮ ಸ್ವರೂಪ ಎಂದು ಹೇಳಲು ಸಾಧ್ಯವಿಲ್ಲ. ಮನುಷ್ಯ ಭಾಷೆಯನ್ನು ಬಳಸುತ್ತಿರುವವರೆಗೂ ಭಾಷೆಯು ಪರಿವರ್ತನೆ ಹೊಂದುತ್ತಾ ಇರುವುದರಿಂದ ಒಂದು ಭಾಷೆಯ ಬೆಳವಣಿಗೆ ಕೊನೆಮುಟ್ಟಿತು ಎಂದು ಹೇಳಲಾಗುವುದಿಲ್ಲ. ಯಾವುದೇ ಭಾಷೆಯ ಒಂದು ರೂಪ ಬಳಕೆಯಿಂದ ತಪ್ಪಿಹೋಗಿ ಅದರ ಅನೇಕ ಉಪಭಾಷೆಗಳು ಸ್ವತಂತ್ರ ಭಾಷಾ ಸ್ಥಾನವನ್ನು ಪಡೆಯುವ ಸಾಧ್ಯತೆಯಿದೆ. ಹೀಗೆ ಭಾಷೆಯ ಪರಿವರ್ತನ ಶೀಲತೆ ಅನೇಕ ಉಪಭಾಷೆಗಳ ಉಗಮಕ್ಕೆ ಕಾರಣವಾಗಿ, ಅವುಗಳಿಂದ ಪ್ರತ್ಯೇಕ ಭಾಷೆಗಳ ವಿಕಾಸ ಸಾಧ್ಯವಾಗುವುದರಿಂದ ಭಾಷೆಗೆ ಅಂತಿಮ ಸ್ವರೂಪವೆಂಬುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಒಟ್ಟಿನಲ್ಲಿ ಭಾಷೆಯು ಮನುಷ್ಯನ ಅನಿವಾರ್ಯ ಹಾಗೂ ವಿವಿಭಾಜ್ಯ ಅಂಗ. ಒಬ್ಬ ವ್ಯಕ್ತಿ, ಒಂದು ಸಮಾಜ ಕ್ರಿಯಾಶೀಲವಾಗಿರಲು ಭಾಷೆ ಬೇಕು. ಸಂವಹನ ಮಾಧ್ಯಮವಾದ ಇದು ಮಾನವನ ಬದುಕಿನಲ್ಲಿ ಮಹತ್ವದ ಪಾತ್ರವಹಿಸುತ್ತದೆ.

ಅಧ್ಯಾಯ-ಎರಡು

ಭಾಷೆಯ ರೂಪಗಳು



ಭಾಷೆಯು ಸಾರ್ವತ್ರಿಕವಾದದ್ದು ಆದ್ದರಿಂದ ಇದು ನಿತ್ಯಪರಿವರ್ತನೆಯಾಗುವ ಗುಣವನ್ನೂ ಹೊಂದಿದೆ. ಭಾಷೆಯಲ್ಲಿ ಅಲಿಖಿತ ಮತ್ತು ಲಿಖಿತ ಎಂಬ ಎರಡು ರೂಪಗಳಿವೆ. ಅಲಿಖಿತ ಭಾಷೆಯು ಕಾಲದಿಂದ ಕಾಲಕ್ಕೆ ತನ್ನ ಸ್ವರೂಪದಲ್ಲಿ ಬದಲಾಗುತ್ತಿರುತ್ತದೆ. ಇಂತಹ ಬದಲಾವಣೆ ಲಿಖಿತ ಭಾಷೆಯಲ್ಲಿ ವಿರಳ ಹಾಗೂ ಮಂದಗತಿಯಲ್ಲಿ ಆಗುತ್ತದೆ. ಭಾಷಿಕರು ಕಲಿಯುವ ಮತ್ತು ಬಳಸುವ ಹಂತಗಳಲ್ಲಿ ಆಡುಮಾತು ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇಂತಹ ವ್ಯತ್ಯಾಸಕ್ಕೆ ಭಾಷೆಯನ್ನು ಬಳಸುವ ಜನರು ಪರಸ್ಪರ ದೂರವಾಗುವುದು ಪ್ರಮುಖ ಕಾರಣವಾಗುತ್ತದೆ. ಹೀಗೆ ಯಾವುದೋ ಒಂದು ಮೂಲ ಭಾಷೆಯನ್ನಾಡುವ ಜನರು ವಿಮುಖರಾದಂತೆ ತಮ್ಮದೇ ಆದ ಪರಿಭಾಷೆಗಳೊಂದಿಗೆ ವ್ಯವಹರಿಸುತ್ತಾರೆ. ಮುದೊಂದು ದಿನ ಇದು ಸ್ವತಂತ್ರ ಭಾಷೆಯಾಗಿ ಇದರಿಂದ ಅನೇಕ ಉಪ ಭಾಷೆಗಳು ಕವಲೊಡೆಯಬಹುದು. ಇವುಗಳನ್ನು ನಾವು ಕವಲೊಡೆದ ಕಾರಣಗಳಿಗನುಗುಣವಾಗಿ, ಪ್ರಾದೇಶಿಕವಾಗಿ ಉಂಟಾದ ಬದಲಾವಣೆಯ ಭಾಷೆಗಳನ್ನು ಪ್ರಾದೇಶಿಕ ಉಪಭಾಷೆ, ಪರಸ್ಪರ ಒಂದೇ ಪಂಗಡದ ಅಥವಾ ಜಾತಿಯ ಜನ ದೂರವಾದಾಗ ಉಂಟಾಗುವ ಬದಲಾವಣೆಯ ಭಾಷೆಗಳನ್ನು ಸಾಮಾಜಿಕ ಉಪಭಾಷೆ ಎಂತಲೂ, ಕಾಲದ ಅಂತರದಲ್ಲಿ ಉಂಟಾದ ಬದಲಾವಣೆಗಳನ್ನು ಚಾರಿತ್ರಿಕ ಬದಲಾವಣೆಗಳೆಂದೂ, ಹಾಗೆಯೇ ಪ್ರತಿಯೊಬ್ಬರು ತಮ್ಮ ಮಾತೃಭಾಷೆಯನ್ನೇ ಬಳಸುತ್ತಿದ್ದರೂ ಪದಕೋಶ ಬಳಕೆ, ಧ್ವನಿ ಉಚ್ಚಾರ ಮುಂತಾದವುಗಳಲ್ಲಿ ತಮ್ಮದೇ ಆದ ರೂಪವನ್ನು ಹೊಂದಿರುತ್ತಾರೆ. ಇದರಲ್ಲಿ ತಮ್ಮ ಹಿರಿಯರ ಪ್ರಭಾವವೂ ಇರುತ್ತದೆ. ಇದನ್ನು ವ್ಯಕ್ತಿಭಾಷೆ ಎಂದು ಕರೆಯಲಾಗುತ್ತದೆ. ಭಾಷೆಯಲ್ಲಿ ಎಷ್ಟೊಂದು ವೈವಿಧ್ಯಗಳು ಇದ್ದರೂ ಅದರ ಒಂದು ರೂಪ ಮಾತ್ರ ಬಹುಜನರನ್ನು ತಲುಪುವಂತಿದ್ದು, ಆ ಪ್ರದೇಶದ ಒಳಗೂ, ಹೊರಗೂ ವ್ಯವಹರಿಸುತ್ತದೆ. ಈ ಭಾಷೆಯನ್ನು ಶಿಷ್ಟ ಭಾಷೆ ಅಥವಾ ಪ್ರಮಾಣ ಭಾಷೆ ಎಂದು ಕರೆಯಲಾಗುತ್ತದೆ. ಈ ಭಾಷೆ ಲಿಪಿಬದ್ಧ ಭಾಷೆಯಾಗಿರುತ್ತದೆ.

ವ್ಯಕ್ತಿ ಭಾಷೆ (idiolect) :

ಒಬ್ಬ ವ್ಯಕ್ತಿಯ ಒಂದು ಸಮಯದ ಮಾತಿನ ಒಟ್ಟು ಮೊತ್ತವನ್ನು ವ್ಯಕ್ತಿಭಾಷೆ ಎಂದು ಕರೆಯಬಹುದು. ಒಮ್ಮೆ ಒಬ್ಬ ವ್ಯಕ್ತಿ ಒಂದು ಶಬ್ದವನ್ನು ಉಚ್ಚರಿಸಿದಂತೆ ಅದೇ ಭಾಷೆನ್ನಾಡುವ ಮತ್ತೊಬ್ಬ ವ್ಯಕ್ತಿ ಉಚ್ಚರಿಸಲಾರ, ಅಷ್ಟೇ ಅಲ್ಲದೇ ಮೊದಲು ಆ ಶಬ್ದವನ್ನು ಬಳಸಿದ ವ್ಯಕ್ತಿಯೇ ಮತ್ತೊಮ್ಮೆ ಉಪಯೋಗಿಸುವಾಗ ಆತನ ಧ್ವನಿಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ವ್ಯತ್ಯಾಸಗಳಾಗುವ ಸಾಧ್ಯತೆ ಇದೆ. ಭಾಷೆ ಮೂಲತಃ ಒಂದೇ ಆಗಿದ್ದರೂ ಅದು ಎಲ್ಲಾ ವ್ಯಕ್ತಿಗಳಲ್ಲಿಯೂ ಎಲ್ಲಾ ಪ್ರದೇಶಗಳಲ್ಲಿಯೂ ಒಂದೇ ರೀತಿಯಲ್ಲಿರುವುದಿಲ್ಲ. ಒಬ್ಬ ವ್ಯಕ್ತಿ ಮನೆಯವರೊಡನೆ ಒಂದು ರೀತಿಯಲ್ಲಿ, ಮಿತ್ರರೊಡನೆ ಇನ್ನೊಂದು ರೀತಿಯಲ್ಲಿ, ತರಗತಿಯಲ್ಲಿ ಮತ್ತೊಂದು ರೀತಿಯಲ್ಲಿ, ರಾಜಕೀಯ ವೇದಿಕೆಗಳ ಮೇಲೆ ಮಗದೊಂದು ರೀತಿಯಲ್ಲಿ ಮಾತನಾಡುವುದು ಸರ್ವೇಸಾಮಾನ್ಯ. ಈ ಕಾರಣದಿಂದ ವ್ಯಕ್ತಿ ಭಾಷೆಯಲ್ಲಿ ಬೇರೆ-ಬೇರೆ ಒಳ ಪ್ರಭೇದಗಳು ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಪ್ರದೇಶದಿಂದ ಪ್ರದೇಶಕ್ಕೆ ಬೇರೆ-ಬೇರೆಯಾಗಿ ಕಾಣಿಸಿಕೊಳ್ಳುವ ಈ

ಭಾಷಾ ಪ್ರಭೇದಗಳಲ್ಲಿ ಪರಸ್ಪರ ಅರಿವಿನ ಪ್ರಮಾಣ ಕೆಲವು ವೇಳೆ ಸನ್ನಿವೇಶ ಹಾಗೂ ಪರಿಸ್ಥಿತಿಗಳಿಗೆ ತಕ್ಕಂತೆ ಹೆಚ್ಚು ಕಡಿಮೆಯಾಗುತ್ತಾ ಹೋಗಬಹುದು. ವ್ಯಕ್ತಿ ಭಾಷೆಗಳ ಇಂತಹ ಒಳರೂಪಗಳ ವಿಕಾಸಕ್ಕೆ ವ್ಯಕ್ತಿ, ವ್ಯಕ್ತಿಯು ವಾಸಿಸುವ ಸ್ಥಳ, ಜನಜೀವನ, ಆಚಾರ, ಸಮಾಜ ಸಂಸ್ಕೃತಿ, ಜಾತಿ, ಧರ್ಮ, ವೃತ್ತಿ ಮುಂತಾದವು ಮುಖ್ಯವಾಗಿ ಕಾರಣವಾಗುತ್ತವೆ.

ವ್ಯಕ್ತಿ ಭಾಷೆಯ ಸ್ವರೂಪವನ್ನು ವಿಶದ ಪಡಸಲು ಭಾಷಾ ವಿಜ್ಞಾನಿಗಳು ಪ್ರಯತ್ನಿಸಿದ್ದಾರೆ.

"**ಹಾಕೆಟ್ :** ವಿಭಜಿಸಿ ನೋಡಿದರೆ ಭಾಷೆ ಅನೇಕ ವ್ಯಕ್ತಿ - ಭಾಷೆಗಳ ಮೊತ್ತ ಎಂದು ಗೊತ್ತಾಗುತ್ತದೆ ಎಂದಿದ್ದಾನೆ.

ಕೆರೋಲ್ : ಒಂದು ಭಾಷಾ ಸಮಾಜದ ಎಲ್ಲ ಜನರ ವ್ಯಕ್ತಿಭಾಷೆಗಳಲ್ಲಿರುವ ಸಮಾನ ಅಂಶಗಳನ್ನು ಬೇರ್ಪಡಿಸಿ ಒಂದು ವ್ಯವಸ್ಥೆಗೆ ತಂದರೆ ಅದನ್ನೇ ನಾವು ಭಾಷೆ ಎಂದು ಕರೆಯುವುದು ಎಂದಿದ್ದಾನೆ."[೧]

ಒಟ್ಟಿನಲ್ಲಿ ಭಾಷೆ ಪ್ರಕಟವಾಗುವುದು, ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ವ್ಯಕ್ತಿ ಭಾಷೆಗಳ ಮೂಲಕ. ವ್ಯಕ್ತಿ ಭಾಷೆಯದು ಮೂರ್ತರೂಪವಾದರೆ (percept), ಭಾಷೆಯದು ಅಮೂರ್ತ ರೂಪ (concept), 'ವ್ಯಕ್ತಿ ಭಾಷೆ' ಎಂಬ ಈ ತತ್ವವು ಭಾಷೆ ಮತ್ತು ಉಪಭಾಷೆಗಳಿಗಿರುವ ಸಂಬಂಧ ಮತ್ತು ವ್ಯತ್ಯಾಸಗಳನ್ನು ನಿರ್ಣಯಿಸಲು ಸಹಕಾರಿಯಾಗುತ್ತದೆ. "ಇಂಗ್ಲೀಷ್‌ನ Ontegeny ಎಂಬುದಕ್ಕೆ ವ್ಯಕ್ತಿಯ ಜೀವನ ವಿಕಾಸವೆಂಬ ಅರ್ಥವಿದೆ. ಇದರಲ್ಲಿ ವ್ಯಕ್ತಿಯ ಭೌತಿಕತೆ ಮಾತ್ರ ಪರಿಗಣಿತವಾಗುತ್ತದೆ. ಬೌದ್ಧಿಕ ಬೆಳವಣಿಗೆಯಾದ ಭಾಷೆ ಪರಿಗಣಿತವಾಗುವುದಿಲ್ಲ. ಆದ್ದರಿಂದ ೧೮೭೦ರಲ್ಲಿ Linguistic ontegeny ಎಂಬುದಾಗಿ ಮತ್ತೊಂದು ಪದ ಜೋಡಣೆಯ ಮೂಲಕ ವ್ಯಕ್ತಿ ಭಾಷಾ ವಿಕಾಸ ಎಂಬರ್ಥದಲ್ಲಿ ಪ್ರಚಲಿತವಾಯಿತು"[೨]. ಇಂದೂ ಈ ವ್ಯಕ್ತಿ ಭಾಷೆಯ ಕುರಿತಾದ ಅಧ್ಯಯನಗಳು ನಡೆಯುತ್ತಿದ್ದು ಭಾಷಾಸಕ್ತರನ್ನು ಕುತೂಹಲಕ್ಕೀಡು ಮಾಡಿದೆ.

ಮಾನವನ ವಯಸ್ಸಿಗೆ ಅನುಗುಣವಾಗಿ ವ್ಯಕ್ತಿ ಭಾಷೆಯು ತನ್ನ ಸ್ವರೂಪದಲ್ಲಿ ವ್ಯತ್ಯಾಸವಾಗುವುದು ಸಹಜ. ಈ ನಿಟ್ಟಿನಲ್ಲಿ ಮಾನವಶಾಸ್ತ್ರಜ್ಞರು, ಭಾಷಾ ವಿಜ್ಞಾನಿಗಳು ಮನುಷ್ಯನ ಅವಸ್ಥೆಗಳಿಗೆ ಸಂಬಂಧಿಸಿದ ಹಾಗೇ ವ್ಯಕ್ತಿ ಭಾಷೆಯನ್ನು ಮೂರು ರೀತಿ ವಿಭಾಗಿಸಿಕೊಂಡಿದ್ದಾರೆ.

- ಬಾಲ ಭಾಷೆ.
- ಪ್ರೌಢ ಭಾಷೆ
- ವೃದ್ಧ ಭಾಷೆ

---

೧. ಡಾ|| ಎಂ.ಚಿದಾನಂದಮೂರ್ತಿ: ಭಾಷಾ ವಿಜ್ಞಾನದ ಮೂಲ ತತ್ವಗಳು: ಡಿ.ವಿ.ಕೆ.ಮೂರ್ತಿ ಪ್ರಕಾಶಕರು: ಪ್ರ.ವ. ೧೯೯೮. ಪು.ಸಂ. ೯೫

೨. ಡಾ. ಕೆ. ಕೆಂಪೇಗೌಡ : ಸಾಮಾನ್ಯ ಭಾಷಾ ವಿಜ್ಞಾನ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ:ಪ್ರ.ವ. ೧೯೯೬ ಪು.ಸಂ. ೧೦೬೬

ಬಾಲ ಭಾಷೆ: ವ್ಯಕ್ತಿ ಭಾಷೆಯ ಮೊದಲ ಹಂತವೇ ಬಾಲ ಭಾಷೆ. ಭಾಷೆಯ ಉಗಮಕ್ಕೆ ತೊದಲ್ನುಡಿಯೂ ಒಂದು ಕಾರಣವಿರಬಹುದು ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಾಲ ಭಾಷೆಯ ಧ್ವನಿ ಮತ್ತು ಶಬ್ದಗಳನ್ನು ಪ್ರೌಢಭಾಷೆಯ ಧ್ವನಿ ಮತ್ತು ಶಬ್ದಗಳನ್ನು ಪರಸ್ಪರ ಹೋಲಿಸಿದಾಗ ಅವುಗಳಲ್ಲಿ ಸಾಕಷ್ಟು ವ್ಯತ್ಯಾಸ ಇರುವುದು ಕಂಡುಬರುತ್ತದೆ. ಬಾಲಭಾಷೆಯನ್ನು ಕುರಿತು ಜಗತ್ತಿನಾದ್ಯಂತ ಬೇರೆ-ಬೇರೆ ವಿದ್ವಾಂಸರು ಆಳವಾಗಿ ಪರಿಶೀಲಿಸಿ ಹೊಸ ವಿಚಾರಗಳನ್ನು ಹೊರಗೆಡವಿದ್ದಾರೆ. ವ್ಯಕ್ತಿ ಭಾಷೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ತಿಳಿಯಲು ಪ್ರಯತ್ನಿಸಿದವರಲ್ಲಿ ಒ.ಸಿ. ಇರ್ವಿನ್, ಮೆಕಾರ್ಥಿ, ವಾಟ್, ಲಿಯೋ ಪೋಲ್ಡ್, ಫರ್ಗುಸನ್, ಯಾಕೂಬ್‌ಸನ್, ಕೆಲಾಗ್, ಜೇಕಬ್‌ಸನ್, ಹಾಕೆಟ್ ಮುಂತಾದವರು ಮುಖ್ಯರೆನಿಸಿಕೊಂಡಿದ್ದಾರೆ. ಇವರು ಇದನ್ನು ಬಾಲಭಾಷಾ ವಿಜ್ಞಾನ ಎಂದಿದ್ದಾರೆ.

ಮಗುವಿನ ವಾಕ್ ಶಕ್ತಿಯು ಅದರ ಅಳುವಿನಿಂದ ಆರಂಭವಾಗುತ್ತವೆ. ಮಗು ಬೆಳೆದಂತೆಲ್ಲಾ ಅದರ ಅಗತ್ಯತೆಗೆ ತಕ್ಕಂತೆ ಅದರ ಅಳುವಿನಲ್ಲಿ ವೈವಿಧ್ಯತೆ ತೋರಿಬರುತ್ತದೆ. ಅಳುವಿನ ವೈವಿಧ್ಯತೆಯು ಸಂವಹನ ಮಾಧ್ಯಮವಾಗಿರುತ್ತದೆ. ಅನಂತರ ಮಗು ಕೆಲವು ಆಂಗಿಕ ಸಂಕೇತಗಳು ಕಲಿಯುತ್ತದೆ. ಮುಂದೆ ಈ ಸಂಕೇತವನ್ನು ಮಗುವಿನ ದಿನನಿತ್ಯದ ಭಾಷೆಯಾಗಿ ಪರಿಣಮಿಸುತ್ತದೆ. ಭಾಷೆಯು ಅನುಕರಣೆಯಿಂದ ಲಭಿಸಿರುವಂತಹದ್ದು. ಮಗುವು ಸ್ವಪ್ರಯತ್ನ ಪೂರ್ವಕವಾಗಿ ಭಾಷೆಯನ್ನು ಕಲಿಯುತ್ತದೆ. ಇದರಲ್ಲಿ ಸ್ವರ-ವ್ಯಂಜನ, ಘೋಷ-ಅಘೋಷ, ಹ್ರಸ್ವ-ದೀರ್ಘ ಧ್ವನಿಗಳು ಇದ್ದರೂ ಅದನ್ನು ಗುರುತಿಸಲು ಕಷ್ಟವಾಗುತ್ತದೆ. ಕಾಲಾನಂತರದಲ್ಲಿ ಈ ಧ್ವನಿಗಳನ್ನು ಅವುಗಳಿಂದಾದ ಪದಗಳನ್ನು ಗುರುತಿಸಬಹುದು. ವ್ಯಂಜನಗಳಲ್ಲಿ ಅಘೋಷ ವ್ಯಂಜನಗಳಿಗಿಂತ ಘೋಷ ವ್ಯಂಜನಗಳೆ ಹೆಚ್ಚು. ಹೀಗೆ ಉಚ್ಚಾರವಾಗುವ ವ್ಯಂಜನಗಳಲ್ಲಿ ಅನುನಾಸಿಕ ವ್ಯಂಜನಗಳು ಸಾಮಾನ್ಯವಾಗಿ ಹೆಚ್ಚಿರುತ್ತವೆ. ಅನುನಾಸಿಕಗಳ ಉಚ್ಚಾರ ಮಕ್ಕಳಲ್ಲಿ ಅಷ್ಟು ಸ್ಪಷ್ಟವಾಗಿರುವುದಿಲ್ಲ. ಹಾಗೆಯೇ ಸಂಘರ್ಷಿ, ಪಾರ್ಶ್ವಿಕ, ಲೋಡಿತ, ತಾಡಿತ ಮುಂತಾದ ಧ್ವನಿಗಳು ಮಗುವಿನ ಧ್ವನ್ಯಂಗಗಳು ಬೆಳೆದಂತೆ ಉಚ್ಚಾರದಲ್ಲಿ ಸೇರಿಕೊಳ್ಳುತ್ತವೆ.

ಆರಂಭದಲ್ಲಿ ಧ್ವನಿ, ಶಬ್ದ, ವಾಕ್ಯ ಮತ್ತು ಅರ್ಥ ಇವುಗಳನ್ನು ನಿಯಂತ್ರಿಸುತ್ತಿರುವ ವ್ಯಾಕರಣ ಒಂದಿದೆ ಎಂಬುದು ಮಗುವಿಗೆ ತಿಳಿದಿರುವುದಿಲ್ಲ. ಶಿಕ್ಷಣದ ಮೂಲಕ ಬುದ್ಧಿ ಬೆಳೆದಂತೆ ಮಗುವಿಗೆ ಈ ಅರಿವು ಮೂಡುತ್ತದೆ. ಮಗು ತನ್ನ ಗ್ರಹಣ ಶಕ್ತಿಗೆ ಅನುಗುಣವಾಗಿ ಭಾಷೆಯನ್ನು ಬಳಸಲಾರಂಭಿಸುತ್ತದೆ. ಉದಾ: ಕಾಗೆ-ಕಾಕಾ, ಕೋಳಿ-ಕೋಕೋ, ಹಾಲು-ಲಾಲು, ನೀರು-ಜಿಜಿ ಇತ್ಯಾದಿ. ತನ್ನ ಪರಿಸರದ ವಸ್ತುಗಳು ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ಧ್ವನ್ಯಂಗಗಳ ಸಹಕಾರಕ್ಕೆ ತಕ್ಕಂತೆ ಪದಗಳ ಬಳಕೆಯಾಗುತ್ತದೆ. ಬಾಲ್ಯಾವಸ್ಥೆಯಲ್ಲಿ ಮಕ್ಕಳಲ್ಲಿ ಕ್ರಿಯಾ ಪದಗಳಿಗಿಂತ ನಾಮಪದಗಳ ಬಳಕೆ ಹೆಚ್ಚು ಕಂಡು ಬರುತ್ತದೆ.

ಪ್ರೌಢಭಾಷೆ: ಬಾಲ್ಯಾವಸ್ಥೆಯನ್ನು ತೊರೆದು, ಪ್ರೌಢಾವಸ್ಥೆಗೆ ಕಾಲಿಟ್ಟ ವ್ಯಕ್ತಿ ಬಳಸುವ ಭಾಷೆಯು ಪ್ರೌಢಭಾಷೆಯಾಗಿರುತ್ತದೆ. ವ್ಯಕ್ತಿಯು ಭಾಷೆಯನ್ನು ಪರಿಪಕ್ವವಾಗಿ ಕಲಿತು, ಸಮರ್ಪಕವಾಗಿ ಬಳಸುವ ಹಂತ ಇದಾಗಿದೆ. ಪ್ರೌಢವ್ಯಕ್ತಿ ಕೆಲವು ವೇಳೆ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿತು, ಆಡುವ ಭಾಷೆಯಲ್ಲಿ

ಸಹಜವಾಗಿ ಅವನ ಮಾತೃಭಾಷೆಯ ಪ್ರಭಾವವೂ, ಅವನ ಮಾತೃಭಾಷೆಯ ಮೇಲೆ ಅವನು ಕಲಿತು ಬಳಸುವ ಭಾಷೆಯ ಪ್ರಭಾವವೂ ಕಾಣಿಸಿಕೊಳ್ಳುತ್ತದೆ. ಪ್ರೌಢ ಭಾಷೆ ಅವನ ಧರ್ಮ, ಜಾತಿ, ಸಮಾಜ, ಸಂಸ್ಕೃತಿ, ಆಚಾರ, ವೃತ್ತಿ ಇತ್ಯಾದಿಗಳಿಗೆ ತಕ್ಕಂತೆ ಬೇರೆ-ಬೇರೆಯಾಗುತ್ತದೆ. ವ್ಯಕ್ತಿ ವಿದ್ಯಾವಂತನಾಗಲಿ, ಗಂಡಸಾಗಲಿ, ಹೆಂಗಸಾಗಲಿ ಬಳಸುವ ಭಾಷಾ ಶೈಲಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಇಂತಹ ಭಿನ್ನತೆ ಪ್ರೌಢಭಾಷೆಯಲ್ಲಿ ಹೆಚ್ಚು.

ಪ್ರೌಢಾವಸ್ಥೆಯಲ್ಲಿರುವ ವ್ಯಕ್ತಿಗಳು ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ. ವ್ಯವಹಾರಿಕ ಕಾರಣಗಳಿಂದ ಅನ್ಯಭಾಷಿಗರ ಸಂಪರ್ಕವನ್ನಿಟ್ಟುಕೊಂಡಿರುತ್ತಾರೆ. ಇದರಿಂದ ಇವರು ದ್ವಿಭಾಷಿಗರೂ, ಬಹುಭಾಷಿಕರೂ ಆಗುವ ಸಾಧ್ಯತೆ ಇರುತ್ತದೆ. ದ್ವಿಭಾಷಿಕತೆ ಎಂದರೆ ಎರಡು ಭಾಷೆಗಳ ಬಳಕೆ ಎಂದರ್ಥ. ಮಾತೃ ಭಾಷೆಯನ್ನು ಕಲಿತ ವ್ಯಕ್ತಿ ಅದೇ ಭಾಷೆಯನ್ನು ಎಲ್ಲಾ ಸಂದರ್ಭಗಳಲ್ಲಿಯೂ ಬಳಸಲಾಗುವುದಿಲ್ಲ. ವ್ಯವಹಾರಕ್ಕಾಗಿಯೋ, ಜ್ಞಾನಾರ್ಜನೆಗಾಗಿಯೋ ಅಥವಾ ಭಾವನೆಗಳ ವಿನಿಮಯಕ್ಕಾಗಿಯೋ, ಪ್ರತಿಷ್ಠೆಗಾಗಿಯೋ ಅನಿವಾರ್ಯವಾಗಿ ದ್ವಿಭಾಷಿಗರಾಗುವ ಸಾಧ್ಯತೆ ಹೆಚ್ಚು. ಹಾಗೆಂದ ಮಾತ್ರಕ್ಕೆ ತಮ್ಮ ಮಾತೃಭಾಷೆಯನ್ನೇ ಬಳಸುವ ಏಕಭಾಷಿಗಳಿಲ್ಲ ಎಂದು ಹೇಳಲಾಗುವುದಿಲ್ಲ. ದ್ವಿಭಾಷಿಕತೆಯಲ್ಲಿ ನಾಲ್ಕು ಭಾಗಗಳಲ್ಲಿ ಕಾಣಬಹುದು.

೧. ಪ್ರಾರಂಭಿಕ ದ್ವಿಭಾಷಿಕತೆ.

೨. ಅರೆದ್ವಿಭಾಷಿಕತೆ

೩. ಔಪಚಾರಿಕ ಹಾಗೂ ಅನೌಪಚಾರಿಕ ದ್ವಿಭಾಷಿಕತೆ.

೪. ಪೂರ್ಣ ಹಾಗೂ ಅಪೂರ್ಣ ದ್ವಿಭಾಷಿಕತೆ

ಮಗು ಬಾಲ್ಯದಿಂದಲೇ ಒಂದಕ್ಕಿಂತ ಹೆಚ್ಚು ಭಾಷೆಯನ್ನು ವಾಚನ, ಲೇಖನ, ವಾಕ್ ಹಾಗೂ ಶ್ರವಣ ನಾಲ್ಕು ಭಾಷಾ ಕೌಶಲಗಳಲ್ಲಿ ಯಶಸ್ವಿಯಾಗಿ ಬಳಸಲು ಕಲಿಯುವುದನ್ನೇ ಪ್ರಾರಂಭಿಕ ದ್ವಿಭಾಷಿಕತೆ ಎನ್ನಲಾಗಿದೆ. ಮಾತೃಭಾಷೆಯ ಜೊತೆಗೆ ಮತ್ತೊಂದು ಭಾಷೆಯ ವಾಚನ ಲೇಖನ ಹಾಗೂ ಶ್ರವಣ ಈ ಭಾಷಾಸಿದ್ಧಿ ಕೌಶಲಗಳಲ್ಲಿ ಕೆಲವನ್ನು ಮಾತ್ರ ಕರಗತ ಮಾಡಿಕೊಂಡಿದ್ದರೆ ಅದನ್ನು ಅರೆದ್ವಿಭಾಷಿಕತೆ ಎನ್ನಲಾಗುತ್ತದೆ. ಅಂದರೇ ಕೆಲವರು ಮತ್ತೊಂದು ಭಾಷೆಯನ್ನು ಅರ್ಥೈಸಿಕೊಳ್ಳಬಲ್ಲರಷ್ಟೇ ಇದನ್ನು ವ್ಯಕ್ತಿಯ ಗ್ರಹಣ/ಶ್ರವಣ ಕೌಶಲ ಎಂದೂ ಕೆಲವರು ಮತ್ತೊಂದು ಭಾಷೆಯನ್ನು ಬರೆಯಬಲ್ಲರು ಇದನ್ನು ಲೇಖನ ಕೌಶಲ ಎಂದು ಅಂತೆಯೇ ಭಾಷೆಯನ್ನು ಅರ್ಥೈಸಿಕೊಂಡ ಮಾತನಾಡಬಲ್ಲರು ಇದನ್ನು ವಾಕ್‌ಕೌಶಲ ಎಂದು, ಈ ಮೂರು ಕೌಶಲಗಳ ಜೊತೆಗೆ ಬೋಧನಾಂಶವನ್ನು ಹೊಂದಿರುವುದೇ ವಾಚನ ಕೌಶಲವಾಗಿದೆ. ಇಂತಹ ದ್ವಿಭಾಷಿಕತೆಯ ಪರಿಸ್ಥಿತಿಯನ್ನು ಅರೆದ್ವಿಭಾಷಿಕತೆ ಎಂದು ಕರೆಯಲಾಗುತ್ತದೆ.

ಶಾಲಾ-ಕಾಲೇಜುಗಳಲ್ಲಿ, ಸಂಘ-ಸಂಸ್ಥೆಗಳಲ್ಲಿ ನೀಡುವ ಶಿಕ್ಷಣದ ಮೂಲಕ ಮತ್ತೊಂದು ಭಾಷೆಯನ್ನು ಕಲಿಯುವುದೇ ಔಪಚಾರಿಕ ದ್ವಿಭಾಷಿಕತೆ. ಯಾವ ಶಿಕ್ಷಣವೂ ಇಲ್ಲದ ಪರಿಸ್ಥಿತಿಯಿಂದ

ಪ್ರೇರಿತರಾಗಿ ಇನ್ನೊಂದು ಭಾಷೆಯನ್ನು ಕಲಿಯುವುದೇ ಅನೌಪಚಾರಿಕ ದ್ವಿಭಾಷಿಕತೆ. ಉದಾ: ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾದ ಮುಸ್ಲಿಮರು ತಮ್ಮ ಮಾತೃಭಾಷೆಯಾದ ಉರ್ದುವಿನೊಂದಿಗೆ ಆಡಳಿತ ಭಾಷೆಯಾದ ಕನ್ನಡವನ್ನೂ ಕಲಿತಿರುತ್ತಾರೆ.

ಎರಡು ಭಾಷೆಗಳಲ್ಲಿ ಸಮರ್ಪಕವಾಗಿ ಬಳಸಲು ಸಾಧ್ಯವಾಗುವುದೇ ಪೂರ್ಣ ದ್ವಿಭಾಷಿಕತೆ. ದ್ವಿತೀಯ ಭಾಷೆಯ ಜ್ಞಾನ ಅಷ್ಟಿಲ್ಲದೆ ಕೇವಲ ಸೀಮಿತ, ಪರಿಸರಗಳಲ್ಲಿ ಬಳಸುವುದೇ ಅಪೂರ್ಣ ದ್ವಿಭಾಷಿಕತೆ. ಉದಾ: ಯಾವುದೋ ಒತ್ತಡಕ್ಕೆ ಮಣಿದು ನಾವು ಅನಿವಾರ್ಯವಾಗಿ ಹರಕು-ಮುರುಕು ಇಂಗ್ಲಿಷ್, ಹಿಂದಿಗಳನ್ನು ಬಳಸುವುದುಂಟು.

ಹೀಗೆ ಪ್ರೌಢಾವಸ್ಥೆಯಲ್ಲಿರುವ ವ್ಯಕ್ತಿಗಳು ಭಿನ್ನ-ಭಿನ್ನ ಭಾಷಾನೆಲೆಯಲ್ಲಿ ವ್ಯವಹರಿಸುತ್ತಾರೆ. ಇವರ ಮಾತು ಹೆಚ್ಚು ಜವಾಬ್ದಾರಿಯುತವಾಗಿ ಹಾಗೂ ಸ್ಪಷ್ಟವಾಗಿರುತ್ತದೆ. ಭಾಷೆಯ ವೈಜ್ಞಾನಿಕ ಅಧ್ಯಯನಕ್ಕೆ, ಅದರ ಸ್ವರೂಪ ಲಕ್ಷಣಗಳನ್ನು ತಿಳಿಯಲು ಈ ಹಂತದ ಭಾಷೆ ಯೋಗ್ಯವಾದ ಸಾಮಗ್ರಿಯಾಗುತ್ತದೆ. ಆದ್ದರಿಂದ ವಿದ್ವಾಂಸರು ಇದನ್ನು ಪ್ರೌಢ ಭಾಷಾ ವಿಜ್ಞಾನ ಎನ್ನುತ್ತಾರೆ.

ವೃದ್ಧ ಭಾಷೆ: ಪ್ರೌಢಭಾಷೆಗಿಂತಲೂ ಹೆಚ್ಚು ತಾತ್ವಿಕವಾಗಿ, ಆಧ್ಯಾತ್ಮಿಕವಾಗಿ ವಿಚಾರಗಳು ವೃದ್ಧರ ಭಾಷೆಯಲ್ಲಿರುತ್ತದೆ. ಪದಸಂಪತ್ತು ಪ್ರೌಢವಾಗಿರುತ್ತದೆ. ಇತ್ತೀಚೆಗೆ ಅಮೆರಿಕ, ಇಂಗ್ಲೇಂಡ್, ರಷ್ಯ ಮುಂತಾದ ಮುಂದುವರಿದ ದೇಶಗಳ ಸಾಮಾಜಿಕ ಭಾಷಾ ವಿಜ್ಞಾನಿಗಳು, ಮನೋ ವಿಜ್ಞಾನಿಗಳು, ಮಾನವ ಶಾಸ್ತ್ರಜ್ಞರು, ವೃದ್ಧರ ಭಾಷೆಯನ್ನು ಕುರಿತು ಆಳವಾಗಿ ಪರಿಶೀಲಿಸಿದ್ದಾರೆ. ಇದನ್ನು ವೃದ್ಧ ಭಾಷಾ ವಿಜ್ಞಾನ ಎಂದು ಕರೆದಿದ್ದಾರೆ.

ವೃದ್ಧರ ಉಚ್ಚಾರಣಾಂಗಗಳು ಸಾಮಾನ್ಯವಾಗಿ ಶಿಥಿಲವಾಗಿರುತ್ತವೆ. ಈ ಶಿಥಿಲ ಉಚ್ಚಾರ ಅವರು ಆಡುವ ಭಾಷೆಯ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡುತ್ತವೆ. ಕೆಲವು ವೇಳೆ ಶಬ್ದ ಮತ್ತು ವಾಕ್ಯಗಳು ಉಚ್ಚಾರದಲ್ಲಿ ಅಸ್ಪಷ್ಟತೆ ಕಾಣಿಸಿಕೊಳ್ಳುತ್ತದೆ. ಸ್ವರಾಘಾತ, ಬಲಾಘಾತ, ಸ್ವರಲಹರಿ ಮುಂತಾದವು ಅಸ್ಪಷ್ಟವಾಗಿರುವ ಸಾಧ್ಯತೆ ಇದೆ. ಒಂದು ಭಾಷೆಯ ವೈಜ್ಞಾನಿಕ ಅಧ್ಯಯನಕ್ಕೆ ಈ ವೃದ್ಧರ ಭಾಷೆ ಸಾಮಗ್ರಿಯಾಗಲಾರದು. ಈ ಕಾರಣದಿಂದಲೇ ವೃದ್ಧನು ಎಷ್ಟೇ ಅನುಭವಶಾಲಿಯಾಗಿದ್ದರೂ ಅವನು ಉತ್ತಮವಾದ ಸೂಚಕನೆನಿಸಿಕೊಳ್ಳಲಾರ ಎಂದು ಭಾಷಾವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಹೀಗೆ ವ್ಯಕ್ತಿ ಭಾಷೆಯು ಮಾನವನ ಹುಟ್ಟಿನಿಂದ ಸಾಯುವವರೆಗೂ ನಿರಂತರವಾಗಿ ಬೆಳೆಯುತ್ತಾ ಪರಿವರ್ತನೆಗೊಳ್ಳುತ್ತಾ ಸಾಗುತ್ತದೆ.

ಉಪಭಾಷೆ (Dialect) :

ಭಾಷೆಯಲ್ಲಿ ಭೌಗೋಳಿಕ, ಸಾಮಾಜಿಕ ಮುಂತಾದ ಕಾರಣಗಳಿಂದ ಹಲವಾರು ಪ್ರಭೇದಗಳು ಉಂಟಾಗುತ್ತವೆ. ಹೀಗೆ ಪ್ರಧಾನ ಭಾಷೆಯಿಂದ ಕವಲಾದ ಪ್ರಭೇದಗಳನ್ನು ಉಪಭಾಷೆಗಳು ಎಂದು

ಕರೆಯಬಹುದು. ಯಾವ ಭಾಷೆಯನ್ನು ಗ್ರಾಮ್ಯರು ಬಳಸುತ್ತಾರೋ, ಯಾವ ಭಾಷೆಗೆ ಲಿಪಿ ಇಲ್ಲವೋ, ಯಾವ ಭಾಷೆಯನ್ನು ಅವಿದ್ಯಾವಂತರು ಬಳಸುತ್ತಾರೋ ಅದು ಉಪಭಾಷೆ ಎಂಬ ಕಲ್ಪನೆ ಇತ್ತು. ಆದರೇ ಪ್ರಧಾನ ಭಾಷೆ ಹಾಗೂ ಉಪಭಾಷೆಗಳು ಭಾಷೆಯ ರೂಪಗಳಷ್ಟೇ. ಭಾಷೆಯನ್ನು ಆಡುವವರ ದೃಷ್ಟಿಯಿಂದ ಯಾವ ಭಾಷೆಯೂ ಶ್ರೇಷ್ಠವಲ್ಲ, ಯಾವ ಭಾಷೆಯೂ ಕನಿಷ್ಠವಲ್ಲ.

ಭಾಷಾ ವಿಜ್ಞಾನಿಗಳು ಉಪಭಾಷೆ ಎಂದರೇನು ಎಂಬುದನ್ನು ಸೂತ್ರಪ್ರಾಯವಾಗಿ ಹಿಡಿದಿಡಲು ಪ್ರಯತ್ನಿಸಿದ್ದಾರೆ;

೧. "Dialect may be defined as the variety of a language spoken by the members of a single homogeneous speech community". ಅಂದರೇ, ಒಂದೇ ಸಮುದಾಯಕ್ಕೆ ಸೇರಿದ ಜನರು ಆಡುವ ವೈವಿಧ್ಯತೆಯಿಂದ ಕೂಡಿದ ಒಂದು ಭಾಷಾ ಪ್ರಭೇದವೇ ಉಪಭಾಷೆ.

೨. Dialect is individual variety of a language. ಇದರ ಅರ್ಥ ಒಂದು ಭಾಷೆಯ ಭಾಷಾ ಪ್ರಭೇದವೇ ಉಪಭಾಷೆ.

೩. Dialect is constituted by the speach of all those persons in whose utterances, Variations are not Sensiblily perceived or attended to - (Gune)

೪. A form of speech actually in natural use in any community as a made of communication varying some what in the mouths of indviduals but only with in Comparatively narrow limits at any one time. (Welaster) ಪರಸ್ಪರ ಅರಿವಿಗೆ ಸಾಮಾನ್ಯ ಭಾಷಿಕಾಂಶಗಳನ್ನು ತಕ್ಕ ಮಟ್ಟಿಗೆ ಹೊಂದಿರುವ ಅನೇಕ ಅಂಶಗಳಲ್ಲಿ ವ್ಯತ್ಯಾಸ ಪಡೆದ ಹಲವು ಉಪಭಾಷೆಗಳ ಒಂದು ಸಮುದಾಯವನ್ನೇ ಭಾಷೆ ಎಂದು ಕರೆಯಲಾಗುತ್ತದೆ."[೧]

ಒಟ್ಟಿನಲ್ಲಿ ಉಪಭಾಷೆಗಳೆಂದರೇ ಭಾಷೆಯ ಪ್ರಭೇದಗಳು ಈ ಉಪಭಾಷೆಗಳೇ ಕಾಲಾನಂತರದಲ್ಲಿ ಸ್ವತಂತ್ರ ಭಾಷೆ ಆಗುವ ಸಾಧ್ಯತೆ ಹೆಚ್ಚು. ಭಾಷಾ ಪ್ರಭೇದಗಳು ಬೇರೆ-ಬೇರೆ ಪ್ರದೇಶದ ಆಧಾರದ ಮೇಲೆ ಹಾಗೂ ಜಾತಿ ವರ್ಗಗಳೆಂಬ ಸಾಮಾಜಿಕ ಅಂಶಗಳ ಆಧಾರದ ಮೇಲೆ ವರ್ಗೀಕೃತವಾಗುತ್ತವೆ.

ಉಪಭಾಷೆಯಲ್ಲಿ ಎರಡು ವಿಧಗಳನ್ನು ಕಾಣಬಹುದು.

೧. ಪ್ರಾದೇಶಿಕ ಉಪಭಾಷೆ.

೨. ಸಾಮಾಜಿಕ ಉಪಭಾಷೆ.

---

೧. ಕೆ. ಕೆಂಪೇಗೌಡ, ಸಾಮಾನ್ಯ ಭಾಷಾ ವಿಜ್ಞಾನ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ: ಪ್ರವ:೧೯೯೬.ಪು.ಸಂ.೩೬೪

೧. ಪ್ರಾದೇಶಿಕ ಉಪಭಾಷೆ : "ಪ್ರಾದೇಶಿಕತೆಯಿಂದುಂಟಾಗುವ ಭಾಷಾ ಪ್ರಭೇದವನ್ನು ಪ್ರಾದೇಶಿಕ ಉಪಭಾಷೆ ಎಂದು ಕರೆಯಲಾಗುತ್ತದೆ. ಉದಾ: ಧಾರವಾಡ ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡ ಗುಲ್ಬರ್ಗ ಕನ್ನಡ ಇವು ಪ್ರಾದೇಶಿಕ ಉಪಭಾಷೆಗಳಾಗಿವೆ"[೧]. ಕನ್ನಡದ ಪ್ರಾದೇಶಿಕ ಉಪಭಾಷೆಗಳ ಭಿನ್ನತೆಯನ್ನು ಈ ಕೆಳಕಂಡಂತೆ ಕಾಣಬಹುದು.

ಮೈಸೂರು ಕನ್ನಡ : ಇದು ಕನ್ನಡದ ಪ್ರಮಾಣ ಭಾಷೆಯಾಗಿ 'ಶಿಷ್ಟ ಭಾಷೆಯಾಗಿ' ಆಡಳಿತ ಕನ್ನಡವಾಗಿ ಬಳಕೆಯಲ್ಲಿದೆ. ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ ಮುಂತಾದ ಪ್ರದೇಶದಲ್ಲಿ ಈ ಬಗೆಯ ಭಾಷೆ ಬಳಕೆಯಲ್ಲಿದೆ.

ಮೈಸೂರು ಕನ್ನಡದ ಪದಾಂತ್ಯ ಸ್ವರ 'ಎ' ಕಾರವಾಗಿರುವುದು. ಧಾರವಾಡದಲ್ಲಿ 'ಇ' ಕಾರವಾಗಿ ಪರಿವರ್ತನೆ ಯಾಗುತ್ತದೆ.

ಉದಾ:	ಮೈಸೂರು ಕನ್ನಡ	ಧಾರವಾಡ ಕನ್ನಡ
	ಕುದರೆ	ಕುದುರಿ
	ಒಂಟೆ	ಒಂಟಿ
	ಆನೆ	ಆನಿ
	ಎಮ್ಮೆ	ಎಮ್ಮಿ

ಮೈಸೂರಿನ ಕ್ರಿಯಾರೂಪ ಹಾಗೂ ಸರ್ವನಾಮ (ದರ್ಶಕನಾಮ) ರೂಪಗಳಿಗೂ ಕಲ್ಬುರ್ಗಿಯ ಕ್ರಿಯಾರೂಪ ಹಾಗೂ ದರ್ಶಕ ನಾಮಗಳಿಗೂ ಬಹಳಷ್ಟು ವ್ಯತ್ಯಾಸವಿದೆ.

ಉದಾ :	ಮೈಸೂರು ಕನ್ನಡ	ಕಲ್ಬುರ್ಗಿ ಕನ್ನಡ
	ಇದ್ದಾನೆ	ಹಾನ
	ಇದ್ದಾಳೆ	ಹಾಳೆ
	ಇದ್ದಾರೆ	ಹಾರೆ
	ಅಲ್ಲಿ	ಕಲ್ಲಿ
	ಅದು	ಕದು
	ಇದು	ಕಿದು
	ಇಲ್ಲಿ	ಕಿಲ್ಲಿ.

ಕಲ್ಬುರ್ಗಿ ಕನ್ನಡದಲ್ಲಿ ಬರುವ ಶಬ್ದಾರಂಭದಲ್ಲಿನ 'ಕ್' ಎಲ್ಲಾ ಕಡೆಗೂ ಅನ್ವಯವಾಗುವುದಿಲ್ಲ. ನಾಮಪದ ಮುಂತಾದ ಪದರೂಪಗಳಲ್ಲಿ 'ಕ್' ಕಾರ ಬರುವುದಿಲ್ಲ. ಇದು ಕೆಲವು ಪದಗಳಿಗೆ ಮಾತ್ರ ಸೀಮಿತವಾದದ್ದು.

ಕರಾವಳಿ ಕನ್ನಡದಲ್ಲಿ 'ಇ' ಮತ್ತು 'ಉ' ಸ್ವರಗಳು, 'ಎ' ಮತ್ತು 'ಒ' ಸ್ವರಗಳಾಗಿ ಬಳಕೆಯಾಗುತ್ತವೆ.

---

೧. ಡಾ.ಪಿ.ಮಹಾದೇವಯ್ಯ:ಸಾಮಾಜಿಕ ಉಪಭಾಷೆ:ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ.ವ.:೨೦೦೦ ಪು.ಸಂ.೫

ಹಾಗೆಯೇ 'ಅ' ದೀರ್ಘ ಸ್ವರವು 'ಏ' ಸ್ವರವಾಗಿ ಬಳಕೆಯಾಗುವುದನ್ನು ಕಾಣಬಹುದು.

ಉದಾ:	ಮೈಸೂರು ಕನ್ನ	ಕರಾವಳಿ ಕನ್ನಡ
	ಕಿವಿ	ಕೆವಿ
	ಇಲಿ	ಎಲಿ
	ತುಳಿ	ಕೊಳಿ
	ಸುರಿ	ಸೊರಿ
	ಆಡು	ಏಡು
	ಆಮೆ	ಏಮೆ

ಅಂತೆಯೇ ಕೆಲವು ಸರ್ವನಾಮುಗಳು ಸಂಕ್ಷಿಪ್ತರೂಪ ಪಡೆಯುತ್ತವೆ. ಉದಾ: ನಾನು > ನಾ, ನೀನು > ನೀ, ಹಾಗೆಯೇ ಏ > ಯಾ, ಓ > ವ ಆಗಿ ಹಳೆ ಮೈಸೂರು ವಿಭಾಗದಲ್ಲಿ ಬಳಕೆಯಾಗುತ್ತದೆ. ಉದಾ: ಏಕೆ >ಯಾಕೆ, ಗೋಡೆ >ಗ್ವಾಡೆ ಇತ್ಯಾದಿ.

ಧಾರವಾಡ ಕನ್ನಡ : ಕರ್ನಾಟಕದಲ್ಲಿ ಉತ್ತರ ಭಾಗದಲ್ಲಿ ಈ ಜಿಲ್ಲೆ ಇದೆ. ಧಾರವಾಡ, ಬೆಳಗಾವಿ, ಹಾವೇರಿ, ಗದಗ್‌ಗಳಲ್ಲಿ ಈ ಬಗೆಯ ಭಾಷೆ ಬಳಕೆಯಲ್ಲಿವೆ. ಇಲ್ಲಿ ಸಾರ್ವತ್ರಿಕವಾಗಿ ನಾಮಪದದಲ್ಲಿ ಬಳಕೆಯಾಗುವ 'ಎ' ಕಾರ, 'ಇ' ಕಾರವಾಗಿ ಬಳಕೆಯಾಗುತ್ತದೆ.

ಉದಾ :	ಶಿಷ್ಟ ಅಭಿವ್ಯಕ್ತಿ	ಧಾರವಾಡ ಕನ್ನಡ
	ಕೆರೆ	ಕೆರಿ
	ದೊರೆ	ದೊರಿ
	ಬೆಣ್ಣೆ	ಬೆಣ್ಣಿ
	ಎಣ್ಣೆ	ಎಣ್ಣಿ

ಧಾರವಾಡ ಕನ್ನಡದಲ್ಲಿ ಶಬ್ದಾಂತ್ಯದ 'ಉ' ಸ್ವರ ಸಾಮಾನ್ಯವಾಗಿ ಲೋಪವಾಗಿ 'ಅ'ಕಾರಾಂತ್ಯವಾಗುತ್ತದೆ.

ಉದಾ:	ಶಿಷ್ಟ ಅಭಿವ್ಯಕ್ತಿ	ಧಾರವಾಡ ಕನ್ನಡ
	ಕಂದೀಲು	ಕಂದೀಲ
	ಮಣ್ಣು	ಮಣ್ಣ
	ನೀರು	ನೀರ

ಶಬ್ದ ಮತ್ತು ಅರ್ಥ ಇವುಗಳ ಮಟ್ಟದಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣಬಹುದು.

ಉದಾ:	ಶಿಷ್ಟ ಅಭಿವ್ಯಕ್ತಿ	ಧಾರವಾಡ ಕನ್ನಡ
	ಕಡಲೆ ಕಾಯಿ	ಸೇಂಗಾ
	ದುಡ್ಡು	ರೊಕ್ಕ
	ತುಂಬ	ಭಾಳ

ತೊಂದರೆ	ತ್ರಾಸ
ಸೆಕೆ	ಗಮ್ಮ

ಗುಲ್ಬರ್ಗ ಕನ್ನಡ : ಕರ್ನಾಟಕದ ಉತ್ತರ ಭಾಗದಲ್ಲಿರುವ ಗುಲ್ಬರ್ಗ ಜಿಲ್ಲೆಯ ಕನ್ನಡವು ಪ್ರಾದೇಶಿಕ ಉಪಭಾಷೆಗಳಲ್ಲಿ ಒಂದಾಗಿದೆ. F.Z.Q. ಎಂಬ ಸಂಘರ್ಷ ಧ್ವನಿಗಳು, ಸ್, ಷ್, ಶ್ ಎಂಬ ಊಷ್ಮಾ ಧ್ವನಿಗಳ ಬಳಕೆ, ಮಹಾಪ್ರಾಣಗಳ ಬಳಕೆ ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉದಾ: ಉರ್ದು ಪದಗಳಿಗೆ 'ಇಸು' ಪ್ರತ್ಯೇಯ ಸೇರಿಸಿ ಕನ್ನಡ ಪದವನ್ನಾಗಿಸಿಕೊಂಡು ಗುಲ್ಬರ್ಗದಲ್ಲಿ ಬಳಸುತ್ತಾರೆ.

ಉದಾ:	ಉರ್ದು ಭಾಷೆ		ಪ್ರತ್ಯೆಯ		ಗುಲ್ಬರ್ಗ ಕನ್ನಡ
	ಉಡ್	+	ಇಸು	=	ಉಡಾಯಿಸು
	ಗುರ್ಘುರ್	+	ಇಸು	=	ಗುರ್ಘುರಾಯಿಸು

ಸಾಮಾನ್ಯವಾಗಿ 'ಎ' ಕಾರ ಬಳಕೆಯಾಗಬೇಕಾದ ಸ್ಥಾನದಲ್ಲಿ 'ಇ' ಕಾರ ಸ್ಥಾನ ಪಡೆಯುತ್ತದೆ.

ಉದಾ:	ಶಿಷ್ಟ ಅಭಿವ್ಯಕ್ತಿ	ಗುಲ್ಬರ್ಗ ಕನ್ನಡ
	ಕಟ್ಟೆ	ಕಟ್ಟಿ
	ಕೆರೆ	ಕೆರಿ
	ಕಡ್ಲೆ	ಕಡ್ಲಿ

ಅಂತೆಯೇ ಸಾಮಾನ್ಯವಾಗಿ 'ಉ' ಕಾರಕ್ಕೆ ಬದಲಾಗಿ 'ಅ' ಕಾರ ಬಳಕೆಯಾಗುತ್ತದೆ.

ಉದಾ:	ಶಿಷ್ಟ ಅಭಿವ್ಯಕ್ತಿ	ಗುಲ್ಬರ್ಗ ಕನ್ನಡ
	ಮುಳ್ಳು	ಮುಳ್ಳ
	ಕಾಳು	ಕಾಳ

ಅಷ್ಟೇ ಅಲ್ಲದೇ ಉರ್ದು ಮತ್ತು ಗುಲ್ಬರ್ಗ ಕನ್ನಡ ಪದಗಳು ಸೇರಿ ಸಮಾಸ ಪದಗಳಾಗಿ ಗುಲ್ಬರ್ಗದಾದ್ಯಂತ ಬಳಕೆಯಲ್ಲಿರುವುದು ಉಂಟು.

ಉದಾ :	ಉರ್ದು	ಗುಲ್ಬರ್ಗ ಕನ್ನಡ		ಸಮಾಸ ಪದ
	ಕಾಸಾ +	ಊರು	=	ಕಾಸಾ ಊರು
	ಜವಾನಾ +	ಹುಡುಗ	=	ಜವಾನ ಹುಡುಗ

ಸರ್ವನಾಮಗಳು ಕೆಲವು ಅಕ್ಷರ ಲೋಪಗಳೊಂದಿಗೆ ಬಳಕೆಯಾಗುತ್ತವೆ.

ಉದಾ:	ಶಿಷ್ಟ ಕನ್ನಡ	ಗುಲ್ಬರ್ಗ ಕನ್ನಡ
	ಅವಳು	ಆಕೆ
	ಇವಳು	ಈಕೆ

ಅವನು	ಅವ
ಇವನು	ಇವ

ಹಾಗೆಯೇ ಗುಲ್ಬರ್ಗ ಹಾಗೂ ಬಳ್ಳಾರಿ ಕನ್ನಡಗಳಲ್ಲಿ ದ್ವಿತ್ವಗಳು ಬರುವೆಡೆಗಳಲ್ಲಿ ಮಂಡ್ಯದ ಭಾಗಗಳಲ್ಲಿ ಅನುಸ್ವಾರದ ವಿಶಿಷ್ಟ ಅಂಶವನ್ನು ಗುರುತಿಸಬಹುದು.

ಉದಾ:	ಶಿಷ್ಟ ಕನ್ನಡ	ಬಳ್ಳಾರಿ ಕನ್ನಡ	ಗುಲ್ಬರ್ಗ ಕನ್ನಡ	ಮಂಡ್ಯ ಕನ್ನಡ
	ಕುರುಡ	ಕುಳ್ಡ	ಕುಡ್ಡ	ಕುಂಡ
	ಬುರುಡೆ	ಬುಲ್ಡೆ	ಬುಡ್ಡೆ	ಬುಂಡೆ
	ಹೊರಡು	ಹೊಳ್ಡು	ಹೊಡ್ಡು	ಹೊಂಡು

ಬೀದರ್‌ಕನ್ನಡ : ಕರ್ನಾಟಕದ ಉತ್ತರ ತುದಿಯಲ್ಲಿ ಬಳಕೆಯಲ್ಲಿರುವ ಉಪಭಾಷೆ. ಉರ್ದು, ಮರಾಠಿ, ತೆಲುಗು, ಪ್ರಭಾವ ಈ ಭಷೆಯ ಮೇಲಾಗಿದೆ. F.Z.Q. ಎಂಬ ಸಂಘರ್ಷ ಧ್ವನಿಗಳು, ಶ. ಷ, ಸ್ ಎಂಬ ಊಷ್ಮ ಧ್ವನಿಗಳು ಈ ಭಾಷೆಯಲ್ಲಿ ಹೆಚ್ಚಾಗಿ ಬಳಕೆಯಲ್ಲಿವೆ.

ಬೀದರ್ ಕನ್ನಡದಲ್ಲಿ ಶಿಷ್ಟ ಕನ್ನಡದ ಕೆಲವು ಅಲ್ಪಪ್ರಾಣಗಳು ಮಹಾಪ್ರಾಣಗಳಾಗಿ ಬಳಕೆಯಾಗುತ್ತವೆ.

ಉದಾ:	ಶಿಷ್ಟ ಕನ್ನಡ	ಬೀದರ್‌ಕನ್ನಡ
	ಕೆಂಡ	ಖೆಂಡ
	ದೂಡು	ಧೂಡು

ಇಲ್ಲಿ ಪದದ ಆರಂಭದ ಹ್ರಸ್ವ 'ಅ' ಕಾರವು ಅವರ್ಗೀಯ ವ್ಯಂಜನವಾದ 'ಯ' ಕಾರವಾಗಿ ಪರಿವರ್ತನೆಯಾಗುತ್ತದೆ.

ಉದಾ :	ಶಿಷ್ಟ ಕನ್ನಡ	ಬೀದರ್ ಕನ್ನಡ
	ಅಣ್ಣ	ಯಣ್ಣ
	ಅಪ್ಪ	ಯಪ್ಪ
	ಅಕ್ಕ	ಯಕ್ಕ

ಅಂತೆಯೇ ಐಚ್ಛಿಕವಾಗಿ ಪದದ ಆರಂಭದಲ್ಲಿನ ಒತ್ತಕ್ಷರವು ಮೊದಲು ಅಕ್ಷರದ ಪರದಲ್ಲಿ ಸ್ವತಂತ್ರ/ಪೂರ್ಣಾಕ್ಷರವಾಗಿ ವರ್ತಿಸುತ್ತವೆ.

ಉದಾ :	ಶಿಷ್ಟ ಕನ್ನಡ	ಬೀದರ್ ಕನ್ನಡ
	ಪ್ರಾಣ	ಪರಾಣ
	ಪ್ರಭು	ಪರಭು

ಮರಾಠಿ, ಉರ್ದು ಭಾಷೆಗಳು ಸೇರಿ ರೇಖ್ತಾ ಭಾಷೆಗಳಾದವು. ವಿಜಯನಗರದ ಅರಸರ (ಕ್ರಿ.ಶ. ೧೪-೧೭ ಶತಮಾನ) ಕಾಲದಲ್ಲಿ ಇವು ಹೆಚ್ಚು ಪ್ರಚಲಿತದಲ್ಲಿದ್ದವು. ಬೀದರ್‌ನಲ್ಲಿ ಇನ್ನೂ ಇವುಗಳ ಬಳಕೆಯನ್ನು ಕಾಣಬಹುದು.

ಉದಾ :	ಶಿಷ್ಟ ಕನ್ನಡ	ಬೀದರ್‌ಕನ್ನಡ
	ನೈಜ	ಅಸಲಿ
	ನಮಸ್ಕಾರ	ಸಲಾಮು
	ಕೃತಕ/ ಅಣಕ	ನಕಲಿ

ಬಿಜಾಪುರ ಕನ್ನಡ : ಮರಾಠಿ ಭಾಷೆಯ ಪ್ರಭಾವ ಈ ಭಾಷೆ ಮೇಲಾಗಿದೆ. ಮಹಾಪ್ರಾಣ, ಶ.ಷ.ಸ. ಎಂಬ ಊಷ್ಮ ಧ್ವನಿ, F.Z.Q. ಎಂಬ ಸಂಘರ್ಷ ಧ್ವನಿಗಳ ಬಳಕೆ ಈ ಭಾಷೆಯಲ್ಲಿ ಹೆಚ್ಚು. ಹಾಗೂ ವ್ಯಂಜನಾಂತ ಪದಗಳ ಉಪಯೋಗವೂ ಇದೆ.

ಸಾಮಾನ್ಯವಾಗಿ ಶಿಷ್ಟ ಕನ್ನಡದ ಅಲ್ಪಪ್ರಾಣಗಳು ಮಹಾಪ್ರಾಣವಾಗಿ ಬಳಕೆಯಾಗುತ್ತವೆ.

ಉದಾ:	ಶಿಷ್ಟ ಕನ್ನಡ	ಬಿಜಾಪುರ ಕನ್ನಡ
	ಕತೆ	ಕಥೆ
	ಬಂಗಾರ	ಭಂಗಾರ

ಬಿಜಾಪುರ ಕನ್ನಡದಲ್ಲಿ ವ್ಯಂಜನಾಂತ ಪದಗಳು ಬಳಕೆಯಾಗುವುದನ್ನು ಕಾಣಬಹುದು.

ಉದಾ :	ಶಿಷ್ಟ ಕನ್ನಡ	ಬಿಜಾಪುರ ಕನ್ನಡ
	ತಿನ್ನು	ತಿನ್
	ಕಣ್ಣು	ಕಣ್
	ಕಾಳು	ಕಾಳ್.

ಧಾರವಾಡ, ಗುಲ್ಬರ್ಗ ಮುಂತಾದ ಜಿಲ್ಲೆಗಳ ಕನ್ನಡಗಳಂತೆ ಬಿಜಾಪುರ ಕನ್ನಡದಲ್ಲಿಯೂ 'ಎ' ಕಾರ ಬಳಕೆಯಾಗುವ ಕಡೆಗಳಲ್ಲಿ 'ಯ', 'ಇ' ಕಾರವು ಬಳಕೆಯಾಗುತ್ತದೆ.

ಉದಾ :	ಶಿಷ್ಟ ಕನ್ನಡ	ಬಿಜಾಪುರ ಕನ್ನಡ
	ತೆನೆ	ತೆನಿ
	ಬೆಲೆ	ಬೆಲಿ
	ಬೇಳೆ	ಬ್ಯಾಳಿ

ಬಿಜಾಪುರ ಕನ್ನಡದಲ್ಲಿ ಸಂಖ್ಯಾವಾಚಕಗಳು ಉರ್ದು ಭಾಷೆಯವು ಬಳಕೆಯಾಗುತ್ತಿವೆ.

ಉದಾ :	**ಶಿಷ್ಟ ಕನ್ನಡ**	**ಬಿಜಾಪುರ ಕನ್ನಡ**
	ಹತ್ತು	ದ (ದಸ್)
	ಹನ್ನೆರಡು	ಬಾರ (ಬಾರಹ್)
	ಐವತ್ತು	ಪನ್ನಾಸ್ (ಪಚಾಸ್)

ರಾಯಚೂರು ಕನ್ನಡ : ಕನ್ನಡದ ಪ್ರಾದೇಶಿಕ ಪ್ರಭೇದಗಳಲ್ಲಿ ಇದೂ ಒಂದು. 'ಎ' ಕಾರದ ಬದಲಿಗೆ 'ಇ' ಕಾರ, 'ಯ' ಕಾರಗಳು ಬಳಕೆಯಾಗುತ್ತವೆ. ನಾಮದದಲ್ಲಿ 'ಉ' ಕಾರಕ್ಕೆ ಬದಲಾಗಿ 'ಅ' ಕಾರಕ್ಕೆ ಬಳಕೆಯಾಗುತ್ತವೆ. ಜೊತೆಗೆ ಅನುಸ್ವಾರದ (ಂ) ಬಳಕೆಯೂ ಸಹಜವಾಗಿಯೇ ಇರುತ್ತದೆ.

ಎ ಕಾರ ಇ ಕಾರವಾಗಿ ಬಳಕೆಯಾಗುವುದು ಧಾರವಾಡ, ಗುಲ್ಬರ್ಗ, ಬಿಜಾಪುರ, ರಾಯಚೂರುಗಳಲ್ಲಿ ಸಹಜವೇ ಆಗಿದೆ. ತಲೆ >ತಲಿ, ಎಲೆ >ಎಲಿ ಇತ್ಯಾದಿ, ಅಂತೆಯೇ 'ಎ' ಕಾರ 'ಯ' ಕಾರವಾಗುತ್ತದೆ. ಕೋಟೆ>ಕ್ವಾಟಿ, ಅಂತೆಯೇ ನಾಮಪದದಲ್ಲಿ ಉ ಕಾರಕ್ಕೆ ಬದಲಾಗಿ ಅ ಕಾರ ಬಳಕೆಯಾಗುತ್ತದೆ.

ಉದಾ :	**ಶಿಷ್ಟ ಕನ್ನಡ**	**ಬಿಜಾಪುರ ಕನ್ನಡ**
	ಮೀನು	ಮೀನ
	ಆಫೀಸು	ಆಫೀಸ
	ಕಾಲೇಜು	ಕಾಲೇಜ

ಅನುಸ್ವಾರದ (ಂ) ಬಳಕೆಗೆ ರಾಯಚೂರು ಕನ್ನಡ ಉತ್ತಮ ನಿದರ್ಶನ, ಕೆಲವು ಆದಿವಾಸಿ, ಸೋಲಿಗ ಜನಾಂಗಗಳಲ್ಲಿಯೂ ಬಿಂದುವಿನ ಬಳಕೆ ಸಹಜವಾಗಿ ಕಾಣುತ್ತದೆ.


ಉದಾ:	**ಶಿಷ್ಟ ಕನ್ನಡ**	**ಬಿಜಾಪುರ ಕನ್ನಡ**
	ಬರುವ ಹಾಗಿಲ್ಲ	ಬರಂಗಿಲ್ಲ
	ಹೋಗುವ ಹಾಗಿಲ್ಲ	ಹೋಗಂಗಿಲ್ಲ
	ಇವನು	ಇಂವ

ಇಷ್ಟೇ ಅಲ್ಲದೆ ಉಪಭಾಷೆಗಳಲ್ಲಿನ ಪದಗಳು ಸಂಪೂರ್ಣವಾಗಿ ಪ್ರಮಾಣ ಭಾಷೆಗಿಂತ ಅರ್ಥದಲ್ಲಿ ವ್ಯತ್ಯಾಸವಾಗುವ ಸಂಭವವೂ ಉಂಟು. ಉದಾ: ತಿಂಡಿ ಎಂದರೇ ಶಿಷ್ಟ ಕನ್ನಡದಲ್ಲಿ ಉಪಾಹಾರ ಎಂಬರ್ಥವಿದೆ. ಧಾರವಾಡ (ಉಪಭಾಷೆ) ಕನ್ನಡದಲ್ಲಿ ನವೆ, ತುರಿಕೆ ಎಂಬರ್ಥವಿದೆ. ಹಾಗೇ ಅಮ್ಮ ಎಂದರೇ ತಾಯಿ ಎಂಬರ್ಥ ಶಿಷ್ಟ ಕನ್ನಡದಲ್ಲಿದ್ದರೇ, ಅವ್ವ, ಅಜ್ಜಿ, ವಿಧವೆ ಎಂಬರ್ಥಗಳು ಉತ್ತರ ಕನ್ನಡ ಜಿಲ್ಲೆಗಳಲ್ಲಿವೆ.

ಒಂದು ಭಾಷೆಯನ್ನು ಬಳಸುವ ಭೂ ಪ್ರದೇಶ ವಿಸ್ತಾರವಾಗಿದ್ದಾಗ, ಎಲ್ಲಾ ಕ್ಷೇತ್ರಗಳ ಜನರಿಗೂ ಎಲ್ಲಾ ಭಾಗಗಳ ಜನಸಾಮಾನ್ಯರೊಡನೆ ಸಂಪರ್ಕವಿರುವುದು ಸಾಧ್ಯವಿಲ್ಲ. ಆದ್ದರಿಂದ ಇವರ ಭಾಷಾ

ವೈಖರಿಯೂ ಬೇರೆಯಾಗಿರುತ್ತದೆ. ಆದರೆ ಆ ಪ್ರದೇಶದ ಅಂಚಿನಲ್ಲಿರುವವರಿಗೆ ಮತ್ತೊಂದು ಪ್ರದೇಶದ ಅಂಚಿನವರೊಡನೆ ಸಹಜವಾಗಿಯೇ ಸಂಪರ್ಕ ಏರ್ಪಡುವುದರಿಂದ ಆ ವಲಯದ ಭಾಷೆ ಹಾಗೂ ಈ ವಲಯದ ಭಾಷೆಗಳ ನಡುವೆ ಕೊಳುಕೊಡುಗೆಗಳಾಗಿ ಇದೂ ಒಂದು ಪ್ರಾದೇಶಿಕ ಉಪಭಾಷೆಯಾಗಿ ಸೃಷ್ಟಿಗೊಳ್ಳುತ್ತದೆ.

ಉದಾ:



(ಚಿತ್ರ: ಬಹುಪಾಲು ಬದಲಾವಣೆಯೊಂದಿಗೆ, ಭಾಷೆ: ವಿಶ್ವಕೋಶ, ಹಂಪಿ. - ೨೦೦೭ ಪು.೪೦)

ಅ.ಬ. → ಪ್ರತ್ಯೇಕ ಭಾಷಾ ವಲಯಗಳು

○ → ಒಂದು ಪ್ರದೇಶದ ಕೇಂದ್ರ.

↔ → ಭಾಷಾ ಬಳಕೆ ವಲಯ

→ ಹೊಸ ಪ್ರಾದೇಶಿಕ ಉಪಭಾಷೆ ಸೃಷ್ಟ

→ ಭಾಷಾ ಗಡಿ

ಇಲ್ಲಿ ಅ, ಬ ಪ್ರದೇಶಗಳ ಗಡಿಯಲ್ಲಿರುವ ಕೆಲವು ಕೇಂದ್ರಗಳು ಪರಸ್ಪರ ಸಂಪರ್ಕ ಹೊಂದಿರುವುದನ್ನು ಚಿಕ್ಕಿಗಳ ರೇಖೆಯು ಸೂಚಿಸುತ್ತದೆ. ಹಾಗೂ ಕ ಎಂಬುದು ಎರಡು ಪ್ರದೇಶಗಳ ನಡುವಿನ ಗಡಿಯಾಗಿದ್ದು, ಹೊಸ ಪ್ರಾದೇಶಿಕ ಉಪಭಾಷೆ ಸೃಷ್ಟಿಯನ್ನು ಸೂಚಿಸುತ್ತದೆ.

೨. ಸಾಮಾಜಿಕ ಉಪಭಾಷೆ (Social Dialect) : ಸಾಮಾಜಿಕ ದೂರ, ಸಾಮಾಜಿಕ ವರ್ಗಗಳು ಮತ್ತು ಸಾಮಾಜಿಕ ಭಿನ್ನಾಂಶಗಳ ಪ್ರಭಾವದಿಂದುಂಟಾದ ಭಾಷಾ ಪ್ರಭೇದವನ್ನು ಸಾಮಾಜಿಕ ಉಪಭಾಷೆ ಎನ್ನಲಾಗುತ್ತದೆ. ಉದಾ: ಮುಸ್ಲಿಂ ಕನ್ನಡ, ಸೋಲಿಗ ಕನ್ನಡ, ಹವ್ಯಕ ಕನ್ನಡ, ಬಡಗ ಕನ್ನಡ, ಹಾಲಕ್ಕಿ ಕನ್ನಡ, ಬಂಟ ಕನ್ನಡ, ಕೊಡವಕನ್ನಡ, ಕೊರಗ ಕನ್ನಡ, ಆದಿಜಾಂಬವರ ಕನ್ನಡ, ಸಂಕೇತಿ ಕನ್ನಡ ಮುಂತಾದ ಸಾಮಾಜಿಕ ಉಪಭಾಷೆಗಳಿವೆ.

ಸಾಮಾಜಿಕ ಮತ್ತು ಪ್ರಾದೇಶಿಕ ಉಪಭಾಷೆಗಳೆಂದು ವರ್ಗೀಕರಿಸಲು ಸಾಧ್ಯವಾಗುವುದೇ ವ್ಯಕ್ತಿಯ ಆಡುಮಾತಿನಿಂದ, ಹಿಂದೆ ಜಾತಿಯು ಸಾಮಾಜಿಕ ವರ್ಗೀಕರಣಕ್ಕೆ ಕಾರಣವಾದ ಸಾಮಾಜಿಕ ಅಂಶ ಎಂಬುದನ್ನು ನಂಬಲಾಗಿತ್ತು. ವಿಲಿಯಂ ಬ್ರೈಟ್ ಅವರ ಬ್ರಾಹ್ಮಣರ ಕನ್ನಡ ಮತ್ತು ಒಕ್ಕಲಿಗರ ಕನ್ನಡದ ರಚನೆ ಸಾಮಾಜಿಕ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ನಡೆದಿರುವ ಅಧ್ಯಯನವೇ ಇದಕ್ಕೆ ನಿದರ್ಶನ. ರೀತ್ಯಾ ಮ್ಯಾಕ್ರೊಮ್ಯಾಕ್ ಅವರು ಮಾಡಿರುವ ಧಾರವಾಡ ಜಿಲ್ಲೆಯ ಬ್ರಾಹ್ಮಣ, ಲಿಂಗಾಯಿತ ಮತ್ತು ಹರಿಜನರ ಕನ್ನಡದ ರಚನೆಯು ಸಾಮಾಜಿಕ ಭಾಷಾ ವಿಜ್ಞಾನದ ಸಂಶೋಧನೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ ಎಂಬುದನ್ನು ಡಾ.ಪಿ. ಮಹಾದೇವಯ್ಯ ಅವರು ತಮ್ಮ ಸಾಮಾಜಿಕ ಉಪಭಾಷೆ ಎಂಬುದರಲ್ಲಿ ಸ್ಪಷ್ಟಪಡಿಸುತ್ತಾರೆ.

ಸಾಮಾಜಿಕ ಉಪಭಾಷೆಯ ಸ್ವರೂಪವನ್ನು ಹೀಗೆಯೇ ಎಂದು ನಿರ್ಧರಿಸುವುದು ಬಹಳ ಕಷ್ಟದ ಕೆಲಸ. ಹಾ.ಮಾ. ನಾಯಕ್ ಅವರು Kannada Literary and colloguial-A study of two styles (೧೯೬೭) ಎಂಬ ತಮ್ಮ ಮಹಾಪ್ರಬಂಧದದಲ್ಲಿ ಶಿಷ್ಟ ಮಾತು, ಆಡು ಭಾಷೆಯ ಭಿನ್ನತೆಯ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. ಕೆ. ಮುಥಾಲಿಕ್ ಅವರ ಬಾಗಲಕೋಟೆ ಕನ್ನಡ : ಸಾಮಾಜಿಕ ಭಾಷಾ ವಿಜ್ಞಾನ ವಿಶ್ಲೇಷಣೆ ಎಂಬ ಪ್ರಬಂಧ ಸಾಮಾಜಿಕ ಭಾಷಾವಿಜ್ಞಾನಕ್ಕೆ ಮಹತ್ವದ ಕೊಡುಗೆಯಾಗಿದೆ. ಡಿ.ಎನ್. ಶಂಕರ್ ಭಟ್ ಅವರ The dialects of Kannada in Mysore district ಎಂಬ ಲೇಖನದಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ ಮತ್ತು ಹರಿಜನರ ಕನ್ನಡದ ಭಾಷಿಕ ರಚನೆಯನ್ನು ವಿಶ್ಲೇಷಿಸಿದ್ದಾರೆ. ಎಂ.ಚಿದಾನಂದಮೂರ್ತಿ ಅವರ 'ಲಂಬಾಣಿಗಳ ಭಾಷೆ' ಎಂಬ ಲೇಖನದಲ್ಲಿ ಕರ್ನಾಟಕ ಲಂಬಾಣಿಗಳು ಬಳಸುವ ಕನ್ನಡದ ಬಗ್ಗೆ ತಿಳಿಸಿದ್ದಾರೆ. ಸಿ.ಎಸ್. ರಾಮುಚಂದ್ರ ಅವರು ಸಂಕೇತಿಗಳ ಭಾಷೆಯ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಕುಶಾಲಪ್ಪಗೌಡ ಅವರು gowda kannada (೧೯೭೦)ಹಾಗೂ ಶಾಲಿನಿ ರಘುನಾಥ ಅವರು 'Havyak, Nayak and Halakki of North Kannada district: A sociolinguistic Analysis ಎಂಬ ಮಹಾ ಪ್ರಬಂಧದಲ್ಲಿ ಬರೆದು ಹವ್ಯಕ, ನಾಯಕ, ಹಾಲಕ್ಕಿ ಜನಾಂಗದವರ ಭಾಷೆ ಸಂಸ್ಕೃತಿ ಬಗ್ಗೆ ಅಧ್ಯಯನ ಮಾಡಿದ್ದಾರೆ. ಈ ಎಲ್ಲ ಅಧ್ಯಯನಗಳು ಸಾಮಾಜಿಕ ಉಪಭಾಷೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಈ ಬಗೆಯ ಅಧ್ಯಯನಗಳು ನಿರಂತರವಾಗಿ ನಡೆದಿವೆ.

ಸಮಾಜ, ಸಂಸ್ಕೃತಿ, ವೃತ್ತಿ, ಲಿಂಗ, ವಯಸ್ಸು ಮುಂತಾದವುಗಳ ಆಧಾರದ ಮೇಲೆ ರೂಪಿತವಾಗುವ ಈ ಸಾಮಾಜಿಕ ಉಪಭಾಷೆಗಳ ಸ್ವರೂಪವನ್ನು ಈ ಕೆಳಗಿನಂತೆ ವಿವರಿಸಬಹುದು.

ಮುಸ್ಲಿಂ ಕನ್ನಡ : ಮುಸ್ಲಿಂರು ಭಾರತೀಯ ಮತ್ತು ಕರ್ನಾಟಕ ಪರಿಸರದಲ್ಲಿ ದ್ವಿಭಾಷಿಕರೂ ಹೌದು, ಬಹುಭಾಷಿಕರೂ ಹೌದು. ಇವರ ಮಾತೃಭಾಷೆ ಉರ್ದುವಾದರೂ ಇವರ ವ್ಯವಹಾರ ಕನ್ನಡದಲ್ಲೇ ಆಗುವುದು ಅನಿವಾರ್ಯ. ಕನ್ನಡದ ಪದಾಂತ್ಯದ 'ಎ' ಸ್ವರವು ಮುಸ್ಲಿಂ ಕನ್ನಡದಲ್ಲಿ 'ಇ' ಸ್ವರದಿಂದ ಅಂತ್ಯವಾಗುತ್ತದೆ.

ಉದಾ:	ಶಿಷ್ಟ ಕನ್ನಡ	ಮುಸ್ಲಿಂ ಕನ್ನಡ
	ಚಾಪೆ	ಚಾಪಿ
	ಗೂಗೆ	ಗೂಗಿ
	ಕೆಳಗೆ	ಕೆಲ್ಲಿ

ಮುಸ್ಲಿಂಕನ್ನಡಿಗರು ಸಂಬಂಧ ಸೂಚಕ ನಾಮಪದಗಳನ್ನು ವಾಕ್ಯಗಳಾಗಿ ಪರಿವರ್ತಿಸಿ ಬರೆಯುತ್ತಾರೆ. ಹಾಗೂ 'ಹ' ಕಾರ 'ದ' ಕಾರವಾಗಿ 'ಣ್' ಕಾರ 'ನ' ಕಾರವಾಗಿ ಬಳಕೆಯಾಗುತ್ತದೆ.

ಉದಾ :	ಶಿಷ್ಟ ಕನ್ನಡ	ಮುಸ್ಲಿಂ ಕನ್ನಡ
	ಅಳಿಯ	ಮಗ್ಳುದುಗಂಡ
	ಮೈದುನ	ಗಂಡ್ನದು ತಮ್ಮ
	ಬಾಳೆಹಣ್ಣು	ಬಾಳೆಅನ್ನು
	ದೊಡ್ಡಮ್ಮ	ತಾಯಿದು ಅಕ್ಕ

ಮುಸ್ಲಿಂರು ಗಾತ್ರಸೂಚಕ ಪದಗಳಾದ ಚಿಕ್ಕ ಮತ್ತು ದೊಡ್ಡ ಇವುಗಳ ಸ್ಥಾನದಲ್ಲಿ 'ಚೋಟ' ಮತ್ತು 'ಬಡ' ಎಂಬ ಮಾತೃಭಾಷಾ ರೂಪಗಳನ್ನು ಬಳಸುತ್ತಾರೆ.

ಉದಾ:	ಶಿಷ್ಟ ಕನ್ನಡ	ಮುಸ್ಲಿಂ ಕನ್ನಡ
	ಚಿಕ್ಕ ಹುಡುಗಿ	ಚೋಟ ಉಡ್ಗಿ
	ದೊಡ್ಡ ಮನೆ	ಬಡಾಮನೆ

ಮಾನವ ಸೌಲಭ್ಯಾಕಾಂಕ್ಷಿ, ಆತ ಭಾಷೆಯನ್ನು ಹೆಚ್ಚು ಸರಳಗೊಳಿಸಲು ಪ್ರಯತ್ನಿಸುತ್ತಾನೆ. ಈ ಪ್ರೌವೃತ್ತಿ ಮುಸ್ಲಿಂ ಕನ್ನಡದಲ್ಲಿಯೂ ಕಂಡುಬರುತ್ತದೆ. ವ್ಯಂಜನದ್ವಿತ್ವದ ಹಿಂದೆ ಒಂದು ಹ್ರಸ್ವಸ್ವರವನ್ನು ಸೇರಿಸಿ ಉಚ್ಚರಿಸುತ್ತಾರೆ.

ಉದಾ:	ಅನ್ಯದೇಶಿ ಪದಗಳು	ಮುಸ್ಲಿಂ ಕನ್ನಡ
	ಸ್ಕೂಲ್	ಇಸ್ಕೂಲ್

ಸ್ಪೆಷಲ್	ಇಸ್ಪೆಷಲ್
ಸ್ಟೇಜ್	ಇಸ್ಟೇಜ್

ಈ ಅನ್ಯದೇಶ್ಯ ಪದಗಳು ಕನ್ನಡದಲ್ಲಿ ನಿಯತವಾಗಿ ಬಳಕೆಯಲ್ಲಿವೆ. ಮುಸ್ಲಿಮರು ಕನ್ನಡ ಭಾಷೆಯೊಳಗೆ ಸೇರಿರುವ ಈ ಪದಗಳಿಗೆ ಇ ಎಂಬ ಧ್ವನಿಯನ್ನು ಸೇರಿಸಿ ಉಚ್ಚಾರಣ ವಿಧಾನವನ್ನು ಸುಲಭ ಮಾಡಿಕೊಂಡಿದ್ದಾರೆ.

ಪದದ ಆದಿಯಲ್ಲಿ ವ್ಯಂಜನ ದ್ವಿತ್ವಗಳಿರುವ ಅನ್ಯದೇಶ್ಯ ಸ್ವೀಕೃತಿ ಪದಗಳಿಗೂ ಪದಾದಿಗೆ 'ಇ' ಧ್ವನಿ ಸೇರಿಸಿ ಉಚ್ಚಾರಣೆ ಮಾಡುವರು.

ಉದಾ:	**ಅನ್ಯದೇಶ್ಯ ಪದಗಳು**	**ಮುಸ್ಲಿಂ ಕನ್ನಡ**
	ಪ್ಲಾನು	ಪಿಲಾನು
	ಪ್ಲೇಟು	ಪಿಲೇಟು
	ಗ್ಲಾಸು	ಗಿಲಾಸು

ಹವ್ಯಕ ಕನ್ನಡ : ಹವ್ಯಕ ಬ್ರಾಹ್ಮಣರು ಬಳಸುವ ಕನ್ನಡವೇ ಹವ್ಯಕ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಕಾಸರಗೋಡು, ಶಿವಮೊಗ್ಗ, ಕೊಡಗು ಮುಂತಾದ ಕಡೆಗಳಲ್ಲಿ ಇದು ಬಳಕೆಯಲ್ಲಿದೆ. ತುಳು, ಮಲೆಯಾಳಂ, ಮರಾಠಿ, ಕೊಂಕಣಿ ಭಾಷೆಗಳ ಪ್ರಭಾವ ಈ ಭಾಷೆಯ ಮೇಲಾಗಿದೆ. ಕ್ರಿಯಾಪದಗಳ 'ಅ' ಕಾರ 'ಎ' ಕಾರವಾಗಿ ಬಳಕೆಯಾಗುತ್ತದೆ.

ಉದಾ:	**ಶಿಷ್ಟ ಕ್ರಿಯಾಪದಗಳು**	**ಹವ್ಯಕ ಕನ್ನಡ**
	ಬರಲಿಲ್ಲ	ಬರಲಿಲ್ಲೆ
	ಹೋಗಲಿಲ್ಲ	ಹೋಗಲಿಲ್ಲೆ
	ಕೊಡಲಿಲ್ಲ	ಕೊಡಲಿಲ್ಲೆ
	ನೋಡಲಿಲ್ಲ	ನೋಡಲಿಲ್ಲೆ

ಸರ್ವನಾಮಗಳು ಶಿಷ್ಯಕನ್ನಡಕ್ಕಿಂತ ಭಿನ್ನವಾಗಿವೆ. ಕೆಲವು ಸರ್ವನಾಮಗಳಲ್ಲಿ ಅಂತ್ಯ ಲೋಪವಾಗುತ್ತವೆ.

ಉದಾ:	**ಶಿಷ್ಟ ಸರ್ವನಾಮಗಳು**	**ಹವ್ಯಕ ಕನ್ನಡ**
	ಅವಳು	ಆಕೆ
	ಇವಳು	ಈಕೆ
	ಅವನು	ಅವ
	ಇವನು	ಇವ

ಸಂಬಂಧಸೂಚಕ ಪದಗಳು, ಶಬ್ದರೂಪ ಶಿಷ್ಟ ಕನ್ನಡಕ್ಕಿಂತ ಬೇರೆಯಾಗಿವೆ. ಇವು ಸಾಮಾನ್ಯವಾಗಿ ಆ ಸಾಮಾಜಿಕ ವಲಯದವರೆಗೆ ಅರ್ಥವಾಗುವಂತೆ ಅವರ ಪರಿಭಾಷೆಯಲ್ಲಿರುತ್ತದೆ.

ಉದಾ:	ಶಿಷ್ಟ ಸಂಬಂಧ ವಾಚಿಗಳು	ಹವ್ಯಕ ಕನ್ನಡ
	ದೊಡ್ಡಪ್ಪ	ಬೊಪ್ಪ
	ಚಿಕ್ಕಪ್ಪ	ಕಕ್ಕ
	ತಾಯಿ	ಅಬ್ಬೆ
	ಅಮ್ಮ	ಆಯಿ

ಹೀಗೆಯೇ ಕೆಲವು ಸಾಂಸ್ಕೃತಿಕ ಪದಗಳೂ ಭಿನ್ನ ಶಬ್ದರೂಪಗಳಿಂದ ಕೂಡಿರುತ್ತವೆ. ಆ ವಲಯವನ್ನುಳಿದು ಬೇರೆಡೆಯಲ್ಲಿ ಈ ಪದಗಳು ಸ್ಥಾನಪಡೆಯಲಾರವು.

ಉದಾ:	ಶಿಷ್ಟ ಸಾಂಸ್ಕೃತಿಕ ಪದಗಳು	ಹವ್ಯಕ ಕನ್ನಡ
	ರೆಪ್ಪೆ	ಸಿಮ್ಮೆ
	ಕಚಗುಳಿ	ಕಿಕ್ಕಲ

ಬ್ರಾಹ್ಮಣ ಕನ್ನಡ : ಬ್ರಾಹ್ಮಣರು ಬಳಸುವ ಕನ್ನಡದಲ್ಲಿ ಸಂಸ್ಕೃತದ ಛಾಯೆ ಹೆಚ್ಚು. ಇಲ್ಲಿ ಊಷ್ಮಧ್ವನಿಗಳು, ಸಂಘರ್ಷ ಧ್ವನಿಗಳು ಬಳಕೆಯಲ್ಲಿವೆ. ನಮ್ಮಲ್ಲಿ ತೆಲುಗು, ತಮಿಳು, ಮರಾಠಿ, ಸಂಕೇತಿ, ನಾಮಧಾರಿ, ಬ್ರಾಹ್ಮಣರಿದ್ದಾರೆ. ಇವರು ಬಳಸುವ ಕನ್ನಡ ಭಾಷೆಯಲ್ಲಿ ಧಾರ್ಮಿಕ ಆಚರಣೆ ವಿಧಿ-ವಿಧಾನ ಪ್ರಭಾವವಿರುತ್ತದೆ. ಕೆಲವು ಸಾಂಸ್ಕೃತಿಕ ಪದಗಳು ಭಿನ್ನ ಶಬ್ದರೂಪಗಳಾಗಿವೆ.

ಉದಾ:	ಶಿಷ್ಟ ಸಾಂಸ್ಕೃತಿಕ ಪದಗಳು	ಬ್ರಾಹ್ಮಣ ಕನ್ನಡ
	ಸಾರು	ಹುಳಿ
	ಹಣಬೆ	ನಾಯಿಕೊಡೆ
	ತರಕಾರಿ	ಕಾಯಿಪಲ್ಲೆ
	ಸೌದೆ	ಕಟ್ಟಿಗೆ

ಸೋಲಿಗರ ಕನ್ನಡ : ಸೋಲಿಗರು ನಗರ ಪ್ರದೇಶದಿಂದ ದೂರವಿರುವ ಜನ ಸಮುದಾಯ. ಇವರು ಸಾಮಾಜಿಕವಾಗಿ ಹಿಂದುಳಿದ ವರ್ಗಕ್ಕೆ ಸೇರುತ್ತಾರೆ. ಬಿಳಿಗಿರಿರಂಗನಬೆಟ್ಟ, ಮಹಾದೇಶ್ವರ ಬೆಟ್ಟ, ಕಾಕನಕೋಟೆ, ಹೆಗ್ಗಡದೇವನಕೋಟೆ, ತುಮಕೂರು, ಮುಂತಾದೆಡೆಗಳಲ್ಲಿ ಕಂಡುಬರುತ್ತಾರೆ. ಹೆಚ್ಚಾಗಿ ಬಿಳಿಗಿರಂಗನ ಬೆಟ್ಟದಲ್ಲಿ ಇದ್ದಾರೆ. ಇತರ ಜನರ ಸಂಪರ್ಕ ಕಡಿಮೆ ಇರುವುದರಿಂದ ಇವರ ಭಾಷೆಯ ಸ್ವರೂಪ ಭಿನ್ನವಾಗಿದೆ. ಸೋಲಿಗರ ಕನ್ನಡದಲ್ಲಿ ಅನುನಾಸಿಕತೆ ಹೆಚ್ಚು.

[illegible]

ಉದಾ:	ಶಿಷ್ಟ ಕನ್ನಡ	ಸೋಲಿಗ ಕನ್ನಡ
	ಅವನು	ಅಂವ
	ಇವನು	ಇಂವ

ಕೆಲವು ಸಾಂಸ್ಕೃತಿಕ ಪದಗಳಲ್ಲಿ ಅಂತ್ಯಲೋಪಾಗಿ ಬಳಕೆಯಾಗುತ್ತವೆ.

ಉದಾ:	ಶಿಷ್ಟ ಕನ್ನಡ	ಸೋಲಿಗ ಕನ್ನಡ
	ಮಕ್ಕಳು	ಮಕ್ಕ
	ಮರಗಳು	ಮರ್ಕ


ಹಾಲಕ್ಕಿ ಕನ್ನಡ : ಶಾಲಿನಿ ರಘುನಾಥ್ ಅವರು ಹಾಲಕ್ಕಿ ಜನಾಂಗದವರ ಭಾಷೆ, ಸಂಸ್ಕೃತಿ ಕುರಿತು ಅಧ್ಯಯನ ಮಾಡಿದ್ದಾರೆ. ಹಾಲಕ್ಕಿ ಕನ್ನಡದಲ್ಲಿ ಹಳಗನ್ನಡದ ೞ ಮತ್ತು ಱ ಕಾರಗಳ ಬಳಕೆ ಇದೆ.

ಉದಾ:	ಶಿಷ್ಟ ಕನ್ನಡ	ಹಾಲಕ್ಕಿ ಕನ್ನಡ
	ಮುಳಿ	ಮುೞಿ
	ಅಳಿ	ಅೞಿ
	ಹಳೆ	ಅೞೆ
	ಕೋರಿ	ಕೋಱಿ

ಷಕಟರೇಫಾ ಹಾಗೂ ಱ ಗಳು ಹಾಗೂ ಮಹಾಪ್ರಾಣ ಅಲ್ಪಪ್ರಾಣ ವಾಗುವುದು. ಈ ಭಾಷೆಯ ಸಹಜ ಭಾಷಿಕ ಅಂಶವಾಗಿದೆ. ಅಲ್ಲದೆ ೞ, ಱ ಗಳು ಧ್ವನಿಮಾಗಳಾಗಿ ಈ ಭಾಷೆಯಲ್ಲಿ ಬಿಟ್ಟರೆ ಬೇರೆಯಾವ ಕನ್ನಡದ ಪ್ರಭೇದದಲ್ಲೂ ಬಳಕೆಯಲ್ಲಿಲ್ಲ.

ಆಧುನೀಕರಣದಿಂದಾಗಿ ಹಳೆಯ ರೂಪಗಳು ನಶಿಸಿ ಹೋಗದಂತೆ ಕಾಪಾಡಿಕೊಳ್ಳಲು ಉಪಭಾಷಾ ಅಗತ್ಯವಿದೆ. ಹಾಗೆಯೇ ಒಂದು ಉಪಭಾಷೆಯು ಯಾವ ಸಾಮಾಜಿಕ ಅಂಶಗಳ ಆಧಾರದ ಮೇಲೆ, ಯಾವ ಯಾವ ಪ್ರದೇಶಕ್ಕೆ ಸೀಮಿತವಾಗಿದೆ ಎಂಬುದನ್ನು ಸ್ಪಷ್ಟಪಡಿಸಿ ಕೊಳ್ಳಲು ಉಪಭಾಷಾ ಅಧ್ಯಯನ ಅತ್ಯಗತ್ಯ. ಉದಾ: ಕಡೆಗೋಲು, ಬೆಕ್ಕು ಹಾಗೂ ನೆಲಗಡಲೆ ಇವು ಬೇರೆ-ಬೇರೆ ಪ್ರದೇಶಗಳಲ್ಲಿ ಭಿನ್ನ-ಭಿನ್ನ ರೂಪಗಳಾಗಿ ಬಳಕೆಯಲ್ಲಿವೆ. ಇದನ್ನು ಈ ಕೆಳಗಿನ ಚಿತ್ರದ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದು.

ಕರ್ನಾಟಕ ಪ್ರದೇಶದಲ್ಲಿ ಬೆಕ್ಕು, ಕಡಲೆಕಾಯಿ, ಕಡೆಗೋಲು ಇವುಗಳ ಪ್ರಾದೇಶಿಕ ಹಂಚಿಕೆ:



ಜಿಲ್ಲೆಗಳು	ಬೆಕ್ಕು	ಕಡಲೆಕಾಯಿ	ಕಡೆಗೋಲು
ದಾವಣಗೆರೆ	ಮಾಳ ಬೆಕ್ಕು X ೨	ಸೇಂಗಾ ▲ ನೆಲಗಡಲೆ ▲▲	ಕುಡ್ಗೋಲು ●
ಚಿತ್ರದುರ್ಗ	ಬಾವ್ಗ X ೪	ಸೇಂಗಾ ▲	ಕುಡ್ಗೋಲು ●
ಚಿಕ್ಕಮಗಳೂರು	ಕೊತ್ತಿ X ✦	ಕಡ್ಲೇಕಾಯಿ ▲▲▲	ಮಂತು ●●
ಹಾಸನ	ಮಾಳಬೆಕ್ಕು X ೨	ಕಡ್ಲೇಕಾಯಿ ▲▲▲	ಮಂತು ●●
ಮಂಡ್ಯ	ಗಂಡ್‌ಕೊತ್ತಿ X ೩	ಕಡ್ಲೇಕಾಯಿ ▲▲▲	ಮಂತು ●●
ಮೈಸೂರು	ಗಡವಗೊತ್ತಿ X ೧ ಬೆಕ್ಕು X ೬ ಕೊತ್ತಿ X ✦	ಕಡಲೆಕಾಯಿ ▲▲▲▲ ಕಡ್ಲೇಕಾಯಿ ▲▲▲	ಮಂತು ●● ಕಡ್ಗೋಲು ●
ಶಿವಮೊಗ್ಗ	ಮಾಳಗಾಮಿ X ೫	ಸೇಂಗಾ ▲ ನೆಲಗಡಲೆ ▲▲	ಕಡೆಗೋಲು ●●●
ಉತ್ತರ ಕನ್ನಡ ಜಿಲ್ಲೆ	ಬೆಕ್ಕು X ೬ ಮಾಳಗಾಮಿ X ೫	ನೆಲಗಡಲೆ ▲▲ ಸೇಂಗಾ ▲	ಕಡ್ಗೋಲು ●

ಚಿತ್ರ: ಬಹುಪಾಲು ಬದಲಾವಣೆಯೊಂದಿಗೆ: ಭಾಷೆ:ವಿಶ್ವ ಕೋಶ:ಹಂಪಿ:ಸಂ.ಕೆ.ವಿ.ನಾರಾಯಣ: ಪ್ರ.ವ.: ೨೦೦೭. ಪು:೪೬.

ಹೀಗೆ ಉಪಭಾಷಾ ಅಧ್ಯಯನದಿಂದ ಉಪಭಾಷಾ ಭೋಗೋಳವನ್ನು ರಚಿಸಲು ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಉಪಭಾಷೆ ಎಂಬ ಶಬ್ದ ೧೯ನೆಯ ಶತಮಾನದಲ್ಲಿ ಬಳಸಿದ್ದಾಗಿದೆ. ಒಂದೇ ಭಾಷೆಯಿಂದ ಕವಲಾಗಿ ಪ್ರಾದೇಶಿಕ, ಸಾಮಾಜಿಕ ಭಿನ್ನ ಅಂಶಗಳಿಂದ ರೂಪವಾಗುವ ಭಾಷಾ ಪ್ರಭೇದಗಳನ್ನು ಉಪಭಾಷೆಗಳು ಎಂದು ಹೇಳಬಹುದು.

ಪ್ರಮಾಣ ಭಾಷೆ (Standard Language) :

ಭಾಷಾ ಯೋಜನೆಯಲ್ಲಿ ನೇರವಾಗಿ ಪಾಲ್ಗೊಳ್ಳುವ ಸರ್ಕಾರ ಒಂದು ಭಾಷೆಯನ್ನು ಪ್ರಮಾಣೀಕರಿಸಿ ಅದನ್ನು ಅಧಿಕೃತ ಭಾಷೆ ಎಂದು ಸಾರ್ವಜನಿಕ ಸಮ್ಮತವಾಗಿ ಒಪ್ಪಿಕೊಳ್ಳುತ್ತದೆ. ಇದನ್ನು ಪ್ರಮಾಣ ಭಾಷೆ ಎಂದು ಕರೆಯಲಾಗುತ್ತದೆ. ''ವ್ಯವಸ್ಥಿತ ಕ್ರಮದ ಮೂಲಕ ಭಾಷೆಯಲ್ಲಿರುವ ವಿಕಲ್ಪಗಳನ್ನು ಪರ್ಯಾಯಗಳನ್ನು ಕಡಿಮೆ ಮಾಡಿ ಯಾವುದಾದರೊಂದು ರೂಪ ಅಧಿಕೃತವೆಂದು ನಿರ್ಧರಿಸುವ ಪ್ರಕ್ರಿಯೆಯೇ ಪ್ರಮಾಣೀಕರಣ''.[೧] ಕನ್ನಡ ಭಾಷೆಯ ಏಕರೂಪಿಯಾದುದ್ದಲ್ಲ. ಇದು ವೈವಿಧ್ಯಮಯವಾದದು. ಇಷ್ಟೆಲ್ಲ ವೈವಿಧ್ಯಗಳು ಇದ್ದರೂ ಕನ್ನಡಕ್ಕೆ ಸುಶಿಕ್ಷಿತರು ಬಳಸುವ ಶಿಷ್ಟ ಕನ್ನಡವನ್ನು ಆಧರಿಸಿ ಬರವಣಿಗೆಯ ಮೂಲಕ ಬಳಸುವ ಕನ್ನಡ ಭಾಷೆಯು ಆಡಳಿತ ಕನ್ನಡವಾಗಿ ಕರ್ನಾಟಕದ ಒಳಗೂ-ಹೊರಗೂ ಬಹುಕಾಲದಿಂದ ಬಳಕೆಯಲ್ಲಿದ್ದು ಉತ್ತಮ ಸಂಪರ್ಕ ಮಾಧ್ಯಮವೆನಿಸಿದೆ. ಇದನ್ನು ಕನ್ನಡದ ಪ್ರಮಾಣ ಭಾಷೆ ಎಂದು ಹೇಳಬಹುದು.

೧೯೫೬ ನವೆಂಬರ್ ೧ರಂದು ಕರ್ನಾಟಕ ಏಕೀಕರಣವಾಯಿತು. ಏಕೀಕರಣದ ಸಂದರ್ಭದಲ್ಲಿ ಪ್ರಮಾಣ ಭಾಷೆಯ ಹೊಣೆಯು ಸಾರ್ವಜನಿಕ ವೇದಿಕೆಯಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಹೊಣೆಯಾಗಿದ್ದಿತು. ದೇಶಿಯ ವಿದ್ವಾಂಸರು, ಪಾಶ್ಚಾತ್ಯ ವಿಷನರಿಗಳು ಏಕೀಕರಣಕ್ಕೂ ಮೊದಲೇ ಕನ್ನಡ ಭಾಷೆಯ ಪ್ರಮಾಣೀಕರಣದ ಬಗ್ಗೆ ಚಿಂತಿಸತೊಡಗಿದ್ದರು. ಈ ನಿಟ್ಟಿನಲ್ಲಿ ಕನ್ನಡಕ್ಕೊಂದು ಚಾರಿತ್ರಿಕ ನಿಘಂಟನ್ನು ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿಯ ಮಾದರಿಯಲ್ಲಿ ರಚಿಸಲಾಗಿತ್ತು. ಶಾಲಾಮಕ್ಕಳ ವ್ಯಾಕರಣ ಸಿದ್ಧತೆ, ಕರ್ನಾಟಕದ ಶಾಸನ ಸಂಪುಟಗಳ ಪ್ರಕಟಣೆ ಮುಂತಾದ ಕಾರ್ಯಗಳು ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಜರುಗಿದವು.

ನಮ್ಮಲ್ಲಿ ಪ್ರಮಾಣೀಕರಣ ಹಾಗೂ ಶಿಷ್ಟೀಕರಣ ಎರಡನ್ನೂ ಒಂದೇ ಅರ್ಥದಲ್ಲಿ ಅಂತರ್ಗತಗೊಳಿಸಲಾಗುತ್ತದೆ. ಪ್ರಮಾಣ ಎಂದರೇ ಅಳತೆ, ಪರಿಮಿತಿ ನಿಯಮ, ರುಜುವಾತು ಮಾಡು, ಪರೀಕ್ಷಿಸಿ ನೋಡು ಎಂಬ ಅರ್ಥವಿದೆ. ಅಂದರೇ ಯಾವ ಭಾಷೆ ಆಡಳಿತಕ್ಕೆ ಅನುಕೂಲ ಎಂದು ವಿವೇಚಿಸುವುದು. ಅಂದರೇ ಇಲ್ಲಿ ಆಡಳಿತ ಭಾಷೆ ಎಂದು ಅಧಿಕೃತವಾಗುವ ಭಾಷೆ ಜನಪದ ಭಾಷೆಯೂ ಆಗಿರಬಹುದು. ಆದರೆ ಶಿಷ್ಟೀಕರಣದಲ್ಲಿ ಸ್ಪಷ್ಟವಾಗಿ ಸಾಮಾಜಿಕ ಉನ್ನತ ಸ್ತರಕ್ಕೆ ಮತ್ತು ಅವರ

---

೧. ಕೆ.ವಿ. ನಾರಾಯಣ : ಕನ್ನಡ ಜಗತ್ತು ಅರ್ಧ ಶತಮಾನ: ಪ್ರ.ವ. ೨೦೦೬ : ಪ್ರಸಾರಾಂಗ : ಕನ್ನಡ ವಿಶ್ವ ವಿದ್ಯಾಲಯ ಹಂಪಿ: ಪು.ಸಂ.೧೦೩

ನಡೆವಳಿಗಳಿಗೆ ಹೆಚ್ಚಿನ ಮಹತ್ವವಿರುತ್ತದೆ. ಅಂದರೇ ಶಿಷ್ಟೀಕರಣ ಎಂಬುದು ಉಳ್ಳವರ ಪಕ್ಷಪಾತಿಯಾದದು. ಶಿಷ್ಟ ಎನ್ನುವ ಪದವೇ ಸ್ವತಃ ಈ ಅರ್ಥವನ್ನು ಸ್ಫುರಿಸುತ್ತದೆ. ಅಂದರೆ ಇಲ್ಲಿ ಆಡಳಿತ ಭಾಷೆ ಎಂದು ಅಧಿಕೃತವಾಗುವ ಭಾಷೆ ನಗರದ ಭಾಷೆಯೇ ಆಗಿರಬೇಕೆಂದು ನೇರವಾಗಿಯೇ ಹೇಳಲಾಗಿದೆ. ಆದರೆ ಇಂದು ಪ್ರಮಾಣೀಕರಣ ಮತ್ತು ಶಿಷ್ಟೀಕರಣಗಳ ನಡುವೆ ಅಂತಹ ವ್ಯತ್ಯಾಸಗಳೂ ಕಂಡುಬರುತ್ತಿಲ್ಲ.

ಮೈಸೂರು, ಧಾರವಾಡ, ಗುಲ್ಬರ್ಗ, ಬೀದರ್, ರಾಯಚೂರು, ಮಂಗಳೂರು ಮುಂತಾದ ಕಡೆಗಳಲ್ಲಿ ಜನರು ಆಡುವ ಕನ್ನಡದಲ್ಲಿ ಭಿನ್ನತೆ ಇರುತ್ತದೆ. ಸರ್ಕಾರವು ಮೈಸೂರು ಕನ್ನಡವನ್ನು ಕರ್ನಾಟಕದ ಪ್ರಮಾಣ ಭಾಷೆ ಎಂದು ಅಧಿಕೃತವಾಗಿ ಒಪ್ಪಿಕೊಳ್ಳಲಾಗಿದೆ. ಸಾರ್ವಜನಿಕರೂ ಇದನ್ನು ಅಂಗೀಕರಿಸಿದ್ದಾರೆ. ಪ್ರಮಾಣೀಕೃತ ಕನ್ನಡವನ್ನು ರಚಿಸಿ, ಉಳಿಸಿ-ಬೆಳೆಸಲು ಸರ್ಕಾರವು ಹಲವಾರು ಕ್ರಮವನ್ನು ಕೈಗೊಂಡಿತು. ಅವುಗಳೆಂದರೇ ಲಿಪಿವ್ಯವಸ್ಥೆಯ (ಬರೆಹ) ಸುಧಾರಣೆ, ಅಖಿಲ ಕರ್ನಾಟಕ ವ್ಯಾಪ್ತಿಯ ಶಾಲಾ ಪಠ್ಯಪುಸ್ತಕ, ಪದರೂಪ ಮತ್ತು ಪದದ ಅರ್ಥಗಳನ್ನು ಖಚಿತಪಡಿಸುವುದು, ಪ್ರತಿಯೊಂದು ಇಲಾಖೆಗೂ ಪಾರಿಭಾಷಿಕ ಪದಗಳನ್ನು ರೂಪಿಸುವುದು, ಆಡಳಿತ ಕನ್ನಡವನ್ನು ನಿಗದಿಗೊಳಿಸಿದ್ದು ಇತ್ಯಾದಿ.

ಏಕೀಕರಣಕ್ಕೂ ಮೊದಲೇ ಬಿ.ಎಂ.ಶ್ರೀಕಂಠಯ್ಯನವರು ಲಿಪಿಸುಧಾರಣೆಗಾಗಿ ಶ್ರಮಿಸಿದರು. ಇವರಿಗೆ ತಮಿಳು, ಇಂಗ್ಲಿಷ್ ಲಿಪಿಗಳು ಹೆಚ್ಚು ಸೂಕ್ತ ಎಂದು ಕಂಡದ್ದರಿಂದ ಕನ್ನಡದಲ್ಲಿಯೂ ವ್ಯಂಜನ ದ್ವಿತ್ವ, ಒತ್ತಕ್ಷರಗಳನ್ನು ಬಿಟ್ಟು ರೇಖಾತ್ಮಕ ಬರವಣಿಗೆಯನ್ನು ಬಳಸಲು ಸಲಹೆ ಮಾಡಿದ್ದರು. 'ಕನ್ನಡ ಬಾವುಟ' ಎಂಬ ಕವನ ಮತ್ತು ಗೀತೆಗಳ ಸಂಕಲನವನ್ನು ಈ ಪರಾಮರ್ಶಿತ ಲಿಪಿ ವ್ಯವಸ್ಥೆಯಲ್ಲಿ ಸಾಹಿತ್ಯ ಪರಿಷತ್ತು ಪ್ರಕಟಿಸಿತು. ಆಧುನಿಕ ತಂತ್ರಜ್ಞಾನಗಳು ಆವಿಷ್ಕಾರಗೊಂಡು ಅನಂತರದಲ್ಲಿ ಇಂತಹ ರೇಖಾತ್ಮಕ ಲಿಪಿ ಮೂಲೆಗುಂಪಾಯಿತು. ಏಕೆಂದರೇ ಒತ್ತಕ್ಷರ, ದ್ವಿತ್ವ, ಅಕ್ಷರಗಳ ಗಾತ್ರ ಈ ಸಂಗತಿಗಳೆಲ್ಲಾ ಈಗ ತಂತ್ರಜ್ಞಾನಕ್ಕೆ ಸಂಬಂಧಿಸಿವೆ. ಮುಂದುವರಿದು ಅಖಿಲ ಕರ್ನಾಟಕ ವ್ಯಾಪ್ತಿಯ ಶಾಲಾ ಪಠ್ಯಕ್ರಮವನ್ನು ಇಡೀ ಕರ್ನಾಟಕದಲ್ಲಿ ಏಕರೂಪಿಯಾಗಿರುವಂತೆ ನಿರ್ಧರಿಸಲಾಯಿತು. ಇದರ ಮೂಲ ಉದ್ದೇಶ ಕನ್ನಡದ ಪ್ರಮಾಣ ಭಾಷೆಯನ್ನು ವ್ಯವಸ್ಥಿತವಾಗಿ ಕಾಪಾಡಿಕೊಳ್ಳುವುದೇ ಆಗಿದೆ. ಅಂತೆಯೇ ಪದರೂಪ, ಅರ್ಥಗಳನ್ನು ಖಚಿತಪಡಿಸುವಲ್ಲಿ ಎಂಟು ಬೃಹತ್ ಸಂಪುಟಗಳಲ್ಲಿ ಸುಮಾರು ಐದರಿಂದ ಆರು ದಶಕಗಳ ಪರಿಶ್ರಮದಿಂದ ಸಿದ್ಧಗೊಂಡ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು' ಸಹಕಾರಿಯಾಗಿದೆ. ಜೊತೆಗೆ ಆಡಳಿತ ವ್ಯವಹಾರದ ಒಳಮಜಲಿಗೆ ಸಂಬಂಧಿಸಿದ, ಸಹಜವಾಗಿ ರೂಪುಗೊಳ್ಳದ ಆದರೆ ಎಲ್ಲಾ ಕ್ಷೇತ್ರಗಳಲ್ಲೂ ಅದರದೇ ಆದ ರೀತಿಯಲ್ಲಿ ಬಳಕೆಯಲ್ಲಿರುವುದೇ ಪಾರಿಭಾಷಿಕ ಪದಗಳು. ಈ ಕಡೆಗೆ ಹೆಚ್ಚಿನ ಗಮನಕೊಡಲಾಯಿತು. ಹಣಕಾಸು, ವಿದ್ಯುಚ್ಛಕ್ತಿ, ಪ್ರಯೋಗಾಲಯ, ತೆರಿಗೆ, ಪ್ರಾಂಶುಪಾಲ, ಪ್ರವಾಚಕ, ಕೃಪಾಂಕ, ಅರೆಕಾಲಿಕ, ಗೈರುಹಾಜರು, ಕಾರ್ಖಾನೆ, ಕೂಲಿಕಾರ, ನೌಕರಶಾಹಿ, ಪಿಂಚಣಿ, ಪ್ರತಿಭಾಪಲಾಯನ, ಫಲಾನುಭವಿ, ಮೇಲ್ಮನವಿ, ಕಪ್ಪುಪಟ್ಟಿ, ಹನಿನೀರಾವರಿ, ಜೀವವಿಮೆ, ಹಣದುಬ್ಬರ, ಹೀಗೆ ಸಹಸ್ರಾರು ಪಾರಿಭಾಷಿಕ ಪದಗಳು ಆಡಳಿತ ಕನ್ನಡದ ಸಂವಹನವನ್ನು ಸುಗಮಗೊಳಿಸಿವೆ. ಇದಕ್ಕಾಗಿ 'ಕಛೇರಿ ಕೈಪಿಡಿ' ಎಂಬ ಪುಸ್ತಕವೂ ಇದೆ. ಈ

ಕೈಪಿಡಿಯಲ್ಲಿ ಪಾರಿಭಾಷಿಕ ಪದಗಳನ್ನು ರೂಪಿಸುವಾಗ ಬಹುಮಟ್ಟಿಗೆ ಸಂಸ್ಕೃತದ ಪದಕೋಶದ ನೆರವನ್ನು ಪಡೆಯಲಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಆದರೇ ಆಡಳಿತದಲ್ಲಿರುವ ಪಾರಿಭಾಷಿಕ ಪದಗಳು ಕಠಿಣವಾಗಿವೆ. ಇವುಗಳ ಅನುವಾದ ಬಹಳ ಕಷ್ಟ ಎಂದು ಭಾಷಾ ಅಧ್ಯಯನಕಾರರು ಅಭಿಪ್ರಾಯಪಟ್ಟದ್ದುಂಟು.

ಪ್ರಮಾಣ ಭಾಷೆಗೆ ಅಗತ್ಯವಾದ ಪಾರಿಭಾಷಿಕ ಪದಗಳನ್ನು ರೂಪಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಈ ಎಲ್ಲಾ ಪ್ರಯತ್ನಗಳು ಕನ್ನಡವನ್ನು ಆಡಳಿತದಲ್ಲಿ ಬಳಸಲು ನೆರವಾಗುವ ಉದ್ದೇಶವನ್ನು ಹೊಂದಿದ್ದರೂ ಪ್ರಮಾಣೀಕೃತ ರೂಪವೊಂದನ್ನು ನಿಗದಿಪಡಿಸುವಲ್ಲಿ ಸಾಕಷ್ಟು ಯಶಸ್ಸು ಪಡೆದಿಲ್ಲ. ಆದರೆ ಇದನ್ನು ಒಂದು ಕೊರತೆ ಎಂದು ತಿಳಿಯಬೇಕೇ ಎಂಬುದು ಬೇರೆಯ ಮಾತು. "ಜಾಗತಿಕರಣದ ಸಂದರ್ಭದಲ್ಲಿ ಎರಡು ವಿಭಿನ್ನ ಮಾದರಿಗಳು ಚಲಾವಣೆಯಲ್ಲಿವೆ. ಪ್ರಮಾಣ ರೂಪವನ್ನು ಸಿದ್ಧಪಡಿಸಿ ಅದಕ್ಕೆ ಸಂಪೂರ್ಣವಾಗಿ ನಿಷ್ಠವಾಗುವುದು ಒಂದು ಮಾದರಿಯಾದರೆ ಒಂದು ಚೌಕಟ್ಟನ್ನು ಸಡಿಲವಾಗಿ ರೂಪಿಸಿಕೊಂಡು ಅಂದಂದಿನ ಸಮಸ್ಯೆಗಳಿಗೆ ಅಗತ್ಯವಾದ ಪರಿಹಾರಗಳನ್ನು ಕಂಡುಕೊಳ್ಳುವ ಮಾದರಿ ಇನ್ನೊಂದು. ಈ ಎರಡನೆಯ ಮಾದರಿ ಪ್ರಮಾಣ ಭಾಷೆಯನ್ನು ಒಂದು ಪ್ರಕ್ರಿಯೆ ಎಂದು ತಿಳಿಯುತ್ತದೆ. ಈ ಎರಡು ಮಾದರಿಗಳನ್ನು ಅನುಸರಿಸುವುದು ಕಷ್ಟ. ಇದು ಜಾಗತಿಕ ನೆಲೆ, ಅಲ್ಲದೇ ಒಕ್ಕೂಟ ಆಡಳಿತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಸಂಪರ್ಕದಲ್ಲಿರುತ್ತವೆ. ಪಾರಿಭಾಷಿಕ ಪದಗಳ ಆಯ್ಕೆಯಲ್ಲಿ ರಾಜ್ಯ ಸರ್ಕಾರಕ್ಕೆ ಸ್ವಾತಂತ್ರ್ಯ ಕಡಿಮೆ. ಹೆಚ್ಚೆಂದರೇ ಅನುವಾದ ಮಾಡಬಹುದು. ಭಾಷಾಂತರ ನಿರ್ದೇಶನಾಲಯ ಈ ಕೆಲಸದಲ್ಲಿ ತೊಡಗಿದೆ. ಅನುವಾದದ ಪ್ರಕ್ರಿಯೆಯಲ್ಲಿ ಒಂದು ಪಾರಿಭಾಷಿಕ ಪದಕೋಶವನ್ನು ರೂಪಿಸಿಕೊಂಡಿದೆ. ಅದರಲ್ಲಿ ನಿಯತತೆಯನ್ನು ಕಾಯ್ದುಕೊಳ್ಳುವುದೇ ಪ್ರಮಾಣ ಕನ್ನಡದ ನಿರ್ಮಾಣ ಎನ್ನಬೇಕಾಗಿದೆ".[೧]

ಕ್ರಿಯೆಯನ್ನು ಸೂಚಿಸುವ ಪದಗಳೇ ಕ್ರಿಯಾಪದಗಳು, ನೋಡು, ಓಡು, ಓದು, ತಿನ್ನು, ಕೊಡು ಮುಂತಾದವು ಕ್ರಿಯಾಪದದ ಮೂಲರೂಪಗಳು, ಆದರೇ ಭಾಷೆಯಲ್ಲಿ ಮತ್ತೊಂದು ರೀತಿಯ ಕ್ರಿಯಾಪದಗಳಿರುತ್ತವೆ. ಇದನ್ನು ಭಾಷಾಕ್ರಿಯೆ ಎನ್ನಲಾಗುತ್ತದೆ. ಅಂದರೇ ಇಲ್ಲಿ ಪದದೊಂದಿಗೆ ಒಂದು ಪ್ರತ್ಯೇಯ ಸೇರುತ್ತದೆ. ಆದರೇ ನೇರವಾಗಿ ಕ್ರಿಯಾಪದ ಕಾಣುವುದಿಲ್ಲ. ಉದಾ: ಪರಿಹಾರ ಮಾರ್ಗವನ್ನು ಸೂಚಿಸುತ್ತೇನೆ. ಇಲ್ಲಿ 'ಇಸು' ಎಂಬ ಪ್ರತ್ಯಯವಿದೆ. 'ಸೂಚನೆ' ಎಂಬುದು ಕ್ರಿಯೆಯಲ್ಲ. ಒಂದು ಪ್ರತ್ಯೇಕ ಪದವವೇ ಆಗಿದೆ. ಪ್ರಮಾಣ ಭಾಷೆಯ ಚರ್ಚೆಯಲ್ಲಿ ಭಾಷಾ ಕ್ರಿಯೆಗಳ ಮಹತ್ವದ ಬಗ್ಗೆ ತಿಳಿಯಬಹುದು. ಉದಾ: ಸರ್ಕಾರದ ವಿವಿಧ ಯೋಜನೆಗಳಿಗೆ ಈ ಗುರುತಿನ ಚೀಟಿಯನ್ನು ಅಂಗೀಕರಿಸಲಾಗುತ್ತದೆ. ಇಲ್ಲಿ ಅಂಗೀಕಾರ ಭಾಷಾ ಕ್ರಿಯಾ ಪದ. ಈ ಪದವು ಸಮಾಜದಲ್ಲಿ ವ್ಯಕ್ತಿಯ ಸ್ಥಾನ-ಮಾನವನ್ನು ಖಚಿತಗೊಳಿಸುತ್ತದೆ ಅಲ್ಲದೆ, ಹಲವಾರು ಕಾರ್ಯಗಳ ಕ್ರಿಯಾರೂಪಿಯಾಗಿ ವರ್ತಿಸುತ್ತದೆ. ಅಂತೆಯೇ ರೈಲಿನಲ್ಲಿ ಪ್ರಯಾಣ ಮಾಡುವಾಗ ಹಣಕೊಟ್ಟು ಪಡೆದುಕೊಳ್ಳುವ ಟಿಕೆಟ್ ಮೇಲೆ ಏನನ್ನು ಮುದ್ರಿಸಿರುತ್ತಾರೆಂದು ನಾವು

---

೧. ಕೆ.ವಿ. ನಾರಾಯಣ:ಕನ್ನಡ ಜಗತ್ತು ಅರ್ಧಶತಮಾನ:ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ:ಪ್ರ.ವ.:೨೦೦೬:ಪು.ಸಂ.೧೧೦


ಗಮನವಿಟ್ಟು ಓದುವುದಿಲ್ಲ, ಹಾಗೆಂದ ಮಾತ್ರಕ್ಕೆ ಖಾಲಿಚೀಟಿಯನ್ನು ಕೊಟ್ಟರೆ ಅದನ್ನು ಒಪ್ಪಿಕೊಳ್ಳುವುದಿಲ್ಲ. ಆ ಚೀಟಿಯಲ್ಲಿ ಮುದ್ರಿಸಿರುವ ಪ್ರಮಾಣ ಭಾಷೆಯ ಮಹತ್ವ ನಮಗೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಮನನವಾಗಿರುತ್ತದೆ. ಪ್ರಮಾಣ ಭಾಷೆಯನ್ನು ರೂಪಿಸುವವರು ತಮಗರಿವಿಲ್ಲದೆಯೇ ಈ ಕೆಲಸವನ್ನು ಮಾಡಿರುತ್ತಾರೆ.

ಏಕರೂಪಿ ಕನ್ನಡವನ್ನು ತಂದು ಆಡಳಿತವನ್ನು ಸುಗಮಗೊಳಿಸಲು ಪ್ರಮಾಣ ಭಾಷೆ ಸಹಕಾರಿಯಾಗಿದೆ. ಆದರೇ ಈ ಪ್ರಮಾಣ ಭಾಷೆಯನ್ನು ಸುಲಭವಾಗಿ ಯಾರೂ ಬದಲಾಯಿಸಲಾರರು. ಇರುವಂತೆಯೇ ಪೂರ್ಣವಾಗಿ ಬಳಸಬೇಕಾದುದ್ದರಿಂದ ಕೆಲವೊಮ್ಮೆ ಅರ್ಥ, ಭಾವ, ದ್ದೇಶಕ್ಕಿಂತ ಶಬ್ದ ಪ್ರಧಾನವಾಗಿ ಅತಿರೇಕ ಅಥವಾ ಕೃತಕ ಎನ್ನಿಸಬಹುದು. ಸಮೂಹ ಮಾಧ್ಯಮಗಳಲ್ಲಿನ ಪ್ರಮಾಣ ಭಾಷೆಯು ಎಷ್ಟೋ ವೇಳೆ ಶ್ರೀಸಾಮಾನ್ಯರಿಗೆ ಅಸಹಜ ಎನ್ನಿಸುತ್ತದೆ. ಆದರೂ ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿಯ ಪ್ರಚಾರಕ್ಕೆ, ಪ್ರಸಾರಕ್ಕೆ ಪ್ರಮಾಣ ಭಾಷೆಯು ಅತ್ಯಗತ್ಯ ಕನ್ನಡ ಭಾಷೆಗೆ ೨೦೦೦ಕ್ಕೂ ಹೆಚ್ಚು ವರ್ಷಗಳ ಸುದೀರ್ಘ ಇತಿಹಾಸವಿದೆ. ೧೦ನೆಯ ಶತಮಾನಕ್ಕೂ ಹಿಂದಿನಿಂದಲೇ ನಮ್ಮ ಭಾಷೆ ಸಮೃದ್ಧವಾಗಿತ್ತು. ಚಾರಿತ್ರಿಕವಾಗಿ ಅವಸ್ಥಾಂತರಗಳನ್ನು ಪಡೆದುಕೊಳ್ಳುತ್ತಾ ಬಂದರೂ ಒಂದು ಕ್ರಮಬದ್ಧ ಪರಿವರ್ತನೆಯನ್ನು ನಾವು ಕನ್ನಡ ಭಾಷೆಯಲ್ಲಿ ಗುರುತಿಸಬಹುದು. ಜೊತೆಗೆ ಕನ್ನಡ ಇಂದಿಗೂ ಸಂವಹನ ಭಾಷೆಯಾಗಿದೆ. ಆದರೆ ಸಂಸ್ಕೃತ, ಪಾಕೃತ, ಪಾಲಿ, ಗ್ರೀಕ್, ಲ್ಯಾಟಿನ್ ಮುಂತಾದ ಭಾಷೆಗಳು ಇಂದು ಬಳಕೆಯಿಂದ ದೂರವಾಗಿವೆ. ಬದಲಾವಣೆಗೆ ಒಳಗಾಗಿಯೂ ಕನ್ನಡ ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಬೇಕಾದರೇ ಪ್ರಮಾಣ ಭಾಷೆಯ ಅಗತ್ಯವಿದೆ.

ಮಾನವನ ಬದುಕಿನಲ್ಲಿ ಭಾಷೆಯ ಪ್ರಾಮುಖ್ಯತೆಯನ್ನು, ಅದು ಅವನ ಬದುಕಿನಲ್ಲಿ ಬೆರೆತಿರುವ ಬಗೆಯನ್ನು ನೆನೆದರೆ ಬೆರಗಾಗುತ್ತದೆ. ಮಾನವನ ಸಾಮಾನ್ಯ ವ್ಯವಹಾರಗಳಿಂದ ಹಿಡಿದು ಗಹನವಾದ ವಿಚಾರಗಳನ್ನು ಭಾಷೆ ಹಿಡಿದಿಡಬಲ್ಲದು. ಇಂಥ ಭಾಷೆ ನಿತ್ಯಪರಿವರ್ತನೆಯಾಗುತ್ತಿರುತ್ತದೆ. ಈ ಪರಿವರ್ತನೆಗಳ ತದ್ರೂಪವೇ ವ್ಯಕ್ತಿಭಾಷೆ, ಉಪಭಾಷೆ, ಪ್ರಮಾಣ ಭಾಷೆ.

ಅಧ್ಯಾಯ-ಮೂರು

ಭಾಷೆಯ ವಿವಿಧ ಅಂಗಗಳು



ಭಾಷೆಗೊಂದು ವ್ಯವಸ್ಥೆ ಇದೆ. 'ವ್ಯಾಕರಣದಿಂದ ಪದಮಾ ವ್ಯಾಕರಣದ ಪದದಿನರ್ಥ ಮರ್ಥದ ತತ್ತ್ವಾ ಲೋಕಂ ತತ್ತ್ವಾ ಲೋಕದಿ ನಾಕಾಂಕ್ಷಿಪ ಮುಕ್ತಿಯುಕ್ಕುಂ... '[೧] ಎಂದು ಕೇಶಿರಾಜ ಹೇಳಿರುವುದು ಈ ದೃಷ್ಟಿಯಿಂದಲೆ. ಧ್ವನಿ, ಧ್ವನಿಮಾ, ಆಕೃತಿ, ಆಕೃತಿಮಾ, ವಾಕ್ಯ ಇವು ಭಾಷೆಯ ಅಂಗಗಳು, ಈ ಅಂಶಗಳಿಲ್ಲದೆ ಭಾಷೆಯನ್ನು ಕಟ್ಟುವುದು ಸಾಧ್ಯತೇ ಇಲ್ಲ.

ಧ್ವನಿ (Phones) :

ಮಾನವನಿಗೂ, ಪ್ರಾಣಿಗಳಿಗೂ ಧ್ವನ್ಯಂಗಗಳಿವೆ. ಮಾನವ ಹಾಗೂ ಪ್ರಾಣಿಗಳು ತಮ್ಮ ದೇ ಆದ ವಿಶಿಷ್ಟ ಧ್ವನಿಯನ್ನು ಹೊರಡಿಸುತ್ತವೆ. ಇವುಗಳನ್ನು ಸದ್ದು (Sounds) ಎಂದು ಕರೆಯಬಹುದು. ಮಾನವನು ವ್ಯವಸ್ಥಿತವಾಗಿ ಉಚ್ಚರಿಸುವ ಶಬ್ದಗಳನ್ನು ನಾವು 'ಧ್ವನಿ' ಎಂದು ಕರೆಯಲಾಗುತ್ತದೆ. ಧ್ವನಿ ಭಾಷೆಯ ಮೂಲ ಅಂಶ. ಉದಾ: ಅಕ್ಕರೆ ಎಂಬ ಪದದಲ್ಲ ಅ+ಕ್+ಕ್+ರ್+ಎ ಎಂಬ ಧ್ವನಿಗಳಿವೆ. ಅ ಎಂಬ ಸ್ವರ, ಕ್ ಎಂಬ ವ್ಯಂಜನ, ಕ್ ಎಂಬ ಒತ್ತಕ್ಷರ, ರ್ ಎಂಬ ಅವರ್ಗೀಯ ವ್ಯಂಜನ, ಮತ್ತು ಎ ಎಂಬ ಸಂಧ್ಯಾಕ್ಷರಗಳು ಸೇರಿ ಅಕ್ಕರೆ ಎಂಬ ಪದವಾಗಿದೆ. ಮಾನವನ ಕ್ರಮಬದ್ಧ ಉಚ್ಚರಿತ ಧ್ವನಿಗಳಾಗಿವೆ.

ಮನುಷ್ಯನು ಅಸಂಖ್ಯಾತ ಧ್ವನಿಗಳನ್ನು ಹೊರಡಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಆದರೆ ಆತ ಎಲ್ಲಾ ಧ್ವನಿಗಳನ್ನು ಏಕಕಾಲದಲ್ಲಿ ಬಳಸಿಕೊಳ್ಳಲಾರ. ಧ್ವನಿಯ ವ್ಯವಸ್ಥೆ, ಅದರ ಬಳಕೆ ಸಮಾಜದ ನಿಯಮಗಳಿಗೆ ಅನುಗುಣವಾಗಿರುತ್ತದೆ. ಮನುಷ್ಯನು ಉತ್ಪಾದಿಸುವ ಅಸಂಖ್ಯಾತ ಧ್ವನಿಗಳಲ್ಲಿ ಕೆಲವು ಸಾರ್ಥಕ ಧ್ವನಿಗಳಾದರೇ, ಮತ್ತೆ ಕೆಲವು ಅಸಾರ್ಥಕ ಧ್ವನಿಗಳಾಗಿರುತ್ತವೆ. ಮನುಷ್ಯನು ಧ್ವನ್ಯಂಗಗಳ ಸಹಾಯದಿಂದ ಸ್ವಪ್ರಯತ್ನ ಪೂರ್ವಕವಾಗಿ ಮತ್ತೊಬ್ಬರಿಗೆ ಸಂವಹನವಾಗುವಂತೆ, ಆ ಸಮಾಜದ ನಿಯಮಗಳಿಗೆ ಬದ್ಧವಾಗಿರುವಂತೆ, ಧ್ವನಿಯನ್ನು ಉಚ್ಚರಿಸದೇ ಅವು ಸಾರ್ಥಕ ಧ್ವನಿಗಳಾಗುತ್ತವೆ. ಸೀನುವುದು, ಕೆಮ್ಮುವುದು, ಸಿಳ್ಳೆಹಾಕುವುದು ಇವೂ ಧ್ವನಿಗಳೇ ಎಂದು ಮೇಲ್ನೋಟಕ್ಕೆ ಅನ್ನಿಸಿದರು. ಇವು ಕೆಲವು ಸದ್ದುಗಳು ಆದ್ದರಿಂದ ಇವನ್ನು ಅಸಾರ್ಥಕ ಧ್ವನಿಗಳು ಎಂದು ಕರೆಯಲಾಗುತ್ತದೆ.

ಪ್ರತಿಯೊಂದು ಭಾಷೆಯಲ್ಲೂ ತನ್ನದೇ ಆದ ಭಿನ್ನ ಸ್ವರೂಪದ ಧ್ವನಿಸಂಕೇತಗಳನ್ನು ಹೊಂದಿರುತ್ತವೆ. ಉದಾ: ಶರ್ಕರಾ ಎಂಬ ಶಬ್ದದಲ್ಲಿ ಶ್+ಅ+ರ್+ಕ್+ಅ+ರ್+ಆ ಎಂಬ ಧ್ವನಿಗಳು ಕ್ರಮಬದ್ಧವಾಗಿ ಉಚ್ಚರಿತವಾಗುವುದು ಸಂಸ್ಕೃತ ಭಾಷೆಯಲ್ಲಿ. ಕನ್ನಡ ಭಾಷೆಯನ್ನಾಡುವವರು ಇದನ್ನು ಸಕ್ಕರೆ ಎಂದು ಉಚ್ಚರಿಸುತ್ತಾರೆ. ಇಲ್ಲಿ ಶ್, ರ್, ಆ ಧ್ವನಿಗಳ ಬದಲಾಗಿ ಸ್+ಕ್+ಎ ಧ್ವನಿಗಳು ಸೇರಿಕೊಂಡಿವೆ. ಇದಕ್ಕೆ ಕಾರಣ ಕನ್ನಡದ ನಿಯಮಕ್ಕೆ ಹೊಂದಿಕೊಂಡಿರುವ ಸಕ್ಕರೆ ಪದದಲ್ಲಿ ಶ್ ಎಂಬುದಿಲ್ಲ ಹಾಗೆಯೆ ರ್+ಕ್

---

೧. ತ.ಸು. ಶಾಮರಾಯ:ಹೆಚ್.ನಂಜೇಗೌಡ(ಸಂ):ಶಬ್ದಮಣಿದರ್ಪಣಂ: ಪ್ರಕಾಶನ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ :ಪ್ರ.ವ.೧೯೯೯: ಪು.ಸಂ. ೫

ಎಂಬ ವಿಜಾತಿಯ ದ್ವಿತ್ವಕ್ಕೆ ಬದಲಾಗಿ ಸಜಾತಿಯ ದ್ವಿತ್ವಗಳಾದ ಕ್+ಕ್ ಎಂಬುದು ಬಂದಿದೆ. ಸಂಸ್ಕೃತದಲ್ಲಿ ಶ್, ರ್, ಅ ವಿಶಿಷ್ಟ ಧ್ವನಿಗಳಾದರೇ ಕನ್ನಡದಲ್ಲಿ ಆ ಅರ್ಥವನ್ನು ಸ್ಫುರಿಸಲು ಸ್+ಕ್+ಎ ಧ್ವನಿಗಳು ವಿಶಿಷ್ಟ ಧ್ವನಿಗಳಾಗಿ ಬಳಕೆಯಲ್ಲಿವೆ. ಒಟ್ಟಿನಲ್ಲಿ ಪ್ರತಿಯೊಂದು ಭಾಷೆಗೂ ತನ್ನದೇ ಆದ ವಿಶಿಷ್ಟ ಧ್ವನಿಗಳಿರುತ್ತವೆ ಎಂಬುದು ಖಚಿತ.

ಭಾಷಾ ವಿಜ್ಞಾನಿಗಳು ಭಾಷೆಯನ್ನು ಕುರಿತು ಅಧ್ಯಯನ ಮಾಡುವಾಗ, ಹಾಗೂ ಅದರ ಅಂಗಗಳಾದ ಧ್ವನಿ, ಧ್ವನಿಮಾ, ಆಕೃತಿ, ಆಕೃತಿಮಾ, ವಾಕ್ಯಗಳನ್ನು ಅಧ್ಯಯನ ಮಾಡಲು ಬರೆಹ ಭಾಷೆಗಿಂತ, ಆಡು ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ. ಧ್ವನಿಯನ್ನು ತಿಳಿಯಲು ಲಿಪಿ ಮುಖ್ಯವಾಗುವುದಿಲ್ಲ. ಉಚ್ಚಾರಣೆಯೇ ಮುಖ್ಯವಾಗುತ್ತದೆ. ಉದಾ: ಕನ್ನಡ ಭಾಷೆಯಲ್ಲಿ 'ಅತ್ತೆ' ಎಂಬ ಪದವಿದೆ. ಅ+ತ್+ತ್+ಎ ಎಂಬ ಧ್ವನಿಗಳು ಇಲ್ಲಿವೆ. ಇದು ಅತ್ತೆ (ಅಳುವುದು) ಎಂಬ ಕ್ರಿಯಾವಾಚಿಯಾಗಿಯೂ ಅತ್ತೆ (ಸಂಬಂಧ) ಎಂಬ ನಾಮವಾಚಿಯಾಗಿಯೂ ಕೆಲಸವನ್ನು ಮಾಡುತ್ತದೆ. ಅಂತೆಯೇ 'ಕಳ್ಳಿ' ಎಂಬ ಪದವಿದೆ. ಕ್+ಅ+ಳ್+ಳ್+ಇ ಎಂಬ ಧ್ವನಿಗಳು ಇಲ್ಲಿವೆ. ಇದು ಕಳ್ಳಿ (ಗಿಡ) ಎಂಬ ಸಸ್ಯ ಸೂಚಕ ನಾಮ ಪದವಾಗಿಯೂ ಕಳ್ಳಿ (ಕಳವು ಮಾಡುವಾಕೆ) ಎಂಬ ವಿಶೇಷಣವಾಗಿಯೂ ಕಾರ್ಯನಿರ್ವಹಿಸುತ್ತದೆ. ಅಂತೆಯೇ ಇಂಗ್ಲೀಷ್‌ನಲ್ಲಿ Put ಎಂಬುದು ಪುಟ್ ಎಂದೂ But ಎಂಬುದು ಬುಟ್ ಎಂದಾಗದೆ ಬಟ್ ಆಗುತ್ತದೆ. ಅಂತೆಯೇ ತಮಿಳಿನಲ್ಲಿ ಗ್,ಜ್,ಡ್,ದ್,ಬ್‌ಗಳಿಗೆ ಬದಲಾಗಿ ಕ್,ಚ್,ಟ್,ತ್,ಪ್‌ಗಳು ಬಳಕೆಯಾಗುತ್ತವೆ. ಇಲ್ಲಿ ಗ್ರಹಿಸಬೇಕಾದ ಸಂಗತಿ ಎಂದರೆ ಧ್ವನಿ ವ್ಯತ್ಯಾಸಗಳು ತಿಳಿಯುವುದು ಬರೆಹದಿಂದಲ್ಲ ಉಚ್ಚಾರಣೆಯಿಂದ ಎಂಬುದು.

ಮನುಷ್ಯನು ಸ್ಥಾನ, ಕರಣ ಮತ್ತು ಪ್ರಯತ್ನ ಇವುಗಳ ಮೂಲಕ ಧ್ವನಿಯನ್ನು ಹೊರಡಿಸುತ್ತಾನೆ. ಸ್ಥಾನ ಎಂದರೇ ಬಾಯಿಯ ಮೇಲುಭಾಗ, ಇದು ಸ್ಥಿರವಾಗುತ್ತದೆ. ಕರಣ ಎಂದರೇ ಬಾಯಿಯ ಕೆಳಭಾಗ. ಇವು ಚಲನೆಯನ್ನು ಮಾಡುವ ಅಂಗಗಳಾಗಿರುತ್ತವೆ. ಪ್ರಯತ್ನ ಎಂದರೇ ಇದು ಮನುಷ್ಯನ ಧ್ವನ್ಯಂಗಕ್ಕೆ ಸಂಬಂಧಪಟ್ಟ ವಿಚಾರವಾಗಿದೆ, ಮನುಷ್ಯ ಸ್ವಪ್ರಯತ್ನದಿಂದ, ತನ್ನ ವಿವಿಧ ಧ್ವನ್ಯಂಗಗಳ ಸಹಾಯದಿಂದ ಭಾಷೆಯನ್ನು ಕಲಿಯುತ್ತಾನೆ. ಇದನ್ನು ಪ್ರಯತ್ನ ಎಂದು ಹೇಳಬಹುದು. ಉದಾ: ಬ್ ಎಂಬ ಧ್ವನಿಯನ್ನು ಉಚ್ಚರಿಸಬೇಕೆಂದುಕಂಡು ಆ ಧ್ವನಿಯನ್ನು ಮಾನವ ಹೊರಡಿಸುವುದೇ ಪ್ರಯತ್ನ. ಪ್ ಎಂದಾಗ ಕೆಳದುಟಿ, ಮೇಲ್ದುಟಿಗೆ ಬಂದು ತಾಕುತ್ತದೆ ಇದೇ ಕಾರಣ. ಈ ಸಂದರ್ಭದಲ್ಲಿ ಕೆಳದುಟಿಗೆ ಮೇಲ್ದುಟಿ ಸಹಾಯಕವಾಗಿ ನಿಲ್ಲುತ್ತದೆ ಆದರೂ ಅದು ತನ್ನ ಸ್ಥಾನ ಬಿಟ್ಟು ಚಲಿಸುವುದಿಲ್ಲ ಆದ್ದರಿಂದ ಇದು ಸ್ಥಾನ. ಹೀಗೆ ಧ್ವನಿಯು ಮೂರು ರೀತಿಯಲ್ಲಿ ಹುಟ್ಟುತ್ತದೆ ಎಂಬುದು ಸ್ಪಷ್ಟ.

ತುಟಿ, ದಂತ, ನಾಲಗೆ, ಕಂಠ, ನಾಸಿಕ, ತಾಲು, ವರ್ತ್ಸ್ಯ, ಗಲಕುಹರ, ಧ್ವನಿ ಪೆಟ್ಟಿಗೆ, ಪುಪ್ಪುಸ ಇವುಗಳು ಧ್ವನಿಯನ್ನು ಹೊರಡಿಸಲು ಸಹಾಯಕವಾಗುವ ಅಂಗಗಳಾಗಿವೆ. ಇವುಗಳಿಂದ ಹುಟ್ಟುವ ಧ್ವನಿಗಳನ್ನು ಅವುಗಳ ಸ್ಥಾನಕ್ಕೆ ಅನುಗುಣವಾಗಿ ದಂತ್ಯ, ಓಷ್ಠ್ಯ, ಕಂಠ್ಯ, ತಾಲವ್ಯ, ವರ್ತ್ಸ್ಯ, ಗಲಕುಹರೀಯ ಎಂದು ಭಾಷಾ

ವಿಜ್ಞಾನಿಗಳು ಹೆಸರಿಸುತ್ತಾರೆ. ಧ್ವನಿಗಳ ಕಂಪನವನ್ನು ಆಧರಿಸಿ ಘೋಷಧ್ವನಿ ಮತ್ತು ಅಘೋಷ ಧ್ವನಿಗಳೆಂದು, ನಾಲಗೆಯ ಕಂಪನವನ್ನು ಅನುಸರಿಸಿ ತಾಡಿತ, ಲೋಡಿತ, ಕಂಪಿತ ಎಂದು ನಾಲಗೆಯ ಚಲನೆಯ ಮೇರೆಗೆ ಸ್ವರ-ಹ್ರಸ್ವ, ದೀರ್ಘಗಳೆಂದು ಪುಪ್ಪುಸ ಉಸಿರಿನ ಸಹಾಯದಿಂದ ಧ್ವನಿಯನ್ನು ಹೊರಡಿಸುವ ಆಧಾರದ ಮೇಲೆ ಘರ್ಷಿ, ಅನುಘರ್ಷಿ, ಪಾರ್ಶ್ವಿಕ ಎಂದು ಧ್ವನಿಯನ್ನು ಪದರು-ಪದರುಗಳಾಗಿ ವಿಂಗಡಿಸಿ ಅಧ್ಯಯನಕ್ಕೊಳಪಡಿಸಲಾಗುತ್ತದೆ. ಇಂತಹ ಅಧ್ಯಯನವನ್ನು ಧ್ವನಿ ವಿಜ್ಞಾನ ಎಂದು ಕರೆಯಬಹುದು.

ಯಾವ, ಯಾವ ಸ್ಥಾನದಿಂದ ಯಾವ-ಯಾವ ಧ್ವನಿಗಳು ಹುಟ್ಟುತ್ತವೆ ಎಂಬುದನ್ನು ಈ ಮುಂದಿನಂತೆ ನೋಡಬಹುದು.

ಕಂಠ್ಯ ಧ್ವನಿಗಳು : ಕ್, ಖ್, ಗ್, ಘ್, ಙಾ ಇವು ಗಂಟಲಿನ ಭಾಗದ ಕಂಠದಿಂದ ಉತ್ಪತ್ತಿಯಾಗುತ್ತವೆ. ಆದ್ದರಿಂದ ಇವುಗಳನ್ನು ಕಂಠ್ಯಧ್ವನಿಗಳು ಎಂದು ಕರೆಯಬಹುದು.

ದಂತ್ಯ ಧ್ವನಿಗಳು : ಹಲ್ಲುಗಳ ಸಹಾಯದಿಂದ ಉಚ್ಚರಿತವಾಗುವ ಧ್ವನಿಗಳನ್ನು ದಂತ್ಯ ಧ್ವನಿಗಳು ಎಂದು ಕರೆಯಲಾಗುತ್ತದೆ. ತ್, ಥ್, ದ್, ಧ್ ಇವು ದಂತ್ಯ ಧ್ವನಿಗಳು.

ಓಷ್ಠ್ಯ ಧ್ವನಿಗಳು : ಓಷ್ಠ್ಯ ಎಂದರೇ ತುಟಿ. ತುಟಿಗಳ ಸಹಾಯದಿಂದ ಉಚ್ಚರಿತವಾಗುವ ಧ್ವನಿಗಳನ್ನು ಓಷ್ಠ್ಯ ಧ್ವನಿಗಳು ಎಂದು ಕರೆಯುತ್ತೇವೆ. ಈ ಓಷ್ಠ್ಯ ಧ್ವನಿಗಳಲ್ಲಿ ಸವೃತ್ತ, ವಿವೃತ್ತ ಎಂಬ ಎರಡು ವಿಭಾಗಗಳಿವೆ. ಪ್, ಫ್, ಬ್, ಭ್, ವ್ ಇವು ಓಷ್ಠ್ಯ ಧ್ವನಿಗಳು.

ತಾಲವ್ಯ ಧ್ವನಿಗಳು : ನಾಲಗೆಯ ಮುಂಭಾಗ ತಾಲುವಿನ ಕಡೆಗೆ ತಲುಪಿದಾಗ ಅಥವಾ ವಾಲಿದಾಗ ಉಂಟಾಗುವ ಧ್ವನಿಗಳೇ ತಾಲವ್ಯ ಧ್ವನಿಗಳು. ಟ್, ಡ್, ಳ್, ಷ್, ಚ್, ಶ್, ಇ,ಯ್ ಇವು ತಾಲವ್ಯ ಧ್ವನಿಗಳಾಗಿವೆ.

ನಾಸಿಕ ಧ್ವನಿಗಳು : ಉಸಿರನ್ನು ಮೂಗಿನ ಮುಖಾಂತರ ಬಿಟ್ಟಾಗ ಹುಟ್ಟುವ ಧ್ವನಿಗಳನ್ನು ನಾಸಿಕ ಧ್ವನಿಗಳು ಎಂದು ಕರೆಯಲಾಗುತ್ತದೆ. ನ್, ಣ್, ಮ್, ಙ, ಞ್ ಇವುಗಳು ನಾಸಿಕ ಧ್ವನಿಗಳು.

ಗಲಕುಹರ ಧ್ವನಿಗಳು : ಕಂಠದ ಆಚೆಯ ಭಾಗದಲ್ಲಿ ಹುಟ್ಟುವ ಧ್ವನಿಗಳನ್ನು ಗಲಕುಹರ ಧ್ವನಿಗಳೆಂದು ಕರೆಯುತ್ತೇವೆ. ಅಲ್ಲದೇ ಗಲೀಯ ಧ್ವನಿ ಎಂಬ ಪರ್ಯಾದ ನಾಮವೂ ಇವುಗಳಿಗಿದೆ. ಹ್ ಎಂಬುದು ಗಲೀಯ ಧ್ವನಿ.

ವರ್ತ್ಸ್ಯ ಧ್ವನಿಗಳು : ನಾಲಗೆಯ ತುದಿಯನ್ನು ಮೇಲಿನ ಹಲ್ಲಿನ ಹಿಂಭಾಗದಲ್ಲಿಟ್ಟು ಉಚ್ಚರಿಸಿದಾಗ ಹುಟ್ಟುವ ಧ್ವನಿಗಳಿಗೆ ವರ್ತ್ಸ್ಯ ಧ್ವನಿಗಳು ಎಂದು ಕರೆಯಲಾಗುತ್ತದೆ. ತ್,ದ್,ಗಳು ಏಕಕಾಲದಲ್ಲಿ ವರ್ತ್ಸ್ಯ ಧ್ವನಿಗಳು ದಂತ್ಯ ಧ್ವನಿಗಳೂ ಆಗಿವೆ.

ಸ್ವರ ಧ್ವನಿಗಳು : ಪುಪ್ಪುಸದಿಂದ ಹೊರಟ ಉಸಿರು ಬಾಯಿಂದ ಉಚ್ಚಾರಣೆಗೊಳ್ಳುವಾಗ ಯಾವ ಅಡತಡೆಯೂ ಇಲ್ಲದೆ ಧ್ವನಿ ಹುಟ್ಟುವುದಾದರೇ ಅವುಗಳನ್ನು ಸ್ವರಧ್ವನಿಗಳು ಎಂದು ಕರೆಯುತ್ತೇವೆ. ಈ ಧ್ವನಿಗಳಲ್ಲಿ ಹ್ರಸ್ವ ಧ್ವನಿಗಳು ದೀರ್ಘ ಧ್ವನಿಗಳು ಎಂದು ವಿಭಾಗಿಸಿಕೊಳ್ಳಬಹುದು. ಇವುಗಳು ಭಾಷೆಯಲ್ಲಿನ ಸ್ವತಂತ್ರ ಧ್ವನಿಗಳಾಗಿರುತ್ತವೆ. ಹ್ರಸ್ವ ಧ್ವನಿಗಳು: ಅ.ಇ.ಉ,ಋ,ಎ,ಬ. ದೀರ್ಘ ಧ್ವನಿಗಳು : ಆ, ಇ, ಊ, ಏ, ಓ, ಇವುಗಳಲ್ಲಿ ಕೆಲವು ಸ್ವರಗಳು ಅನುನಾಸಿಕದೊಡನೆ ಸೇರಿ ಉಚ್ಚಾರಣೆಯಾಗುತ್ತವೆ. ಉದಾ :ಅಂ, ಆಃ (ಉಪಸರ್ಗ) ಎಂಬ ಸ್ವರಗಳು. ಸ್ವರಗಳು ಭಾಷೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ.

ವ್ಯಂಜನ ಧ್ವನಿಗಳು : ಇವುಗಳು ಸ್ವರಧ್ವನಿಗಳ ಸಹಾಯವಿಲ್ಲದೆ ಉಚ್ಚರಿಸಲುಬಾರದವು. ಇವುಗಳಲ್ಲಿ ಶ್ವಾಸದಿಂದ ಹೊರಡುವ ಉಸಿರಿಗೆ ತಡೆಯುಂಟಾಗಿ, ಸ್ಥಾನ, ಕರಣ, ಇವುಗಳನ್ನು ಹಾದು ಧ್ವನಿಗಳು ಹುಟ್ಟುತ್ತವೆ. ಇವುಗಳನ್ನು ವ್ಯಂಜನ ಧ್ವನಿಗಳು ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ವರ್ಗೀಯ, ಅವರ್ಗೀಯ ವ್ಯಂಜನಗಳೆಂಬ ಎರಡು ವಿಧಗಳನ್ನು ಕಾಣಬಹುದು. ಕ್,ಚ್,ಟ್,ತ್,ಪ್, ವರ್ಗಗಳನ್ನು ವರ್ಗೀಯ ವ್ಯಂಜನಗಳೆಂದು ಯ್,ರ್,ಲ್,ವ್,ಶ್,ಷ್,ಸ್,ಹ್,ಳ್‌ಗಳನ್ನು ಅವರ್ಗೀಯ ವ್ಯಂಜನ ಧ್ವನಿಗಳೆಂದು ಕರೆಯಲಾಗುತ್ತದೆ.

ಸ್ಫೋಟ ಧ್ವನಿಗಳು : ಇದನ್ನು ಸ್ಪರ್ಶ ಧ್ವನಿ ಎಂದೂ ಕರೆಯಲಾಗುತ್ತದೆ. ಗಾಳಿಯನ್ನು ಸ್ವಲ್ಪಕಾಲ ಸಂಪೂರ್ಣವಾಗಿ ತಡೆದಿಟ್ಟು ಒಮ್ಮೆಗೇ ಬಿಟ್ಟಾಗ ಹೊರಡುವ ಧ್ವನಿಗಳನ್ನು ಸ್ಫೋಟ ಧ್ವನಿಗಳು ಎಂದು ಕರೆಯಬಹುದು. ತುಟಿಗಳೆರಡನ್ನೂ ಸಂಪೂರ್ಣವಾಗಿ ಮುಚ್ಚಿ ಅಲ್ಲಿ ಗಾಳಿಯನ್ನು ನಿಲ್ಲಿಸಿ, ಆ ಮೇಲೆ ಬಿಟ್ಟಾಗ ಇಂತಹ ಸ್ಫೋಟ ಧ್ವನಿಗಳು ಹುಟ್ಟುತ್ತವೆ. ಉದಾ: ಪ್, ಬ್ ಇವು ಸ್ಫೋಟ/ಸ್ಪರ್ಶ ಧ್ವನಿಗಳಾಗಿವೆ.


ಪಾರ್ಶ್ವಿಕ ಧ್ವನಿಗಳು : ಶ್ವಾಸಕಾಂಗದಿಂದ ಹೊರಟ ಗಾಳಿಯು ಧ್ವನಿಪೆಟ್ಟಿಗೆಯನ್ನು ಹಾದು ಬಾಯಿಯ ಎರಡು ಪಾರ್ಶ್ವಗಳನ್ನು ಉಜ್ಜಿಕೊಂಡು ಬರುವಂತಿದ್ದರೇ ಅದನ್ನು ಪಾರ್ಶ್ವಿಕ ಧ್ವನಿ ಎಂದು ಕರೆಯಬಹುದು. ಉದಾ:ಫ, ಐ ಮುಂತಾದವು ಪಾರ್ಶ್ವಿಕ ಧ್ವನಿಗಳಾಗಿವೆ.

ಲೋಡಿತ ಧ್ವನಿಗಳು : ಯಾವುದಾದರೂ ಸ್ಥಿತಿ ಸ್ಥಾಪನಶಕ್ತಿಯುಳ್ಳ ಅಂಗವು ಇನ್ನೊಂದು ಅಂಗದ ಮೇಲೆ ಪದೇ-ಪದೇ ವೇಗವಾಗಿ ಬಡಿಯುವುದರಿಂದ ಹೊರಡುವ ಧ್ವನಿಗಳು. ಇಂಗ್ಲಿಷ್‌ನ 'R' ಅಧ್ವನಿಯನ್ನು ಹೊರಡಿಸುವಾಗ ನಾಲಗೆಯು ಕಠಿಣ ತಾಲುವಿಗೆ ಪಟ-ಪಟನೆ ವೇಗವಾಗಿ ಬಡಿಯುತ್ತವೆ. ಇದನ್ನು ಒಂದು ರೀತಿಯಲ್ಲಿ ರ್‌ರ್‌ರ್....... ಎಂಬಂತೆ ಸೂಚಿಸಬಹುದು.

ತಾಡಿತ ಧ್ವನಿಗಳು : ತಾಡಿತ ಧ್ವನಿಗಳು ಬಹಳ ವೇಗವಾಗಿ ಉಚ್ಚರಿತವಾಗುತ್ತವೆ. ಇವುಗಳಲ್ಲಿ ಉಸಿರಿನ ನಿಲುಗಡೆ ಇರುವುದಿಲ್ಲ. ನಾಲಿಗೆಯು ತಾಲುವಿನ ಕಡೆಗೆ ಹಿಮ್ಮುಖವಾಗಿ ಚಲಿಸಿ ತಾಲುವನ್ನು ತಾಡಿಸಿ, ಒಮ್ಮೆಗೇ ಹಿಂದಿರುಗಿ ಸ್ವಸ್ಥಾನಕ್ಕೆ ಬರುತ್ತದೆ. ಆದ್ದರಿಂದ ಡ್, ಟ್‌ಗಳನ್ನು ತಾಡಿತ ಧ್ವನಿಗಳು ಎಂದು ಕರೆಯಬಹುದು.

ಮನುಷ್ಯನ ಧ್ವನ್ಯಂಗಗಳಿಂದ ಉತ್ಪನ್ನವಾಗುವ ಧ್ವನಿಗಳು ಅನೇಕ ರೀತಿಯಲ್ಲಿ ಇರುತ್ತವೆ. ಇಂತಹ ವಿಚಾರವನ್ನು ಭೌತ ಧ್ವನಿ ವಿಜ್ಞಾನದಿಂದ ತಿಳಿಯಬಹುದು. ಬಹುಪಾಲು ಭೌತ ಧ್ವನಿ ವಿಜ್ಞಾನದಲ್ಲಿ ಭಾಷಿಗ ಹಾಗೂ ಕೇಳುಗನ ಅಂತರದಲ್ಲಿ ಸಾಗುವ ಭಾಷೆಯು ಹೇಗೆ ಸ್ಥಿತ್ಯಂತರಗೊಳ್ಳುತ್ತದೆ. ಹೇಗೆ ಧ್ವನಿ ಪಲ್ಲಟವಾಗುತ್ತದೆ ಎಂಬುದನ್ನು ತಿಳಿಸುವ ಕಡೆಗೆ ಹೆಚ್ಚಿನ ಗಮನವನ್ನು ಕೊಡುತ್ತದೆ. ಧ್ವನಿಯು ನಿರ್ವಾತ ಪ್ರದೇಶದಲ್ಲಿ ಚಲಿಸುವುದಿಲ್ಲ. ಉಚ್ಚರಿತ ಧ್ವನಿಗಳು ಗಾಳಿಯ ತರಂಗಗಳ ಅಥವಾ ಅಲೆಗಳ ರೀತಿಯಲ್ಲಿ ಚಲಿಸುತ್ತವೆ. ಹೀಗೆ ಚಲಿಸುವಾಗ ಅವು ಕಂಪನ ವಿಸ್ತಾರ, ಹಾಗೂ ಆವರ್ತವನ್ನು ಹೊಂದಿರುತ್ತದೆ. ಉತ್ಪತ್ತಿಯಾದ ಧ್ವನಿ ಗಾಳಿಯಲ್ಲಿಯ ಕಣಕ್ಕೆ ಬಡಿದಾಗ ಅದು ತಾನು ತಲುಪಬೇಕಾದಲ್ಲಿ ತಲುಪಿ, ಹಿಂದಿರುಗಿ ಬರುವುದಕ್ಕೆ ಕಂಪನ ವಿಸ್ತಾರ ಎಂದೂ, ಈ ರೀತಿ ಅದು ಪುನಃ ಚಲಿಸುತ್ತಲೇ ಇದ್ದರೆ, ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಆ ವಲಯದಲ್ಲಿ ವಿಹರಿಸಿದರೇ ಅದನ್ನು ಆವರ್ತ ಕಾಲ ಎಂದು ಕರೆಯುತ್ತಾರೆ.

ಧ್ವನಿ ಹುಟ್ಟುವ ಸ್ಥಾನ ಕರಣ, ಹಾಗೂ ಪ್ರಯತ್ನಗಳನ್ನು ಈ ಚಿತ್ರದ ಮೂಲಕ ಸ್ಪಷ್ಟ ಪಡಿಸಿಕೊಳ್ಳಬಹುದು.



(ಚಿತ್ರ: ಕೆ.ವಿ. ನಾರಾಯಣ್(ಸಂ):ಭಾಷೆ:ವಿಶ್ವಕೋಶ:ಹಂಪಿ:ಪ್ರ.ವ.೨೦೦೭. ಪು.ಸಂ. ೧೪೧)

ಇಂತಹ ಧ್ವನಿ, ಧ್ವನ್ಯಂಗಗಳ ಕಾರ್ಯ, ಧ್ವನಿಪಲ್ಲಟ, ಧ್ವನಿ ಪ್ರಸಾರಣ ಈ ಎಲ್ಲವನ್ನೂ ಕುರಿತು ಅಧ್ಯಯನ ಮಾಡುವುದೇ ಧ್ವನಿ ವಿಜ್ಞಾನ. ಧ್ವನಿಯು ಉಚ್ಚರಿತ ಭಾಷೆಯ ಅತಿಚಿಕ್ಕ ಘಟಕ. ಬರಹ ಎಂದಿಗೂ ಈ ಧ್ವನಿಯನ್ನು ಅಧ್ಯಯನಿಸಲು ಸಂಪೂರ್ಣವಾಗಿ ಸಹಾಯಕವಾಗಲಾರದು.

ಧ್ವನಿಯ ಹುಟ್ಟಿಗೆ ಶ್ವಾಸಕಾಂಗ ಕಾರ್ಯವೂ ಬಹಳ ಮುಖ್ಯ. ಧ್ವನಿಯ ಉತ್ಪತ್ತಿಗೆ ಬೇಕಾದ ಗಾಳಿಯನ್ನು ಶ್ವಾಸಕ್ಕಾಂಗ ಒದಗಿಸಿ ಕೊಡುವ ಬಗೆಯನ್ನು ಈ ಮುಂದಿನಂತೆ ತಿಳಿಯಬಹುದು.

ಉಸಿರಾಡುವುದು ಮನುಷ್ಯನ ಹುಟ್ಟಿನಿಂದ ನಡೆಯುವಂತಹ ಸಹಜ ಕ್ರಿಯೆ. ಪ್ರತೀ ಸಾರಿ ಉಸಿರಾಡುವಾಗಲೂ ಆಮ್ಲಜನಕವನ್ನು ತೆಗೆದುಕೊಂಡು ಇಂಗಾಲವನ್ನು ಹೊರಹಾಕಲಾಗುತ್ತದೆ. ಈ ಕ್ರಿಯೆಗೆ ಉಚ್ವಾಸ, ನಿಃಶ್ವಾಸ ಎಂದು ಕ್ರಮವಾಗಿ ಕರೆಯಬಹುದು. ಹೀಗೆ ಶ್ವಾಸಕ್ರಿಯೆ ನಡೆಯುವಾಗ ಉಸಿರಿಗೆ ಮುಖವಿವರಗಳಿಂದ ತಡೆಯುಂಟಾಗಿ ಧ್ವನಿಯ ಹುಟ್ಟುವಿಕೆಗೆ ಕಾರಣವಾಗುತ್ತದೆ. ಮೂಗಿನ ಕೆಳಭಾಗ ಶ್ವಾಸನಾಳವಿದ್ದು, ಅದು ಎರಡು ಟಿಸಿಲಾಗಿ ಒಡೆದು ಪುಪ್ಪುಸಕ್ಕೆ ಹೋಗುತ್ತದೆ. ಪುಪ್ಪುಸದಲ್ಲಿ ಉಸಿರು ತುಂಬಿದಾಗ ಸಣ್ಣಸಣ್ಣ ಚೀಲಗಳಂತೆ ಅವು ಹಿಗ್ಗುತ್ತವೆ. ಹೀಗೆ ಹಿಗ್ಗಿದಾಗ ವಪೆಯು ಕೆಳಭಾಗಕ್ಕೆ ಬರುತ್ತವೆ. ನಿಃಶ್ವಾಸ ಮಾಡಿದಾಗ ಪುಪ್ಪುಸದ ಚೀಲಗಳು ಸಣ್ಣವಾಗಿ ವಪೆಯು ಸ್ವಲ್ಪ ಮೇಲ್ಭಾಗಕ್ಕೆ ಹೋಗುತ್ತದೆ. ಈ ಕ್ರಿಯೆ ಎಲ್ಲಾ ಜೀವಂತ ಪ್ರಾಣಿಗಳಲ್ಲೂ ಸಹಜವಾಗಿಯೇ ನಡೆಯುತ್ತದೆ. ಆದರೇ ಪ್ರಾಣಿಗಳು ತಮ್ಮ ನೈಸರ್ಗಿಕ ಸದ್ದುಗಳನ್ನು ಮಾತ್ರ, ಆಯಾ ಸಂದರ್ಭಕ್ಕೆ ತಕ್ಕಂತೆ ಬಳಸುತ್ತವೆ. ಆದರೆ ಮಾನವ ತನ್ನ ನಿರಂತರ ಪ್ರಯತ್ನದಿಂದ ಗಾಳಿಯನ್ನು ಬಳಸಿಕೊಂಡು, ಧ್ವನ್ಯಂಗಗಳ ಸಹಾಯದೊಂದಿಗೆ ಧ್ವನಿಗಳನ್ನು ಹೊರಡಿಸಿ. ಅವುಗಳನ್ನು ಅರ್ಥಬದ್ಧವಾಗಿಸುವ ಒಂದು ನಿಯಮಕ್ಕೆ ಅನುಸಾರವಾಗಿ, ಸಮಯ ಸಂದರ್ಭಕ್ಕೆ ತಕ್ಕಂತೆ ಅವುಗಳನ್ನು ಬಳಸುವ ಶಕ್ತಿಯನ್ನು ಹೊಂದಿದ್ದಾನೆ. ಭಾಷೆ ಮಾನವನ ವ್ಯಕ್ತಿತ್ವ ವಿಕಸನ ಹಾಗೂ ಅವನ ಬೆಳೆವಣಿಗೆಗೆ ಹಿಡಿದ ಕೈಗನ್ನಡಿಯಾಗಿದೆ. ಮಾನವ ಪ್ರಾಣಿಗಳಿಗಿಂತ ಭಿನ್ನ ಹಾಗೂ ವಿಶಿಷ್ಟ ಎನ್ನಿಸಿಕೊಳ್ಳಲು ಇದೂ ಒಂದು ಮುಖ್ಯ ಕಾರಣವಾಗಿದೆ.

ಧ್ವನ್ಯಂಗ, ಶ್ವಾಸಕಾಂಗಗಳಂತೆ ಧ್ವನಿ, ಉಚ್ಚಾರಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಮತ್ತೊಂದು ಅಂಗ ಧ್ವನಿ ಪೆಟ್ಟಿಗೆ. ಧ್ವನಿ ಪೆಟ್ಟಿಗೆಯು ಶ್ವಾಸನಾಳದ ಮೇಲ್ಭಾಗದಲ್ಲಿ ಮೃದುವಾದ ಮೂಳೆಗಳಿಂದ ರಚನೆಯಾಗಿರುತ್ತದೆ. ಇದನ್ನು ಕಂಠ, ಸ್ವರಯಂತ್ರ, ಸ್ವರಪೆಟ್ಟಿಗೆ ಎಂದು ಹಲವು ನಾಮಗಳಿಂದ ಕರೆಯಲಾಗುತ್ತದೆ. ಸ್ವಪ್ರಯತ್ನ ಪೂರ್ವತವಾಗಿ ನಾವು ಯಾವ ಧ್ವನಿಯನ್ನು ಹೊರಡಿಸಬೇಕು ಎಂದು ಪ್ರಯತ್ನಿಸಿ ಉಸಿರನ್ನು ಬಿಟ್ಟಾಗ ಆ ಉಸಿರು ಸ್ವರಪೆಟ್ಟಿಗೆಯ ಮೂಲಕ ಹೊರಬಂದು ಒಂದು ನಿರ್ದಿಷ್ಟ ಧ್ವನಿಗುಣವನ್ನು ಪಡೆಯುತ್ತದೆ. ಅಲ್ಲಿಂದ ಮುಂದುವರಿದ ಹಾಗೆ ಅದು ದಂತ, ನಾಸಿಕ, ನಾಲಗೆ, ತಾಲು, ಓಷ್ಠ್ಯ7 ಗಲಕುಹರ ಇವುಗಳ ಸಹಕಾರದಿಂದ ನಿರ್ದಿಷ್ಟ ಧ್ವನಿಯಾಗಿ ಉಚ್ಚಾರಣೆಯಾಗುತ್ತದೆ. ಹೀಗೆ ಉಚ್ಚರಿತವಾದ ಧ್ವನಿಗಳನ್ನು ಘೋಷಧ್ವನಿ, ಅಘೋಷ ಧ್ವನಿಗಳು ಎಂದು ವಿಂಗಡಿಸಿಕೊಳ್ಳಬಹುದು.

ಅಘೋಷ ಧ್ವನಿಗಳು : ಧ್ವನಿಯು ಧ್ವನ್ಯಂಗಗಳ ಮೂಲಕ ಯಾವ ಅಡತಡೆಯೂ ಇಲ್ಲದೇ ಸರಾಗವಾಗಿ ಉಚ್ಚರಿಸುವಂತಿದ್ದರೇ ಅದನ್ನು ಅಘೋಷ ಧ್ವನಿಗಳು ಎಂದು ಕರೆಯಲಾಗುತ್ತದೆ. ತ್,ಕ್,ಪ್,ಸ್ ಇವು ಅಘೋಷ್ ಧ್ವನಿಗಳಾಗಿವೆ.

ಘೋಷ ಧ್ವನಿಗಳು : ಗಾಳಿ ಸಾಗುವಾಗ ಕಂಪನ ಉಂಟಾದರೇ ಅದನ್ನು ಘೋಷ ಧ್ವನಿಗಳು ಎಂದು ಕರೆಯಲಾಗುತ್ತದೆ. ಬ್,ಡ್,ಗ್,ವ್,ಜ್(ಝ್) ಇವು ಘೋಷ ಧ್ವನಿಗಳಾಗಿವೆ.

ಭಾಷಾ ವಿಜ್ಞಾನಿಗಳಿಗೆ ಧ್ವನಿ ಜ್ಞಾನ ಅತ್ಯವಶ್ಯಕ ವಾಗಿ ಇರಬೇಕು. ಈ ಧ್ವನಿಜ್ಞಾನ ವಿಲ್ಲದೆ, ಭಾಷೆಯ ಸ್ವರೂಪ, ಅವುಗಳ ಕುರಿತು ವೈಜ್ಞಾನಿಕ ಅಧ್ಯಯನ ಮಾಡುವುದು ಅಸಾಧ್ಯ. ಭಾಷೆ ಹಾಗೂ ಭಾಷಾ ವಿಜ್ಞಾನದ ಅಧ್ಯಯನದಲ್ಲಿ ಧ್ವನಿಯ ಅಧ್ಯಯನವು ಬಹಳ ಮಹತ್ವದ ಸ್ಥಾನವನ್ನು ಪಡೆದಿದೆ.

ಧ್ವನಿಮಾ (Phoneme):

ಬಾಷೆಯ ಕನಿಷ್ಠತಮ ಅರ್ಥಪೂರ್ಣ ಘಟಕವೇ ಧ್ವನಿಮಾ. ಹೂವೆಟ್ ಎಂಬ ಫ್ರೆಂಚ್ ವಿದ್ವಾಂಸ ೧೮೭೭ರಲ್ಲಿ ಧ್ವನಿಮಾ ಎಂಬ ಪದವನ್ನು ಪ್ರಥಮಬಾರಿಗೆ ಬಳಸಿದ. ಮನುಷ್ಯನು ಭಾಷೆಯಲ್ಲಿ ಬಳಸುವ ಪ್ರತಿಯೊಂದು ಧ್ವನಿಯನ್ನು ಅಧ್ಯಯನಿಸುವುದು ಸುಲಭದ ಮಾತಲ್ಲ. ಆದ್ದರಿಂದ ಭಾಷೆಯಲ್ಲಿ ಧ್ವನಿಗಳನ್ನು ಹೇಗೆ ಬಳಸಿಕೊಂಡಿದ್ದಾರೆ ಎಂಬುದನ್ನು ಯಥಾವತ್ತಾಗಿ ಸ್ವೀಕರಿಸಿ, ಅವುಗಳಲ್ಲಿನ ಅನಗತ್ಯ ಧ್ವನಿಗಳನ್ನು ಕೈಬಿಟ್ಟು, ಒಂದು ಭಾಷೆಯಲ್ಲಿ ಮಹತ್ವಪೂರ್ಣ ಎನ್ನಿಸುವ ಧ್ವನಿ ಸಂಕೇತಗಳನ್ನು ಕುರಿತು ಅಧ್ಯಯನ ಮಾಡುವುದೇ ಧ್ವನಿಮಾ ಶಾಸ್ತ್ರ. ಒಂದು ನಿರ್ದಿಷ್ಟ ಭಾಷೆಯಲ್ಲಿನ ಎಲ್ಲಾ ಬಗೆಯ ಧ್ವನಿಗಳನ್ನು ಅಧ್ಯಯನಿಸಿ, ಅವುಗಳಲ್ಲಿ ಅಪರಿಮಿತ ಎನಿಸಿದರೇ ಕೈಬಿಟ್ಟು ಅವುಗಳನ್ನು ಸಾಧ್ಯವಾದಲ್ಲಿ ಬರೆಹ ರೂಪಕ್ಕಿಳಿಸಿ ಪರಿಮಿತವಾಗಿಸುವ ಕೆಲಸವನ್ನು ಈ ಧ್ವನಿಮಾ ಮಾಡುತ್ತದೆ.

'ಸಿ.ಎಫ್.ಹಾಕೆಟ್ ಅವರು ಭಾಷೆಯ ಉಚ್ಚಾರಣೆ ವ್ಯವಸ್ಥೆಯ ಅತಿ ಚಿಕ್ಕ ಘಟಕವೇ ಧ್ವನಿಮಾ (A Phoneme is a minimum unit of expreission system of language) ಎನ್ನುತ್ತಾರೆ.

ಲಿಯೋನಾರ್ಡೂಬ್ಲೂಮ್ ಫೀಲ್ಡ್ ಅವರ ಪ್ರಕಾರ ಭೇದ ಸೂಚಕ ಧ್ವನ್ಯಂಶದ ಅತಿ ಸಣ್ಣ ಘಟಕವೇ ಧ್ವನಿಮಾ (A Phone is a minimum unit of clistinective suond-feature) ಎನ್ನುತ್ತಾರೆ.

ಎಚ್.ಎ.ಗ್ಲೀಸನ್ : ಇವರ ವ್ಯಾಖ್ಯೆಯಂತೆ ಧ್ವನಿ ಸಾಮ್ಯತೆಯನ್ನು ಹೊಂದಿದ ಧ್ವನಿಗಳ ಗುಂಪು ಧ್ವನಿಮಾ (A Phone is a class of sounds which are phonetically similar and show certain characteristic patterns of distribution in the language or dialect under condideration) ಎಂದಿದ್ದಾರೆ.'[೧]

---

೧. ಡಾ. ಕೆ. ಕೆಂಪೇಗೌಡ :ಸಾಮಾನ್ಯ ಭಾಷಾ ವಿಜ್ಞಾನ : ಪ್ರ.ವ. ೧೯೯೬ :ಪು.ಸಂ. ೬೨೮

ಒಂದು ಧ್ವನಿ ಯಾವ-ಯಾವ ರೀತಿಯಲ್ಲಿ ಭಿನ್ನತೆಯನ್ನು ಭಿನ್ನಾರ್ಥವನ್ನು ಕೊಡುತ್ತದೆ. ಅದು ಯಥಾಸ್ಥಿತಿಯಲ್ಲಿದ್ದಾಗ, ಹಾಗೂ ಅಲ್ಪ-ಪ್ರಾಣ, ಮಹಾಪ್ರಾಣ, ಹ್ರಸ್ವ-ದೀರ್ಘ ಒತ್ತಕ್ಷರಗಳ ವ್ಯತ್ಯಾಸವಿದ್ದಾಗ, ಅದನ್ನು ಹೇಗೆ ಉಚ್ಚರಿಸಲಾಗುತ್ತದೆ, ಬರೆಯಲಾಗುತ್ತದೆ ಎಂಬುದರ ಮೌಲ್ಯಮಾಪನ ಈ ಧ್ವನಿಮಾದಲ್ಲಿ ಆಗುತ್ತದೆ. ಧ್ವನಿಮಾ ಎಂದರೇ ಧ್ವನಿಗಳ ಗುಂಪು. ಒಂದು ಕಾಲಕ್ಕೆ ಒಂದು ವರ್ಗದ ಅಕ್ಷರಗಳನ್ನು ಮಾತ್ರ ಅಥವಾ ಒಂದೇ ಅಕ್ಷರದ ವೈಷಮ್ಯವನ್ನು ಕುರಿತು ಅಧ್ಯಯನ ಮಾಡಲಾಗುತ್ತದೆ.

ಧ್ವನಿಮಾಗಳು ಎಂದರೇ ಅವುಗಳ ಸ್ವತಂತ್ರ ಶಕ್ತಿಯನ್ನು ಉಳ್ಳವು. ಉದಾ: ಕೆರೆ, ಗೆರೆ ಈ ಎರಡು ಪದಗಳಲ್ಲಿ ಕಂಠ್ಯ ಧ್ವನಿಗಳಾದ ಕ್, ಗ್‌ಗಳಿವೆ. ಈ 'ಕ್' ಎಂಬ ಧ್ವನಿಯನ್ನು 'ಗ್' ಇರುವ ಕಡೆ ಹಾಗೂ 'ಗ್' ಎಂಬ ಧ್ವನಿಯನ್ನು 'ಕ್' ಇರುವ ಕಡೆ ಬದಲಿಸಿದರೂ ಅವು ಮತ್ತೆ ಸ್ವತಂತ್ರಪದಗಳಾಗಿಯೇ ನಿಲ್ಲುತ್ತವೆ. ಇಲ್ಲಿರುವ 'ಕ್', 'ಗ್'ಗಳು ಒಂದು ಪದ ನಿರ್ಮಾಣವಾಗಲು ಕಾರಣವಾಗುತ್ತವೆ. ಆದ್ದರಿಂದ ಇವುಗಳನ್ನು ಧ್ವನಿಮಾಗಳು ಎಂದು ಕರೆಯಲಾಗುತ್ತದೆ. ಧ್ವನಿಮಾವು ಧ್ವನಿಯಂತೆಯೇ ಆಡುಮಾತಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಆದರೇ ಧ್ವನಿ ಹೆಚ್ಚು ವ್ಯಾಪಕವಾದದ್ದು. ಧ್ವನಿಮಾ ಒಂದು ನಿರ್ದಿಷ್ಟ ಭಾಷೆಯನ್ನು ಪ್ರತಿನಿಧಿಸುತ್ತಿರುತ್ತದೆ. ಉದಾ: 'ಪ್' ಕನ್ನಡದ ಧ್ವನಿಮಾ, 'ಝ್'ಇಂಗ್ಲಿಷ್ ಧ್ವನಿಮಾ, 'ಪ್', 'ಜ್'. ಧ್ವನಿಮಾಗಳು ಎಂದು ಒಟ್ಟಿಗೆ ಸೇರಿಸಿ ಹೇಳುವಂತಿಲ್ಲ. ಒಂದು ಧ್ವನಿಯು ಇಂತಹ ಭಾಷೆಯಲ್ಲಿ ನಿರ್ದಿಷ್ಟವಾಗಿ ಬಳಕೆಯಾಗುತ್ತಿದೆ ಎಂದಾದರೇ ಅದು ಆ ಭಾಷೆಯ ನಿರ್ಬಂಧಿತ ನಿಯಮಗಳಿಗೆ ಅನುಗುಣವಾಗಿ ಬಳಕೆಯಾಗುವ ಧ್ವನಿಮಾ ಎಂದೇ ಅರ್ಥ.

ಧ್ವನಿಮಾಗಳು ಧ್ವನಿಗಿಂತ ಹೇಗೆ ಭಿನ್ನ ಎಂಬುದನ್ನು ತಿಳಿಯಲು ಈ ಪ್ರಯೋಗವನ್ನು ಮಾಡಬಹುದು. ಕನ್ನಡದಲ್ಲಿ ಪೇಟೆ-ಬೇಟೆ ಎಂಬ ಎರಡು ಪದಗಳಿವೆ. ಇವುಗಳನ್ನು ಪ್+ಏ+ಟ್+ಎ ಎಂದು, ಬ್+ಏ+ಟ್+ಎ ಎಂದು ವಿಂಗಡಿಸಬಹುದು. ಇಲ್ಲಿ ಪ್, ಬ್ ಗಳನ್ನು ಬಿಟ್ಟರೇ ಉಳಿದ ಏ+ಟ್+ಎಗಳು ಎರಡು ಪದದಲ್ಲಿಯೂ ಒಂದೇ ರೀತಿಯಾಗಿವೆ. ಇಲ್ಲಿ ಅರ್ಥ ಭಿನ್ನತೆ ತರುವ ಮಹತ್ವದ ಅಕ್ಷರಗಳೆಂದರೆ ಪ್ ಮತ್ತು ಬ್‌ಗಳು ಇವುಗಳನ್ನು ಧ್ವನಿಮಾಗಳೆಂದು ಏ, ಟ್, ಎ ಗಳನ್ನು ಧ್ವನಿಗಳೆಂದು ಕರೆಯಬಹುದು. ಧ್ವನಿಮಾ ಸದಾ ಒಂದು ವರ್ಗದ ಧ್ವನಿಗಳ ಸಮೂಹವೇ ಆಗಿರಬೇಕೆಂದಿಲ್ಲ. ಅದು ಒಂದೇ ಧ್ವನಿಯು ಬೇರೆ-ಬೇರೆ ಸಂದರ್ಭದಲ್ಲಿ ಬಳಕೆಯಾಗಿ ಹೇಗೆ ಧ್ವನಿಮಾದ ನೆಲೆಯಲ್ಲಿ ನಿಲ್ಲುತ್ತದೆ ಎಂಬುದನ್ನು ತಿಳಿಸುತ್ತದೆ. ಉದಾ: ಕಲಹ, ಸಕಾಲ, ತಾಕು ಈ ಮೂರು ಪದಗಳಲ್ಲಿ ಕ್ ಎಂಬ ಧ್ವನಿಯು, ಕ್ರಮವಾಗಿ ಆದಿ, ಮಧ್ಯ, ಅಂತ್ಯದಲ್ಲಿ ಬಂದಿದೆ. ಉಚ್ಚಾರಣೆಯ ದೃಷ್ಟಿಯಿಂದ ಪ್ರತಿಯೊಂದು ಭಿನ್ನವಾಗಿವೆ. ಹಾಗೂ ಬೇರೆ ಧ್ವನಿಮಾಗಳನ್ನು ಅನುಸರಿಸಿ ಭಿನ್ನರೀತಿಯಲ್ಲಿ ಉಚ್ಚಾರವಾಗುತ್ತವೆ. ಆದರೂ ಕ್ ಧ್ವನಿಯ ಮೂಲದವೇ ಆಗಿವೆ. ಇಂತಹವುಗಳನ್ನು ಉಪಧ್ವನಿಮಾಗಳು ಎನ್ನಬಹುದು.

ಯಾವುದೇ ಭಾಷೆಯಲ್ಲಿ ಇರುವ ಧ್ವನಿಮಾಗಳನ್ನು ನಿರ್ಣಯಿಸುವುದು ಹೇಗೆಂದು

ಸ್ಪಷ್ಟಪಡಿಸಬಹುದು. ತಡ, ದಡ ಇವು ಕನ್ನಡ ಭಾಷೆಯ ಪದಗಳು ಇವುಗಳಲ್ಲಿ ತ್+ಅ+ಡ್+ಅ, ದ್+ಅ+ಡ್+ಅ ಎಂಬ ಧ್ವನಿಗಳಿವೆ. ಈ ಧ್ವನಿಗಳಲ್ಲಿ ವೈದೃಶ್ಯವನ್ನು ತರಲು ಇರುವ ಧ್ವನಿಗಳೆಂದರೇ, ಒಂದು ವರ್ಗದವಾದ ತ್, ದ್‌ಗಳು ಇವುಗಳನ್ನು ಧ್ವನಿಮಾ ಎಂತಲೂ, ಇಲ್ಲಿ ಕನಿಷ್ಠ ಎರಡೇ ಧ್ವನಿಗಳು ಭಿನ್ನವಾಗಿರುವ ಶಬ್ದಗಳ ಜೋಡಿಯನ್ನು ಕನಿಷ್ಠತಮ ಯುಗ್ಮಗಳೆಂದು ಕರೆಯುತ್ತೇವೆ. ಈ ಕನಿಷ್ಠತಮ ಯುಗ್ಮಗಳು ಆದಿಯಲ್ಲಿ, ಮಧ್ಯದಲ್ಲಿ, ಅಂತ್ಯದಲ್ಲಿ ಬರಬಹುದು. ಉದಾ: ಕುಡಿ, ಗುಡಿ ಎಂಬ ಪದದಲ್ಲಿ ಕ್+ಉ+ಡ್+ಇ, ಗ್+ಉ+ಡ್+ ಇ ಎಂಬ ಧ್ವನಿಗಳಿದ್ದು, ಇಲ್ಲಿ ಕ್, ಗ್ ಎಂಬ ಕನಿಷ್ಠತಮಯುಗ್ಮಗಳು ಆದಿಯಲ್ಲಿವೆ. ಅಂತೆಯೇ ಕಲೆ, ಕಳೆ ಎಂಬ ಪದದಲ್ಲಿ ಕ್+ಅ+ಲ್+ಎ, ಕ+ಅ+ಳ್+ಎ ಎಂಬ ಧ್ವನಿಗಳಿದ್ದು ಇಲ್ಲಿ ಲ್, ಳ್ ಎಂಬ ಕನಿಷ್ಠತಮ ಯುಗ್ಮಗಳು ಅಂತ್ಯದಲ್ಲಿವೆ. ಅಲ್ಲದೆ ನಯನ, ನಮನ ಎಂಬ ಪದದಲ್ಲಿ ನ್+ಅ+ಯ್+ಅ+ನ್+ಅ, ನ್+ಅ+ಮ್+ಅ+ನ್+ಅ ಎಂಬ ಧ್ವನಿಗಳಿದ್ದು ಇಲ್ಲಿ ಯ್, ಮ್ ಎಂಬ ಕನಿಷ್ಟತಮ ಯುಗ್ಮಗಳು ನಡುವಿನಲ್ಲಿ ಇವೆ. ಧ್ವನಿಮಾವನ್ನು ನಿರ್ಧರಿಸಬೇಕಾದರೆ ಅದಕ್ಕೆ ಸಮೀಪದ ಕನಿಷ್ಠತಮ ಯುಗ್ಮಗಳನ್ನು ಆಯ್ದುಕೊಳ್ಳುವುದು ಹೆಚ್ಚು ಸೂಕ್ತ. ಇಂತಹ ಕನಿಷ್ಟತಮ ಯುಗ್ಮಗಳನ್ನು ಕನಿಷ್ಠತಮ ಯುಗ್ಮ ವ್ಯಂಜನ ಧ್ವನಿಮಾಗಳು, ಕನಿಷ್ಠತಮ ಯುಗ್ಮ ಸ್ವರ ಧ್ವನಿಮಾಗಳು ಎಂದು ವಿಭಾಗಿಸಿಕೊಳ್ಳಬಹುದು.

ಕನಿಷ್ಠತಮ ಯುಗ್ಮ ವ್ಯಂಜನ ಧ್ವನಿಮಾಗಳು:

ಪ್ ಮತ್ತು ಬ್ : ಪೇಟೆ-ಬೇಟೆ : ತಪ್ಪು, ತಬ್ಬು

ತ್ ಮತ್ತು ದ್ : ತಂಡ, ದಂಡ : ತಡಿ, ದಡಿ

ಟ್ ಮತ್ತು ಡ್ : ಟೊಂಕ, ಡೊಂಕ : ದಟ್ಟ, ದಡ್ಡ

ಕ್ ಮತ್ತು ಗ್ : ಕೆಲವು, ಗೆಲುವು : ಅಕ್ಕ, ಅಗ್ಗ

ಕನಿಷ್ಠತಮ ಯುಗ್ಮ ಸ್ವರ ಧ್ವನಿಮಾಗಳು :

ಅ ಮತ್ತು ಆ : ಅಳು, ಆಳು : ಅರಿ, ಆರಿ

ಇ ಮತ್ತು ಈ : ಇಡು, ಈಡು : ಇಸು, ಈಸು

ಉ ಮತ್ತು ಊ : ಉರಿ, ಊರಿ : ಉರು, ಊರು

ಎ ಮತ್ತು ಏ : ಎರಿ, ಏರಿ : ಕೆಡು, ಕೇಡು ಮುಂತಾದವು.

ಕೆಲವೊಮ್ಮೆ ಧ್ವನಿಮಾಗಳನ್ನು ನಿರ್ಧರಿಸುವಾಗ ಕನಿಷ್ಠತಮ ಯುಗ್ಮಗಳು ದೊರಕದೆ ಹೋಗಬಹುದು. ಆಗ ಎರಡು ಅಥವಾ ನಾಲ್ಕು ಧ್ವನಿಗಳು ವ್ಯತ್ಯಾಸವಿರುವ ಧ್ವನಿಗಳನ್ನು ಉಪಯೋಗಿಸಿಕೊಳ್ಳಬಹುದು.

ಉದಾ:ಕನ್ನಡದ ಗುಟುಕು, ಗುಡುಗು, ಗಿಟುಕು, ಗ್+ಉ+ಟ್+ಉ+ಕ್+ಉ, ಗ್+ಉ+ಡ್+ಉ+ಗ್+ಉ, ಗ್+ಇ+ಟ್+ಉ+ಕ್+ಉ, ಈ ಪದಗಳಲ್ಲಿನ ಟ್, ಡ್‌ಗಳು ಧ್ವನಿಮಾಗಳಾಗಿವೆ. ಇಂತಹ ಧ್ವನಿಮಾಗಳನ್ನು ಸಂದಿಗ್ಧ ಯುಗ್ಮಗಳೆಂದು ಕರೆಯಬಹುದು. ಅಲ್ಲದೆ ಕೆಲವೊಮ್ಮೆ ಧ್ವನಿಗಳು ಭೇದದಿಂದ ಕೂಡಿದ್ದರು ಅವು ಧ್ವನಿಮಾಗಳಾಗಿ ನಿಲ್ಲಲು ಸಾಧ್ಯವಿಲ್ಲ. ಉದಾ: ಕನ್ನಡದ ಲೋಟು-ನೋಟು, ಬೊಂಬೆ-ಗೊಂಬೆ ಎಂಬ ಶಬ್ದಗಳಲ್ಲಿ ಲ್+ಓ+ಟ್+ಉ, ನ್+ಓ+ಟ್+ಉ, ಎಂಬ ಧ್ವನಿಗಳಿವೆ. ಲ್,ನ್‌ಗಳನ್ನು ಬಿಟ್ಟರೇ ಉಳಿದವು ಸಮಾನ ಧ್ವನಿಗಳಾಗಿವೆ. ಲ್, ನ್ ಎಂಬ ಧ್ವನಿಗಳು ಭಿನ್ನ ಪದದ ಸೃಷ್ಟಿಗೆ ಕಾರಣವಾಗುತ್ತವೆ. ಆದರೇ ಭಿನ್ನ ಅರ್ಥವನ್ನು ಕೊಡುವುದಿಲ್ಲ. ಲ್ ಕಾರವನ್ನು ನ ಕಾರವಿರುವಲ್ಲಿಗೂ ಲ್‌ಕಾರವನ್ನು ನ್ ಕಾರ ಇರುವಲ್ಲಿಗೆ ಹಾಕಿದರೂ ಅದು ಅರ್ಥದಲ್ಲಿ ಯಾವ ವ್ಯತ್ಯಾಸವನ್ನೂ ಹೊಂದುವುದಿಲ್ಲ. ಆದ್ದರಿಂದ ಇವುಗಳನ್ನು ಸ್ವತಂತ್ರ ಧ್ವನಿಮಾಗಳೆಂದು ಕರೆಯಲಾಗುವುದಿಲ್ಲ. ಅಂತೆಯೇ ಬೊಂಬೆಯಲ್ಲಿ ಬ್+ಒ+ಂ+ಬ್+ಎ, ಗೊಂಬೆಯಲ್ಲಿ ಗ್+ಒ+ಂ+ಬ್+ಎ ಎಂಬ ಧ್ವನಿಗಳಿದ್ದು, ಅರ್ಥವ್ಯತ್ಯಾಸವನ್ನು ತಾರದ ಬ್, ಗ್‌ಗಳು ಧ್ವನಿಗಳಾಗಿಯೇ ಉಳಿಯುತ್ತವೆ. ಇಂತಹ ಧ್ವನಿಗಳನ್ನು ಸ್ವಚ್ಛಂದ ಪರಿವರ್ತನೆ ಎಂದು ಕರೆಯಬಹುದು.

ಅಂತಿಮವಾಗಿ ಧ್ವನಿಮಾದ ಲಕ್ಷಣಗಳನ್ನು ಈ ರೀತಿ ತಿಳಿಸಬಹುದು. ಧ್ವನಿಮಾ ಸಂಪೂರ್ಣ ಸ್ವತಂತ್ರವಾದ ಅತಿ ಚಿಕ್ಕ ಘಟಕ ಹಾಗೂ ಒಂದು ಭಾಷೆಯ ನಿರ್ದಿಷ್ಟ ಧ್ವನಿಗಳೇ ಧ್ವನಿಮಾ. ಇವನ್ನು ಕುರಿತು ಅಧ್ಯಯನಿಸುವುದೇ ಧ್ವನಿಮಾ ಶಾಸ್ತ್ರ. ಧ್ವನಿಮಾಗಳಿಗೆ ಅರ್ಥವ್ಯತ್ಯಾಸಗೊಳಿಸುವ ಸಾಮರ್ಥ್ಯವಿರಬೇಕು. ಕೆಲವೊಮ್ಮೆ ಧ್ವನಿಗಳಾಗಿ ನಿಲ್ಲುವವು ಧ್ವನಿಮಾಗಳಾಗಬಹುದು, ಮತ್ತೆ ಕೆಲವೊಮ್ಮೆ ಧ್ವನಿಮಾಗಳು ಧ್ವನಿಗಳಾಗಿಯೇ ಉಳಿಯಬಹುದು. ಉದಾ: ಕೆರೆ-ತೆರೆ ಇಲ್ಲಿ ಕ್ ಮತ್ತು ತ್‌ಗಳು ಧ್ವನಿಮಾಗಳು. ಆದರೇ ದಿನ-ಜಿನ ಎಂಬ ಪದಗಳಲ್ಲಿನ ದ್, ಜ್ ವೈದೃಶ್ಯ ಅಕ್ಷರಗಳಾದರೂ ಬಿನ್ನಾರ್ಥವನ್ನು ಕೊಡುವುದಿಲ್ಲ ಆದ್ದರಿಂದ ಇವು ಧ್ವನಿಗಳಾಗಿಯೇ ನಿಲ್ಲುತ್ತವೆ. ಇದರಿಂದ ಧ್ವನಿಮಾವು ಆಯಾ ಶಬ್ದಗಳ ಅನ್ವಯವಾಗಿ ನಿರ್ಧರಿತವಾಗುತ್ತವೆ. ಧ್ವನಿಮಾವು ಆಡು ಮಾತಿನ ಪ್ರತಿನಿಧಿ ಎಂಬುದನ್ನು ಮರೆಯುವಂತಿಲ್ಲ. ಧ್ವನಿಮಾಗಳ ವೈದೃಶ್ಯವಾಗಿಯೇ ಇರಬೇಕೆಂಬ ನಿಯಮವಿಲ್ಲ ಪೂರಕ ಪ್ರಸಾರಗಳಾಗಿಯೂ ಬರಬಹುದು. ಉದಾ: ಕಡತ, ಡಬ್ಬ, ಬಿಡು ಇಲ್ಲಿ ಡ್ ಧ್ವನಿಯು ಮೂರು ಪದಗಳಲ್ಲಿಯೂ ಭಿನ್ನವಾಗಿ ಬಳಕೆಯಾಗುತ್ತವೆ. ಇಂತಹವನ್ನು ಉಪಧ್ವನಿ ಅಥವಾ ಧ್ವನಿಮಾದ ಪೂರಕ ಪ್ರಸಾರಗಳು ಎಂದು ಕರೆಯಬಹುದು. ಧ್ವನಿ ಸ್ವಾಮ್ಯವಿಲ್ಲದ್ದನ್ನು ಪೂರಕ ಪ್ರಸಾರಗಳೆಂದು ಕರೆಯಲಾಗುವುದಿಲ್ಲ. ಒಂದು ಭಾಷೆಯನ್ನು ಹೆಚ್ಚು ವೈಜ್ಞಾನಿಕವಾಗಿ ಅಧ್ಯಯನಿಸಲು ಧ್ವನಿಮಾದ ಅಧ್ಯಯನ ಬಹಳ ಮಹತ್ವದ್ದಾಗಿದೆ.

ಆಕೃತಿಮಾ (Morpheme):

ಅರ್ಥವತ್ತಾದ ಧ್ವನಿಮಾಗಳ ಸಮೂಹವನ್ನು ಆಕೃತಿ ಎಂದು ಕರೆಯುತ್ತೇವೆ. ಆಕೃತಿಗಳು ಅವಿಭಾಜ್ಯವಾದವು. ಉದಾ: ಮರಗಳು ಎಂಬುದನ್ನು ಮರ+ಗಳು ಎಂದು ವಿಭಾಗಿಸಬಹುದು ಆದರೇ

ಮರವನ್ನು ಮ+ರ ಎಂದು ವಿಭಾಗಿಸಲು ಸಾಧ್ಯವಿಲ್ಲ. ಆದ್ದರಿಂದ ಅತಿ ಕನಿಷ್ಠವಾದ ಧ್ವನಿ ಸಮುದಾಯಗಳು, ಅರ್ಥಬದ್ಧವಾಗಿದ್ದಲ್ಲಿ ಅದನ್ನು ಆಕೃತಿ ಎಂದು ಕರೆಯಬಹುದು. ಆಕೃತಿಗಳ ಮೂಲ ಘಟಕಗಳಿಗೆ ಆಕೃತಿಮಾ ಎನ್ನಲಾಗುತ್ತದೆ. ಮರ ಎಂಬ ಪದದ ಮ್+ಅ+ರ್+ಅ ಧ್ವನಿಗಳಲ್ಲಿನ ಮ್ ರ್ ಗಳು ಆಕೃತಿಮಾಗಳು. ಭಾಷೆಯ ರಚನೆಯಲ್ಲಿರುವ ಅರ್ಥವತ್ತಾದ ಅತಿಸಣ್ಣ ಉಚ್ಚಾರದ ಘಟಕವೇ ಆಕೃತಿಮಾ. ಯಾವ ಭಾಷಾ ವೈಜ್ಞಾನಿಕ ರೂಪವು ಯಾವುದೇ ಬಗೆಯಲ್ಲಿ ಇನ್ನೊಂದು ರೂಪದೊಡನೆ ಭಾಗಶಃ ಕೂಡ ಧ್ವನ್ಯಾತ್ಮಕವಾಗಿಯಾಗಲಿ, ಅರ್ಥಾತ್ಮಕವಾಗಿಯಾಗಲಿ ಹೋಲಿಕೆಯನ್ನು ಹೊಂದಿರುವುದಿಲ್ಲವೋ ಆ ರೂಪವೇ ಆಕೃತಿಮಾ ಎಂದು ಭಾಷಾವಿಜ್ಞಾನಿಗಳಾದ ಬ್ಲೂಮ್‌ಫೀಲ್ಡ್ ಅವರು ಅಭಿಪ್ರಾಯಪಟ್ಟಿದ್ದಾರೆ. ಇದು ಬಹುಜನ ಭಾಷಾ ವಿಜ್ಞಾನಿಗಳ ಒಪ್ಪಿಗೆಯನ್ನು ಪಡೆದಿದೆ.

ಆಕೃತಿಮಾಗಳು ರೂಪಗಳಿಗೆ ಅನ್ವಯವಾಗಿ, ಅರ್ಥಗಳಿಗೆ ಅನ್ವಯವಾಗಿ ನಿರ್ಧರಿತವಾಗುತ್ತವೆ. ಉದಾ: 'ಕರಿ' ಎಂಬ ಆಕೃತಿಮಾ ಕಪ್ಪು ಎಂಬ ವಿಶೇಷಣವಾಗಿ, ಕೂಗು ಎ ಂಬ ಕ್ರಿಯಾಪದವಾಗಿ, ಆನೆ ಎಂಬ ಪ್ರಾಣಿ ಸೂಚನ ನಾಮಪದಗಳಾಗಿ ನಿಲ್ಲುತ್ತದೆ. ಹಾಗೆಯೇ 'ಹಂಚು' ಎಂಬುದು ಕ್ರಿಯಾಪದ ಮತ್ತು ಮಾಡು ಎಂಬ ಅರ್ಥಗಳನ್ನು ಹೊಂದಿದೆ. ಅಂದರೆ ಇಲ್ಲಿ ಕರಿ ಎಂಬುದು ಮೂರು ಆಕೃತಿಮಾವನ್ನು, ಹಂಚು ಎಂಬುದು ಎರಡು ಆಕೃತಿಮಾವನ್ನು ಹೊಂದಿದೆ. ಧ್ವನಿ-ಧ್ವನಿಮಾಗಳಿಗೆ ಹೇಗೆ ಸಂಬಂಧವಿದೆಯೋ ಹಾಗೆ ಆಕೃತಿ-ಆಕೃತಿಮಾಗಳು ಸಂಬಂಧವನ್ನು ಹೊಂದಿವೆ. ಉದಾ: ಕಲಹ, ಸಕಲ, ತಾಕು ಇಲ್ಲಿನ ಕ್ ಗಳು ಕ್ ಎಂಬುದರ ಉಪ ಧ್ವನಿಮಾಗಳಾಗಿವೆ. ಅಂತೆಯೇ ಹುಳುಗಳು, ತಂದೆಯವರು, ತಂಗಿಯಂದಿರು, ಹುಡುಗರು, ಮಕ್ಕಳು, ಬಂದವು ಎಂಬ ಬಹುವಚನ ಪದಗಳಲ್ಲಿ ಗಳು, ಅವರು, ಅಂದಿರು, ಅರು/ರು, ಕಳು, ದವು, ಮುಂತಾದವು ಒಂದು ಆಕೃತಿಮಾದ ಆಕೃತಿ ಪ್ರಭೇದಗಳಾಗಿವೆ. ಅಂದರೇ ಈ ಕನ್ನಡದ ಬಹುವಚನ ಪ್ರತ್ಯಯ ರೂಪಗಳು ಬೇರೆ-ಬೇರೆಯಾಗಿದ್ದರೂ ಅರ್ಥ ಮಾತ್ರ ಒಂದೇ ಆಗಿದೆ. ಇವುಗಳನ್ನು ಆಕೃತಿ-ಆಕೃತಿಮಾದ ಪ್ರಭೇದಗಳು, ಅಥವಾ ಉಪ ಆಕೃತಿಮಾಗಳು ಎಂದು ಕರೆಯಬಹುದು.

ಆದರೇ ಸಂಪೂರ್ಣ ಅರ್ಥ ವ್ಯತ್ಯಾಸವಿಲ್ಲದಿದ್ದರೇ ಅವುಗಳು ಬೇರೆ-ಬೇರೆ ಆಕೃತಿಮಾಗಳಾಗದೇ ಒಂದೇ ಆಕೃತಿಮಾಗಳಾಗುತ್ತವೆ. ಉದಾ: ಓದು (ನಾಮಪದ), ಓದು (ಕ್ರಿಯಾಪದ), ಬೆಳೆ (ನಾಮಪದ), ಬೆಳೆ(ಕ್ರಿಯಾಪದ), ಇವುಗಳಲ್ಲಿ ಅರ್ಥಸ್ವಾಮ್ಯವಿರುವುದರಿಂದ ಇವು ಬೇರೆ-ಬೇರೆ ಆಕೃತಿಮಾಗಳಾಗದೇ ಒಂದೇ ಆಕೃತಿಮಾ ಎಂದು ಕರೆಯಿಸಿಕೊಳ್ಳುತ್ತವೆ. ಹಾಗೆಯೇ 'ಆಡು' ಎಂಬ ಪದ ತಾನು ಇದ್ದ ಸ್ವರೂಪದಲ್ಲೇ ನಾನಾರ್ಥಗಳಿಗೆ ಕಾರಣವಾಗುತ್ತದೆ. ಗ್ರಂಥ, ಪುಸ್ತಕ, ಹೊತ್ತಿಗೆ ಎಂಬ ಇವು ಭಿನ್ನಪದಗಳು ಆದರೇ ಒಂದೇ ಅರ್ಥವನ್ನು ಕೊಡುತ್ತವೆ. ಇವುಗಳನ್ನು ಬಹು ಆಕೃತಿಮಾಗಳು ಎಂದು ಕರೆಯಲಾಗುತ್ತದೆ.

ಆಕೃತಿಮಾಗಳನ್ನು ಕುರಿತು ಅಧ್ಯಯನ ಮಾಡುವುದೇ ಆಕೃತಿಮಾ ವಿಜ್ಞಾನ. ಸ್ವತಂತ್ರ ಅರ್ಥ ಸಹಿತವಾದ ಪದಗಳನ್ನು ಆಕೃತಿಮಾಗಳು ಎಂದು ಕರೆಯಲಾಗುತ್ತದೆ. ಆಕೃತಿಮಾಗಳು ಪದ, ಶಬ್ದ, ಅರ್ಥ,

ಧ್ವನಿ, ಧ್ವನಿಮಾಗಳಿಂದ ಕೂಡಿರಬಹುದು. ಎರಡು ಆಕೃತಿಮಾಗಳು ಸೇರಿ ಒಂದು ಶಬ್ದವಾದಾಗ ಧ್ವನಿ ಅವೆರಡರ ಮಧ್ಯೆ ಬಂದು ಸೇರಬಹುದು. ಇದ್ದ ಧ್ವನಿಗಳಲ್ಲಿ ಕೆಲವು ಲೋಪವಾಗಬಹುದು. ಇದನ್ನು ವ್ಯಾಕರಣದಲ್ಲಿ ಸಂಧಿ, ಸಮಾಸ ಎಂದು ಕರೆಯುತ್ತೇವೆ. ಒಂದು ಆಕೃತಿಮಾವು, ಅದು ಕ್ರಿಯಾಪದವೋ, ನಾಮಪದವೋ, ವಿಶೇಷಣವೋ ಎಂಬುದನ್ನು ಆಕೃತಿಮಾ ಶಾಸ್ತ್ರದಲ್ಲಿ ಅಧ್ಯಯನ ಮಾಡುತ್ತೇವೆ. ಹೀಗೆ ಆಕೃತಿಮಾ ಭಾಷಾ ಅಧ್ಯಯನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಆಕೃತಿಮಾ ಪದ ಮತ್ತು ಶಬ್ದ : ಆಕೃತಿಮಾ ಅರ್ಥವುಳ್ಳ ಚಿಕ್ಕ ಘಟಕವಾದರೇ, ಪದ ಅರ್ಥವುಳ್ಳ ಸ್ವತಂತ್ರ ಘಟಕ, ಶಬ್ದವು ಪದಗಳಿಗೆ ಪೂರಕವಾಗಿ ನಿಲ್ಲುವ ಆಕೃತಿಮಾವಾಗಿದೆ. ಕರೆದನು, ಬರೆದನು, ನಡೆದನು, ಕೇಳಿದನು, ಹೇಳಿದನು, ಮಾಡಿದನು, ನೋಡಿದನು ಎಂಬ ಪದಗಳು ಕನ್ನಡದ ಅರ್ಥಬದ್ಧ ಪದಗಳು. ಇವುಗಳನ್ನು ವಿಭಾಗಿಸಲು ಸಾಧ್ಯವಿದೆ. ಕರೆ+ದ್+ಅನು, ಬರೆ+ದ್+ಅನು, ನಡೆ+ದ್+ಅನು, ಕೇಳು+ದ್+ಅನು, ಮಾಡಿ+ದ್+ಅನು, ನೋಡಿ+ದ್+ಅನು, ಅಂದರೇ ಇವು ವಿಭಾಜ್ಯ ಆಕೃತಿಗಳು ಇಲ್ಲಿನ ಕರೆ, ಬರೆ, ನಡೆ, ಕೇಳು, ಮಾಡು, ನೋಡು. ಇವುಗಳನ್ನು ಮತ್ತೆ ವಿಭಜಿಸಿದರೇ ಅರ್ಥವಿರುವುದಿಲ್ಲ. ಇವುಗಳು ಅವಿಭಾಜ್ಯವಾದವು ಆದ್ದರಿಂದ ಇವುಗಳನ್ನು ಆಕೃತಿಮಾಗಳು ಎಂದು ಕರೆಯಬಹುದು. ಆಕೃತಿಮಾ ಎಂದು ಕರೆದಾಕ್ಷಣ ಇವುಗಳನ್ನು ಪೂರ್ಣಪದಗಳು ಎಂದು ಕರೆಯಲಾಗುವುದಿಲ್ಲ. ಏಕೆಂದರೇ ಈ ಮೇಲಿನ ಕರೆದನು, ಬರೆದನು ಮುಂತಾದವುಗಳಲ್ಲಿ ದ್+ಅನು ಎಂಬ ಬದ್ಧ ಆಕೃತಿಮಾಗಳಿವೆ. ಇವುಗಳನ್ನು ಉಳಿದ ಕರೆ-ಬರೆಗಳು ಶಬ್ದವಾಗುತ್ತವೆಯೇ ಹೊರತು ಪದಗಳಾಗಲಾರವು. ಆಕೃತಿಮಾವು ಹೀಗೆ ಒಮ್ಮೆ ಪದವಾಗಿ, ಮತ್ತೊಮ್ಮೆ ಶಬ್ದವಾಗಿ ನಿಲ್ಲುತ್ತದೆ. ಇಲ್ಲಿ ಶಬ್ದ ಎಂಬುದು ವಿಭಾಜಕ ಸ್ಥಿತಿಯಲ್ಲಿ ನಿಲ್ಲುತ್ತದೆ. ಪದವು ಪರಿಪೂರ್ಣವಾಗಿ ಅವಿಭಾಜ್ಯವಾಗಿ ನಿಲ್ಲುತ್ತದೆ. ಎಲ್ಲಾ ಪದಗಳಿಗೂ ಶಬ್ದವಾಗುವ ಸಾಮರ್ಥ್ಯವಿರುತ್ತದೆ. ಆದರೇ ಎಲ್ಲಾ ಶಬ್ದಗಳು ಪದಗಳಾಗಲಾರವು. ಆದರೇ ಆಕೃತಿಮಾಗಳು ಶಬ್ದ ಇಲ್ಲವೇ ಪದ ಆಗಬಹುದು.

ಸ್ವತಂತ್ರ ಹಾಗೂ ಬದ್ಧ ಆಕೃತಿಮಾಗಳು : ಆಕೃತಿಮಾಗಳ ಬಳಕೆಯ ಸ್ವರೂಪವನ್ನು ಆಧರಿಸಿ ಅವುಗಳನ್ನು ಸ್ವತಂತ್ರ ಹಾಗೂ ಬದ್ಧ ಆಕೃತಿಮಾಗಳು ಎಂದು ವಿಂಗಡಿಸಿಕೊಳ್ಳಬಹುದು. ಆಕೃತಿಮಾ ಎಂದರೇ ಅವಿಭಾಜಕಗಳು, ಸ್ವತಂತ್ರ ಅರ್ಥಉಳ್ಳವು ಎಂಬುದು ತಿಳಿದ ವಿಷಯ. ಸ್ವತಂತ್ರ ಪದಗಳು ವಿಭಾಜಕಗಳಾಗಿ, ಸಂಪೂರ್ಣ ಅರ್ಥವನ್ನು ಹೊಂದಿದ್ದು, ಭಾಷೆಯಲ್ಲಿ ಬಳಕೆಯಾಗುವಂತಿದ್ದರೆ, ಅದನ್ನು ಸ್ವತಂತ್ರ ಆಕೃತಿಮಾ ಎಂದು ಕರೆಯಬಹುದು. ಉದಾ: ಮನೆ, ಮರ, ತಂದೆ, ತಾಯಿ, ನೀರು, ಗಾಳಿ, ಬೆಳಕು, ಹೂ, ಗಿಡ, ಬಳ್ಳಿ ಮುಂತಾದವು ಅರ್ಥಬದ್ಧ ಸ್ವತಂತ್ರ ಆಕೃತಿಮಾಗಳು. ಅಂತೆಯೇ ಶಬ್ದಗಳೊಡನೆ ಸೇರಿ ಪದಗಳಾಗುವ ವಿಭಕ್ತಿ ಪ್ರತ್ಯಯ, ಕಾಲಸೂಚಕ ಪ್ರತ್ಯಯ, ಬಹುವಚನ ಪ್ರತ್ಯಯಗಳು ಬದ್ಧ ಆಕೃತಿಮಾಗಳೆನಿಸುತ್ತವೆ. ಉದಾ: ನಿಲ್ಲುತ್ತಾನೆ, ಕೋರುತ್ತಾನೆ, ಹೋಗುತ್ತಾನೆ, ಮನೆಗಳು, ಅಕ್ಕಂದಿರು, ಬಂದರು, ಇವುಗಳಲ್ಲಿರುವ ಉತ್ ಎಂಬ ಕಾಲಸೂಚಕ ಪ್ರತ್ಯಯಗಳು ಅಂದಿರು, ಅರು, ವಿಂಬ ಬಹುವಚನ ಪ್ರತ್ಯಯಗಳು ಯಾವುದಾದರೂ

ಶಬ್ದ ಅಥವಾ ಸ್ವಾತಂತ್ರ ಆಕೃತಿಮಾದೊಡನೆ ಸೇರಿದ ಅನಂತರವೇ ಅವು ಪರಿಪೂರ್ಣ ಅರ್ಥವನ್ನು ಪಡೆಯುತ್ತವೆ. ಇವುಗಳನ್ನು ಬದ್ಧ ಆಕೃತಿಮಾಗಳು ಎಂದು ಕರೆಯಬಹುದು.

ಶೂನ್ಯ ಆಕೃತಿಮಾ : ಕೆಲವೊಮ್ಮೆ ಶಬ್ದಗಳಲ್ಲಿ ಇರಬೇಕಾದ ಬದ್ಧ ಆಕೃತಿಮಾಗಳು ಬಾರದೆ ತಮ್ಮ ಕಾರ್ಯವನ್ನು ನಿರ್ವಹಿಸಿಬಿಡುತ್ತವೆ. ಇದನ್ನು ಶೂನ್ಯ (Ø)ಆಕೃತಿಮಾ ಎಂದು ಕರೆಯಲಾಗುತ್ತದೆ. ಶೂನ್ಯ ಆಕೃತಿಮಾವನ್ನು ಸ್ಥಾಪಿಸುವಾಗ ರೂಪಗಳು ಹೋಲಿಕೆಯನ್ನು ಹಾಗೂ ಅರ್ಥವನ್ನು ಎಚ್ಚರಿಕೆಯಿಂದ ನಿರೀಕ್ಷಿಸಬೇಕಾಗುತ್ತದೆ. ಉದಾ: ಕುರಿ ಬಂದವು ಇಲ್ಲಿ ಗಳು ಎಂಬ ಬಹುವಚನ ಪ್ರತ್ಯಯ ಇಲ್ಲದಿದ್ದರೂ ಅದನ್ನು ಅಧ್ಯಾಹಾರ ಮಾಡಿಕೊಳ್ಳುತ್ತವೆ. ಅದು ಇರುವ ಸ್ಥಿತಿಯಲ್ಲಿಯೇ ಬಹುವಚನವಾಗಿದೆ. ಕುರಿಗಳು, ಆನೆಗಳು, ನಾಯಿಗಳು, ಕುದುರೆಗಳು ಮುಂತಾದ ಕಡೆ 'ಗಳು' ಎಂಬ ಪ್ರತ್ಯೇಯ ಲೋಪವಾಗಿ 'ಬಂದವು' ಎಂಬುದೇ ಅದನ್ನು ನಿರ್ವಹಿಸುತ್ತದೆ. ಬಹುವಚನ ಇರಬೇಕಾದಲ್ಲಿ ಇಲ್ಲದನ್ನು ಸೂಕ್ಷ್ಮವಾಗಿ ಗಮನಿಸಿದ ಭಾಷಾ ವಿಜ್ಞಾನಿಗಳು ಇದನ್ನು ಶೂನ್ಯ ಆಕೃತಿಮಾ ಎಂದು ಕರೆಯುತ್ತಾರೆ. ಇದು ಯಾವ ಬದ್ಧ ಆಕೃತಿಮಾಗಳ ವಿಷಯಕ್ಕೂ ಅನ್ವಯಿಸುತ್ತದೆ.

ರಿಕ್ತ ಆಕೃತಿಮಾ : ರಿಕ್ತ ಎಂಬ ಪದಕ್ಕೆ ಬಿಡುವಾದ, ತೆರವಾದ, ಬರಿದಾದ, ವ್ಯರ್ಥವಾದ ಎಂಬ ಅರ್ಥಗಳಿವೆ. ಈ ಪದದಂತೆ ಯಾವ ಅರ್ಥವನ್ನು ಹೊಂದಿರದೆ ಇದ್ದರೂ ಮೂಲದಲ್ಲಿ ಯಾವ ಆಕೃತಿ ಆಗದಿದ್ದರೂ ಕೆಲವು ಧ್ವನಿಗಳು ಬಂದು ಪದದೊಡನೆ ಸೇರುತ್ತವೆ. ಹೀಗೆ ವಿಶಿಷ್ಟವಾಗಿ ಪದದೊಡನೆ ಬಂದು ಸೇರುವ ಧ್ವನಿಗಳನ್ನು ರಿಕ್ತಆಕೃತಿಮಾ ಎಂದು ಕರೆಯಲಾಗುತ್ತದೆ. ಉದಾ: ಮನೆಯಲ್ಲಿ ಮನೆಯಿಂದ, ಕೆಲಸವಿಲ್ಲ, ಮರದಲ್ಲಿ ಈ ಪದಗಳನ್ನು ಬಿಡಿಸಿದಾಗ-ಮನೆ+ಅಲ್ಲಿ, ಮನೆ+ಇಂದ, ಕೆಲಸ+ಇಲ್ಲ, ಮರ+ಅಲ್ಲಿ, ಎಂದಾಗುತ್ತವೆ. ಇವುಗಳಲ್ಲಿ ಸಂಧಿಕಾರ್ಯವಾದಾಗ ಯ್, ವ್, ದ್ ಎಂಬ ವಿಶಿಷ್ಟ ಧ್ವನಿಗಳು ಬಂದು ಸೇರುತ್ತವೆ. ಮೂಲತಃ ಇವುಗಳಿಗೆ ಯಾವ ಅರ್ಥವಿಲ್ಲ, ಅರ್ಥಬದಲಾವಣೆಯೂ ಆಗುವುದಿಲ್ಲ. ಕೇವಲ ಪದಗಳನ್ನು ಸಂಧಿಯಾಗಿಸುವ ಉದ್ದೇಶದಿಂದ ಮಾತ್ರ ಬರುತ್ತವೆ. ಆದ್ದರಿಂದ ಇವುಗಳನ್ನು ಹೆಸರಿಗೆ ತಕ್ಕಂತೆ ರಿಕ್ತ ಆಕೃತಿಮಾ ಎಂದು ಹೇಳಲಾಗುತ್ತದೆ.

ಅನೇಕಾರ್ಥ ಆಕೃತಿಮಾ : ಇದನ್ನು ಬದ್ಧ ಆಕೃತಿಮಾದ ಭಾಗ ಎಂದು ಹೇಳಬಹುದು. ಒಂದು ಪದ ಒಂದೇ ಕಾಲಕ್ಕೆ ಒಂದೇ ಪರಿಸರದಲ್ಲಿ ಒಂದಕ್ಕಿಂತ ಹೆಚ್ಚು ಅರ್ಥಗಳನ್ನು ಹೊಂದಿ ಬಳಕೆಯಾದರೇ ಅದನ್ನು ಅನೇಕಾರ್ಥ ಆಕೃತಿಮಾ ಎನ್ನಲಾಗುತ್ತದೆ. ಉದಾ: ಬೇಡುತ್ತಾನೆ ಇಲ್ಲಿ 'ಬೇಡು' ಒಂದು ಕ್ರಿಯಾಪದದ ಮೂಲರೂಪ. ಬೇಡು+ಉತ್+ಆನೆ ಇಲ್ಲಿನ 'ಆನೆ' ಎಂಬುದು ಪುಲ್ಲಿಂಗವಾಚಿಯಾಗಿದೆ, ಏಕವಚನ ಹಾಗೂ 'ಉತ್' ಎಂಬುದು ವರ್ತಮಾನ ಕಾಲಸೂಚಕ ಬದ್ಧ ಆಕೃತಿಮಾವಾಗಿವೆ. ಆದರೇ, ಇಂದು ಇದು ಭವಿಷ್ಯತ್ಕಾಲವಾಚಿಯಾಗಿಯೂ ನಿಲ್ಲುತ್ತದೆ. ಇಂತಹದ್ದನ್ನು ಅನೇಕಾರ್ಥ ಆಕೃತಿಮಾ ಎನ್ನಲಾಗುತ್ತದೆ.

ವ್ಯವಕಲನ ಆಕೃತಿಮಾ : ಒಂದು ಪದದಲ್ಲಿ ಯಾವುದೋ ಒಂದು ಅಕ್ಷರವನ್ನು ವ್ಯವಕಲನ ಮಾಡಿಯೂ ಅದು ಮೂಲ ಅರ್ಥವನ್ನು ಕಳೆದುಕೊಳ್ಳದೆ ಯಥಾಸ್ಥಿತಿಯಲ್ಲಿಯೇ ಇದ್ದರೇ ಅದನ್ನು ವ್ಯವಕಲನ ಆಕೃತಿಮಾ ಎಂದು ಕರೆಯಲಾಗುತ್ತದೆ. ಉದಾ: ಒಳ್ಳೆಯದು, ಕಟ್ಟದ್ದು ಎಂಬ ಪದದಲ್ಲಿ ಅಂತ್ಯ ಲೋಪವಾಗಿ ಒಳ್ಳೆಯ, ಕಟ್ಟ ಎಂಬ ರೂಪಗಳು ಬಂದರೂ ಮೂಲ ಅರ್ಥ ಕೊಡುತ್ತದೆ. ಆದ್ದರಿಂದ ಇದನ್ನು ವ್ಯವಕಲನ ಆಕೃತಿಮಾ ಎನ್ನಲಾಗಿದೆ.

ಸಮುಚ್ಚಯ ಆಕೃತಿಮಾ : ಸಮುಚ್ಚಯ ಆಕೃತಿಮಾವು ಬದ್ಧ ಆಕೃತಿಮಾದ ಭಾಗ ಎಂದು ಹೇಳಬಹುದು. ಧಾತುಗಳಿಗೆ ಹತ್ತುವ ಪ್ರತ್ಯಯಗಳನ್ನು ಸಮುಚ್ಚಯ ಆಕೃತಿಮಾ ಎನ್ನಲಾಗುತ್ತದೆ. ಈ ಮೂಲ ಧಾತುಗಳೂ ಆಕೃತಿಮಾಗಳಾಗಿಯೇ ಇರುತ್ತವೆ. ಉದಾ: ಗಿಡಗಳು, ಮರದ, ಇವುಗಳಲ್ಲಿ ಗಿಡ, ಮರ, ಮೂಲ ಧಾತು ಆಕೃತಿಮಾಗಳೇ ಆಗಿವೆ. ಗಳು, ದ್ ಎಂಬುವವು ಸಮುಚ್ಚಯ ಆಕೃತಿಮಾಗಳಾಗಿವೆ. ಇವುಗಳಲ್ಲಿ ನಾಲ್ಕು ಉಪ ವಿಭಾಗಗಳನ್ನು ಕಾಣಬಹುದು.

೧. ಪೂರ್ವ ಪ್ರತ್ಯಯ ಆಕೃತಿಮಾ : ಕ್ರಿಯಾ ಪದದ ಮೂಲರೂಪ ಧಾತು. ಪ್ರತ್ಯಯಗಳು ಧಾತುವಿನ ಅನಂತರವೇ ಬರಬೇಕೆಂಬ ನಿಯಮವೇನೂ ಇಲ್ಲ. ಮೂಲ ಧಾತುಗಳ ಹಿಂದೆ ಬರುವ ಪ್ರತ್ಯಯಗಳು ಪೂರ್ವ ಪ್ರತ್ಯಯ ಆಕೃತಿಮಾಗಳಾಗುತ್ತವೆ. ಉದಾ: ಸಜ್ಜನ, ಸದ್ಭಕ್ತ, ಸತ್ಪಥ, ಇಲ್ಲಿ ಸತ್ ಎಂಬುದು ಪೂರ್ವ ಪ್ರತ್ಯಯ ಆಕೃತಿಮಾವಾಗಿದೆ. ಸತ್ ಎಂಬುದು ಪದದ ಹಿಂದೆ ಬಂದು ಅರ್ಥ ಸ್ವರೂಪವನ್ನೇ ಬದಲಾಯಿಸುತ್ತದೆ.

೨. ಅಂತ್ಯ ಪ್ರತ್ಯಯ ಆಕೃತಿಮಾ : ಧಾತುವಿನ ಅಂತ್ಯದಲ್ಲಿ ಪ್ರತ್ಯಯಗಳು ಬಂದು ಮೂಲ ಅರ್ಥವನ್ನು ಭಿನ್ನಗೊಳಿಸುವಂತಿದ್ದರೇ ಅದನ್ನು ಅಂತ್ಯ ಪ್ರತ್ಯಯ ಆಕೃತಿಮಾ ಎನ್ನಲಾಗುತ್ತದೆ. ಹುಡುಗಿಯರು, ಪುಸ್ತಕಗಳು, ಮನೆಯಲ್ಲಿ ಕಾಡಿಗೆ, ಈ ಪದಗಳಲ್ಲಿ ಬರುವ ರು, ಗಳು, ಅಲ್ಲಿಗೆ ಮುಂತಾದವು ಅಂತ್ಯ ಪ್ರತ್ಯಯ ಆಕೃತಿಮಾ ಸಮುಚ್ಚಯಗಳು.

೩. ಮಧ್ಯ ಪ್ರತ್ಯಯ ಆಕೃತಿಮಾ : ಧಾತುವಿನ ಮಧ್ಯದಲ್ಲಿ ಕಂಡುಬರುವ ಪ್ರತ್ಯಯಗಳನ್ನು ಮಧ್ಯ ಪ್ರತ್ಯಯಗಳು ಎಂದು ಕರೆಯಲಾಗುತ್ತದೆ. ಅವನು ಬರೆದನು ಈ ಪದಗಳಲ್ಲಿ ಮಧ್ಯ 'ಅ' ಎಂಬ ಪ್ರತ್ಯಯ ಸೇರಿರುತ್ತದೆ. ಇದನ್ನು ಮಧ್ಯ ಪ್ರತ್ಯಯ ಆಕೃತಿಮಾ ಸಮುಚ್ಚಯ ಎಂದು ಕರೆಯಬಹುದು.

೪. ಸಹ ಪ್ರತ್ಯಯ ಆಕೃತಿಮಾಗಳು : ಧಾತುವಿನ ಜೊತೆ-ಜೊತೆಯಲ್ಲಿ ಕೂಡಿಕೊಂಡು ಬರುವ ಪ್ರತ್ಯಯಗಳನ್ನು ಸಹ ಪ್ರತ್ಯಯ ಆಕೃತಿಮಾಗಳು ಎಂದು ಕರೆಯಬಹುದು. ಉದಾ: ಕನ್ನಡದಲ್ಲಿ 'ನಿಲ್ಲು' ಎಂಬ ಧಾತುವು ಶ್ರುತಿ ಇಳಿಸಿ ಹೇಳಿದಾಗ ಅದು ಒಂದು ಆಜ್ಞಾಪನಾ ಶಬ್ದವಾಗಿ ಕಾರ್ಯನಿರ್ವಹಿಸುತ್ತದೆ. ಶ್ರುತಿ ಏರಿಸಿ ನುಡಿದಾಗ ನಿಲ್ಲು? ಎಂಬ ಪ್ರಶ್ನಾರ್ಥಕವಾಗುತ್ತದೆ. ಅಂತೆಯೇ 'ಹೋಗೋಣ' ಎಂಬುದು ಜೊತೆಯಲ್ಲಿ ಹೋಗುವುದು ಎಂಬರ್ಥದೊಂದಿಗೆ, ಹೋಗುವುದೇ (ಹೋಗೋಣ?) ಎಂಬ ಪ್ರಶ್ನೆಯನ್ನು

ಸೂಚಿಸುತ್ತದೆ. ಹೀಗೆ ಧಾತುವಿನ ಜೊತೆಯಲ್ಲಿ ಬರುವ ಪ್ರತ್ಯಯಗಳನ್ನು ಸಹ ಪ್ರತ್ಯಯ ಆಕೃತಿಮಾ ಎಂದು ಕರೆಯಲಾಗುತ್ತದೆ. ಹೀಗೆ ಆಕೃತಿಮಾಗಳನ್ನು ಸೂಕ್ಷ್ಮಗ್ರಾಹಿಗಳಾದ ಭಾಷಾವಿಜ್ಞಾನಿಗಳು ಅನೇಕ ರೀತಿಯಲ್ಲಿ ವಿಂಗಡಿಸುತ್ತಾರೆ.

ಬ್ಲಾಕ್ ಮತ್ತು ಟ್ರೇಗರ್ ಎಂಬ ವಿದ್ವಾಂಸರು ಆಕೃತಿಮಾಗಳು ಪ್ರಕ್ರಿಯೆಗೊಳ್ಳುವುದನ್ನು ಐದು ಬಗೆಯಲ್ಲಿ ವಿಂಗಡಿಸಿದ್ದಾರೆ.

೧. ಪ್ರತ್ಯಯೀಕರಣ

೨. ಆಂತರಿಕ ಬದಲಾವಣೆ

೩. ದ್ವಿತ್ವೀಕರಣ

೪. ಪೂರಕತೆ

೫. ಶೂನ್ಯರೂಪ ವ್ಯತ್ಯಾಸ

ಸ್ವತಂತ್ರ ಆಕೃತಿಮಾಗಳಿಗೆ ಬದ್ಧ ಆಕೃತಿಮಾಗಳು ಸೇರುವುದನ್ನು ಈ ಹಿಂದೆಯೇ ಗಮನಿಸಲಾಗಿದೆ. ಇವುಗಳನ್ನು ವಿಭಾಗಿಸಿದಲ್ಲಿ ಎರಡು, ಮೂರು, ಸ್ವತಂತ್ರ ಆಕೃತಿಮಾಗಳು ದೊರಕುತ್ತವೆ. ಇದನ್ನು ಪ್ರತ್ಯಯೀಕರಣ ಎಂದು ಹೇಳಲಾಗುತ್ತದೆ. ಧಾತು ಅಥವಾ ಪ್ರಾತಿಪದಿಕದ ಒಂದೆರಡು ಧ್ವನಿಗಳು ಬದಲಾವಣೆಯಾಗಿ ಬೇರೆ ಅರ್ಥ ನೀಡುವ ರೂಪ ನಿರ್ಮಿತವಾದರೆ ಆಗ ನಡೆದ ಕ್ರಿಯೆಯನ್ನು ಆಂತರಿಕ ಬದಲಾವಣೆ ಎಂದು ಕರೆಯಬಹುದು. ಉದಾ: ನಾ >ನಾನು >ನನ್ನ, ನೀ >ನೀನು >ನಿನ್ನ ಇತ್ಯಾದಿ. ಧಾತು ಅಥವಾ ಪ್ರಾತಿಪದಿಕದ ಒಂದು ಭಾಗ ಪುನಃ ಬಂದು ಅದರ ಅರ್ಥಭಿನ್ನವಾಗಲು ಕಾರಣವಾದರೆ, ಅಲ್ಲಿ ನಡೆದ ಪ್ರಕ್ರಿಯೆಯನ್ನು ದ್ವಿತ್ವೀಕರಣ ಎನ್ನಲಾಗುತ್ತದೆ. ಕನ್ನಡದಲ್ಲಿ 'ದಡ' ಎಂಬ ಪದವಿದೆ. ಇದು ತೀರ, ಬಯಲು ಪ್ರದೇಶ, ಎತ್ತರವಾದ ಪ್ರದೇಶ ಎಂಬರ್ಥವನ್ನು ಹೊಂದಿದೆ. 'ದಡ' ಎಂಬ ಪದಕ್ಕೆ ಅಂತ್ಯ ದ್ವಿತ್ವವಾಗಿ 'ದಡ್ಡ' ಎಂದಾದರೆ ಮೂರ್ಖ, ಬುದ್ಧಿ ಇಲ್ಲದವ ಎಂದು ಅರ್ಥವ್ಯತ್ಯಾಸವಾಗುತ್ತದೆ. ಇದನ್ನು ದ್ವಿತ್ವೀಕರಣ ಎಂದು ಕರೆಯಬಹುದು. ಆಕೃತಿಮಾಗಳು, ಶಬ್ದಕ್ಕೆ ಪೂರಕವಾಗಿ ಬಂದು, ಪದಗಳಾಗಿ, ಸ್ವತಂತ್ರ ಆಕೃತಿಮಾಗಳಾಗುವುದಕ್ಕೆ ಪೂರಕತೆ ಎಂದು ಹೇಳಬಹುದು. ಅಂತೆಯೇ ಅಧ್ಯಾಹಾರವಾಗಿ ಧಾತು, ಶಬ್ದಗಳೊಡನೆ ಸೇರುವ ಯಾವುದೇ ಪ್ರತ್ಯೆಯಗಳನ್ನು ಶೂನ್ಯ ರೂಪಗಳು ಎನ್ನಲಾಗುತ್ತದೆ. ಹೀಗೆ ಆಕೃತಿಮಾದಲ್ಲಿ ಹಲವು ವಿಧಗಳಿರುವುದನ್ನು ಕಾಣಬಹುದು.

ಒಂದು ಭಾಷಾ ರೂಪವು ಆಕೃತಿಮಾವೋ ಅಲ್ಲವೋ ಎಂಬುದನ್ನು ಗುರುತಿಸಲು ಯುಜಿನ್ ನೈಡಾ ಅವರು ಆರು ತತ್ವಗಳನ್ನು ತಿಳಿಸಿದ್ದಾರೆ. ಬ್+ಎ+ಳ್+ಅ+ಕ್+ಉ ಈ ಧ್ವನಿಗಳು ಸೇರಿ ಆದ ಬೆಳಕು ಎಂಬ

ಪದ ಕನ್ನಡದಲ್ಲಿ ಎಲ್ಲಿಯೇ ಬಳಕೆಯಾಗಲಿ ಒಂದೇ ಅರ್ಥವನ್ನು ಹೊಂದಿರುತ್ತದೆ. ಇದು ಒಂದು ಭಾಷೆಯ ಆಕೃತಿಮಾ ಎನ್ನಿಸಿಕೊಳ್ಳುತ್ತದೆ. ಇಂತಹ ಹಲವಾರು ತತ್ವಗಳನ್ನು ನೈಡಾ ಅವರು ನಮಗೆ ನೀಡಿದ್ದಾರೆ.

೧. ಎಲ್ಲಾ ಸಂದರ್ಭಗಳಲ್ಲಿಯೂ ಸಾಮಾನ್ಯವಾಗಿ ಒಂದೇ ಅರ್ಥ ವೈಶಿಷ್ಟ್ಯವನ್ನು ಹೊಂದಿ ಬಳಕೆಯಾಗುವ ಒಂದು ಭಾಷೆಯ ಧ್ವನಿಮಾ ರೂಪವನ್ನು ಆಕೃತಿಮಾ ಎಂದು ಕರೆಯಲಾಗುತ್ತದೆ. ಉದಾ: ನೀರು, ನದಿ, ಸಮುದ್ರ, ಬೆಳಕು ಮುಂತಾದವು ಕನ್ನಡ ಭಾಷೆಯಲ್ಲಿ ಎಲ್ಲಿಯೇ ಬರಲಿ ಇದೇ ಧ್ವನಿ ವೊತ್ತದೊಂದಿಗೆ, ಒಂದೇ ವಿಶಿಷ್ಟ ಅರ್ಥದಲ್ಲಿ ಬಳಕೆಯಾಗುತ್ತವೆ. ಆದ್ದರಿಂದ ಇವುಗಳನ್ನು ಕನ್ನಡದ ಆಕೃತಿಮಾಗಳು ಎಂದು ಕರೆಯಬಹುದು. ಅಂತೆಯೇ ಇವುಗಳು ಧಾತುವಿನ ಆದಿ, ಅಂತಃ, ಅಂತ್ಯಗಳಲ್ಲಿ ಬರುತ್ತವೆ. ಸತ್ಪ್ರಜೆ, ಸನ್ನಡತೆ ಇಲ್ಲಿ 'ಸತ್' ಎಂಬುದು ಆದಿ ಆಕೃತಿಮಾ. ಧನವಂತ, ಸಿರಿವಂತ, ಗುಣವಂತ ಇಲ್ಲಿ ಬರುವಂತಹ 'ವಂತ' ಅಂತ್ಯ ಆಕೃತಿವು. ಹಾಗೆಯೇ ಕರ್ನಾಟಕದಲ್ಲಿ ಎಂಬ ಪದದಲ್ಲಿ ಕರ್ನಾಟಕ+ಅಲ್ಲಿ ಎಂಬ ಸ್ವತಂತ್ರ ಆಕೃತಿಮಾಗಳ ನಡುವೆ 'ದ್' ಎಂಬ ಬದ್ಧ ಆಕೃತಿಮಾವಿದೆ. ಇದನ್ನು ಅಂತಃ ಆಕೃತಿಮಾ ಎಂದು ಕರೆಯಲಾಗುತ್ತದೆ.

೨. ಒಂದು ಧ್ವನಿಯು ಬಾಷೆಯ ಧ್ವನಿಮಾವಾಗಿದ್ದು, ಅದು ಪಕ್ಕದ ಧ್ವನಿಯ ಆಧಾರದ ಮೇಲೆ ವ್ಯತ್ಯಾಸವಾಗಿ ಉಚ್ಚಾರಣೆಯಾಗುವಂತಿದ್ದರೇ ಅವುಗಳನ್ನು ಒಂದು ಭಾಷೆಯ ಆಕೃತಿಮಾಗಳು ಎಂದು ಕರೆಯಬಹುದು. ಉದಾ: ಕನ್ನಡದಲ್ಲಿ ಸತ್+ಭಕ್ತ=ಸದ್ಭಕ್ತ, ಸತ್+ಜನ=ಸಜ್ಜನ ಮೊದಲ ಪದ್ಯದಲ್ಲಿ ಬರುವ 'ಸತ್' ಎಂಬುದಕ್ಕೆ 'ದ್' ಎಂಬ ಘೋಷ ಧ್ವನಿ ಬಂದು ಸೇರಿದೆ. ಎರಡನೆಯ ಪದದ 'ಸತ್' ಎಂಬುದಕ್ಕೆ 'ಜ್' ಎಂಬ ಅಘೋಷ ಧ್ವನಿ ಬಂದು ಸೇರಿದೆ. ಹೀಗೆ 'ಸತ್' ಎಂಬ ಒಂದೇ ರೂಪ ಘೋಷ, ಅಘೋಷಗಳಾಗಿ ಬಳಕೆಯಾಗಲು ಕಾರಣ ಪಕ್ಕದ ಧ್ವನಿಯೇ ಆಗಿದೆ. ಇಂತಹದನ್ನು ಆಕೃತಿಮಾ ಎಂದು ಪರಿಗಣಿಸಲಾಗುತ್ತದೆ.

೩. ಭಾಷೆಯಲ್ಲಿ ಧ್ವನಿಮಾ ಎಂದು ನಿರ್ಧರಿಸಲಾಗಿರುವ ಅರ್ಥಬದ್ಧ ಪದಗಳು ಪಕ್ಕದ ಧ್ವನಿಯಿಂದ ನಿಯಂತ್ರಿಸಲಾಗುತ್ತಿದ್ದರೆ ಹಾಗೂ ಅವು ನಿರ್ದಿಷ್ಟ ಭಾಷಾ ರೂಪಗಳಲ್ಲಿಯೇ ಬಳಕೆಯಾಗುತ್ತಿದ್ದರೆ. ಅವುಗಳನ್ನು ಆಕೃತಿಮಾಗಳೆಂದು ನಿರ್ಧರಿಸಬಹುದು. ಉದಾ: ತಮ್ಮಂದಿರು, ಮಕ್ಕಳು, ಪುಸ್ತಕಗಳು ಈ ಪದಗಳಲ್ಲಿರುವ ಬಹುವಚನ ಪ್ರತ್ಯಯಗಳು ಮೂಲ ಪದವನ್ನು ನಿಯಂತ್ರಿಸುತ್ತಿವೆ. ಅಲ್ಲದೇ ಅಂದಿರು, ಕಳು, ಗಳು ಎಂಬುವವು ನಿರ್ದಿಷ್ಟ ಭಾಷಾ ವರ್ತನೆಗಳಾಗಿವೆ. 'ಅಂದಿರು' ಎಂಬುದು ಎಲ್ಲಾ ಸಂದರ್ಭಗಳಲ್ಲಿಯೂ ಸಂಬಂಧವಾಚಿಯಾಗಿಯೇ ಬಳಕೆಯಾಗುತ್ತದೆ. ಹಾಗೆಯೇ 'ಗಳು' ಎಂಬುದು ವಸ್ತುಗಳೊಂದಿಗೆ ಹಾಗೂ ಮಾನವನನ್ನುಳಿದು ಇತರ ಜೀವಿಗಳೊಂದಿಗೆ ಬಳಕೆಯಾಗುತ್ತದೆ. 'ಕಳು' ಎಂಬುದು ನಪುಂಸಕ ವಾಚಿಯಾಗಿದೆ. ಇಂತಹವುಗಳೆಲ್ಲಾ ಒಂದು ಭಾಷೆಯ ಆಕೃತಿಮಾ ರೂಪಗಳು.

೪. ಒಂದು ಭಾಷೆಯ ಪದರೂಪಗಳ ಆಧಾರದ ಮೇಲೆ ಅವು ಸ್ಪಷ್ಟರೂಪ ವ್ಯತ್ಯಾಸ ಮತ್ತು ಶೂನ್ಯ

ರಚನಾತ್ಮಕ ವೈಶಮ್ಯಗಳನ್ನು ಹೊಂದಿರುತ್ತವೆ. ಇವುಗಳನ್ನು ಆಕೃತಿಮಾ ಎಂದು ಪರಿಗಣಿಸಲಾಗುತ್ತದೆ. ಉದಾ: ಇಂಗ್ಲೀಷ್‌ನಲ್ಲಿ Foot ಎಂಬ ಏಕವಚನ ಪದಕ್ಕೆ Feet ಬಹುವಚನ, ಇಲ್ಲಿ ಉಚ್ಚಾರಣೆಯಲ್ಲಿ ಹಾಗೂ ಗೋಚರವಾಗಿಯೂ ವ್ಯತ್ಯಾಸಕಾಣುತ್ತಿದೆ. ಆದ್ದರಿಂದ ಇಂತಹದನ್ನು ಸ್ಪಷ್ಟರೂಪ ಆಕೃತಿಮಾ ಎಂದು ಕರೆಯಬಹುದು. ಅಂತೆಯೇ ಕನ್ನಡದ ನೀರು, ಗಾಳಿ, ಬೆಳಕು ಇವು ಬಹು ಅಂಶಗಳು. ಇವುಗಳ ಬಹುಜ್ಞತೆಯು ಯಥಾ ಸ್ಥಿತಿಯಲ್ಲೇ ಅಧ್ಯಾಹಾರವಾಗಿದೆ. ಆದ್ದರಿಂದ ಇವುಗಳನ್ನು ಶೂನ್ಯ ರಚನಾತ್ಮಕ ಆಕೃತಿಮಾ ಎಂದು ಕರೆಯಲಾಗುತ್ತದೆ.

೫. ಧ್ವನಿಮಾದಲ್ಲಿ ಸಂಪೂರ್ಣ ಭಿನ್ನಾರ್ಥವಿದ್ದು, ಧ್ವನಿಸಾಮ್ಯಗಳಾಗಿರುವವು ಹಾಗೂ ಒಂದೇ ಅರ್ಥವುಳ್ಳ ಸಂಪೂರ್ಣ ಧ್ವನಿ ವ್ಯತ್ಯಾಸಗಳುಳ್ಳವು ಇರುತ್ತವೆ. ಉದಾ: ಕನ್ನಡದ 'ಕವಿ' ಎಂಬ ಪದವು ಆವರಿಸು (ಕ್ರಿಯಾಪದ) ಕವನ ಬರೆಯುವವ ಹಾಗೂ ಮುಸುಕು ಮುಂತಾದ ಭಿನ್ನಾರ್ಥವನ್ನು ಹೊಂದಿದೆ. ಈ ಎಲ್ಲಾ ಅರ್ಥಗಳಿಗೂ ಕ್+ಅ+ವ್+ಇ ಎಂಬ ಧ್ವನಿಗಳೇ ಮೂಲಗಳು. ಅಂತೆಯೇ ಕನ್ನಡದಲ್ಲಿ ಗ್ರಂಥ, ಪುಸ್ತಕ, ಒತ್ತಿಗೆ ಎಂಬ ಪದಗಳಿದ್ದು, ಇವುಗಳು ಧ್ವನಿ ವ್ಯತ್ಯಾಸವಾಗಿದ್ದು, ಅರ್ಥಸಾಮ್ಯ ಕಾಣುತ್ತದೆ. ಇವುಗಳನ್ನು ಆಕೃತಿಮಾಗಳು ಎಂದು ಪರಿಗಣಿಸಲಾಗುತ್ತದೆ.

ಹಾಗೆಯೇ ಅರ್ಥ ಸಾಮ್ಯತೆ ಹೊಂದಿದ ಧ್ವನಿ ಸಾಮ್ಯ ರೂಪಗಳು ಒಂದೇ ಆಕೃತಿಮಾಗಳಾಗುತ್ತವೆ. ಉದಾ: ಕನ್ನಡದ ಬೆಳೆ ಎಂಬ ಶಬ್ದವು ಎರಡು ಅರ್ಥಗಳನ್ನು ಪಡೆದುಕೊಳ್ಳುತ್ತದೆ. ಆದರೇ ಇವೆರಡಕ್ಕೂ ಸಂಬಂಧವಿದೆ. ಒಂದು ಮನುಷ್ಯನ, ಪ್ರಾಣಿಗಳ ಬೆಳೆವಣಿಗೆಯನ್ನು ಸೂಚಿಸುವ ಕ್ರಿಯಾಪದವಾಗಿದೆ. ಮತ್ತೊಂದು ಆಹಾರ ಸಸ್ಯಗಳು ಬೆಳೆದು ನಿಂತಿದ್ದನ್ನು ಸೂಚಿಸುವ ನಾಮಪದವಾಗಿದೆ. ಇಲ್ಲಿ ಅರ್ಥ ಹಾಗೂ ಧ್ವನಿಗಳು ಸಾಮ್ಯತೆಯನ್ನು ಹೊಂದಿವೆ, ಇವೂ ಭಾಷೆಯ ಆಕೃತಿಮಾಗಳೇ.

೬. ಅಂತೆಯೇ ಸಂಪೂರ್ಣ ಪ್ರತ್ಯೇಕ, ಹಾಗೂ ಬದ್ಧ, ಒಂದೇ ಗುಂಪಿನಲ್ಲಿ ಬರುವ ಆಕೃತಿಮಾಗಳು ಒಂದು ಭಾಷೆಯಲ್ಲಿರುತ್ತವೆ. ಉದಾ: ಕನ್ನಡದಲ್ಲಿರುವ ಮರ, ಗಿಡ, ಬಳ್ಳಿ, ಹೂ, ಗಾಳಿ ಮುಂತಾದವು ಅವಿಭಾಜ್ಯಕಗಳು. ಇವುಗಳು ಯಾವ ಸಂದರ್ಭದಲ್ಲಿ ಬಳಕೆಯಾದರೂ ತಮ್ಮ ಮೂಲ ಸ್ವರೂಪಕ್ಕೆ ದಕ್ಕೆ ತಂದು ಕೊಳ್ಳುವುದಿಲ್ಲ. ಇಂತಹವುಗಳು ಸ್ವತಂತ್ರ ಅಥವಾ ಪ್ರತ್ಯೇಕ ಆಕೃತಿಮಾಗಳು. ಅಂತೆಯೇ ರು, ಗಳು, ಅಂದಿರು, ದ, ದಪ, ವ, ಉತ್, ಉವ್, ಇದ್ ಮುಂತಾದವು ಒಂದು ಆಕೃತಿಮಾದೊಡನೆಯೇ ಕೂಡಿಬರುವಂತಹವು. ಇವುಗಳನ್ನು ಬದ್ಧ ಆಕೃತಿಮಾಗಳೆಂದು ಕರೆಯಬಹುದು. ಹಾಗೆಯೇ ಕೆಲವು ಪದಗಳು ಆ ಪದಪುಂಜಗಳ ಜೊತೆಯಲ್ಲಿ ಬಿಟ್ಟು ಬೇರೆ ಯಾವ ಪದಪುಂಜದೊಡನೆಯೂ ಬಾರವು. ಇವುಗಳನ್ನು ಭಾಷೆಯಲ್ಲಿ ಆಕೃತಿಮಾ ಎಂದು ಕರೆಯಲಾಗುತ್ತದೆ. ಉದಾ: ಹುಳ-ಹುಪ್ಪಟೆ, ಗಾಳಿ-ಗರ, ನೀರು-ನಿಡಿ ಇಲ್ಲಿನ ಹುಪ್ಪಟೆ, ಗರ, ನಿಡಿ ಇವು ತಮ್ಮ ಹಿಂದಿನ ಪದಪುಂಜದೊಂದಿಗೆ ಭಾಷಿಸುವ ಸಂದರ್ಭಗಳಲ್ಲಿ ಬರುತ್ತವೆ. ಇವು ಒಂದು ರೀತಿ ಬದ್ಧ ಆಕೃತಿಮಾಗಳು. ಆ ಭಾಷೆಯ ನಿಯಮಗಳ ಒಪ್ಪಿತ ಆಕೃತಿಮಾಗಳು ಆಗಿವೆ.

ಹಾಗೆಯೇ ಬ್ಲೂಮ್‌ಫೀಲ್ಡ್ ಎಂಬ ಭಾಷಾವಿಜ್ಞಾನಿಯು ಆಕೃತಿಮಾದ ವಿಶ್ಲೇಷಣೆಗೆ ತೊಡಗುವಾಗ ಅನುಸರಿಸಬೇಕಾದ ಕ್ರಮವನ್ನು ತಿಳಿಸಿದ್ದಾನೆ. ಅವುಗಳನ್ನು ಈ ರೀತಿ ಗ್ರಹಿಸಬಹುದು.

೧. ಜನರ ಮಾತಿನ ಅಥವಾ ಉಚ್ಚಾರಣೆಯ ಆಧಾರದ ಮೇಲೆ ಆಕೃತಿಮಾ ನಿರ್ಧಾರವಾಗಬೇಕು.

೨. ಭಾಷೆಯ ರೂಪಗಳಿಗೆ ಆಧಾರವಾಗಿ ಅವು ಬಳಕೆಗೊಳ್ಳುವ ಬಗೆಗಳನ್ನು ವ್ಯಾಕರಣಾಂಶಗಳ ಆಧಾರದ ಮೇಲೆ ವಿವರಿಸಬೇಕು.

೩. ಸೂಕ್ತವಾದ ರೀತಿಯಲ್ಲಿ ಶಬ್ದ, ಪದ, ಧ್ವನಿ, ಧ್ವನಿಮಾಗಳನ್ನು ವಿವೇಚಿಸದೇ ಅವುಗಳನ್ನು ವಿಶ್ಲೇಷಿಸಬಾರದು.

೪. ಭಾಷೆ ನಿತ್ಯ ಪರಿವರ್ತನ ಶೀಲವಾದುದರಿಂದ ಭಾಷಿಕ ಬದಲಾವಣೆಯನ್ನು ಗಮನಿಸಿ, ಕಾಲಮಾನದ ಸತ್ಯಕ್ಕನುಗುಣವಾಗಿ ಆಕೃತಿಮಾಗಳ ಸ್ವರೂಪದ ಚರ್ಚೆಯನ್ನು ಮಾಡಬೇಕು.

ಒಟ್ಟಿನಲ್ಲಿ ಧ್ವನಿ ವಿಜ್ಞಾನದಲ್ಲಿ ಧ್ವನಿ ಉತ್ಪತ್ತಿ, ಅವುಗಳ ಭೌತಿಕ ಗುಣಗಳು, ಅವುಗಳನ್ನು ಗ್ರಹಿಸುವ ಬಗೆಗಳನ್ನು ತಿಳಿದರೇ, ಧ್ವನಿಮಾ ವಿಜ್ಞಾನದಲ್ಲಿ ಒಂದು ಭಾಷೆಯ ನಿರ್ದಿಷ್ಟ ಧ್ವನಿಗಳ ಬಗ್ಗೆ, ಮಹತ್ವದ ಬಗ್ಗೆ ಭಿನ್ನನೆಲೆಗಳಲ್ಲಿ ಅಭ್ಯಸಿಸುತ್ತೇವೆ. ಆದರೇ ಇದಿಷ್ಟಕ್ಕೆ ಒಂದು ಭಾಷೆಯ ಅಂಗಗಳಾದ ಧ್ವನಿ, ಧ್ವನಿಮಾಗಳ ಬಗ್ಗೆ ಸಂಪೂರ್ಣವಾಗಿ ತಿಳಿಯುವುದಿಲ್ಲ. ಈ ಅಧ್ಯಯನ ಪೂರ್ತಿಗೊಳ್ಳಲು ಸ್ವತಂತ್ರ, ಬದ್ಧ, ಶೂನ್ಯ, ರಿಕ್ತ ಮುಂತಾದ ರೂಪಗಳೊಂದಿಗೆ ಕಾಣುವ, ಆಳವಾದ ವಿಷಯವನ್ನುಳ್ಳ ಆಕೃತಿಮಾಗಳ ಅಧ್ಯಯನ ಅತ್ಯಗತ್ಯ.

ವಾಕ್ಯ (Sentence) :

ಪೂರ್ಣ ಅರ್ಥವನ್ನು ಕೊಡುವ ಯಾವುದೇ ಸ್ವತಂತ್ರ ರಚನೆ ವಾಕ್ಯವೆನಿಸಿಕೊಳ್ಳುತ್ತದೆ. ಒಂದು ವಾಕ್ಯದ ವ್ಯಾಕರಣ ವ್ಯವಸ್ಥೆಯಲ್ಲಿ ಕರ್ತೃ, ಕರ್ಮ ಕ್ರಿಯಾ ಪದಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಧ್ವನಿ, ಧ್ವನಿಮಾ, ಆಕೃತಿಮಾ, ಪದಗಳು ಅರ್ಥಬದ್ಧವಾಗಿ ಸೇರಿ ವಾಕ್ಯವಾಗುತ್ತವೆ. ಭಾಷೆಯ ಅತಿ ಚಿಕ್ಕ ಘಟಕ ಧ್ವನಿ, ದೊಡ್ಡ ರಚನೆಯೆ ವಾಕ್ಯವೆಂದು ಸ್ಥೂಲವಾಗಿ ಹೇಳಬಹುದು. ವಾಕ್ಯಗಳನ್ನು ಕುರಿತು ಭಾಷಾವಿಜ್ಞಾನಿಗಳು ಅನೇಕ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಈ ಮುಂದಿನಂತಿವೆ.

''ಸಂಪೂರ್ಣ ಅರ್ಥವನ್ನು ಕೊಡುವ ಪದಪುಂಜಗಳ ಗುಂಪು ವಾಕ್ಯವಾಗಿದೆ. (A Sentence is a group of words that makes complete Meaning) ಇದು ಪ್ರಾಚೀನ ವೈಯಾಕರಣಿಗಳ ಒಟ್ಟು ಅಭಿಪ್ರಾಯವಾಗಿದೆ.

ಕೆಲವು ಭಾಷಾ ವಿಜ್ಞಾನಿಗಳು 'ನಾಮಪದ ಕ್ರಿಯಾಪದಗಳಿಂದಾದುವೇ ವಾಕ್ಯ' (A Sentence is one which possesses noun phrase and verb) ಎಂದು ಅಭಿಪ್ರಾಯಿಸಿದ್ದಾರೆ.

ಸಿ.ಎಫ್.ಹಾಕೆಟ್ ಅವರು 'ವಾಕ್ಯವು ಸಂಪೂರ್ಣ ಅರ್ಥವನ್ನು ಕೊಡುವ ಗರಿಷ್ಠತಮ ಘಟಕ

(A Sentence is one which possesses noun pharse and verb phrase) ಎಂದಿದ್ದಾರೆ”[೧].

ಮೊದಲ ಎರಡು ವ್ಯಾಖ್ಯೆಗಳು ವಾಕ್ಯದ ಒಂದೊಂದು ರೂಪವನ್ನು ಮಾತ್ರ ಬಿಂಬಿಸುತ್ತವೆ. ಸಿ.ಎಫ್. ಹಾಕೆಟ್ ಅವರ ವ್ಯಾಖ್ಯೆಯು ಸಂಪೂರ್ಣ ಅರ್ಥವನ್ನು ಕೊಡುವ ವ್ಯಾಖ್ಯೆಯಾಗಿದೆ. ಏಕೆಂದರೆ ಒಂದು ವಾಕ್ಯದಲ್ಲಿ ಕೇವಲ ಅರ್ಥ ಅಥವಾ ನಾಮಪದ ಕ್ರಿಯಾಪದಗಳಷ್ಟೇ ಇರದೇ ಧ್ವನಿ, ಧ್ವನಿಮಾ, ಆಕೃತಿಮಾಗಳಿರುತ್ತವೆ. ಉದಾ: 'ನಾನು ನೀರನ್ನು ಕುಡಿದೆ' ಎಂಬ ವಾಕ್ಯದಲ್ಲಿ ನಾನು ನೀರನ್ನು ಕುಡಿದೆ ಎಂಬ ಮೂರು ಆಕೃತಿಮಾಗಳಿವೆ. 'ಕುಡಿ' ಎಂಬ ಧಾತು, 'ಅನ್ನು' ಎಂಬ ದ್ವಿತೀಯ ವಿಭಕ್ತಿ ಪ್ರತ್ಯಯ, 'ಎ' ಎಂಬ ಸಂಭವನಾರ್ಥಕ ಪ್ರತ್ಯಯ ಹಾಗೂ ಇದು ಭೂತಕಾಲ ಸೂಚಕ ವಾಕ್ಯವೂ ಆಗಿದೆ. ಇವೆಲ್ಲಾ ಒಂದು ವಾಕ್ಯದಲ್ಲಿ ಸಂಪೂರ್ಣ ಅರ್ಥವನ್ನು ಕೊಡುವ ಗರಿಷ್ಠ ತಮ್ಮ ಘಟಕಗಳಾಗಿವೆ. ಸ್ಥೂಲವಾಗಿ ಇವುಗಳನ್ನು ಮೂರು ರೀತಿಯಲ್ಲಿ ಈ ಮುಂದಿನಂತೆ ವಿಂಗಡಣೆ ಮಾಡಿಕೊಳ್ಳಬಹುದು :

೧. ಸರಳ ವಾಕ್ಯಗಳು (Simple Sentences)

೨. ಸಂಕೀರ್ಣ ವಾಕ್ಯಗಳು (Complex Sentences)

೩. ಸಂಯೋಜಿತ ವಾಕ್ಯಗಳು / ಮಿಶ್ರ (Compund Sentences)

ಸರಳ ವಾಕ್ಯಗಳು : ಅರ್ಥಬದ್ಧವಾಗಿ, ಸಮಂಜಸವಾಗಿ ರೂಪುಗೊಂಡ ಪದಸರಣಿಯೇ ವಾಕ್ಯ. ವಾಕ್ಯವೆಂಬುದು ಪೂರ್ಣಾರ್ಥ ಬೋಧಕ ಪದವ್ಯವಸ್ಥೆ. ಅದರಲ್ಲಿ ಒಂದು ಕರ್ತೃ ಮತ್ತು ಒಂದು ಪೂರ್ಣ ಕ್ರಿಯಾಪದ ಇರಲೇಬೇಕು ಅಥವಾ ಅವುಗಳಲ್ಲಿ ಯಾವುದಾದರೂ ಬಂದಿದ್ದು ಮತ್ತೊಂದು ಸಾಪೇಕ್ಷತೆಯಿಂದ ಅಧ್ಯಾಹಾರವಾಗಿ ಅರ್ಥವಾಗುವಂತಿದ್ದರೂ ವಾಕ್ಯವೆಂದೇ ಪರಿಗಣಿತವಾಗುತ್ತದೆ. ಉದಾ: ಹಳಗನ್ನಡದ ಸರಳ ವಾಕ್ಯಗಳು : ಉದಾ: ಹಳಗನ್ನಡ 'ನೀನ್ ಬಾ ಪೋಪಂ, ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ'[೨]

ನಡುಗನ್ನಡದ ಸರಳ ವಾಕ್ಯಗಳು ; 'ಕಾಯಕವೇ ಕೈಲಾಸ', ಮರಣವದು ನಿನ್ನಟ್ಟೆ ಹೋಗೆಂದ್[೩], ಹಾವು ಹಲಬರ ನಡುವೆ ಸಾಯದು[೪].

ಹೊಸಗನ್ನಡ ಸರಳ ವಾಕ್ಯಗಳು ; ಸೂರ್ಯ ಹಾಡನ್ನು ಹಾಡುತ್ತಿದ್ದಾನೆ. ಛಾಯ ಶಾಲೆಗೆ ಹೋಗುತ್ತಿದ್ದಾಳೆ.

ಸಂಕೀರ್ಣ ವಾಕ್ಯಗಳು : ಪ್ರಧಾನ ವಾಕ್ಯವೊಂದಕ್ಕೆ ಒಂದು ಅಥವಾ ಅನೇಕ ಉಪವಾಕ್ಯಗಳು

---

೧. ಡಾ.ರಾಜೇಶ್ವರಿ ಮಹೇಶ್ವರಯ್ಯ:ವರ್ಣನಾತ್ಮಕ ಭಾಷಾ ವಿಜ್ಞಾನ:ಪ್ರಕಾಶನ, ಸಮಾಜ ಪುಸ್ತಕಾಲಯ, ಧಾರವಾಡ: ಪ್ರ.ವ.:೨೦೦೭:ಪು.ಸಂ. ೧೮೩

೨. ಡಾ.ಕೆ.ವಿ.ಪುಟ್ಟಪ್ಪ(ಸಂ).ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ:ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ:ಪ್ರ.ವ.೨೦೦೪: ಪು.ಸಂ.:೧೫

೩. ಡಾ.ಕೆ.ವಿ.ಪುಟ್ಟಪ್ಪ ಮಾಸ್ತಿ (ಸಂ):ಕರ್ನಾಟ ಭಾರತ ಕಥಾಮಂಜರಿ:ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ:ಪ್ರ.ವ.:೧೯೮೮:ಪು.ಸಂ.೫.

೪. ಅದೇ : ಪು.ಸಂ. ೧೪೬

ಅಧೀನವಾಗಿದ್ದರೆ ಅದು ಸಂಕೀರ್ಣ ವಾಕ್ಯವೆನಿಸಿಕೊಳ್ಳುತ್ತದೆ. ಪ್ರಧಾನ ವಾಕ್ಯವು ಸಂಕೀರ್ಣ ವಾಕ್ಯಗಳಲ್ಲಿ ವಾಕ್ಯದ ಅಂತ್ಯದಲ್ಲಿ ಬರುತ್ತದೆ.

ಉದಾ: ಹಳಗನ್ನಡದ ಸಂಕೀರ್ಣ ವಾಕ್ಯಗಳು ; 'ಕೊಡಗೂಸು ತನದ ಭಯದಿಂ ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊಳ್ಮುಡಿಯಲೊಡಗೂ (ಡೆ) '(ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ ಪು.ಸಂ. ೨೨)

ನಡುಗನ್ನಡದ ಸಂಕೀರ್ಣ ವಾಕ್ಯಗಳು ; 'ಈಗಲೇ ಈ ದೇಹ ವಿನ್ಯಾ
ವಾಗಲೋ ನಿಜವಿಲ್ಲವೆಂಬುದ
ನೀಗ ತಿಳಯದೆ ಮಡದಿ ಮನೆ ಮನೆವಾರ್ತೆಯಾಂದೆಂಬ
ರಾಗ ಲೋಭದಿ ಮುಳುಗಿ ಮುಂದಣ
ತಾಗು ಬಾಗುಳಿರಿಯೆ ನಿನ್ನ ಸ
ಮಾಗಮವ ಬಯಸುವೆನು ರಕ್ಷಿಸು
ನಮ್ಮನನವರತ'[೧].

ಹೊಸಗನ್ನಡ ಸಂಕೀರ್ಣ ವಾಕ್ಯಗಳು ; ಮಾಧವ ಶರ್ಮರ ಮಗ ನಿನ್ನೆ ರಾತ್ರಿ ಒಂಬತ್ತು ಗಂಟೆಗೆ ಕಲಾಕ್ಷೇತ್ರದಲ್ಲಿ ಕುವೆಂಪು ಅವರ ಭಾವಗೀತೆಯೊಂದನ್ನು ಬಹಳ ಸೊಗಸಾಗಿ ಹಾಡಿದನು. ಇಲ್ಲಿ ಹಾಡಿದನು ಎಂಬುದು ಇಡೀ ವಾಕ್ಯವನ್ನು ನಿಯಂತ್ರಿಸುವ ಪ್ರಧಾನ ಕ್ರಿಯಾಪದ.

ಸಂಯೋಜಿತ ವಾಕ್ಯ: ಎರಡು ಅಥವಾ ಎಡಕ್ಕಿಂತ ಹೆಚ್ಚಿನ ಬೇರೆ-ಬೇರೆ ವಾಕ್ಯಗಳು ಬೇರೆ-ಬೇರೆಯೇ ಆದ ಕ್ರಿಯಾಪದಗಳನ್ನು ಒಳಗೊಂಡು ದೊಡ್ಡವಾಕ್ಯವೊಂದರ ಭಾಗಗಳಾಗಿ ಬಂದರೆ, ಅಂಥ ವಾಕ್ಯಗಳು ಉಪವಾಕ್ಯಗಳೆನಿಸುವವು. ಈ ರೀತಿಯಾಗಿ ಸ್ವತಂತ್ರವಾಗಿ ನಿಲ್ಲಬಲ್ಲ ಎರಡು ಅಥವಾ ಅನೇಕ ವಾಕ್ಯಗಳು ಸೇರಿ ಒಂದು ಪೂರ್ಣವಾಕ್ಯವಾದರೆ ಅದನ್ನು ಸಂಯೋಜಿತ ವಾಕ್ಯವೆಂದು ಕರೆಯಲಾಗುತ್ತದೆ.

ಉದಾ: ಹಳಗನ್ನಡ ಸಂಯೋಜಿತ ವಾಕ್ಯ; 'ನೀಮುಂ ಪೋಗಿ ನಿಮ್ಮ ಮಾವನ ಪಕ್ಕದೊಳೋದಿಮೆಂದೋಲೆಯಂ ಬರೆಯಿಸಿ'.[೨]

ನಡುಗನ್ನಡ ಸಂಯೋಜಿತ ವಾಕ್ಯ; ಕೊಟ್ಟು ಕುದಿಯಲು ಬೇಡ, ಇಟ್ಟು ಹಂಗಿಸಬೇಡ (ಬಸವಣ್ಣನ ವಚನ)

ಹೊಸಗನ್ನಡ ಸಂಯೋಜಿತ ವಾಕ್ಯ; ಕೊಟ್ಟ ಸಾಲ ಕೇಳದೆ ಹೋಯಿತು; ಮಾಡಿದ ಆರಂಭ ನೋಡದೆ ಹೋಯಿತು. ತೋಡಿದ ಬಾವಿಗೆ ಜಲವೇ ಸಾಕ್ಷಿ;ಮಾಡಿದ ಪಾಪಕ್ಕೆ ಮನವೇ ಸಾಕ್ಷಿ;

---

೧. ಕೆ.ವಿ.ನಾರಾಯಣ:ಬೇರುಕಾಂಡ ಚಿಗುರು:ವಿವೇಕ ಪ್ರಕಾಶನ : ಪ್ರ.ವ. ೧೯೯೭. ಪು.ಸಂ. : ೧೭೩


೨. ಡಾ. ಡಿ.ಎಲ್.ನರಸಿಂಹಾಚಾರ್ (ಸಂ): ಶಿವಕೋಟ್ಯಾಚಾರ್ಯ ವಿರಚಿತ, ವಡ್ಡಾರಾಧನೆ: ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು : ಪು.ಸಂ. ೪೭

ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಾಚೀನ ವ್ಯಾಕರಣಕಾರರು ವಾಕ್ಯವನ್ನು ನಾಲ್ಕು ರೀತಿಯಲ್ಲಿ ವಿಂಗಡಿಸುತ್ತಿದ್ದರು. ಇದರಲ್ಲಿ ಸಾಮಾನ್ಯವಾಗಿ ಒಂದು ನಾಮಪದ, ಒಂದು ಕ್ರಿಯಾಪದಉಳ್ಳ ವಾಕ್ಯವೇ ಸರಳ ವಾಕ್ಯ. ಉದಾ: ಯಾವಾಗ? ಮಾಡಲಿ, ಕೊಡುವೆನು, ಮುಂತಾದ ಆಕೃತಿಮಾಗಳು ಸರಳವಾಕ್ಯಗಳೆ ಆಗುತ್ತವೆ. ಭಾವನೆಯನ್ನು ಆಕ್ಷಣದಲ್ಲೇ ವಿಶಿಷ್ಟವಾಚಿಗಳ ಸಹಾಯದಿಂದ ತಿಳಿಸುವ ವಾಕ್ಯವೆ ಉದ್ಗಾರ ವಾಕ್ಯ. ಉದಾ: ಅಯ್ಯೋ ದೇವರೇ! ಓ ಹೋ ಹೀಗಾಯಿತೆ! ಇತ್ಯಾದಿ. ಹಾಗೆಯೇ ಪ್ರಶ್ನೆಯನ್ನು ಕೇಳುವ ವಾಕ್ಯಗಳೇ ಪ್ರಶ್ನಾರ್ಥಕ ವಾಕ್ಯಗಳು. ಉದಾ: ಹೇಗಿದ್ದೀಯಾ? ಶಾಲೆಗೆ ಬರುವೆಯಾ? ಇತ್ಯಾದಿ ಕೋರಿಕೆ ಹಾಗೂ ಆಜ್ಞೆಯನ್ನು ತಿಳಿಸುವ ವಾಕ್ಯವೇ ಆಜ್ಞಾಧಾರಕ ವಾಕ್ಯ. ಉದಾ: ದಯವಿಟ್ಟು ನಿಲ್ಲಿ. ನಿಲ್ಲಲೇಬೇಕು, ಇತ್ಯಾದಿ.

ಭಾಷಾ ವಿಜ್ಞಾನಿಗಳಾದ ಸಿ.ಎಫ್.ಹಾಕೆಟ್ ಅವರು ಭಾಷೆಯಲ್ಲಿ ಪ್ರಮುಖ ವಾಕ್ಯಗಳ ರಚನೆ, ಬಳಕೆ ಈ ರೀತಿ ಇದೆ ಎಂದು ತಿಳಿಸಿದ್ದಾರೆ.

130099



ಸಾಮಾನ್ಯವಾಗಿ ಸರಳವಾಕ್ಯದಲ್ಲಿ ಒಂದು ನಾಮಪದ ಮತ್ತು ಕ್ರಿಯಾಪದಗಳಿರುತ್ತವೆ. ಉದಾ: ರಾಮ ಬಂದ. ಸಮಸ್ತ ವಾಕ್ಯದಲ್ಲಿ ಒಂದು ನಾಮಪದ ಎರಡು ಕ್ರಿಯಾಪಗಳಿರುತ್ತವೆ. ಉದಾ: ರಾಮ ಬಂದು, ಆಟವಾಡಿಕೊಂಡು ಹೋದ. ಒಂದಕ್ಕಿಂತ ಹೆಚ್ಚುಧಾತು ಕ್ರಿಯಾಪದಗಳು ವಾಕ್ಯದಲ್ಲಿ ಪ್ರಧಾನ ವಾಕ್ಯದ ಅಡಿಯಲ್ಲಿ ಇನ್ನಷ್ಟು ವಾಕ್ಯಗಳು ಅಧೀನವಾಗಿರುತ್ತವೆ, ಇದನ್ನು ಸಂಕೀರ್ಣ ವಾಕ್ಯ ಎನ್ನಲಾಗುತ್ತದೆ. ಉದಾ: ರಾಮ ನಾಳಿನ ಸಭೆಗೆ ಬಂದು ಕೊಟ್ಟ ವಿಚಾರವಾಗಿ, ಬಹಳ ನಿಖರವಾಗಿ ಮಾತನಾಡಲಿದ್ದಾನೆ. ಖಂಡ ವಾಕ್ಯಗಳೆಂದರೇ ಆಕೃತಿಮಾಗಳೇ ವಾಕ್ಯವಾಗುವ ಸ್ಥಿತಿ. ಉದಾ: ಯಾರು?, ಬಂದೆ, ಎಲ್ಲಿಗೆ, ಇತ್ಯಾದಿ ಯಾವುದೇ ಪ್ರಶ್ನೆಗೆ ಉತ್ತರವಾಗಿ ಬರುವ ಏಕ ಶಬ್ದಗಳೇ ಪೂರ್ಣಗೊಳಿಸುವ ವಾಕ್ಯಗಳು. ಉದಾ: ಎಂದು ಬರವೆ? ಎಂಬ ಪ್ರಶ್ನೆಗೆ 'ನಾಳೆ' ಎಂಬುದು ಪೂರ್ಣತೆಯನ್ನು ನೀಡುತ್ತದೆ. ಆಹಾ! ಓಹೋ! ಅಯ್ಯೋ!

ಮುಂತಾದ ಉದ್ಗಾರ ವಾಚಕಗಳಿಂದ ಕೂಡಿದ ವಾಕ್ಯಗಳೇ ಉದ್ಗಾರ ವಾಚಕ ವಾಕ್ಯಗಳು. ಕರ್ತೃಪದ ಇಲ್ಲದೆಯೂ ವಾಕ್ಯ ವಿಹರಿಸುವಂತಿದ್ದರೇ ಅದೇ ಕರ್ತೃರಹಿತ ವಾಕ್ಯ. ಉದಾ: ಹಾಡುವರು, ಕೇಳುವರು ಮುಂತಾದವು. ಸಂಬೋಧನೆಗೆ ಬಳಸುವ ವಾಕ್ಯವೇ ಸಂಬೋಧನಾ ವಾಕ್ಯ. ಉದಾ: ಮಕ್ಕಳೆ, ಹಿರಿಯರೇ, ಕಿರಿಯರೇ, ಯುವಕರೇ ಇತ್ಯಾದಿ. ಮೇಲಿನ ಎಲ್ಲಾ ಅಂಶಗಳನ್ನು ಒಳಗೊಂಡಿರುವುದೇ ವಿಸ್ತಾರ ವಾಕ್ಯ. ಇದು ಸಿ.ಎಫ್. ಹಾಕೆಟ್ ಅವರ ವಾಕ್ಯವಿಧಾನ.

ವಾಕ್ಯದ ಬಗ್ಗೆ ಚರ್ಚೆ ನಡೆಸುವಾಗ ವಾಕ್ಯ ವಿಜ್ಞಾನದತ್ತ ಗಮನಹರಿಸುವುದು ಸೂಕ್ತ. ಶಬ್ದಗಳಿಂದ ನಿರ್ಮಿತವಾದ ವಾಕ್ಯಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದನ್ನು ವಾಕ್ಯವಿಜ್ಞಾನ ಎಂದು ಸ್ಥೂಲವಾಗಿ ಹೇಳಬಹುದು. ಇದನ್ನು ಕುರಿತು ಭಾಷಾ ವಿಜ್ಞಾನಿಗಳು ತಮ್ಮದೇ ಆದ ವ್ಯಾಖ್ಯಾನಗಳನ್ನು ಮಂಡಿಸಿದ್ದಾರೆ.

''ಸಿ.ಎಫ್. ಹಾಕೆಟ್: ಅವಿಭಾಜಕ ಆಕೃತಿಮಾಗಳು ಹಾಗೂ ಅವುಗಳ ಜೋಡಣೆಯ ಬಗ್ಗೆ ವಾಕ್ಯ ವಿಜ್ಞಾನದಲ್ಲಿ ಕಲಿಯುತ್ತೇವೆ. (Syntax studies that stock of suprasegmental morphemes and their arrangements) ಎಂದಿದ್ದಾರೆ.

ಲಿಯೋ ನಾರ್ಡೋ ಬ್ಲೂಮ್ ಫೀಲ್ಡ್ : Syntax includes the construction of phrases ಎಂದು ವ್ಯಾಖ್ಯಾನಿಸಿದ್ದಾರೆ.

ಎನ್.ಕೃಷ್ಣಸ್ವಾಮಿ : ಆಕೃತಿಮಾ ಹಾಗೂ ಶಬ್ದಗಳಿಂದ ಪದಪುಂಜ, ವಾಕ್ಯಖಂಡ, ವಾಕ್ಯ ಮುಂತಾದ ರಚನೆಗಳ ಅಧ್ಯಯನದ ವಿಷಯವೇ ವಾಕ್ಯ ವಿಜ್ಞಾನದ ವಸ್ತು (The Subject matter of syntax is the organisation of morphemes and words in to various combinations such as phrases claues and sentences) ಎಂದಿದ್ದಾರೆ.

ಬ್ಲಾಕ್ ಮತ್ತು ಟ್ರೇಗರ್ : 'ವಾಕ್ಯ ವಿಜ್ಞಾನ ಕೇವಲ ಸ್ವತಂತ್ರ ರೂಪಗಳ ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ'. (The Analysis of the construction that involve only the free forms in called syntax) ಎಂದಿದ್ದಾರೆ.

ಎಚ್.ಎ.ಗ್ಲೀಸನ್ : 'ವಾಕ್ಯರಚನಾ ಶಾಸ್ತ್ರ ನಿಕಟವಲ್ಲದ ದೊಡ್ಡ ರಚನೆಗಳ ಬಗ್ಗೆ ವಿವರಣೆ ನೀಡುತ್ತದೆ (Syntax is the description of larger combination)''[೧] ಎನ್ನುತ್ತಾರೆ.

ಒಟ್ಟಿನಲ್ಲಿ ಈ ಎಲ್ಲಾ ವಿದ್ವಾಂಸರ ಅಭಿಪ್ರಾಯದಿಂದ ನಾವು ಆಕೃತಿಮಾ ಹಾಗೂ ಅವುಗಳಿಂದಾದ ಅಸಾಂದ್ರ ರಚನೆಯ ಬಗ್ಗೆ ವಾಕ್ಯರಚನಾ ವಿಜ್ಞಾನದಲ್ಲಿ ಅಭ್ಯಸಿಸುತ್ತೇವೆ ಎಂದು ಹೇಳಬಹುದು.

---

೧. ಡಾ.ರಾಜೇಶ್ವರಿ ಮಹೇಶ್ವರಯ್ಯ:ವರ್ಣನಾತ್ಮಕ ಭಾಷಾ ವಿಜ್ಞಾನ :ಪ್ರ.ವ.೨೦೦೩ : ಪು.ಸಂ. ೧೬೩-೧೬೬

ವ್ಯಾಕರಣದ ಹೇಳಿಕೆಗಳು, ನಿಕಟತಮ ಘಟಕಗಳು, ರಚನೆಗಳು, ರೂಪಾಂತರ ವ್ಯಾಕರಣ ಈ ನಾಲ್ಕು ವಿಭಾಗಗಳೊಂದಿಗೆ ವಾಕ್ಯಗಳ ವಿಚಾರವಾಗಿ ವೈಜ್ಞಾನಿಕವಾಗಿ ಅಧ್ಯಯನ ಮಾಡಬಹುದೆಂಬುದನ್ನು ಭಾಷಾ ವಿಜ್ಞಾನಿಗಳು ತೋರಿಸಿಕೊಟ್ಟಿದ್ದಾರೆ. ಅದರಲ್ಲೂ ಡಾ. ರಾಜೇಶ್ವರಿ ಮಹೇಶ್ವರಯ್ಯ ಅವರು ಬಹಳ ಆಳವಾಗಿ ಈ ಕುರಿತು ವಿವೇಚಿಸಿದ್ದಾರೆ.


ಭಾಷೆಯನ್ನು ತಿಳಿಯಲು ಭಾಷೆಯ ವಾಕ್ಯರಚನೆ ತಿಳಿಯುವುದು ಅತ್ಯವಶ್ಯಕ. ಏಕೆಂದರೇ ಎಲ್ಲಾ ಭಾಷೆಯಲ್ಲಿಯೂ ಒಂದೇ ರೀತಿಯ ವಾಕ್ಯರಚನೆ ಇರುವುದಿಲ್ಲ. ಉದಾ: ಚೀನಿ ಭಾಷೆಯಲ್ಲಿ Ta-kuak ಎಂದರೇ ದೊಡ್ಡ ರಾಜ್ಯಗಳು ಎಂದರ್ಥ. Kuak-ta ಎಂದರೇ ರಾಜ್ಯದೊಡ್ಡದಾಗಿದೆ ಎಂದರ್ಥ. ಇಲ್ಲಿ ಬಹುವಚನ ಏಕವಚನವಾಗಿ ವ್ಯತ್ಯಾಸವಾದದ್ದು ಸ್ಥಾನಪಲ್ಲಟದಿಂದ. ಹೀಗೆ ಭಿನ್ನ ರೀತಿಯ ವಾಕ್ಯರಚನೆಯನ್ನು ವ್ಯಾಕರಣದ ಹೇಳಿಕೆಗಳು ಎಂಬ ಭಾಗದಲ್ಲಿ ಅಧ್ಯಯನ ಮಾಡಲಾಗುತ್ತದೆ. ಹಾಗೆಯೇ ರಾಮನು ರಾವಣನನ್ನು ಕೊಂದನು ಎಂಬುದು ಇಂಗ್ಲೀಷ್‌ನಲ್ಲಿ Rama killed Ravana ಎಂದಾಗುತ್ತದೆ. ಅಂದರೇ ಒಂದು ಭಾಷೆ ಸ್ಪಷ್ಟವಾಗಬೇಕಾದರೇ ಆ ಭಾಷೆಯ ವಾಕ್ಯದ ನಿಯಮದ ಅರಿವಿರಬೇಕು.

ಒಂದು ವಾಕ್ಯದಲ್ಲಿರುವ ಶಬ್ದ ಮತ್ತು ಅರ್ಥ ಇವುಗಳ ನಡುವಿನ ಸಂಬಂಧವನ್ನು ತಿಳಿಯುವ ವಿಧಾನವೇ ನಿಕಟತಮ ಘಟಕಗಳು. ಉದಾ: 'ಅದಿತಿ ಶಾಲೆಗೆ ಹೋದಳು' ಎಂಬ ವಾಕ್ಯದಲ್ಲಿ ಅದಿತಿ ಮತ್ತು ಶಾಲೆಗೆ ಹೋದಳು ಎಂಬ ಎರಡು ಘಟಕಗಳಿವೆ. 'ಅದಿತಿ ಶಾಲೆಗೆ' ಎಂಬ ಘಟಕವು ಸಂಬಂಧ ಹಾಗೂ ಪೂರ್ಣ ಅರ್ಥವನ್ನು ಹೊಂದಿಲ್ಲ. 'ಶಾಲೆಗೆ ಹೋದಳು', 'ಅದಿತಿ ಹೋದಳು' ಎಂಬ ಪದಗಳು ನಿಕಟ ಸಂಬಂಧವನ್ನು ಹೊಂದಿವೆ. ಇಂತಹ ಸಂಬಂಧವನ್ನು ತಿಳಿಸುವ ವಾಕ್ಯಗಳ ಕುರಿತ ಅಧ್ಯಯನ ಈ ವಾಕ್ಯವಿಜ್ಞಾನದಲ್ಲಿ ಆಗುತ್ತದೆ.

ವಾಕ್ಯ ವಿಜ್ಞಾನದಲ್ಲಿ ವಾಕ್ಯ ರಚನೆಗಳ ಅಧ್ಯಯನ ಬಹಳ ಮುಖ್ಯವಾದದ್ದು. ವಾಕ್ಯದಲ್ಲಿ ಧ್ವನಿ, ಧ್ವನಿಮಾ, ಆಕೃತಿಮಾ, ಶಬ್ದ, ಅರ್ಥ, ಪ್ರತ್ಯಯಗಳು, ನಿಕಟತಮ ಘಟಕಗಳು ಸೇರಿರುತ್ತವೆ. ಇವುಗಳು ಹೇಗೆ ವಾಕ್ಯಗಳಾಗುತ್ತವೆ ಎಂಬುದನ್ನು ತಿಳಿಯಲು ವಾಕ್ಯರಚನೆಯನ್ನು ಕುರಿತು ಅಧ್ಯಯನ ಮಾಡಲೇಬೇಕು. ಇದರಲ್ಲಿ ಗೌಣ ರಚನೆ, ಪ್ರಧಾನ ರಚನೆ ಎಂಬ ಎರಡು ವಿಭಾಗಗಳಿವೆ. ಗೌಣ ರಚನೆಯಲ್ಲಿ ಒಂದು ರೂಪ ಪ್ರಧಾನವಾಗಿದ್ದು, ಮತ್ತೊಂದು ಗೌಣವಾಗಿರುತ್ತದೆ. ಉದಾ: 'ಮಗು ಮುದ್ದಾಗಿದೆ' ಎಂಬ ವಾಕ್ಯದಲ್ಲಿ ಮುದ್ದಾಗಿದೆ ಎಂಬ ಪದ ತನ್ನ ಅಸ್ತಿತ್ವಕ್ಕಾಗಿ ಮತ್ತೊಂದು ಪದವನ್ನು ಆಶ್ರಯಿಸಬೇಕು. ಇದು ವಿಶೇಷಣ ಪದ ಮಾತ್ರ. ಆದರೇ ಮಗು ಒಂದು ಸ್ವತಂತ್ರವಾಚಿ. ಇಲ್ಲಿ 'ಮಗು' ಪ್ರಧಾನ ರಚನೆ, 'ಮುದ್ದಾಗಿದೆ' ಎಂಬುದು ಗೌಣರಚನೆ. ಒಂದು ವಾಕ್ಯದಲ್ಲಿನ ಘಟಕಗಳು ಸಮಾನ ಸ್ಥಾನದಲ್ಲಿ ನಿಲ್ಲುವುದಾದರೇ ಅದನ್ನು ಪ್ರಧಾನ ರಚನೆ ಎನ್ನಬಹುದು. ಉದಾ: ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ ಇಲ್ಲಿ ಯಾವ ಘಟಕವೂ ಮೇಲೂ ಅಲ್ಲ ಕೀಳೂ ಅಲ್ಲ. ಇಂತಹದನ್ನು ಕುರಿತು ವಾಕ್ಯರಚನಾ ವಿಜ್ಞಾನದಲ್ಲಿ ಅಧ್ಯಯನಿಸಲಾಗುತ್ತದೆ.

ಒಂದು ಭಾಷೆಯನ್ನು ವಾಸ್ತವದಲ್ಲಿ ಬಳಸುವುದಕ್ಕೆ ಅನ್ವಯವಾಗಿ ಅಧ್ಯಯನಿಸುವುದು ರೂಪಾಂತರ ವ್ಯಾಕರಣದಲ್ಲಿ ನಡೆಯುತ್ತದೆ. ಉದಾ: 'ಸ್ನೇಹ ಚೆನ್ನಾಗಿ ಹಾಡನ್ನು ಹಾಡಿದಳು'. ಈ ವಾಕ್ಯದಲ್ಲಿ 'ಸ್ನೇಹ'

ಎಂಬುದು ಕರ್ತೃಪದ ಹಾಗೂ ನಾಮಪದ, 'ಚೆನ್ನಾಗಿ' ಎನ್ನುವುದು ವಿಶೇಷಣಪದ. 'ಹಾಡು' ಎನ್ನುವುದು ಧಾತು. 'ಅನ್ನು' ಎನ್ನುವುದು ದ್ವಿತೀಯ ವಿಭಕ್ತಿ ಪ್ರತ್ಯಯ. 'ಅಳು' ಎಂಬುದು ಏಕವಚನ ಹಾಗೂ ಸ್ತ್ರೀವಾಚಿ, ಮತ್ತೊಂದು 'ಹಾಡು' ನಾಮಪ್ರಕೃತಿ, 'ದ್' ಎಂಬುದು ಭೂತ ಕಾಲಸೂಚಕ ಪ್ರತ್ಯಯವಾಗಿದೆ. ಇದನ್ನು ಒಂದು ಪಟ್ಟಿಯ ಮೂಲಕ ಈ ಕೆಳಗಿನಂತೆ ನೋಡಬಹುದು.




(ಪಟ್ಟಿ : ಬಹುಪಾಲು ಬದಲಾವಣೆಯೊಂದಿಗೆ ಡಾ. ರಾಜೇಶ್ವರಿ ಮಹೇಶ್ವರಯ್ಯ: ವರ್ಣನಾತ್ಮಕ ಭಾಷಾ ವಿಜ್ಞಾನದ ೧೯೪ನೇ ಪುಟದ ಆಧಾರದ ಮೇರೆಗೆ)

ಒಟ್ಟಿನಲ್ಲಿ ಭಾಷೆಯು ಸಂಪೂರ್ಣ ಅರ್ಥವನ್ನು ಕೊಡುವ ಘಟಕ. ಇದರ ಪದರು-ಪದರುಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡುವುದೇ ವಾಕ್ಯ ವಿಜ್ಞಾನ. ಭಾಷೆಯಲ್ಲಿ ಉಚ್ಚರಿತ ಧ್ವನಿ ಅತಿ ಸಣ್ಣ ಘಟಕವಾದರೇ, ಅರ್ಥ ಬದ್ಧವಾದ ವಾಕ್ಯ ಅತಿ ದೊಡ್ಡ ಘಟಕವಾಗಿದೆ. ಹೀಗೆ ಧ್ವನಿ, ಧ್ವನಿಮಾ, ಆಕೃತಿ, ಆಕೃತಿಮಾ, ವಾಕ್ಯಗಳು ಭಾಷೆಯ ಅವಿಭಜಿತ ಅಂಗಗಳಾಗಿವೆ. ಭಾಷೆಯ ಅಧ್ಯಯನದ ಸಂದರ್ಭದಲ್ಲಿ ಇವುಗಳಲ್ಲಿ ಒಂದು ಅಧ್ಯಯನದಿಂದ ಹೊರಗುಳಿದರೇ, ಭಾಷಾ ಸ್ವರೂಪದ ಅಧ್ಯಯನ ಅಪರಿಪೂರ್ಣವಾಗುತ್ತದೆ. ಭಾಷೆಯ ವೈಜ್ಞಾನಿಕ ವಿಶ್ಲೇಷಣೆಗೆ ಇವುಗಳ ಅರಿವು ಇರಲೇಬೇಕು. ಈ ಅಂಶಗಳು ಭಾಷಾ ಅಧ್ಯಯನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಧ್ವನಿ ಇಲ್ಲದೇ ಧ್ವನಿಮಾ, ಆಕೃತಿಮಾವಿಲ್ಲದೆ ವಾಕ್ಯಗಳ ಅಧ್ಯಯನಕ್ಕೆ ಸುಲಭ ಮಾರ್ಗ ದೊರಕುವುದಿಲ್ಲ. ಆದ್ದರಿಂದ ಇವು ಭಾಷೆಯ ವಿಶಿಷ್ಟ ಘಟಕಗಳು ಎಂದು ಕರೆಯಿಸಿಕೊಳ್ಳುತ್ತವೆ.



ಅಧ್ಯಾಯ- ನಾಲ್ಕು

ಭಾಷೆಯ ವ್ಯಾಪ್ತಿ



ಭಾಷೆ ಮತ್ತು ಸಾಹಿತ್ಯ:

ಭಾಷೆ ಮತ್ತು ಸಾಹಿತ್ಯಗಳ ಸಂಬಂಧವು ಅನನ್ಯವಾದದ್ದು. ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ. ಇಷ್ಟೇ ಅಲ್ಲದೇ, ಭಾಷೆಯ ಉದಯವೆಂದರೆ ಸಾಹಿತ್ಯದ ಉದಯವೇ ಸರಿ. ಕನ್ನಡ ಪರಂಪರೆಯ ಪುನರ್ ರಚನೆ ಮಾಡುವಾಗ ಅನಿವಾರ್ಯವಾಗಿ ಸಾಹಿತ್ಯ ಪರಂಪರೆಯನ್ನು ಉಲ್ಲೇಖಿಸುತ್ತೇವೆ. ಸಾಹಿತ್ಯದ ಸೃಷ್ಟಿ ಭಾಷೆಯ ಮೂಲಕ ಹಾಗೂ ಭಾಷೆಯಲ್ಲಿಯೇ ಆಗುತ್ತದೆ ಎಂಬುದು ಸ್ಪಷ್ಟ. ಅಲಂಕಾರಿಕರು ಸಾಹಿತ್ಯವನ್ನು ವಿಶಾಲ ಅರ್ಥದಲ್ಲಿ ಕಾವ್ಯ ಎಂದೇ ಕರೆಯುತ್ತಾರೆ. ವಾಕ್ಯಂ ರಸಾತ್ಮಕಂ ಕಾವ್ಯಂ (ವಿಶ್ವನಾಥ) ಎಂಬುದೇ ಮೊದಲಾಗಿ ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯ (ಜಗನ್ನಾಥ ಪಂಡಿತಃ) ಎಂಬುದಾಗಿ ಸಾಹಿತ್ಯವನ್ನು ವ್ಯಾಖ್ಯಾನಿಸಿದ್ದಾರೆ. ಕಾವ್ಯವು ರಸಾತ್ಮಕವೂ ಅರ್ಥಪೂರ್ಣವೂ ಆಗಿರಬೇಕಾದದು ಅತ್ಯಾವಶ್ಯಕ. ಈ ಗುಣವಿರದ ಕಾವ್ಯ ಉತ್ತಮಕಾವ್ಯ ಎನಿಸಿಕೊಳ್ಳದು. ಅಂದರೇ ಇಲ್ಲಿ ವಾಕ್ಯ ಮತ್ತು ಶಬ್ದಗಳು ಬಹುಮುಖ್ಯ ಪಾತ್ರವಹಿಸುತ್ತವೆ ಎಂದರ್ಥ. ಇವುಗಳ ಸಹಾಯವಿಲ್ಲದೆ ಒಂದು ಸಾಹಿತ್ಯ ಕೃತಿ ನಿರ್ಮಾಣವಾಗುವುದಿಲ್ಲ. ಇಲ್ಲಿ ವಾಕ್ಯ ಮತ್ತು ಶಬ್ದಗಳ ಸಮೂಹವನ್ನೇ ಭಾಷೆ ಎಂದು ಹೆಸರಿಸಿಕೊಳ್ಳಬೇಕಾಗುತ್ತದೆ. ಭಾಷೆ ಸಾಹಿತ್ಯಕ್ಕೆ ವಾಹಕವಾಗಿರುತ್ತದೆ ಮಾತ್ರವಲ್ಲದೆ ಭಾಷೆಯೇ ಕೆಲವು ವೇಳೆ ಸಾಹಿತ್ಯವಾಗಿಯೂ, ಸಾಹಿತ್ಯವೇ ಭಾಷೆಯಾಗಿಯೂ ಕಾಣಿಸಿಕೊಳ್ಳಬಹುದು. ಒಟ್ಟಿನಲ್ಲಿ ಭಾಷೆಯಿಂದ ಸಾಹಿತ್ಯವನ್ನು ಸಾಹಿತ್ಯದಿಂದ ಭಾಷೆಯನ್ನು ವಿವೇಚಿಸಬಹುದು.

ಆರಂಭದಲ್ಲೇ ಭಾಷೆಯ ವ್ಯಾಖ್ಯಾನ ಕುರಿತು ಚರ್ಚಿಸಿರುವುದರಿಂದ ಈ ಭಾಗದಲ್ಲಿ ಸಾಹಿತ್ಯದ ವ್ಯಾಖ್ಯಾನಗಳ ಬಗ್ಗೆ ಗಮನಹರಿಸಬಹುದು. ಸಾಹಿತ್ಯವನ್ನು ವ್ಯಾಖ್ಯಾನಿಸುವ ಪ್ರಯತ್ನ ಹಿಂದಿನಿಂದಲೂ ನಡೆದು ಬಂದಿದೆ ಅವುಗಳಲ್ಲಿ ಮುಖ್ಯವಾದ ಕೆಲವನ್ನು ಈ ಕೆಳಕಂಡಂತೆ ನೋಡಬಹುದು.

೧. ಜಿ.ಎಸ್. ಶಿವರುದ್ರಪ್ಪನವರು ; 'ಸಾಹಿತ್ಯ ಜೀವನದ ಗತಿಬಿಂಬ'[೧] ಎನ್ನುತ್ತಾರೆ.

೨. ಡಿ.ವಿ. ಗುಂಡಪ್ಪನವರು ; 'ಸಾಹಿತ್ಯ ಶಬ್ದಾರ್ಥಗಳ ಸಹಿತತ್ವ ಮಾತ್ರವಲ್ಲ ಎಲ್ಲಾ ಕಲೆ ಶಾಸ್ತ್ರಗಳನ್ನು ಒಳಗೊಂಡದ್ದು' ಎಂದಿದ್ದಾರೆ.

೩. ಹಡ್ಸನ್; 'ಭಾಷಾ ಮಾಧ್ಯಮದ ಮೂಲಕ ಬಾಳಿನ ಅಭಿವ್ಯಕ್ತಿಯೇ ಸಾಹಿತ್ಯ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೪. ಮಾಥ್ಯೂ ಆರ್ನಾಲ್ಡ್: 'ಜೀವನದ ವಿಮರ್ಶೆಯೇ ಸಾಹಿತ್ಯ' ಎಂದಿದ್ದಾರೆ.

೫. ಅರಿಸ್ಟಾಟಲ್: 'ಜೀವನದ ಅನುಕರಣೆಯೇ ಸಾಹಿತ್ಯ' ಎಂದಿದ್ದಾನೆ.

ಭಾಷೆ ಹಾಗೂ ಸಾಹಿತ್ಯವನ್ನು ಎರಡು ರೀತಿಯಾಗಿ ವಿಭಾಗಿಸಬಹುದು ;

೧. ಆಡು ಭಾಷೆ ಮತ್ತು ಅಲಿಖಿತ ಸಾಹಿತ್ಯ ಅಥವಾ ಜನಪದ ಸಾಹಿತ್ಯ.

೨. ಬರಹ ಭಾಷೆ ಮತ್ತು ಲಿಖಿತ ಸಾಹಿತ್ಯ ಅಥವಾ ಅಭಿಜಾತ ಸಾಹಿತ್ಯ.

---

೧. ಜಿ.ಎಸ್.ಶಿವರುದ್ರಪ್ಪ:ಗತಿ ಬಿಂಬ: ಸುರುಚಿ ಪ್ರಕಾಶನ, ಮೈಸೂರು:ಪ್ರ.ವ.:೧೯೬೯:ಪು.ಸಂ.೧

೧. ಆಡುಭಾಷೆ ಮತ್ತು ಅಲಿಖಿತ ಸಾಹಿತ್ಯ ಅಥವಾ ಜನಪದ ಸಾಹಿತ್ಯ: ಭಾಷೆ ಮೊದಲು ಉಚ್ಚಾರಣೆಯಲ್ಲಿ ಮಾತ್ರ ಇದ್ದಿತು. ಭಾಷೆಯು ಪರಿಪಕ್ವ ನೆಲೆಗೆ ಬರುತ್ತಿದ್ದಂತೆ ಲಿಪಿಯು ಅದನ್ನು ಹಿಡಿದಿಡುವ ಸಾಧನವಾಗಿ ಬಳಕೆಗೆ ಬಂದಿತು. ಕ್ರಿ.ಪೂ. ೪೦೦೦ದಿಂದ ಕ್ರಿ.ಪೂ. ೧೦,೦೦೦ದ ಅವಧಿಯಲ್ಲಿ ಲಿಪಿಯು ಆರಂಭಗೊಂಡಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಈ ಬಗೆಯ ಸಾಹಿತ್ಯಕ್ಕೆ ಮೌಖಿಕತೆಯೇ ಆಧಾರ. ಲಿಪಿಯಿಲ್ಲದೆ ಕರ್ತೃಯಾರೆಂದು ತಿಳಿಯುವದು ಸುಲಭವಲ್ಲ. ಜನರ ಆಡುಮಾತಿನಲ್ಲಿ ಉಳಿದುಕೊಂಡು ಬಂದಿರುವ ಸಾಹಿತ್ಯವನ್ನು ಜನಪದ ಸಾಹಿತ್ಯ ಎಂದು ಕರೆಯುತ್ತೇವೆ. ಸಾಹಿತ್ಯ ಚರಿತ್ರೆಯಲ್ಲಿ ಹಾಗೂ ಭಾಷೆಯ ದೃಷ್ಟಿಯಿಂದ ಜನಪದ ಸಾಹತ್ಯವನ್ನು ಕ್ರಮವಾಗಿ ಅಭ್ಯಸಿಸುವುದು ಕಷ್ಟಸಾಧ್ಯ. ಭಾಷೆಯ ಹಿನ್ನೆಲೆಯಲ್ಲಿ ಹೇಳುವುದಾದರೇ ಭಾಷಾ ವಿಜ್ಞಾನಗಳು ಭಾಷೆ ಕುರಿತು ಅಧ್ಯಯನ ಮಾಡುವಾಗ ಬರಹ ಭಾಷೆಗಿಂತ ಆಡುಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ.

ಜನಪದ ಸಾಹಿತ್ಯ ಆಡು ಭಾಷೆಯನ್ನು ಅಧ್ಯಯನಕ್ಕೊಳಪಡಿಸುತ್ತದೆ. ಸಹಸ್ರಾರು ವರ್ಷಗಳ ಮಾನವ ಜೀವನ ಯಾತ್ರೆಯಲ್ಲಿ ಒಂದು ಕಾಲಕ್ಕೆ ಜೀವನದ ಸಮಸ್ತ ವ್ಯಾಪಾರವೂ ಕಂಠಸ್ಥ ಸಂಸ್ಕೃತಿಯ ಮೂಲಕವೇ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿತ್ತು. ಶಿಷ್ಟ ಸಾಹಿತ್ಯದ ಉದಯದಿಂದ ಜನಪದ ಸಾಹಿತ್ಯ (Folklore)ವೇನು ಮುಕ್ಕಾಗಲಿಲ್ಲ. ಹಾರ್‍ಸ್ಲ್ಯಾಂಡ್- ಜೀವನದ ರೀತಿ-ನೀತಿಗಳು, ಆಚಾರ-ವಿಚಾರಗಳು, ಸಂಪ್ರದಾಯ ನಂಬಿಕೆಗಳು, ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗಿಬರುತ್ತದೆ ಎಂದಿದ್ದಾನೆ. ಅಲಿಖಿತ ಸಾಹಿತ್ಯದಲ್ಲಿ ಗೀತೆ, ಹಾಡು, ಪದ, ಕತೆ, ಲಾವಣಿ, ಗಾದೆ, ಒಗಟು ಮುಂತಾದ ಪ್ರಕಾರಗಳು ಕಂಡು ಬರುತ್ತವೆ. ಒಂದು ಪ್ರಕಾರದ ಸಾಹಿತ್ಯಕ್ಕಿಂತ ಮತ್ತೊಂದು ಪ್ರಕಾರದ ಸಾಹಿತ್ಯಕ್ಕೆ ಭಾಷೆ ಬೇರೆ ಬೇರೆ ರೂಪವನ್ನು ತಾಳುತ್ತದೆ. ಸಾಮಾನ್ಯವಾಗಿ ಜನಪದಗೀತೆ, ಹಾಡು, ಪದ, ಲಾವಣಿಗಳಲ್ಲಿ ಗೇಯತೆ, ಲಯ ಮತ್ತು ಛಂದೋಬದ್ಧತೆ ವಿಶಿಷ್ಟವಾಗಿ ಸಮೀಕರಿಸಿರುತ್ತದೆ. ಕತೆ, ಗಾದೆ, ಒಗಟು ಮುಂತಾದವುಗಳಲ್ಲಿ ಆಯಾ ಪ್ರದೇಶದ ಜನರ ಆಡು ಭಾಷೆಯ ಸ್ವರೂಪವನ್ನು ಕಾಣಬಹುದು. ಇವು ಆ ಭಾಷೆಯ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುತ್ತವೆ. ಜನಪದ ಸಾಹಿತ್ಯದ ಜ್ಞಾನ ಒಬ್ಬ ವ್ಯಕ್ತಿಯದಲ್ಲ. ಅದು ಇಡೀ ಸಮುದಾಯದ ಪರಂಪರೆಯ ಅಭಿವ್ಯಕ್ತಿಯಾಗಿರುತ್ತದೆ. ಉದಾ: ಮಹಾದೇಶ್ವರ ಕಾವ್ಯ, ಮಂಟೇಸ್ವಾಮಿಯ ಕಾವ್ಯ, ಜುಂಜಪ್ಪನ ಕಾವ್ಯ ಇತ್ಯಾದಿ. 'ನಾಲಗೆ ಕುಲವನ್ನು ಅರಿಯಿತು' ಎಂಬ ಮಾತಿನಂತೆ ವ್ಯಕ್ತಿ ಆಡುವ ಮಾತಿನಂತೆ ಆತನ ಸಮುದಾಯದ ಸಂಸ್ಕೃತಿಯನ್ನು ತಿಳಿಯಬಹುದು.

ಜನಪದ ಸಾಹಿತ್ಯ ಪ್ರಪಂಚದ ಎಲ್ಲಾ ಭಾಷೆಗಳಲ್ಲಿ ಇದೆ. ಉದಾ: ಫಿನ್ಲೆಂಡಿನ ಜನಪದ ಮಹಾಕಾವ್ಯ 'ಕಲೆವಾಲ' ಅಲಿಖಿತ ರೂಪದಲ್ಲಿಯೇ ಉಳಿದು ಬಂದಿದೆ. ಹಾಗೆಯೇ ಕ್ರಿ.ಪೂ. ೮೦೦ರ ಅವಧಿಗೆ ಮೊದಲು ವೇದಗಳನ್ನು ಹಾಗೂ ಮಂತ್ರಗಳನ್ನು ಬಾಯಿಪಾಠ ಮಾಡುತ್ತಿದ್ದರು. ಇದರಲ್ಲಿ ಮೂರು ವಿಧ: ಕ್ರಮಪಾಠ, ಜಠಪಾಠ, ಘನಪಾಠ. ಪ್ರಾಚೀನ ಕಾಲದಲ್ಲಿ ಮಹಾಭಾರತ, ವೇದ, ಉಪನಿಷತ್ತುಗಳು, ಮಹಾರಾಜರ ವಿವರ ಉಪದೇಶಗಳು ಬಾಯಿಪಾಠದಲ್ಲಿದ್ದವು. ಮೊದಲು ಬ್ರಿಟಿಷರ ಕಾಲದಲ್ಲಿ ಸಂಗ್ರಹ ಕಾರ್ಯ ಆರಂಭವಾಗಿ, ಅವುಗಳನ್ನು ಯಥಾವತ್ತಾಗಿ ಸಂಪಾದಿಸಿ ಮುದ್ರಿಸಲಾಯಿತು. ಪಾಶ್ಚಾತ್ಯದಲ್ಲಿ ಕ್ರಿ.ಶ.

೮೦೦ರಲ್ಲಿ 'ಹೋಮರ'ನ ಇಲಿಯಡ್, ಒಡಿಸ್ಸಿ, ಕಾವ್ಯಗಳು ಬೇರೆ-ಬೇರೆ, ಚಿಕ್ಕ-ಚಿಕ್ಕ ಕಥಾನಕಗಳಾಗಿ, ಜನಸಾಮಾನ್ಯರು ತಮಗಿಷ್ಟಬಂದಂತೆ ಬಳಸುತ್ತಿದ್ದರು. ಹೀಗಿದ್ದಾಗ ಕ್ರಿ.ಪೂ. ೫೪೪ರಲ್ಲಿ 'ಸೋಲಾನ್' ಎಂಬ ಜನನಾಯಕ ಒಂದು ಆಜ್ಞೆಯನ್ನು ಹೊರಡಿಸಿದ. ಬಾಯಿಗೆ ಬಂದಂತೆ, ನಿಮಗಿಷ್ಟವಾದಂತೆ ಹೋಮರನ ಕಾವ್ಯವನ್ನು ಬಳಸಬೇಡಿ, ಬಳಸಿದರೆ ಅನುಸ್ಯೂತವಾಗಿ ಬಳಕೆ ಮಾಡಬೇಕು ಎಂದು ಆದೇಶಿಸಿದನು. ಈ ಆಜ್ಞೆಯ ಅನಂತರದಲ್ಲಿ ಇದು ಸಂಗ್ರಹಗೊಂಡು ಪ್ರಕಟವಾಯಿತು. ಮುಂದೆ ಪಿಸಿಸ್ಟ್ರಾಟಸ್ ಎಂಬ ವ್ಯಕ್ತಿ ಹೋಮರನ ಮಹಾಕಾವ್ಯಕ್ಕೆ 'ಥೀಸಿಯಸ್' ಎಂಬ ಗ್ರೀಕ್ ವೀರನ ಕಥೆಯನ್ನೂ ಸೇರಿಸಿದನು.

ಜನಪದ ಸಾಹಿತ್ಯದಲ್ಲಿ ಗುರುತಿಸಬಹುದಾದ ವಿಶಿಷ್ಟ ಭಾಷಿಕ ಲಕ್ಷಣವೆಂದರೆ ಅದು ಜನರ ಭಾಷೆಯಾಗಿ, ಒಂದೇ ರೀತಿ ಕಾಲದಿಂದ ಕಾಲಕ್ಕೆ ವರ್ಗಾವಣೆಯಾಗುತ್ತಾ ಬಂದಿದೆ. ಇಲ್ಲಿ ಭಾಷೆಯ ರಚನೆಯನ್ನು ಕುರಿತು ಭಾಷೆಯ ಪ್ರಾಂತಭೇದ ಮತ್ತು ಅವಸ್ಥಾ ಭೇದಗಳನ್ನು ಗುರುತಿಸಲು ಕಷ್ಟಸಾಧ್ಯ ಹೀಗೆ ಜನಪದ ಸಾಹಿತ್ಯದಲ್ಲಿ ಭಾಷೆಗೆ ವಿಶಿಷ್ಟಸ್ಥಾನವಿದೆ. ಅಲ್ಲಿ ಭಾಷೆಯ ರಚನೆಯ ಬಗ್ಗೆ ಮಾಹಿತಿ ಅಲಭ್ಯವಾದರೂ ವಿವಿಧ ಪ್ರಕಾರಗಳನ್ನು ಅಧ್ಯಯನ ಮಾಡುವುದರಿಂದ ಆ ಜನರ ಆಡುಭಾಷೆಯನ್ನು ತಿಳಿಯಬಹುದು.

೨. ಬರೆಹಭಾಷೆ ಮತ್ತು ಲಿಖಿತ ಸಾಹಿತ್ಯ ಅಥವಾ ಅಭಿಜಾತ ಸಾಹಿತ್ಯ: ಲಿಖಿತ ಸಾಹಿತ್ಯವು ಗ್ರಾಂಥಿಕ ಅಥವಾ ಬರಹದ ಭಾಷೆಗೆ ಸಂಬಂಧಿಸಿದೆ. ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಸುಮಾರು ೨೦೦೦ ವರ್ಷಗಳ ಸುದೀರ್ಘ ಇತಿಹಾಸವಿದೆ. ಇಂತಹ ಸುದೀರ್ಘ ಅವಧಿಯಲ್ಲಿ ಭಾಷೆ, ಒಂದು ಕಾಲ ಘಟ್ಟದಿಂದ ಇನ್ನೊಂದು ಕಾಲ ಘಟ್ಟಕ್ಕೆ ತನ್ನದೇ ಆದ ರೀತಿಯಲ್ಲಿ ಬದಲಾವಣೆಯಾಗುತ್ತಿದೆ. ಭಾಷೆಯು ಬದಲಾದಂತೆ ಸಾಹಿತ್ಯದ ಸ್ವರೂಪವು ಬದಲಾಗುತ್ತದೆ.

ಪೂರ್ವದ ಹಳಗನ್ನಡ ಭಾಷೆ ಮತ್ತು ಸಾಹಿತ್ಯ (ಆರಂಭದಿಂದ ೧೦ನೆಯ ಶತಮಾನ): ಪಂಪನಿಗಿಂತ ಹಿಂದಿನ ಕಾಲದ ಭಾಷೆಯನ್ನು ಪೂರ್ವದ ಹಳಗನ್ನಡ ಭಾಷೆ ಎಂದು ಕರೆಯಲಾಗುತ್ತದೆ. ಈ ಕಾಲದಲ್ಲಿ ನಮಗೆ ಹಲವಾರು ಕನ್ನಡ ಶಾಸನಗಳು ದೊರಕುತ್ತವೆ. ಕ್ರಿ.ಶ. ೪೫೦ರಲ್ಲಿ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿಯಲ್ಲಿ 'ಹಲ್ಮಿಡಿ ಶಾಸನ' ದೊರಕಿತು. (ಹಾ.ತಿ. ಕೃಷ್ಣೇಗೌಡ ಅವರು ಕ್ರಿ.ಶ. ೪೫೦ ಎಂದು ಅಭಿಪ್ರಾಯಿಸಿದ್ದಾರೆ.) ಇದು ಕನ್ನಡ ಸಾಹಿತ್ಯ ಹಾಗೂ ಕನ್ನಡ ಭಾಷೆಯ ಪ್ರಾಚೀನತೆಯನ್ನು ಏಕಕಾಲದಲ್ಲಿ ಎತ್ತಿಹಿಡಿಯುತ್ತದೆ. ಇಲ್ಲಿರುವ ಭಾಷೆಯನ್ನು ಬಿ.ಎಲ್.ರೈಸ್, ಆರ್.ನರಸಿಂಹಾಚಾರ್ಯ, ಡಿ.ಎಲ್.ನರಸಿಂಹಾಚಾರ್ ಮೊದಲಾದವರು ಪೂರ್ವದ ಹಳಗನ್ನಡ ಎಂದು ಗುರುತಿಸಿದ್ದಾರೆ. ಇಲ್ಲಿ 'ಅನ್'ಗೆ ಬದಲಾಗಿ 'ಆನ್' ರೂಪ 'ಅ' ಕಾರಕ್ಕೆ ಬದಲಾಗಿ 'ಆ' ಕಾರ ಬಳಕೆಯಾಗಿರುವುದನ್ನು ನೋಡಬಹುದು. ಉದಾ: ದೇಶದ >ದೇಶದಾ, ಕುಲಭೋರನ >ಕುಲಭೋರನಾ, ಆದನ್ >ಆದನಾ ಮುಂತಾದವು.

ಕ್ರಿ.ಶ. ೫೦೦ರಲ್ಲಿ ಚಿತ್ರದುರ್ಗ ಜಿಲ್ಲೆಯ ತಮ್ಮಟ ಕಲ್ಲು ಗ್ರಾಮದಲ್ಲಿ ತಮ್ಮಟಕಲ್ಲು ಶಾಸನ ದೊರೆಯಿತು. ಇದೂ ಪೂರ್ವದ ಹಳಗನ್ನಡ ಶಾಸನವಾಗಿದೆ. ಇಲ್ಲಿ ಅವಿತಥ ಅಥವಾ ಕರ್ನಾಟಕ ಎಂಬ

ಹೆಸರಿನ ವೃತ್ತವೇ ಇದೆ. ಸಂಸ್ಕೃತದ ಪ್ರಭಾವ ಕನ್ನಡದ ಮೇಲೆ ಅಧಿಕವಾಗಿತ್ತೆಂಬುದು ಇದರಿಂದ ತಿಳಿಯುತ್ತದೆ.

ವೃತ್ತ ಪಾಠ: ‘ಬಿಣಮಣಿ ಅನ್ತುಭೋಗಿ ಬಿಣದುಳ್ಮ ನೆಲ್ಮನ ದೋನ್
ರಣಮುಖದುಳ್ಳ ಕೋಲಂ ನೆರಿಯುಕ್ಕ್ರ್ಮನಿನ್ದ್ಯಗುಣನ್
ಪ್ರಣಯಿಜಕ್ಕೆ ಕಾಮನರಸಿ ತೋತ್ಪಲವರ್ಣ್ಣನವನ್
ಗುಣಮಧುರಾಂಕ್ಕದಿವು ಪುರುಷನ್ಪುರುಷ ಪ್ರವರನ್’॥[೧]

ಗುಣ ಮಧುರಾಂಕನ ಹೊಗಳಿಕೆಯ ವೀರಗಲ್ಲಾದ ಈ ಶಾಸನ ಭಾಷೆಯ ದೃಷ್ಟಿಯಿಂದ ಮುಖ್ಯವಾದುದಾಗಿದೆ. ಸಂಸ್ಕೃತದ ಪ್ರಭಾವವೂ ಎದ್ದು ಕಾಣುತ್ತದೆ.

ಬಾದಾಮಿಯ ಬಂದು ಬಂಡೆಕಲ್ಲಿನ ಮೇಲೆ ಸು. ೭ನೇ ಶ.ಮಾ.ದಲ್ಲಿ ಕಪ್ಪೆ ಅರಭಟ್ಟನ ಸ್ತುತಿಪರ ಪದ್ಯ ಉಳ್ಳ ಬಾದಾಮಿ ಶಾಸನ ದೊರಕಿತು. ಇಲ್ಲಿ ಪ್ರಾರಂಭದ ಗದ್ಯ ಮತ್ತು ಶ್ಲೋಕ ಬಿಟ್ಟು ಉಳಿದವು. ತ್ರಿಪದಿಯಲ್ಲಿವೆ. ಅದು ಆ ಕಾಲದ ಕನ್ನಡ ಸಾಹಿತ್ಯಕ್ಕೆ ಮೊದಲಿಗೆ ನೀಡಿದ ಒಂದು ವಿಶಿಷ್ಟ ಪ್ರಕಾರವಾಗಿದೆ.

ತ್ರಿಪದಿ: ‘ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ಪೆರನಲ್ಲ’॥[೨]

ಇದು ಕನ್ನಡ ಛಂದಸ್ಸಿನ ತಾಯಿ ಬೇರಾದ ತ್ರಿಪದಿಯ ಮೊಟ್ಟ-ಮೊದಲನೆಯ ರೂಪ. ಇದರಲ್ಲಿ ಭಾವಗೀತೆಯ ಸತ್ವವೂ ಇದೆ. ಹಾಗೂ ಭಾವ ಹಾಗೂ ಭಾಷೆಗಳ ಯೋಗ್ಯವಾದ ಸಂಗಮವಾಗಿದೆ. ಇದು ಭಾಷೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಬಹು ಪ್ರಾಮುಖ್ಯತೆಯುಳ್ಳ ಶಾಸನವಾಗಿದೆ.

ಕ್ರಿ.ಶ. ಸು.೬೫೦ರಿಂದ ೭೦೦ರ ಅವಧಿಯಲ್ಲಿ ಶ್ರವಣಬೆಳಗೊಳದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಒಂದು ಶಾಸನ ದೊರಕಿದೆ. ಇದು ವಿವಿಧ ವೃತ್ತಗಳಿಂದ ಆವೃತವಾಗಿದೆ. ಒಂದೊಂದು ವೃತ್ತವೂ ಉಪಮೆ, ರೂಪಕಗಳಿಂದ ಕೂಡಿವೆ. ಕಾವ್ಯಶಕ್ತಿ, ಅಲಂಕಾರ, ವ್ಯಾಕರಣ ವಿಚಾರ ಸಾಹಿತ್ಯಿಕ ಅಂಶ ಭಾಷಿಕ ವಿವರಗಳಿಗಾಗಿ ಈ ಶಾಸನ ಕನ್ನಡ ಪರಂಪರೆಯಲ್ಲಿ ಉತ್ತಮ ಸ್ಥಾನ ಪಡೆದುಕೊಂಡಿದೆ. ಕ್ರಿ.ಶ. ೮೫೦ ರಲ್ಲಿ ಕನ್ನಡದ ಪ್ರಥಮ ಗ್ರಂಥವಾದ ಕವಿರಾಜ ಮಾರ್ಗ ದೊರಕಿತು. ಇದು ಭಾಷೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಬಹಳ ಪ್ರಮುಖವಾದದ್ದು. ‘ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್’ ಇದು ಕನ್ನಡನಾಡಿನ ಚರಿತ್ರೆಯ ಬಗ್ಗೆ ತಿಳಿಸುತ್ತದೆ. ‘ಚದುರರ್ ನಿಜದಿಂ ಕುರಿತೋದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್’ ಇಲ್ಲಿ ನಾಡು, ನುಡಿ, ಜನರ ಬಗ್ಗೆ ಮಾಹಿತಿದೊರಕುತ್ತದೆ. ಏಕಕಾಲದಲ್ಲಿ ಇದು ಪೂರ್ವದ ಹಳಗನ್ನಡವು ಹಳಗನ್ನಡವಾಗುತ್ತಿದ್ದ ಸಂಕ್ರಮಣ ಕಾಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಚಿತ್ತಾಣ, ಬೆದಂಡೆ ಎಂಬ ಕಾವ್ಯರೂಪಗಳು ಇದರಿಂದ ಪರಿಚಯವಾಗುತ್ತವೆ. ಕ್ವಚ್ಚಿತ್ತಾಗಿ ಸಂಸ್ಕೃತದ ಪ್ರಭಾವ ಹಾಗೂ

---

೧. ರಾಜಪ್ಪ ದಳವಾಯಿ(ಸಂ): ಕನ್ನಡಸಾಹಿತ್ಯಕೋಶ:ಶ್ರೀರಾಘವೇಂದ್ರ ಪ್ರಕಾಶನ, ಬೆಂಗಳೂರು:ಪ್ರ.ವ.೨೦೦೬:ಪು.ಸಂ.:೭
೨. ರಂ.ಶ್ರೀ ಮುಗಳಿ:ಕನ್ನಡ ಸಾಹಿತ್ಯ ಚರಿತ್ರೆ:ಪುಸ್ತಕಾಲಯ ಧಾರವಾಡ:ಪ್ರ.ವ.:೨೦೦೬:ಪು.ಸಂ.೪

ಆಡುನುಡಿಯ ಪ್ರಭಾವವಾಗಿರುವುದನ್ನು ಗುರುತಿಸಬಹುದು.

ಪೂರ್ವದ ಹಳಗನ್ನಡವು ಶಾಸನ, ಸಾಹಿತ್ಯ ಕೃತಿಗಳಲ್ಲಿ ಯಾವ ಸ್ವರೂಪದಲ್ಲಿ ಬಳಕೆಯಲ್ಲಿದ್ದವು ಎಂಬುದನ್ನು ಈ ಕೆಳಗಿನಂತೆ ಕಾಣಬಹುದು.

ಉದಾ: ಪೂರ್ವದ ಹಳಗನ್ನಡದಲ್ಲಿ ದ್ವಿತೀಯ ಪ್ರತ್ಯಯದ ಸ್ವರ ದೀರ್ಘವಾಗಿದೆ. ಸ್ವರ್ಗಾಗ್ರಮಾನ್, ದೇಗುಲಮಾನ್, ಇದಾನ್, ಪ್ರಸಾದಾಂತರಮಾನ್, ಪೂರ್ವದ ಹಳಗನ್ನಡದಲ್ಲಿ ಷಷ್ಠಿಯ ಪ್ರತ್ಯಯ ದೀರ್ಘವಾಗಿದೆ.

ಉದಾ: ನರಕಾದಾ, ಏೞಿನೆಯಾ, ಭಟ್ಟಾರರಾ, ಇವರಾ.

ನಿಷೇದಾರ್ಥಕ ಕ್ರಿಯಾಪದದ ಸ್ವರ ಪೂರ್ವದ ಹಳಗನ್ನಡದಲ್ಲಿ ದೀರ್ಘವಾಗಿದೆ. ಉದಾ: ತಪ್ಪಾದ, ಇಲ್ಲಾದ.

ಪೂರ್ವದ ಹಳಗನ್ನಡದಲ್ಲಿ ಗುಣವಾಚಕಗಳನ್ನು ದೀರ್ಘಗೊಳಿಸಲಾಗಿದೆ.

ಉದಾ: ಏೞಿಯಾ, ಮೂೞಿನೆಯಾ, ಗಣದಾ, ಸಾರಿರಾ

ಪೂರ್ವದ ಹಳಗನ್ನಡದಲ್ಲಿ ಪದದ ಆದಿಯಲ್ಲಿ 'ವ' ಕಾರ ಹಾಗೂ ಸಪ್ತಮಿಯ ಪ್ರತ್ಯಯದ ರೂಪ ಪೂರ್ವದ ಹಳಗನ್ನಡದಲ್ಲಿ 'ಉಳ್' ಬಂದಿದೆ.

ಉದಾ: ೧. ವೇಳೆಯಾದೆ, ವಿಟ್ಟಾರ್, ವೆಟ್ಟದುಳ್

೨. ಧರಣೆಯುಳ್, ವೈಶಾಖ ಮಾಸದುಳ್, ನಾಡುಳ್

ಉತ್ತಮ ಪುರುಷ ಬಹುವಚನದಲ್ಲಿ ಸಮಾವೇಶಕ ಮತ್ತು ಅಸಮಾವೇಶಕಗಳು ಪೂರ್ವದ ಹಳಗನ್ನಡದಲ್ಲಿ ಕಂಡುಬರುತ್ತವೆ.

ಉದಾ:	ಅಂ	>	ಎಮ್ಮ	>	ಎಮಗೆ (ಸಮಾವೇಶಕ)
	ನಾಂ	>	ನಮ್ಮ	>	ನಮಗೆ (ಅಸಮಾವೇಶಕ)

ಪೂರ್ವದ ಹಳಗನ್ನಡ ಭಾಷೆಯಲ್ಲಿ ತಮಿಳಿನ ಛಾಯೆ ಸ್ಪಷ್ಟವಾಗಿ ಕಂಡು ಬರುತ್ತದೆ.

ಉದಾ:	ತಮಿಳು	ಪೂರ್ವದ ಹಳಗಳನ್ನಡ
	ಮಕನ್	ಮಗನ್
	ನರಗ	ನರಕ
	ಮಲ್ಲಿಗೆ	ಮಲ್ಲಿಕ
	ಚಂದ್ರಿಗ	ಚಂದ್ರಿಕ
	ನಾಯುಗನ್	ನಾಯಕನ್

ಪೂರ್ವದ ಹಳಗನ್ನಡದಲ್ಲಿ ಬಿಂದು (೦) ಪ್ರಯೋಗವಾಗುವ ಕಡೆ 'ನ' ಕಾರ ಬಳಕೆಯಾಗುತ್ತದೆ.

ಉದಾ: ಅವನ್ಗೆ, ಬನ್ದು, ಆದಿತ್ಯನ್, ಮುಗಿನ್ದರ್.

ಪೂರ್ವದ ಹಳಗನ್ನಡದಲ್ಲಿ 'ಪ' ಕಾರ 'ಹ' ಕಾರವಾಗಿಲ್ಲ. ಈ ಕಾಲದಲ್ಲಿಯೇ 'ಪ' ಕಾರ 'ಹ' ಕಾರವಾಗುಲು ಪ್ರಾರಂಭವಾಗಿ ೯ನೆಯ ಶತಮಾನದ ಅನಂತರ ಅದು ಸಂಪೂರ್ಣವಾಗಿ ಬೆಳಕಿಗೆ ಬಂದಿತು. ಪೂರ್ವದ ಹನ್ನಗನ್ನಡದಲ್ಲಿ ಪೂರ್ಣ ಕ್ರಿಯಾಪದದಲ್ಲಿ, ಕಾಲ, ಲಿಂಗ, ವಚನವಿವಕ್ಷೆ ಇಲ್ಲದ ರೂಪಗಳು ಹೆಚ್ಚಿವೆ. ಕ್ರಿಯಾಧಾತುಗಳು ಅನುಸ್ವಾರದ ಮೂಲಕ ಅಂತ್ಯವಾಗುತ್ತಿದ್ದವು.

ಉದಾ: ಇರ್ಕ್ಕುಂ, ಅಕ್ಕುಂ, ಬಗೆಗುಂ, ಬರ್ಕುಂ, ಇತ್ಯಾದಿ.

ಹಳಗನ್ನಡ ಭಾಷೆ ಮತ್ತು ಸಾಹಿತ್ಯ (೧೦ನೆಯ ಶತಮಾನದಿಂದ ೧೨ನೆಯ ಶತಮಾನ): ಪೂರ್ವದ ಹಳಗನ್ನಡ ಕಾಲದಲ್ಲಿ ಪಕ್ವಗೊಂಡ ಭಾಷೆ ಈ ಕಾಲದಲ್ಲಿ ಸಾಹಿತ್ಯ ಸೃಷ್ಟಿಗೆ ಸಜ್ಜಾಯಿತು. ಈ ಯುಗ ಭಾಷೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಪ್ರೌಢ ಸಂಪ್ರದಾಯದ ಸ್ಥಿರತೆ ಮತ್ತು ಘನತೆಗಳನ್ನು ಹೊಂದಿತ್ತು. ಈ ಕಾಲಘಟ್ಟದಲ್ಲಿ ಭಾಷೆ, ಶೈಲಿ, ವಸ್ತು, ಛಂದಸ್ಸು, ಅಲಂಕಾರ ಇವುಗಳಲ್ಲಿ ಸಂಸ್ಕೃತದ ಪ್ರಭಾವ ಹೇರಳವಾಗಿತ್ತು. ಈ ಕಾಲದಲ್ಲಿ ಮಹಾಕವಿ ಪಂಪ ಕವಿಯು ವಿಕ್ರಮಾರ್ಜುನ ವಿಜಯಂ ಮತ್ತು ಆದಿಪುರಾಣಂ ಎಂಬ ಎರಡು ಚಂಪು ಕಾವ್ಯಗಳನ್ನು ರಚಿಸಿದ, ಒಂದು ಲೌಕಿಕ ಕಾವ್ಯ ಮತ್ತೊಂದು ಆಗಮಿಕ ಕಾವ್ಯ. 'ರನ್ನ ಎಂಬ ಕವಿಯು ಸಾಹಸ ಭೀಮ ವಿಜಯಂ' (ಗದಾಯುದ್ಧ), ಅಜಿತನಾಥ ಪುರಾಣ ತಿಲಕಂ ಎಂಬ ಕೃತಿಗಳನ್ನು ರಚಿಸಿದ್ದಾನೆ. ೧ನೆಯ ನಾಗವರ್ಮನು ಕರ್ನಾಟಕ ಕಾದಂಬರಿ, ಛಂದೋಂಬುಧಿಗಳನ್ನು ರಚಿಸಿದ್ದಾನೆ. ಛಂದೋಬುಧಿ ಕನ್ನಡದ ಮೊದಲ ಛಂದೋಗ್ರಂಥವಾಗಿದೆ. ಕೇಶಿರಾಜನು ಶಬ್ದಮಣಿದರ್ಪಣಂ ವ್ಯಾಕರಣ ಗ್ರಂಥವನ್ನು, ಶ್ರೀಧರಾಚಾರ್ಯರು ಜಾತಕ ತಿಲಕ ಎಂಬ ಶಾಸ್ತ್ರ ಗ್ರಂಥವನ್ನು ದುರ್ಗಸಿಂಹನು ಪಂಚತಂತ್ರವನ್ನು ಬರೆದಿದ್ದಾರೆ.

ಹಳಗನ್ನಡ ಭಾಷೆಯಲ್ಲಿ ಸಂಸ್ಕೃತದ ಪ್ರಭಾವ, ಱಳ ಬಳಕೆ, ೦ (ಬಿಂದು) ಬಳಕೆ, ಇದ್ದು ನಿಧಾನವಾಗಿ ಇವು ಲೆ ೋಪವಾಗುತ್ತಾ ಬಂದವು. ಉದಾ: ಪಂಪನ ವಿಕ್ರಮಾರ್ಜುನ ವಿಜಯಂನ ಪ್ರಥಮಾಶ್ವಾಸದ ಪ್ರಥಮ ಪದ್ಯ :

'ಉ॥ ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ
ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರನೊತ್ತಿಕೊಂಡು ಮಾ॥
ತ್ಮೀಯ ಸುಪುಷ್ಪವೃಷ್ಟಿಯನೊಡಂಬಡೆ ತಾಳ್ದಿಯುಮಿಂತುದಾತ್ತನಾ
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯ ಕೋಟಿಯಂ ॥೧॥'[೧]

೧. ಡಾ. ಕೆ.ವಿ. ಪುಟ್ಟಪ್ಪ (ಸಂ):ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ : ಪ್ರ.ವ. ೨೦೦೪:ಪು.ಸಂ. : ೧

ವ್ಯಂಜನಾಂತ, ಅನುಸ್ವಾರದ ಬಳಕೆ, ಸಂಸ್ಕೃತದ ಪ್ರಭಾವ ದಟ್ಟವಾಗಿ ಈ ಅವಧಿಯಲ್ಲಿತ್ತು. ಈ ಕಾಲದಲ್ಲಿ ಕವಿಗಳು ತಮ್ಮ ಪಾಂಡಿತ್ಯದ ಪ್ರೌಢತೆಯನ್ನು ಪ್ರದರ್ಶಿಸಲು ಸಂಸ್ಕೃತವನ್ನು ಬಳಸುತ್ತಿದ್ದರೆಂದು ಚರಿತ್ರಕಾರರು ಅಭಿಪ್ರಾಯ ಪಡುತ್ತಾರೆ. ಚಂಪೂ ಸಾಹಿತ್ಯ ಕೃತಿಗಳಲ್ಲಿ ಹಳಗನ್ನಡ ಭಾಷಾ ಸ್ವರೂಪವು ಯಾವ ರೀತಿಯಲ್ಲಿ ಬಳಕೆಯಲ್ಲಿತ್ತು ಎಂಬುದನ್ನು ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಈ ಮುಂದಿನಂತೆ ಪರಿಶೀಲಿಸಬಹುದು.

ಆಖ್ಯಾತ ಪ್ರತ್ಯಯಗಳ ದೀರ್ಘಸ್ವರ ಹಳಗನ್ನಡದ ಕಾಲದಲ್ಲಿ ಹ್ರಸ್ವವಾಗಿದೆ. ಅಂತೆಯೇ ಓನ್-ಓಳ್-ಓರ್ ಎಂಬ ಆಖ್ಯಾತ ಪ್ರತ್ಯೆಯಗಳು ಹಳಗನ್ನಡದಲ್ಲಿ ಅನ್-ಅಳ್-ಅರ್ ಎಂದಾಗಿದೆ.

	ಪೂರ್ವದ ಹಳಗನ್ನಡ	ಹಳಗನ್ನಡ
ಉದಾ:೧	ಬಂದಾನ್	ಬಂದನ್
	ಮುಡಿಪ್ಪಿದಾರ್	ಮುಡಿಪ್ಪಿದರ್
೨	ನೋಡಿದೋಳ್	ನೋಡಿದಳ್
	ಅೞಿದೋನ್	ಅೞಿದನ್
	ನೋಡಿದೋರ್	ನೋಡಿದರ್.

ಸ್ವರಗಳ ನಡುವಿನ 'ಪ' ಕಾರ 'ಹ' ಕಾರವಾಗಿ ಹಳಗನ್ನಡದಲ್ಲಿ ಪರಿವರ್ತನೆ ಆಗುತ್ತದೆ. ಅಂತೆಯೇ ಪದದ ಆದಿಯ 'ಪ' ಕಾರವೂ 'ಹ'ಕಾರವಾಗುತ್ತದೆ.

ಉದಾ:	ಪೂರ್ವದ ಹಳಗನ್ನಡ	ಹಳಗನ್ನಡ
೧	ಅಪ್ಪನ್	ಅಹನ್
	ಇಪ್ಪನ್	ಇಹನ್
೨	ಪಲ್ಲು	ಹಲ್ಲು
	ಪತ್ತು	ಹತ್ತು

ಹಳಗನ್ನಡದಲ್ಲಿ 'ೞ' ಮತ್ತು 'ಳ'ಕಾರಗಳ ನಡುವಿನ ಅಂತರವಿಲ್ಲದೆ, ಎಲ್ಲಾ ಕಡೆಯೂ ಕುಳ(ಳ)ಗಳು ಬಳಕೆಯಾಗುತ್ತವೆ. ಉಳ್ ಪ್ರತ್ಯಯವು ಸಪ್ತಮಿ ವಿಭಕ್ತಿ ವಿಭಕ್ತಿ ಪ್ರತ್ಯಯ ಒಳ್ ಆಗುತ್ತದೆ.

ಉದಾ:	ಪೂರ್ವದ ಹಳಗನ್ನಡ	ಹಳಗನ್ನಡ
೧	ಇೞಿ	ಇಳಿ
	ಬಾೞಿ	ಬಾಳು
೨	ಅಹವದುಳ್	ಅಹವದೊಳ್
	ಧರಣಿಯುಳ್	ಧರಣಿಯೊಳ್

ಹಳಗನ್ನಡದಲ್ಲಿ ಸ್ವರಗಳ ನಡುವಿನ 'ಮ' ಕಾರ 'ವ' ಕಾರವಾಗಿ ಬದಲಾಗುತ್ತದೆ. ಪೂರ್ವದ

ಹಳಗನ್ನಡದ 'ವ' ಕಾರ ಹಳಗನ್ನಡದಲ್ಲಿ 'ಬ' ಕಾರವಾಗುತ್ತದೆ.

ಉದಾ:	ಪೂರ್ವದ ಹಳಗನ್ನಡ		ಹಳಗನ್ನಡ
೧	ನೀಮ್+ಉ	=	ನೀವು
	ತಾಮ್+ಉ	=	ತಾವು
೨	ವಿತ್ತು		ಬಿತ್ತು
	ವೆಟ್ಟ		ಬೆಟ್ಟ

ವಿಜಾತೀಯ ಸಂಯುಕ್ತಾಕ್ಷರಗಳು ಸಜಾತೀಯ ಸಂಯುಕ್ತಾಕ್ಷರಗಳಾಗುತ್ತವೆ. ಅಲ್ಲದೆ, ದ್ವಿತ್ವವಾಗಿ ಬರೆಯುತ್ತಿದ್ದ ಸಂಯುಕ್ತಾಕ್ಷರ ಹಳಗನ್ನಡದಲ್ಲಿ ವಿರಳವಾಯಿತು.

ಉದಾ:	ಪೂರ್ವದ ಹಳಗನ್ನಡ	ಹಳಗಡನ್ನ
೧.	ಗರ್ದೆ	ಗದ್ದೆ
	ಕೞ್ತೆ	ಕತ್ತೆ
೨.	ಊರ್ಗ್ಗೆ	ಊರ್ಗೆ
	ಸ್ವರ್ಗ್ಗ	ಸ್ವರ್ಗ

ಹಳಗನ್ನಡದಲ್ಲಿ ಸಬಿಂದುಕಗಳು ಅಬಿಂದುಕಗಳಾಗುತ್ತವೆ.

ಉದಾ:	ಪೂರ್ವದ ಹಳಗನ್ನಡ	ಹಳಗನ್ನಡ
	ದಾಂಟು	ದಾಟು
	ತೋಂಟ	ತೋಟ

ಹೀಗೆ ಪೂರ್ವದ ಹಳಗನ್ನಡದ ಸಾಹಿತ್ಯ ಮತ್ತು ಭಾಷೆಗೂ ಹಳಗನ್ನಡ ಸಾಹಿತ್ಯ ಮತ್ತು ಭಾಷೆಗೂ ತನ್ನದೇ ಆದ ಭಿನ್ನತೆ ಇದೆ.

ನಡುಗನ್ನಡ ಭಾಷೆ ಮತ್ತು ಸಾಹಿತ್ಯ (೧೨ನೆಯ ಶತಮಾನದಿಂದ ೧೮ನೆಯ ಶತಮಾನ): ಈ ಕಾಲವನ್ನು ಕನ್ನಡ ಭಾಷೆಯ ಹಾಗೂ ಸಾಹಿತ್ಯದ ಸಮೃದ್ಧಿ ಕಾಲ ಎಂದು ಕರೆಯಲಾಗುತ್ತಿದೆ. ಏಕೆಂದರೇ ಈ ಕಾಲದಲ್ಲಿ ಭಾಷೆಯು ಹೆಚ್ಚು ನೈಜತೆಯೊಂದಿಗೆ ಸಮಾಜಮುಖಿಯಾಯಿತು. ಸಾಹಿತ್ಯವು ಕೇವಲ ಪಾಂಡಿತ್ಯದ ಆಗರವಾಗಿದೆ ಸರಳತೆ, ಸಹಜತೆಯಿಂದ ಶೋಭಿಸಿತು. ಸಂಸ್ಕೃತದ ಪ್ರಭಾವದಿಂದ ಬಿಡುಗಡೆಯಾಗಬೇಕೆಂಬ ಹಳಗನ್ನಡದ ಹೋರಾಟ ಮಧ್ಯಕಾಲದಲ್ಲಿ ಯಶಸ್ಸು ಕಂಡಿತು. ಈ ಕಾಲದಲ್ಲಿ ಭಾಷೆಯು ಸಮಸ್ಯೆಯಾಗಲಿಲ್ಲ. ಹರಿಹರ, ರಾಘವಾಂಕರು, ಛಂದೋಬದ್ಧವಾಗಿ ಕೃತಿ ರಚಿಸಿದ್ದಾರೆ. ನಂಜುಂಡ ಕವಿಯ ಕಾಲಕ್ಕೆ ಭಾಷೆ ಮತ್ತಷ್ಟು ಸುಗವಾಗಿದೆ. ಈ ಕಾಲದಲ್ಲಿ ವಚನ ಸಾಹಿತ್ಯ, ಕನ್ನಡ ಭಾಷಾ ಸಾಧ್ಯತೆಯನ್ನು ಹಿಗ್ಗಿಸಿತು. ವಚನಕಾರರಾದ ಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಡೋಹಾರ ಕಕ್ಕಯ್ಯ, ಮುಕ್ತಾಯಕ್ಕ ಮುಂತಾದವರು ವಚನಗಳನ್ನು ರಚಿಸಿದರು.

ಬಸವಣ್ಣನ ಒಂದು ವಚನ : 'ಅರ್ಥರೇಖೆಯಿದ್ದಲ್ಲಿ ಫಲವೇನು? ಆಯುಷ್ಯ ರೇಖೆಯಿಲ್ಲದನ್ನಕ್ಕ ?
ಹಂದೆಯ ಕೈಯಲಿ ಚಂದ್ರಾಯುಧವಿದ್ದು ಫಲವೇನು ?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು ?
ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು ?
ನಮ್ಮ ಕೂಡಲ ಸಂಗಮ ಶರಣರನರಿಯದವರ
ಕೈಯಲ್ಲಿ ಲಿಂಗವಿದ್ದು ಫಲವೇನು ಶಿವಪಥವನರಿಯದನ್ನಕ್ಕ!'[೧]

ಈ ಸಾಲುಗಳು ಗದ್ಯ ಹಾಗೂ ಪದ್ಯ ಸ್ವರೂಪದಲ್ಲಿವೆ. ಆದ್ದರಿಂದ ಇದನ್ನು ಹಾಡುಗಬ್ಬವೂ ಹೌದು, ಓದು ಗಬ್ಬವೂ ಹೌದು ಎಂದು ಕರೆಯಲಾಗುತ್ತದೆ. ಪ್ರಗತಿಪರ ದೃಷ್ಟಿಕೋನದ ವಚನಕಾರರು ಸಾರ್ವಕಾಲಿಕ ಸಾಮಾಜಿಕ ಮೌಲ್ಯಗಳನ್ನು ವಿದ್ಯೆ ಕಲಿಯದ ಜನಪದರಿಗೂ ಮುಟ್ಟುವಂತೆ ಸರಳವಾಗಿ ಕೃತಿಗಳನ್ನು ರಚಿಸಿದರು. ಈ ಸಾಹಿತ್ಯದ ಭಾಷೆಯಲ್ಲಿ ಸಂಸ್ಕೃತದ ಬಳಕೆ ಇಲ್ಲ. ಅಚ್ಚಗನ್ನಡವನ್ನು ಬಳಸಲು ಮುಂತಾದವರು ಇವರು. ಜೊತೆಗೆ ಈ ಕಾಲದಲ್ಲಿ ಭಾಗವತಿ ಭಕ್ತಿಯ ಕುಮಾರವ್ಯಾಸ (ಕುಮಾರವ್ಯಾಸ ಭಾರತ), ಕುಮಾರವಾಲ್ಮೀಕಿ (ತೊರವೆರಾಮಾಯಣ), ಲಕ್ಷ್ಮೀಶ (ಜೈಮಿನಿಭಾರತ) ಮುಂತಾದವರು ಷಟ್ಪದಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಭಾಷೆಯು ನಡುಗನ್ನಡವೆಂದು ಪ್ರಸಿದ್ಧವಾಗಿದೆ. ಷಟ್ಪದಿ ಈ ಕಾಲದಲ್ಲಿ ಹೆಚ್ಚು ಪ್ರಚುರ ಪಡೆಯಿತು. ಬಾಮಿನಿಷಟ್ಪದಿಯ ಬಳಕೆಯಲ್ಲಿ ಹೆಚ್ಚಿನ ಕೃತಿಗಳು ಹೊರಬಂದಿವೆ. ಶಿವಶರಣರಂತೆ ಇವರೂ ಜನಮುಖಿಯಾಗಿ ಕೃತಿಗಳನ್ನು ರಚಿಸಿದವರಾಗಿದ್ದಾರೆ.

ಕುಮಾರವ್ಯಾಸನ ಷಟ್ಪದಿ : 'ತಿಳಿಯ ಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯ ನೊರೆವೆನು ಕೃಷ್ಣ ಮೆಚ್ಚಲಿಕೆ'[೨]

ಮಹಾಭಾರತದ ಕೃಷ್ಣ ಜನಸಾಮಾನ್ಯರಿಗೆ ಅಪರಿಚಿತನಲ್ಲ, ಶಕುನಿ, ಭೀಷ್ಮ, ಕರ್ಣ, ಪಾಂಡವ, ಕೌರವರ ಬಗ್ಗೆ ಎಲ್ಲರೂ ಕೇಳಿತಿಳಿದಿರುತ್ತಾರೆ. ಆದರೆ ಸಾಮಾನ್ಯ ಜನರೂ ಓದಿಮೆಚ್ಚುವ ಹಾಗೆ ರಚನೆಯಾದ ಸಾಹಿತ್ಯ ಕೃತಿ ಇದಾಗಿದೆ. ಅಂದರೆ ಇಲ್ಲಿನ ಶೈಲಿ, ಭಾಷೆ, ಸರ್ವರಿಗೂ ಎಟುಕುವಂತಹದ್ದಾಗಿದೆ. ಇವರ ಜೊತೆಗೆ ಈ ಕಾಲದಲ್ಲಿ ದಾಸರು ತಮ್ಮ ಸಾಹಿತ್ಯ ಸುಧೆಯನ್ನು ಕೀರ್ತನ ಪ್ರಕಾರದ ಮೂಲಕ ಹರಿಸಿದ್ದಾರೆ.

ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಾದ ಪುರಂದರದಾಸ, ಕನಕದಾಸರನ್ನು ಇಲ್ಲಿ ಹೆಸರಿಸಬಹುದು. ಕನಕದಾಸರು ಮೋಹನ ತರಂಗಿಣಿ, ಹರಿಭಕ್ತಿಸಾರ, ರಾಮಧಾನ್ಯ ಚರಿತ್ರೆಗಳನ್ನು ಬರೆದಿದ್ದಾರೆ.

---

೧. ಶ್ರೀ ಜಿ.ವಿ.ಶಾಸ್ತ್ರಿ:ಬಸವಣ್ಣನವರ ವಚನಗಳು: ಪಾರು ಪ್ರಕಾಶನ-ಗದಗ:ಪು.ಸಂ. ೨೧
೨. ಕುವೆಂಪು, ಮಾಸ್ತಿ (ಸಂ): ಕುಮಾರವ್ಯಾಸ ಮಹಾಕವಿಯ ಕರ್ನಾಟ ಭಾರತ ಕಥಾಮಂಜರಿ:ಪ್ರ.ವ. ೧೯೮೮ :ಪು.ಸಂ.೨

ಪುರಂದರದಾಸರ ಒಂದು ಕೀರ್ತನೆಯ ಸ್ವರೂಪ:

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕನನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ.

ದಾಸರ ಕೀರ್ತನೆಯ ಹಾಡುಹಬ್ಬವಾಗಿದೆ. ವಚನದಂತೆ ಇದೂ ಸಾಮಾಜಿಕ ಪರಿವರ್ತನೆಗಾಗಿ ಸೃಷ್ಠಿಯಾದಂತಹದ್ದು. ಈ ಭಾಷೆಯಲ್ಲಿ ಸಂಸ್ಕೃತದ ಭಾಷೆಯ ಹೆಚ್ಚಿನ ಪ್ರಭಾವವಿಲ್ಲದ್ದರಿಂದ ಸುಲಭವಾಗಿ ಜನಸಾಮಾನ್ಯರನ್ನು ತಲುಪಿತು. ತಿಳಿಗನ್ನಡದಲ್ಲಿ ನಿರಕ್ಷರಕುಕ್ಷಿಗಳಿಗೂ ಅರ್ಥವಾಗುವಂತೆ ನಾಣ್ಣುಡಿ/ಗಾದೆಗಳಿಗೆ ಸಮಾನವಾದ ಕೀರ್ತನೆಗಳನ್ನು ರಚಿಸುವ ಮೂಲಕ ಸಾಹಿತ್ಯದಲ್ಲಿ ಸುಧಾರಣೆ ಕಂಡಿತು. ನಡುಗನ್ನಡ ಸಾಹಿತ್ಯ ಕೃತಿಗಳಲ್ಲಿ ಬಳಕೆಯಾದ ಭಾಷೆಯ ವೈಶಿಷ್ಟ್ಯವನ್ನು ಭಾಷಾ ವಿಜ್ಞಾನದ ನೆಲೆಯಲ್ಲಿ ಈ ಕೆಳಗಿನಂತೆ ಗುರುತಿಸಬಹುದು.

ನಡುಗನ್ನಡ ಭಾಷೆಯಲ್ಲಿ ದೀರ್ಘ ಸಮಾಸ ಪದಗಳು ಕಡಿಮೆಯಾದವು. ಸಂಸ್ಕೃತ ಪದಗಳಿಗೆ ಬದಲಾಗಿ ಅಪಭ್ರಂಶ ಪದಗಳು ಹೆಚ್ಚಾಗಿ ಬಳಕೆಗೆ ಬಂದವು. ಅನುನಾಸಿಕ ಮತ್ತು ಯ,ರ,ಲ,ಳ, ಧ್ವನಿಗಳಿಂದ ಅಂತ್ಯವಾಗುತ್ತಿದ್ದ ಪದಗಳು ನಡುಗನ್ನಡದಲ್ಲಿ ಸ್ವರಾಂತ್ಯವಾದವು.

ಉದಾ:	ಹಳಗನ್ನಡ	ನಡುಗನ್ನಡ
	ಬಾಯ್	ಬಾಯಿ
	ಊರ್	ಊರು
	ಮುಗಿಲ್	ಮುಗಿಲು
	ಕೇಳ್	ಕೇಳು

ನಡುಗನ್ನಡ 'ಲ' ಕಾರಾಂತ್ಯ ಶಬ್ದಗಳು 'ಳ' ಕಾರಾಂತ್ಯಗಳಾದವು. 'ರ' ಕಾರ 'ಳ' ಕಾರ ಅಕ್ಷರಗಳ ನಡುಗನ್ನಡ ಕಾಲದಲ್ಲಿ ಪರಸ್ಪರ ಐಕ್ಯವಾದವು.

ಉದಾ:	ಹಳಗನ್ನಡ	ನಡುಗನ್ನಡ
೧	ಕೊರಲ್	ಕೊರಳ್
	ಬೆರಲ್	ಬೆರಳ್
೨	ಬಾೞ	ಬಾಳು
	ಮೞೆ	ಮಳೆ

ಹಳಗನ್ನಡದ 'ಅಂ' ಮತ್ತು 'ಅನ್' ಎಂಬ ಪ್ರತ್ಯಯಗಳು ನಡುಗನ್ನಡದ ನಾಮ ಪದಗಳಲ್ಲಿ ಲೋಪವಾಗುತ್ತದೆ. ಬಹುವಚನ 'ಗಳ್' ಎಂಬುದರ ಅನುನಾಸಿಕಗಳು ಲೋಪವಾಗುತ್ತವೆ.

ಉದಾ:	ಹಳಗನ್ನಡ	ನಡುಗನ್ನಡ
	ರಾಮಂ	ರಾಮ
	ಬಂದನ್	ಬಂದ
	ಮರಂಗಳ್	ಮರಗಳು
	ಕೊಳಂಗಳ್	ಕೊಳಗಳು

'ತನ' ಎಂಬ ಕನ್ನಡ ಪ್ರತ್ಯಯಗಳನ್ನು ಸಂಸ್ಕೃತ ಪದಗಳಿಗೆ ಹೆಚ್ಚುವುದು ನಡುಗನ್ನಡ ಕಾಲದಲ್ಲಿ ಕಂಡುಬರುತ್ತದೆ.

ಉದಾ:	ಹಳಗನ್ನಡ	ನಡುಗನ್ನಡ
	ದುಷ್ಟ	ದುಷ್ಟತನ
	ಸ್ತ್ರೀ	ಸ್ತ್ರೀತನ

ಹೀಗೆ ಹಳಗನ್ನಡ ಮತ್ತು ನಡುಗನ್ನಡದಲ್ಲಿ ಸಾಹಿತ್ಯದ ವಸ್ತು, ಉದ್ದೇಶ ಬದಲಾಗಿರುವುದನ್ನು ಕಾಣಬಹುದು. ಹಳಗನ್ನಡ ಸಾಹಿತ್ಯದಲ್ಲಿ ರಾಜಾಶ್ರಯ, ರಾಜನನ್ನು ಮೆಚ್ಚಿಸಲು, ಧರ್ಮ ಪ್ರಚಾರಕ್ಕಾಗಿ ತಮ್ಮ ಪಾಂಡಿದ್ಯ ಪ್ರದರ್ಶನಕ್ಕಾಗಿ ಮುಂತಾದ ಉದ್ದೇಶಗಳಿಂದ ಕೃತಿ ರಚಿಸಿದರೇ, ನಡುಗನ್ನಡ ಸಾಹಿತ್ಯವು ಅದಕ್ಕಿಂತ ಭಿನ್ನವಾದ ಆಯಾಮದಲ್ಲಿ ನಿಲ್ಲುತ್ತದೆ. ಸಮಾಜದ ವಿಡಂಬನೆ, ಅರಿವು ಮೂಡಿಸುವುದು. ಜಾತಿ, ಮತ, ಅಜ್ಞಾನ-ಅಂಧಕಾರ, ಮಡಿ-ಮೈಲಿಗೆ ಮೂಢನಂಬಿಕೆಗಳ ವಿರುದ್ಧದ ಧ್ವನಿಯನ್ನು ಈ ಸಾಹಿತ್ಯದಲ್ಲಿ ಕಾಣಬಹುದು. ಆದ್ದರಿಂದ ಆ ಕಾಲದ ಭಾಷೆ ಪ್ರೌಢವಾಗಿರಬೇಕಾಗಿರಲಿಲ್ಲ. ಸರಳವಾಗಿ ಜನಸಾಮಾನ್ಯರನ್ನು ತಲುಪುವಂತಿದ್ದರೆ ಸಾಕಾಗಿತ್ತು. ಹೀಗೆ ಕನ್ನಡದಲ್ಲಿ ಪ್ರತಿಯೊಂದು ಕಾಲಘಟ್ಟದಲ್ಲಿಯೂ ಭಾಷೆ, ಸಾಹಿತ್ಯಗಳು ಒಂದಕ್ಕೊಂದು ಪೂರಕವಾಗಿ ಪ್ರೇರಕವಾಗಿ ಬೆಳೆಯುತ್ತಾ ಬಂದಿವೆ.

ಹೊಸಗನ್ನಡ ಭಾಷೆ ಮತ್ತು ಸಾಹಿತ್ಯ (೧೮ನೆಯ ಶತಮಾನದಿಂದ ಮುಂದುವರಿದು): ಕ್ರೈಸ್ತ ಮಿಷನರಿಗಳ ಆಗಮನದಿಂದ ಕನ್ನಡದಲ್ಲಿ ಹೊಸಗನ್ನಡ ಭಾಷೆಯ ಉಗಮಕ್ಕೆ ನಾಂದಿಯಾಯಿತು. ಆಧುನಿಕತೆಯ ಅಂಶ ಕನ್ನಡ ಭಾಷೆಯಲ್ಲಿ ಇಣುಕ ತೊಡಗಿತು, ಹೊಸಗನ್ನಡದ ಅರುಣೋದಯವಾಯಿತು. ಈ ಕಾಲದ ಸಾಹಿತ್ಯವನ್ನು ಹೊಸಗನ್ನಡ ಸಾಹಿತ್ಯ ಎಂದು ಭಾಷೆಯನ್ನು ಹೊಸಗನ್ನಡ ಭಾಷೆ ಎಂದು ಕರೆಯಲಾಗುತ್ತದೆ. ಇಲ್ಲಿ ನವೋದಯ ಪ್ರಗತಿಶೀಲ, ನವ್ಯ, ದಲಿತ ಬಂಡಾಯ, ಮುಸ್ಲಿಂ ಪರಹೋರಾಟ, ಸ್ತ್ರೀವಾದಿ ಸಾಹಿತ್ಯಿಕ ನೆಲೆಗಟ್ಟನ್ನು ಗುರುತಿಸಬಹುದು. ಕ್ರೈಸ್ತ ಮಿಷನರಿಗಳ ಆಗಮನ ಇಂಗ್ಲಿಷ್ ಶಿಕ್ಷಣಕ್ಕೆ ನಾಂದಿಯಾಯಿತು. ಸಾಹಿತ್ಯಿಕ, ಸಾಂಸ್ಕೃತಿಕ ಬದಲಾವಣೆಗಳಾದವು. ಎಂ.ಗೋವಿಂದ ಪೈ ಇಂಗ್ಲೀಷ್ ಪದ್ಯದ ಅನುವಾದ ಮಾಡಿದರೂ ಹಾಗೂ ಪ್ರಾಸವನ್ನು ಕೈಬಿಟ್ಟರು. ಬಿ.ಎಂ.ಶ್ರೀ 'ಇಂಗ್ಲೀಷ್ ಗೀತಗಳು' (ಅನುವಾದ ಕೃತಿ) ಸಂಕಲನವನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯಕ್ಕೆ ಆಧುನಿಕತೆಯನ್ನು ತಂದುಕೊಟ್ಟರು. ಕುವೆಂಪು, ಬೇಂದ್ರೆ, ಮಾಸ್ತಿ, ಪು.ತಿ.ನ. ಶಿವರಾಮ ಕಾರಂತ, ಕೆ.ಎಸ್.ನರಸಿಂಹಮೂರ್ತಿ ಮುಂತಾದ ಕವಿಗಳು, ಕಥೆಗಾರರು ಕಾದಂಬರಿಕಾರರು, ನಾಟಕಕಾರರು, ಪ್ರಬಂಧಕಾರಿಂದ ಆಧುನಿಕ ಸಾಹಿತ್ಯ ಸಮೃದ್ಧವಾಯಿತು.

ಹಾಗೆಯೇ ಭಾಷೆಯೂ ವಿವಿಧ ಬಗೆಯಲ್ಲಿ ಬೆಳೆಯಿತು. ಪದ್ಯ ಸಾಹಿತ್ಯದಲ್ಲಿ ಗೇಯತೆ, ಲಯಬದ್ಧತೆ ಪ್ರಧಾನ ನಾಟಕ ಸಾಹಿತ್ಯವು ಸಂಭಾಷಣಾ ಪ್ರಧಾನವಾಗಿರುತ್ತದೆ, ಕಥೆ, ಕಾದಂಬರಿಗಳಲ್ಲಿ ಭಾಷೆ ಪ್ರಮಾಣೀಕರಣವಾಗಿರುವುದೇ ಹೆಚ್ಚು. ಪ್ರಗತಿಶೀಲ ಲೇಖಕರಾದ ತ.ರಾ.ಸು. ಬಸವರಾಜು ಕಟ್ಟೀಮನಿ, ನಿರಂಜನ, ಆ.ನ.ಕೃ ಮುಂತಾದವರು ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿದರು. ಇವರು ಪ್ರಮಾಣ ಭಾಷೆಯನ್ನೇ ಬಳಸಿದರು. ಅಲ್ಲದೆ ವಾಸ್ತವಕ್ಕೆ ಹೆಚ್ಚು ಬೆಲೆಕೊಟ್ಟರು. ವಿನಾಯಕ ಕೃಷ್ಣ ಗೋಕಾಕ್, ಗೋಪಾಲಕೃಷ್ಣ ಅಡಿಗರ ನೇತೃತ್ವದಲ್ಲಿ ನವ್ಯ ಪಂಥ ಹುಟ್ಟಿಕೊಂಡಿತು. ಅಸಂಗತಾವಾದ ಪರಕೀಯ ಪ್ರಜ್ಞೆಯ ಚಿಂತನೆಗಳು ಹೆಚ್ಚಿದ್ದವು. ಗಿರೀಶ್ ಕಾರ್ನಾಡ್, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಪಿ. ಲಂಕೇಶ್, ಎ.ಕೆ. ರಾಮಾನುಜನ್, ಪೂರ್ಣಚಂದ್ರ ತೇಜಸ್ವಿ, ಪ್ರಮುಖರು. ಜಾತಿ, ಧರ್ಮ, ಆರ್ಥಿಕ ಅಸಮಾನತೆ ಮುಂತಾದ ಕಾರಣಗಳಿಂದ ಆಗುತ್ತಿರುವ ಶೋಷಣೆಯನ್ನು ಪ್ರತಿಭಟಿಸಿದರು. ಸರ್ಕಾರ ಕ್ರಿ.ಶ. ೧೯೧೭ರಲ್ಲಿಯೇ ಸರ್ವರೂ ಸಮಾನರು ಎಂದು ಘೋಷಿಸಿತ್ತು. ಆದರೆ ಅಸಮಾನತೆ ಮಾತ್ರ ಇಂದಿಗೂ ತಾಂಡವವಾಡುತ್ತಿದೆ. ಇದರ ವಿರುದ್ಧದ ಚಳುವಳಿ ಇವರದಾಗಿದೆ. ಇಂತಹ ಸಾಹಿತ್ಯ ಪ್ರೇರಕ ಚಳುವಳಿಗೆ ಭಾಷೆಯೇ ಪ್ರಧಾನವಾದ ಅಂಗ. ಸಿದ್ದಲಿಂಗಯ್ಯ, ದೇವನೂರು ಮಹಾದೇವು, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರ, ಅರವಿಂದ ಮಾಲಗತ್ತಿ ಮುಂತಾದವರು ಈ ಘಟ್ಟದಲ್ಲಿ ತಮ್ಮ ಬರವಣಿಗೆಯನ್ನು ಮಾಡಿದ್ದಾರೆ. ಬಾನು ಮಷ್ತಾಕ್, ಸಾರಾ ಅಬುಬಕರ್, ರಹಮತ್ ತರೀಕೆರೆ, ಫಕೀರ್ ಮಹಮದ್ ಕಟ್ಪಾಡಿ, ಬೋಳುವಾರು ಮುಂತಾದವರು ಸ್ತ್ರೀಪರ, ಮುಸ್ಲಿಂಪರ ಸಂವೇದನೆಯ ಸಾಹಿತ್ಯಕ್ಕೆ ಧಾರೆಯೆರೆದರು. ಭಾಷೆ ಪ್ರಾದೇಶಿಕ ಸೊಗಡಿನಿಂದ ಅರ್ಥಪೂರ್ಣ ಅಭಿವ್ಯಕ್ತಿಗೆ ಸಾಧನವಾಯಿತು. ಇವರಲ್ಲಿ ಕೆಲವರು ತಮ್ಮ ಪ್ರಾದೇಶಿಕ ಉಪಭಾಷೆಯಲ್ಲಿ ಕೃತಿ ರಚಿಸಿದರು. ಸಾಹಿತ್ಯ ಹಾಗೂ ಭಾಷೆಗೂ ಮಹತ್ವ ಸ್ಥಾನಗಿಟ್ಟಿಸಿಕೊಟ್ಟಿದ್ದಾರೆ.

ಒಂದು ಸಾಹಿತ್ಯ ಕೃತಿಯ ಅಧ್ಯಯನವೆಂದರೆ ಏಕಕಾಲದಲ್ಲೆ ಭಾಷಿಕ ಅಧ್ಯಯನವೂ ಆಗುವ ಸಾಧ್ಯತೆ ಇದೆ. ಹೊಸಗನ್ನಡ ಕಾಲದಲ್ಲಿ ಇಂಗ್ಲೀಷ್ ಶಬ್ದಗಳು ಹೆಚ್ಚು ಬಳಕೆಗೆ ಬಂದವು. ಸಂಸ್ಕೃತ ವರ್ಣಮಾಲೆಯೇ ಕನ್ನಡಕ್ಕೂ ಬಳಕೆಯಾಯಿತು. ಱ ಮತ್ತು ೞ ಕಾರ ಅಕ್ಷರಗಳು ಸಂಪೂರ್ಣವಾಗಿ ನಶಿಸಿ ಹೋದವು.

ಉದಾ:	ಹಳಗನ್ನಡ	ಹೊಸಗನ್ನಡ
	ಅಱಿವು	ಅರಿವು
	ಕುಱುಹು	ಕುರುಹು
	ಮಱೆವು	ಮರೆವು

ವರ್ತಮಾನ ಕಾಲದ ಪ್ರತ್ಯಯವೇ ಭವಿಷ್ಯತ್ತಿಗೂ ಬಳಕೆಯಾಯಿತು. ಹೊಸಗನ್ನಡ ಕಾಲದಲ್ಲಿ ಸಾಮಾಜಿಕ ಮತ್ತು ಪ್ರಾದೇಶಿಕ ಪ್ರಭೇದಗಳು ಕಂಡು ಬಂದವು. ಅವುಗಳಲ್ಲಿ ಮೈಸೂರು, ಧಾರವಾಡ, ಮಂಗಳೂರು, ಗುಲ್ಬರ್ಗ ಕನ್ನಡಗಳೆಂದು ಸ್ಪಷ್ಟವಾಗಿ ಹೆಸರಿಸಬಹುದು. ಹಳಗನ್ನಡದಲ್ಲಿದ್ದ ಸಂಯುಕ್ತ

ವ್ಯಂಜನವನ್ನು ಹೊಂದಿದ ಪದಗಳು ಹೊಸಗನ್ನಡದಲ್ಲಿ ವಿರಳವಾದವು. ವ್ಯಂಜನಾಂತಗಳು ಸ್ವರಾಂತವಾದವು.

ಉದಾ:	ಹಳಗನ್ನಡ	ಹೊಸಗನ್ನಡ
೧.	ಆರ್ಗೆ	ಯಾರಿಗೆ
	ಕಾಣ್ಕೆ	ಕಾಣಿಕೆ
೨.	ಕಾಲ್	ಕಾಲು
	ನೋಡ್	ನೋಡು

ಹಳಗನ್ನಡದಲ್ಲಿ ಕಂಡುಬರುತ್ತಿದ್ದ ದೀರ್ಘ ಸಮಾಸಗಳು ಹೊಸಗಡನ್ನದಲ್ಲಿ ಹ್ರಸ್ವವಾದವು ಮತ್ತು ಹೊಸಗನ್ನಡಲ್ಲಿ ಸಮಾಸಪದದ ಎರಡು ಶಬ್ದಗಳು ಬೇರೆ ಬೇರೆಯಾಗಿ ಬಳಕೆಯಾದವು. ಜೊತೆಗೆ ಹೊಸಗನ್ನಡ ಶಬ್ದಗಳಲ್ಲಿ ಬ್, ಬ್, ಮ್ ಇವು ವ್ ಕಾರಗಳಾಗುತ್ತವೆ.

ಉದಾ:	ಹಳಗನ್ನಡ	ಹೊಸಗನ್ನಡ
೧.	ಕ್ರಮದಪ್ಪು	ಕ್ರಮತಪ್ಪು
	ಕೌತುಕಂದಾಳ್	ಕೌತುಕತಾಳು
೨.	ವಸತಿ	ಬಸದಿ
	ಬಾಮಿ	ಬಾವಿ

ಈ ರೀತಿ ಪೂರ್ವದ ಹಳಗನ್ನಡದಲ್ಲಿ ದೀರ್ಘವಾಗಿದ್ದಂತಹ, ಆಖ್ಯಾತ ಪ್ರತ್ಯಯ, ಷಷ್ಠಿ ವಿಭಕ್ತ ಪ್ರತ್ಯಯ ಮತ್ತು ನಿಷೇಧಾರ್ಥಕ ಪ್ರತ್ಯಯಗಳ ಸ್ವರ ಹಳಗನ್ನಡದಲ್ಲಿ ಹ್ರಸ್ವವಾಗಿರುತ್ತದೆ. ಪೂರ್ವದ ಹಳಗನ್ನಡದಲ್ಲಿ ಬಳಕೆಯಲ್ಲಿದ್ದಂತಹ ಱ, ೞ ಇವುಗಳ ಬಳಕೆ ಹೊಸಗನ್ನಡದಲ್ಲಿ ಇಲ್ಲ. ಪೂರ್ವದ ಹಳಗನ್ನಡ ಮತ್ತು ಹಳಗನ್ನಡದ ಸಂಸ್ಕೃತ ಪದಗಳು ನಡುಗನ್ನಡ ಕಾಲಕ್ಕೆ ಬಳಕೆಯಾಗದೆ, ಬದಲಿಗೆ ಅಪಭ್ರಂಶಗಳು ಬಳಕೆಯಾದವು. ಸು. ೨೦೦೦ ವರ್ಷದಿಂದ ಕನ್ನಡ ಭಾಷೆ ವಿವಿಧ ಘಟ್ಟಗಳನ್ನು ದಾಟಿ ಬೇರೆ-ಬೇರೆ ಸ್ವರೂಪ ಪಡೆದು ಮಹಾಕವಿಗಳ, ಪಂಡಿತರ, ಪ್ರಸಿದ್ಧ ಕಲಾವಿದರ ಮುಗ್ದ ಜನಪದರ ಮುಖವಾಣಿಯಾಗಿ ಪರಿಣಮಿಸಿದೆ. ಇಂದು ಕನ್ನಡ ಭಾಷೆಯ ಜೀವನಾನುಭವದ ಸೂಕ್ಷ್ಮಾತೀಸೂಕ್ಷ್ಮ ಅನುಭವಗಳನ್ನು ಸಶಕ್ತವಾಗಿ ಅಭಿವ್ಯಕ್ತಿ ಪಡಿಸಲು ಶಕ್ತವಾಗಿದೆ.

ಆಧುನಿಕ ಸಾಹಿತ್ಯದಲ್ಲಿ ಪ್ರಾದೇಶಿಕ ಭಾಷೆಯ (ಉಪಭಾಷೆ) ಬಳಕೆಯಿಂದ ಸಾಹಿತ್ಯ ಕೃತಿಗಳಲ್ಲಿ ಸ್ವಂತಿಕೆ ಹಾಗೂ ಪ್ರಾದೇಶಿಕತೆ ಪ್ರಾಪ್ತವಾಯಿತು. ಇಷ್ಟೇ ಅಲ್ಲದೆ ಕುವೆಂಪು ತಮ್ಮ ಕಾಲಘಟ್ಟದಲ್ಲಿ ತಮ್ಮ ಕಾಲ ಧರ್ಮವನ್ನು ಮರೆತು ಹಳಗನ್ನಡದಲ್ಲಿ ನಾಟಕರಚಿಸಿದ್ದಾರೆಂದು, ಕೆಲವರು ಟೀಕಿಸಿದ್ದಾರೆ. ಆದರೇ ಕೆಲವರು ಮರೆತು ಹೋಗಿದ್ದ ಹಳಗನ್ನಡದ ಕೊಂಡಿಯನ್ನು ಬೆಸೆದಿದ್ದಾರೆ ಎಂದು ಅಭಿಪ್ರಾಯಿಸಿದ್ದಾರೆ. ಅಲ್ಲದೆ ಕುವೆಂಪು, ಮುದ್ದಣ್ಣನಲ್ಲಿ ಹಳಗನ್ನಡದ ಪ್ರಭಾವ ಒಮ್ಮುಖವಾಗಿ ಕಾಣಿಸಿತು. ಒಟ್ಟನಲ್ಲಿ ಸಾಹಿತ್ಯ

ಭಾಷೆಯ ಅವಸ್ಥಾಂತರಗಳನ್ನು ಹಿಡಿದಿಡುವ ಕೊಂಡಿಯಾಗಿದೆ. ಈ ಕಾಲದಲ್ಲಿ ಕಥೆ, ನಾಟಕ, ಕಾದಂಬರಿ, ಕಾವ್ಯಗಳಲ್ಲಿ ಪ್ರಾದೇಶಿಕ, ಸಾಮಾಜಿಕ ಉಪಭಾಷೆಗಳನ್ನು ಬಳಸಿದ್ದುಂಟು. ಉದಾ: ಚದುರಂಗರ, ವೈಶಾಕ ಕಾದಂಬರಿಯಲ್ಲಿ ಗುಂಡ್ಲುಪೇಟೆ ಕನ್ನಡ ಬಳಕೆಯಲ್ಲಿದೆ. ಇದರಲ್ಲಿ ಲಕ್ಕನ ಪಾತ್ರ ಚಿತ್ರಣದಲ್ಲಿ ಗುಂಡ್ಲುಪೇಟೆ ಕನ್ನಡ ಬಳಕೆಯಲ್ಲಿದೆ. ಇದರಲ್ಲಿ ಲಕ್ಕನ ಪಾತ್ರ ಚಿತ್ರಣದಲ್ಲಿ ಅವನ ಸಾಮಾಜಿಕ ಭಾಷೆಯನ್ನು ಬಳಸುತ್ತಾರೆ. ಬ್ರಾಹ್ಮಣನ ಪಾತ್ರದಲ್ಲಿ ಶಿಷ್ಟ ಭಾಷೆಯನ್ನು ಕಾಣಬಹುದು. ಆಲನಹಳ್ಳಿ ಕೃಷ್ಣ ಅವರು ಬರೆದಿರುವ 'ಕಾಡು' ಎಂಬ ಕಾದಂಬರಿಯಲ್ಲಿ ಪ್ರಾದೇಶಿಕ, ಸಾಮಾಜಿಕ ಭಾಷಾ ಕುರುಹನ್ನು ಕಾಣಬಹುದು. ಚಂದ್ರು ಕಾಳೇನಹಳ್ಳಿ ಅವರ ಜುಂಜಪ್ಪ ನಾಟಕದಲ್ಲಿ ಕಾಡು ಜನರ ಭಾಷೆಯನ್ನು ಹಿಡಿದಿಟ್ಟಿದ್ದಾರೆ. ವೈದೇಹಿ ತಮ್ಮ ಅಕ್ಕು ಎಂಬ ಕಥೆಯಲ್ಲಿ ಪ್ರಾದೇಶಿಕ ಭಾಷೆಯನ್ನು ಬಳಸಿದ್ದಾರೆ. ಏಳುಸುತ್ತಿನ ಕೋಟೆಯಲ್ಲಿ ಚಿಕ್ಕ ಮರಳ್ಳಿ ಬೋರೇಗೌಡರು ಪ್ರಾದೇಶಿಕ ಉಪಭಾಷೆಯನ್ನು ಬಳಸಿದ್ದಾರೆ. ಓಲೆಸೂಯಿಂಕ-ನೈಜೀರಿಯದ ನಾಟಕರಾದ ತಮ್ಮ ರೋಡ್ ಎಂಬ ನಾಟಕದಲ್ಲಿ ಪ್ರಾದೇಶಿಕ ಭಾಷೆ ಬಳಸಿದ್ದಾನೆ. ಅಂದರೇ ಇಲ್ಲಿ ಭಾಷೆ, ಸಾಹಿತ್ಯ ಹೇಗೆ ಒಂದಕ್ಕೊಂದು ಪೂರಕ ಎಂಬುದು ತಿಳಿಯುತ್ತದೆ.

ಕುವೆಂಪು ಅವರು 'ತಮ್ಮ ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮಲೆನಾಡು ಕನ್ನಡವನ್ನು ಅರ್ಥಪೂರ್ಣವಾಗಿ ಬಳಸಿದರು. ಕನ್ನಡದ ಬಹುಪಾಲು ಸಾಹಿತ್ಯವು ಪ್ರಾದೇಶಿಕ ಭಾಷೆಯಲ್ಲಿ ರಚಿತವಾಗತೊಡಗಿತು. ಚಂದ್ರಶೇಖರ ಕಂಬಾರ (ಚಕ್ಕೋರಿ), ಬೇಂದ್ರೆ ಮುಂತಾದವರು ಶಿಷ್ಟ ಮೂಲದವರಾದರೂ ಜನಪದ ಶೈಲಿಯನ್ನು ಅನುಸರಿಸಿದರು. ದೇವನೂರು ಮಹಾದೇವು ಅವರ ಕುಸುಮ ಬಾಲೆ ನಂಜನಗೂಡು ಕನ್ನಡಲ್ಲಿದೆ. ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳು ಮಂಡ್ಯ ಭಾಷೆಯಲ್ಲಿವೆ. ಅಂತೆಯೇ ಚಂಪಾ ತಮ್ಮ ಉತ್ತರ ಕನ್ನಡ ಭಾಷೆಯಲ್ಲಿ ಬರವಣಿಗೆ ಮಾಡಿದ್ದಾರೆ. ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿ, ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು', ಪ್ರಾದೇಶಿಕ ಭಾಷೆ, ಶೈಲಿಯಿಂದ ಕೂಡಿವೆ. ಹೀಗೆ ಈ ಕಾಲದಲ್ಲಿ ಭಾಷಾ ವೈವಿಧ್ಯತೆಯಿಂದ ಕೂಡಿವೆ.

ಜನಪದ ಕಾವ್ಯ ಸೃಷ್ಟಿಯಾಗುವಾಗ ಭಾಷೆ ಮತ್ತು ಅನುಭವ ಎಲ್ಲಿಯೂ ವಿಮುಖವಾಗಲಿಲ್ಲ. ಶಿಷ್ಟ ಸಾಹಿತ್ಯದಲ್ಲಿ ಕೆಲವೊಮ್ಮೆ ವ್ಯುತ್ಪತ್ತಿಯ ಪ್ರಭಾವದಿಂದ ಪ್ರೌಢತೆಯು ಬಂದು ಅಭಿವ್ಯಕ್ತಿ ಮೇಲ್ಮಟ್ಟಕ್ಕೆ ಹೋಗಿ ಅನುಭವ ಒಂದು ಹಂತ ಕೆಳಗೆ ನಿಲ್ಲಬಹುದು. ಹಾಗೆಂದಾಕ್ಷಣ ಅನುಭವದ ಯಥಾವತ್ತಾದ ಅಭಿವ್ಯಕ್ತಿಯೇ ಸಾಹಿತ್ಯವಲ್ಲ. ಅನುಭವದ ಕಲಾತ್ಮಕ ರೂಪಾಂತರ. ಸಾಹಿತ್ಯದಲ್ಲಿ ಇಂತಹ ಕಲಾತ್ಮಕತೆಯನ್ನು ಕಾಯ್ದಿರಿಸಲು ಭಾಷಾ ಸಂಪತ್ತು ಅತ್ಯಗತ್ಯ. ಭಾಷೆ ಸಾಹಿತ್ಯಕ್ಕಾಗಿ ಸೃಷ್ಟಿಯಾದುದ್ದಲ್ಲ. ಮನುಷ್ಯನ ಭಾವನೆಗಳ ಪರಸ್ಪರ ಅಭಿವ್ಯಕ್ತಿಗೆ ಭಾಷೆ ಹುಟ್ಟಿದ್ದು, ಭಾಷೆಯು ಸಾಹಿತ್ಯದ ವಲಯದಿಂದ ಆಚೆಗೂ ಬಳಕೆಯಾಗುತ್ತದೆ. ಪಂಪ 'ಹಿತಮಿತಮೃದು ವಚನ'ನಾದರೆ, ರನ್ನ 'ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆದೆನು' ಎಂದು ಹೇಳಿಕೊಳ್ಳುತ್ತಾನೆ. ಕುಮಾರವ್ಯಾಸ 'ರೂಪಕ ಸಾಮ್ರಾಜ್ಯ ಚಕ್ರವರ್ತಿ'ಯಾದರೇ, ಲಕ್ಷ್ಮೀಶ 'ಉಪಮಾಲೋಲ'ನಾಗಿದ್ದಾನೆ. ಬೇಂದ್ರೆ ಶಬ್ದಗಾರುಡಿಗರಾಗಿದ್ದಾರೆ. ಇವರೆಲ್ಲ ಭಾಷಾ ಬಳಕೆಯ ಹಿನ್ನೆಲೆಯಲ್ಲಿ ಪ್ರಶಂಸೆಗೆ ಒಳಗಾಗಿರುವುದು ಮುಖ್ಯವಾದ ಅಂಶವಾಗಿದೆ. ಅಂದರೇ ಈ ಬಗೆಯ ಸಾಹಿತ್ಯ

ಕೃತಿಗಳು ಆಯಾಕಾಲದ ಭಾಷಾ ಸ್ಥಿತಿಯನ್ನು ಪ್ರತಿಫಲಿಸುತ್ತವೆ. ಸಾಹಿತ್ಯದ ಮೌಲ್ಯವನ್ನು ನಿರ್ಧರಿಸುವಾಗ ವಸ್ತುಮಾತ್ರವಲ್ಲ, ಭಾಷೆಯೂ ಒಂದು ಮಾನದಂಡವಾಗುತ್ತದೆ.

ಒಟ್ಟಿನಲ್ಲಿ ಸಾಹಿತ್ಯ ಮತ್ತು ಭಾಷೆ ನಿಕಟವರ್ತಿಗಳು, ಇವುಗಳ ಸಂಬಂಧ ಎಷ್ಟೇ ನಿಕಟವಾಗಿದ್ದರೂ ಸಾಹಿತ್ಯ ಮತ್ತು ಭಾಷೆ ಒಂದೇ ಆಗಲಾರವು. ಸಾಹಿತ್ಯ ಭಾಷಾ ಮಾಧ್ಯಮದ ಮೂಲಕ ವ್ಯಕ್ತವಾಗುವ ಬದುಕಿನ ಛಾಯೆ, ಭಾಷೆ ಮೊದಲು ಉಗಮವಾಯಿತು. ಸಾಹಿತ್ಯವು ಪರಿಪಕ್ವವಾದ ಭಾಷೆಯಿಂದ ರೂಪುಗೊಂಡಿತು.

ಭಾಷೆ ಮತ್ತು ಸಮಾಜ :

ಭಾಷೆ ಒಂದು ಸಾಮಾಜಿಕ ಕ್ರಿಯೆ, ಸಮಾಜವನ್ನು ಕಟ್ಟಿರುವಂತಹದ್ದು ಭಾಷೆ. ಭಾಷೆಗೆ ಯಾವುದೇ ವರ್ಗ, ವರ್ಣ, ಲಿಂಗ, ಜಾತಿಯ ಸೋಂಕು ಇಲ್ಲ. ಈ ನಿಟ್ಟಿನಲ್ಲಿ ಭಾಷೆಯು ಸಾರ್ವತ್ರಿಕವಾದ ಸಾಮಾಜಿಕ ಪ್ರಕ್ರಿಯೆ ಎಂದು ಹೇಳಬಹುದು. ಸಮಾಜದಲ್ಲಿ ಮಾನವನ ವೈಯಕ್ತಿಕವಾದ ಅಭಿವೃದ್ಧಿ, ಸಾಧನೆಗಳಿಗೆ ಭಾಷಾ ಸಿದ್ಧಿ ವಿಶಿಷ್ಟವಾದ ಕೊಡುಗೆಯಾಗಿದೆ. ಮಾನವನ ಬೌದ್ಧಿಕ, ಭೌತಿಕ ಚಟುವಟಿಕೆಗಳಿಗೆ ಭಾಷೆ ಬೇಕು, ವ್ಯಕ್ತಿಯ ಸಾಮಾಜಿಕ, ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸುವುದು ಆತನ ಭಾಷೆಯಿಂದಲೇ ಸಮಾಜದ ಬೆಳವಣಿಗೆಯಲ್ಲಿ ಬದಲಾವಣೆಯಲ್ಲಿ ಭಾಷೆಯ ಪಾತ್ರ ಅದ್ವಿತೀಯ.

ಮಾನವ ಸಂಘಜೀವಿ (ಅರಿಸ್ಟಾಟಲ್), ಆತ ತನ್ನ ಸಮುದಾಯದಲ್ಲಿ ತನ್ನದೇ ಆದ ನಡವಳಿಕೆಗಳನ್ನು, ನಿಯಮಗಳನ್ನು ನಂಬಿಕೆ, ಆಚರಣೆಗಳನ್ನು ಪಾಲಿಸುತ್ತಿರುತ್ತಾನೆ. ಮುಂದಿನ ಪೀಳಿಗೆಯೂ ಇದನ್ನೇ ಪಾಲಿಸಬೇಕು ಎಂದು ಆಶಿಸುತ್ತಾನೆ. ಸಾಂಸ್ಕೃತಿಕ ಸಂಗತಿಗಳು ಮುಂದಿನ ಪೀಳಿಗೆಗೆ ರವಾನೆ ಆಗುವುದು ಭಾಷೆಯಿಂದಲೇ. ಭಾಷೆ ಮತ್ತು ಸಮಾಜದ ಅನನ್ಯತೆಯನ್ನು ತಿಳಿಯುವ ಮುನ್ನ ಕೆಲವು ಸಮಾಜಶಾಸ್ತ್ರಜ್ಞರು ಸಮಾಜದ ಬಗ್ಗೆ ನೀಡಿರುವ ವ್ಯಾಖ್ಯಾನಗಳನ್ನು ಗಮನಿಸಬಹುದು. ಸಮಾಜ ಎಂಬ ಪದಕ್ಕೆ ಇಂಗ್ಲಿಷ್‌ನಲ್ಲಿ ಸೊಸೈಟಿ,ಲ್ಯಾಟಿನ್‌ನಲ್ಲಿ ಸೋಶಿಯಸ್ ಎಂಬ ಸಂವಾದಿ ಪದ ಇದೆ. ಸಹಚರ, ಜೊತೆಗಾರ, ಒಡನಾಡಿತನ ಎಂಬ ನಾನಾರ್ಥಗಳಿವೆ. ಒಡನಾಡಿಗಳು ಒಡನಾಟದಿಂದ ಒಟ್ಟುಗೂಡಿರುವ ವ್ಯವಸ್ಥೆಯೇ ಸಮಾಜವಾಗಿದೆ.

“**ಮೆಕೇವರ್ ಮತ್ತು ಪೇಜ್ :** 'ಸಮಾಜವೆಂಬುದು ಹಲವಾರು ಆಚರಣೆಗಳ ಮತ್ತು ಕ್ರಮ ವಿಧಾನಗಳ ಅಧಿಕಾರ ಮತ್ತು ಪರಸ್ಪರ ಸಹಾಯಗಳ ಹಲವಾರು ಸಮೂಹಗಳ ಮತ್ತು ವಿಂಗಡಣೆಗಳ ಮಾನವನ ವರ್ತನೆಯ ಬಗೆಗಿನ ನಿಯಂತ್ರಣಗಳ ಹಾಗೂ ಸ್ವಾತಂತ್ರ್ಯಗಳನ್ನೊಳಗೊಂಡ ಒಂದು ವ್ಯವಸ್ಥೆಯಾಗಿದೆ' ಎಂದಿದ್ದಾರೆ.

ಲ್ಯಾಪಿಯರ್ ಅವರ ಅಭಿಪ್ರಾಯದಂತೆ ; 'ಸಮಾಜ ಎಂಬ ಪದವು ಜನರಮಧ್ಯೆ ಅವರ ನಡುವೆ ಏರ್ಪಟ್ಟ ಅಂತರ್ ಕ್ರಿಯೆಗಳ ಸಂಕೀರ್ಣ ಮಾದರಿಯನ್ನು ಪ್ರತಿನಿಧಿಸುವುದು' ಎನ್ನುತ್ತಾರೆ.

ಜೆ.ಡಿ.ಎಂ. ಕೋಲ್ ಅವರು ಹೇಳಿರುವಂತೆ; 'ಸಮಾಜ ಎಂಬುದು ಸಮುದಾಯದೊಳಗೆ ಸಂಘಟಿತವಾದ ಸಂಘಗಳ ಸಂಸ್ಥೆಗಳ ಸಂಕೀರ್ಣವಾಗಿದೆ' ಎಂದಿದ್ದಾರೆ.

ಪ್ರೊ॥ ಗಿಡ್ಡಿಂಗ್ಸ್: 'ಜೊತೆಗೂಡಿ ಇರಬಹುದಾದ ವ್ಯಕ್ತಿಗಳನ್ನು ಒಟ್ಟುಗೂಡಿಸಿ ಆದ ಒಂದು ಒಕ್ಕೂಟ, ಸಂಘಟನೆಯೇ ಸಮಾಜ' ಎಂದಿದ್ದಾರೆ'.

ರಾಬರ್ಟ್‌ಸನ್: ಒಂದು ಸಾಮಾನ್ಯ ಸಂಸ್ಕೃತಿಯಲ್ಲಿ ಸಹಭಾಗಿಗಳಾಗಿ ಭೂ ಭಾಗವನ್ನು ಹಂಚಿಕೊಂಡು ವಾಸಿಸುತ್ತ ಪರಸ್ಪರ ಒಟನಾಟದಲ್ಲಿರುವ ಜನ ಸಮೂಹವೇ ಸಮಾಜ ಎಂದಿದ್ದಾರೆ'.[೧]

ಒಟ್ಟು ಜನರು ಒಂದೆಡೆ ಸೇರಿ ಬಾಳುವುದು ಎಂದರ್ಥ ಎಂದು ಡಾ. ರಾಮೇಗೌಡ ಅವರು ಹೇಳುತ್ತಾರೆ. ಭಾಷೆ ನಿತ್ಯ ಪರಿವರ್ತನ ಶೀಲವಾದದ್ದು ಅಂತೆಯೇ ಸಮಾಜ ಗತಿಶೀಲವಾದದು, ಸಮಾಜವು ಸಮೂಹಗಳ ಸಮೂಹ, ಸಾಮಾಜಿಕ ಸಂಬಂಧಗಳ ಬಲೆ, ಭಾಷೆಯಂತೆ ಸಮಾಜವು ವ್ಯತ್ಯಾಸ ಅಥವಾ ಭೇದವನ್ನು ಅವಲಂಬಿಸಿದೆ. ಪರಸ್ಪರಾವಲಂಬನೆ, ಶ್ರಮ ವಿಭಜನೆ ಮತ್ತು ಸಹಕಾರ, ಸಾಮಾಜಿಕ ನಿಯಂತ್ರಣ ಗುಣ, ಸಂಸ್ಕೃತಿಯನ್ನು ಘೋಷಿಸುವ ಗುಣ, ಸಾಂಘಿಕತೆಯ ಗುಣಗಳನ್ನು ಹೊಂದಿದೆ.

ಮಾನವನು ಸಮಾಜದಿಂದ ದೂರಉಳಿಯಲಾರ. ಆತನ ಮೂಲಭೂತ ಸೌಕರ್ಯ, ಬಯಕೆಗಳನ್ನು ಪೂರೈಸಿಕೊಳ್ಳಲು ಆತ ಸಮಾಜದೊಡನೆ ಸೌಹಾರ್ದದಿಂದಿರಬೇಕು. ನಾಲಿಗೆ ಕುಲವನ್ನು ಅರಿಯಿತು ಎಂಬ ಮಾತನ್ನು ಕೇಳಿದ್ದೇವೆ. ವ್ಯಕ್ತಿ ಯಾರೇ ಆಗಿರಲಿ ಅವನ ಸ್ಥಾನಮಾನ, ಅವನ ಸಾಮಾಜಿಕ ಮನ್ನಣೆಗೆ ಅನುಗುಣವಾಗಿ ನಿರ್ಧಾರಿತವಾಗುತ್ತದೆ. ಮಾನವನ ನಿರಂತರ ಪ್ರಯತ್ನದಿಂದ ಆತನ ಅವಶ್ಯಕತೆಗಳಿಗೆ ಅನುಗುಣವಾಗಿ ಭಾಷೆ ರೂಪುಗೊಳ್ಳುತ್ತದೆ. ಹೀಗಾಗಿ ಪ್ರತಿಯೊಂದು ಸಮಾಜವೂ ತನ್ನದೇ ಆದ ಸಾಂಸ್ಕೃತಿಕ ಮೌಲ್ಯಗಳನ್ನೊಳಗೊಂಡ ಪದ ಸಂಪತ್ತಿನಿಂದ ಕೂಡಿದ ವಿಶಿಷ್ಟರೂಪದ ಭಾಷೆಯನ್ನು ಹೊಂದಿರುತ್ತದೆ. ಸಮಾಜವು ವ್ಯಕ್ತಿಯು ಭಾಷೆಯನ್ನು ಕಲಿಯುವಂತೆ ಪ್ರೇರೇಪಿಸುತ್ತದೆ. ಭಾಷೆ ಕಲಿತ ವ್ಯಕ್ತಿ ಸಮಾಜವನ್ನು ಕಟ್ಟುತ್ತಾನೆ. ಮಗು ಹುಟ್ಟುತ್ತಲೆ ವ್ಯಾಕರಣದ ಮೂಲಕ ಭಾಷೆಯನ್ನು ಕಲಿತಿರುವುದಿಲ್ಲ. ಅನುಕರಣೆಯ ಗುಣದಿಂದ, ನಿರಂತರ ಪ್ರಯತ್ನದಿಂದ ಭಾಷೆಯನ್ನು ಕಲಿಯುತ್ತದೆ. ಈ ಭಾಷೆಯ ಆಳದಲ್ಲಿ ನಿಯಮಿತವಾದ ವ್ಯಾಕರಣವಿರುವುದು ಅಧ್ಯಯನದ ಮೂಲಕ ನಮಗೆ ತಿಳಿಯುತ್ತದೆ. ಈ ವ್ಯಾಕರಣ ಜ್ಞಾನ ಅರಿವಿಲ್ಲದೇ ಮಗುವಿನಲ್ಲಿ ಅಂತರ್ಗತವಾಗುತ್ತದೆ, ಇದಕ್ಕೆ ಸಮಾಜವೇ ಕಾರಣ.

ಭಾಷೆಯು ಸಮಾಜವನ್ನು ಬಲಗೊಳಿಸುವ ಮಾಧ್ಯಮ. ಆಯಾ ಸಮಾಜದ ಜನರು ಆಡುವ ಭಾಷೆ ಆಯಾ ಸಮಾಜಕ್ಕೆ , ಅಲ್ಲಿನ ವ್ಯವಹಾರ ನಡೆಸುವುದಕ್ಕೆ ಸಹಕಾರಿಯಾಗಿರುತ್ತದೆ. ಆ ಸಮಾಜವನ್ನುಳಿದು ಬೇರೆಡೆಯಲ್ಲಿ ಆ ಭಾಷೆ ಸಲ್ಲುವುದಿಲ್ಲ. ಭಾಷೆ ಸಂಪೂರ್ಣವಾಗಿ ಸಾಮಾಜಿಕ ವಸ್ತು. ಆ ಸಮಾಜದಲ್ಲಿ ಒಗ್ಗಟ್ಟು, ಅಭಿಮಾನ ವಿಶ್ವಾಸ, ನಂಬಿಕೆ ಇವುಗಳನ್ನು ಕಾಪಾಡಿಕೊಳ್ಳಲು ಭಾಷೆ ಬೇಕು. ಸಮಾಜದ ಶಕ್ತಿಯಾದ ಭಾಷೆಗೆ ವ್ಯಕ್ತಿಯ ಪಾತ್ರ ಬಹಳ ಮುಖ್ಯ. ವ್ಯಕ್ತಿಯು ಬದಲಾದಂತೆ, ಅವನ ಸ್ಥಾನಮಾನಗಳಿಗೆ ಅನುಗುಣವಾಗಿ

---

೧. ಚ.ನ. ಶಂಕರರಾವ್ : ಭಾರತೀಯ ಸಮಾಜ : ಜೈಭಾರತ ಪ್ರಕಾಶನ, ಮಂಗಳೂರು : ಪ್ರ.ವ. ೧೯೯೮ : ಪು.ಸಂ. ೧೮

ಅವನ ಭಾಷೆಯೂ ಬದಲಾಗುತ್ತದೆ. ಬದಲಾವಣೆಯೂ ಸಮಾಜದ ಹಾಗೂ ಭಾಷೆಯ ಜೀವಂತ ಲಕ್ಷಣವಾಗಿದೆ. ಮಾನವನ ಆಚಾರ-ವಿಚಾರ, ಉಡುಗೆ, ತೊಡುಗೆ, ವೃತ್ತಿ ಮುಂತಾದವು ಬದಲಾದಂತೆ ಭಾಷೆ ಬದಲಾಗುತ್ತದೆ. ನಾಗರಿಕ ಸಮಾಜದಿಂದ ದೂರ ಉಳಿಯುವ ಬುಡಕಟ್ಟು, ಆದಿವಾಸಿ, ಸೋಲಿಗ ಜನಾಂಗಗಳ ಸಮಾಜದಲ್ಲಿ ಇಂತಹ ಭಾಷಾ ಮಾರ್ಪಾಡು ಮಂದಗತಿಯಲ್ಲಿ ಆಗುತ್ತದೆ.

ಭಾಷಾ ಸಮುದಾಯ ಎಂದರೆ ಒಂದೇ ರೀತಿಯ ಭಾಷೆಯನ್ನು ಬೆಳೆಸುವ ಸಮುದಾಯ ಎನ್ನಬಹುದು. ಈ ಸಮುದಾಯದಲ್ಲಿ ಭಾಷೆ ತನಗೆ ತಾನೇ ಒಂದು ವಿಷಯ. ಅಂದರೇ ಭಾಷೆಯ ಬಗ್ಗೆ ಅಧ್ಯಯನಿಸುವಾಗ ದೇಶವೇ ಒಂದು ಘಟಕವಾಗುತ್ತದೆ. ಏಕಭಾಷಾರಾಷ್ಟ್ರ, ದ್ವಿಭಾಷಾರಾಷ್ಟ್ರ, ಬಹುಭಾಷಾರಾಷ್ಟ್ರ, ದ್ವಿಭಾಷಿಕತೆ, ಬಹುಭಾಷಿಕತೆ, ಉಪಭಾಷೆಗಳು ಹೀಗೆ ಭಾಷೆಯ ಆಳವಾದ ಅಧ್ಯಯನಕ್ಕೆ ತೊಡಗಲು ನೆರವಾಗಿ ರಹದಾರಿಯನ್ನು ತೋರುವುದು ಸಮಾಜ, ಕಾನೂನು, ರಾಜಕೀಯ, ಆಡಳಿತ ಭಾಷೆ ಸರಳವಾಗಿ, ಕನ್ನಡ ಶಿಕ್ಷಣ ದೊರಕಲಿ, ಶಿಕ್ಷಣ ಎಲ್ಲರಿಗೂ ಎಟುಕಲಿ ಎಂಬುದಾಗಿ ಮಾಡುವ ಹೋರಾಟ ಏಕಕಾಲದಲ್ಲಿ ಸಾಮಾಜಿಕ ಮತ್ತು ಭಾಷಾ ಕಳಕಳಿಯನ್ನು ತೋರಿಸುತ್ತದೆ.

ಭಾಷೆಯ ಪರಿವರ್ತನೆಗೆ ಸಮಾಜವೇ ಕಾರಣ. ಭಾಷೆ ಹುಟ್ಟುವುದು, ಬೆಳೆಯುವುದು, ಬಳಕೆಯಾಗುವುದು ಸಮಾಜದಲ್ಲಿಯೇ. ಈ ಭಾಷೆಯಲ್ಲಿ ಅರ್ಥ ಎಂಬುದು ಬಹುಮುಖ್ಯ ಪಾತ್ರವಹಿಸುತ್ತದೆ. ಅರ್ಥೈಸುವಿಕೆ ಇಲ್ಲದೆ ಭಾಷೆಯ ಉದ್ದೇಶ ಸಫಲವಾಗಲು ಸಾಧ್ಯವೇ ಇಲ್ಲ. ಅರ್ಥದಲ್ಲಿ ಐದು ವಿಧಗಗಳನ್ನು ಕಾಣುತ್ತೇವೆ.

ಅರ್ಥಸಂಕೋಚ (Restriction of Meaning) : ಹಿಂದೆ ವಿಶಾಲ ಅರ್ಥದಲ್ಲಿ ಬಳಕೆಯಾಗುತ್ತಿದ್ದದ್ದು, ಅನಂತರ ಸೀಮಿತ ಅರ್ಥದಲ್ಲಿ ಬಳಕೆಯಾದರೇ ಅದು ಅರ್ಥ ಸಂಕೋಚ. ಉದಾ: ಹಳಗನ್ನಡದ 'ಹೊನ್' ಎಂಬ ಪದ ಹಿಂದೆ 'ಯಾವುದೇ ಲೋಹ' ಎಂಬ ಅರ್ಥವನ್ನು ಹೊಂದಿದ್ದು, ಇಂದು 'ಚಿನ್ನ' ಎಂಬ ಒಂದು ಅರ್ಥಕ್ಕೆ ಸೀಮಿತವಾಗಿದೆ. ಹಾಗೆಯೇ 'ಒಡವೆ' ಎಂಬುದು 'ಯಾವುದೇ ಆಸ್ತಿ' ಎಂಬ ಅರ್ಥವನ್ನು ಹೊಂದಿದ್ದು, ಇಂದು 'ತೊಡುವ ಆಭರಣ'ಕ್ಕಷ್ಟೆ ಸೀಮಿತವಾಗಿದೆ.

ಅರ್ಥ ವಿಕಾಸ (Extension of Meaning): ಹಿಂದೆ ಸೀಮಿತ ಅರ್ಥದಲ್ಲಿ ಬಳಕೆಯಾಗುತ್ತಿದ್ದುದನ್ನು ವಿಶಾಲ ಅರ್ಥಕ್ಕೆ ತಂದು ನಿಲ್ಲಿಸುವುದಕ್ಕೆ ಅರ್ಥವಿಕಾಸ ಎನ್ನಲಾಗುತ್ತದೆ. ಉದಾ: ಹಳೆ ಇಂಗ್ಲೀಷ್‌ನಲ್ಲಿ Dogge ಎಂದರೇ 'ವಿಶಿಷ್ಟ ಬಗೆಯ ನಾಯಿ'. ಇಂದು ಯಾವುದೇ ನಾಯಿ ಎಂಬರ್ಥವನ್ನು ಪಡೆದಿದೆ. ಅಂತೆಯೇ Place ಎಂದರೆ ಹಿಂದೆ ಅಗಲವಾದ ಸ್ಥಳ ಎಂಬ ಅರ್ಥವಿತ್ತು. ಇಂದು 'ಯಾವುದೇ ಸ್ಥಳ' ಎಂಬ ವಿಶಾಲಾರ್ಥವನ್ನು ಪಡೆದುಕೊಂಡಿದೆ.

ಹೀನಾರ್ಥ ಪ್ರಾಪ್ತಿ (Pejerative Meaning) : ಹಿಂದೆ ಬಳಸುತ್ತಿದ್ದ ಅರ್ಥ ಮಾಸಿ ಹೋಗಿ, ಹೀನಾರ್ಥ ಬಳಕೆಯಾವುದು (ಇದ್ದ ಅರ್ಥಕ್ಕಿಂತ ಕೆಳಗಿನದು) ಎಂದರ್ಥ. ಉದಾ: ಹಿಂದೆ ಆಳು ಎಂಬ ಪದಕ್ಕೆ ಶೂರ ಎಂಬ ಅರ್ಥವಿತ್ತು. ಇಂದು ಸೇವಕ ಎಂಬ ಅರ್ಥ ಪ್ರಾಪ್ತಿಯಾಗಿದೆ. ಹಿಂದೆ 'ಗಂವಾರ್ >ಗಮಾರ'

ಎನ್ನುವುದಕ್ಕೆ 'ಹಳ್ಳಿಯವನು' ಎಂಬರ್ಥವಿತ್ತು. ಇಂದು ದಡ್ಡ, ಮೂರ್ಖ ಎಂಬರ್ಥವಿದೆ.

ಉತ್ತಮಾರ್ಥ ಪ್ರಾಪ್ತಿ (Amelioration) : ಹೀನ ಅರ್ಥದಲ್ಲಿ ಬಳಕೆಯಾಗುತ್ತಿದ್ದುದು, ಉತ್ತಮ ಅರ್ಥವನ್ನು ಪಡೆದುಕೊಳ್ಳುವುದಕ್ಕೆ ಉತ್ತಮಾರ್ಥ ಪ್ರಾಪ್ತಿ ಎಂದು ಕರೆಯಬಹುದು. ಉದಾ: ಹಿಂದೆ Knight ಎಂದರೆ 'ಸೇವಕ' ಎಂಬ ಅರ್ಥವಿದ್ದು ಇಂದು 'ಪ್ರಶಸ್ತಿ' ಎಂಬರ್ಥದಲ್ಲಿ ಬಳಕೆಯಾಗುತ್ತಿದೆ. ಅಂದೆಯೇ 'Fame' ಎಂಬ ಇಂಗ್ಲೀಷ್ ಪದವು 'ಕೆಟ್ಟವರದಿ' ಎಂಬರ್ಥವನ್ನು ನೀಡುತ್ತಿದ್ದು, ಇಂದು ಪ್ರಸಿದ್ಧಿ ಎಂಬರ್ಥವಿದೆ.

ಅರ್ಥಾಂತರ (Transferance of Meaning) : ಪದದ ಅರ್ಥವು ಮೊದಲು ಇದುದ್ದಕ್ಕಿಂತ ಭಿನ್ನವಾದರೇ ಅದನ್ನು ಅರ್ಥಾಂತ ಎನ್ನಲಾಗುತ್ತದೆ. ಉದಾ: ಹಿಂದೆ 'ಗಂಡ' ಎಂದರೆ 'ಶೂರ' ಎಂಬ ಅರ್ಥವಿತ್ತು. ಇಂದು ಈ ಅರ್ಥಕಳೆದು ಹೋಗಿ 'ಪತಿ' ಎಂಬ ಮತ್ತೊಂದು ಅರ್ಥವನ್ನು ಪಡೆದುಕೊಂಡಿದೆ. ಹಾಗೆಯೇ 'ಅಮ್ಮ' ಎಂದರೇ 'ತಂದೆ' ಎಂಬ ಅರ್ಥವಿದ್ದದ್ದು ಇಂದು 'ತಾಯಿ' ಎಂದು ಅರ್ಥಾಂತರವಾಗಿದೆ. ಇಂತಹ ಅರ್ಥ ವ್ಯತ್ಯಾಸಕ್ಕೆ ಆ ಭಾಷಿಕ ಸಮುದಾಯವೇ ಕಾರಣ. ಒಟ್ಟಿನಲ್ಲಿ ಭಾಷೆ-ಸಮಾಜಗಳೆರಡೂ ನಿತ್ಯಪರಿವರ್ತನಾಶೀಲವಾದವು.

ಸಮಾಜ ವಿಜ್ಞಾನದ ಶಿಸ್ತುಗಳು ಮಾನವನ ಸಾಂಘಿಕತೆ, ಸಂಸ್ಕೃತಿ ಹಾಗೂ ಭೌದ್ಧಿಕತೆಯನ್ನು ತಿಳಿಸುವವು. ಮಾನವ ಸಮಾಜದೊಡನೆ ಹೊಂದಿರುವ ನಿಕಟತೆಯನ್ನು ವಿಶ್ಲೇಷಿಸುವುದೇ ಸಮಾಜ ವಿಜ್ಞಾನಿಗಳ ಗುರಿ. ಸಾಮಾಜಿಕ ಭಾಷಾ ವಿಜ್ಞಾನಿಗಳು ಭಾಷೆಯನ್ನು ಆಯಾ ಸಮುದಾಯದ ವಿವಿಧ ನೆಲೆಗಳ ಹಿನ್ನೆಲೆಯಿಂದ ಅಧ್ಯಯನ ಮಾಡಲು ಪ್ರಾರಂಭಿಸಿದರು. ಹಾಗಾಗಿ ಸಮಾಜ ಮತ್ತು ಭಾಷೆಯ ಸಂಕೀರ್ಣ ಸಂಬಂಧದಿಂದ ಸಾಮಾಜಿಕ ಭಾಷಾ ವಿಜ್ಞಾನ ಎಂಬ ಅಧ್ಯಯನ ಶಾಖೆ ಭಾಷಾ ವಿಜ್ಞಾನದಲ್ಲಿ ಸ್ಥಾನ ಪಡೆದುಕೊಂಡಿದೆ ಎಂದು ಕೆ.ವಿ. ನಾರಾಯಣ್ ಅವರು ತಿಳಿಸಿದ್ದಾರೆ. ಸಮಾಜದಲ್ಲಿ ಜಾತಿ, ವರ್ಗ, ಲಿಂಗ, ವೃತ್ತಿ, ಶಿಕ್ಷಣ, ನಗರ, ಗ್ರಾಮ ಮುಂತಾದ ಭಿನ್ನಾಂಶಗಳಿಂದ ಭಾಷೆ ಬದಲಾಗುತ್ತದೆ. ಅವುಗಳ ವೈಜ್ಞಾನಿಕವಾದ ವಿಶ್ಲೇಷಣೆ ಮುಂದಿನಂತಿದೆ.

ಭಾಷೆ ಮತ್ತು ವರ್ಗ : ಒಂದು ಸಮಾಜದಲ್ಲಿ ಭಾಷೆ ಹೇಗೆ ಬಳಕೆಯಾಗುತ್ತಿದೆ ಎಂದು ತೋರ್ಪಡಿಸುವ ಅಂಶಗಳಲ್ಲಿ ವರ್ಗ ವ್ಯವಸ್ಥೆಯು ಸಹ ಒಂದಾಗಿದೆ. ಸಮಾನ ಸಾಮಾಜಿಕ ಆರ್ಥಿಕ ಲಕ್ಷಣಗಳನ್ನು ಹೊಂದಿರುವ ಜನ ಸಮೂಹವನ್ನು ನಾವು ಒಂದು ವರ್ಗ ಎಂದು ಪರಿಗಣಿಸುತ್ತೇವೆ. ಭಾಷೆಯನ್ನು ಆಧರಿಸಿ ಭಾಷಾ ವಿಜ್ಞಾನಿಗಳು ಇದನ್ನು ಸ್ಥೂಲವಾಗಿ ಮೇಲ್ವರ್ಗ, ಕೆಳವರ್ಗ ಎಂದು ವಿಭಾಗಿಸಿದ್ದಾರೆ. ಇದನ್ನು ಭಾಷಾದ್ವಿಸ್ತರತೆ ಎಂದು ಕರೆಯಲಾಗುತ್ತದೆ.

ಚಾರ್ಲ್ ಫರ್ಗ್ಯುಸನ್ ಈ ಬಗೆಗೆ ಮೊದಲು ಪ್ರಸ್ತಾಪ ಮಾಡಿದರು. ಅರಾಬಿಕ್, ಸೆಮಿಟಿಕ್ ಭಾಷಾ ವರ್ಗಕ್ಕೆ ಸೇರಿದ ಒಂದು ಭಾಷೆ. ಪ್ರಪಂಚದ ಬಹುಪ್ರದೇಶಗಳಲ್ಲಿ ವ್ಯಾಪಿಸಿರುವ ಇದು ಇಸ್ಲಾಂ ಧರ್ಮದ

ಪವಿತ್ರ ಗ್ರಂಥ ಖುರಾನ್‌ನಲ್ಲಿ ಬಳಕೆಯಾಗಿದೆ. ಈ ಜಿಪ್ಪಿನಲ್ಲಿ ಎರಡು ಬಗೆಯ ಅರಾಬಿಕ್ ಇರುವುದನ್ನು ಗುರುತಿಸಿದ ಇವರು ಇವುಗಳನ್ನು ಹೈ ಅರಾಬಿಕ್, ಲೋ ಅರಾಬಿಕ್ ಎಂದು ಕರೆದರು. ಹೈ ಅರಾಬಿಕ್ ಪ್ರಾರ್ಥನೆ, ಆರಾಧನೆ, ಉನ್ನತ ಮಟ್ಟದ ಧಾರ್ಮಿಕ ಪ್ರವಚನಗಳಲ್ಲಿ ಲಿಖಿತ ರೂಪದಲ್ಲಿ ಬಳಕೆಯಾಗುತ್ತದೆ. ಲೋ ಅರಾಬಿಕ್ ದಿನನಿತ್ಯದ ವ್ಯವಹಾರದಲ್ಲಿ ಬಳಕೆಯಾಗುತ್ತದೆ. ಇದಕ್ಕೆ ಲಿಪಿಸೌಕರ್ಯ ಇಲ್ಲ ಎಂದು ತಿಳಿಸಿದ್ದಾರೆ. ಅಂದರೇ ಎಲ್ಲಾ ಸಮಾಜಗಳಲ್ಲೂ ಭಾಷಾ ಭಿನ್ನತೆಯು ಸಹಜವಾಗಿಯೇ ಸಾಮಾಜಿಕ ಅಂಶಗಳ ಆಧಾರದ ಮೇಲೆಯೆ ರೂಪಿತವಾಗಿರುತ್ತದೆ ಎಂಬುದನ್ನು ಮನಗಾಣಬಹುದು.

ವ್ಯಕ್ತಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲುಸ್ತರಕ್ಕೆ ಹೋದಂತೆ ಭಾಷೆಯ ಮೇಲೆ ಅದರ ಪ್ರಭಾವವನ್ನು ಕಾಣಬಹುದು. ಉದಾ: ಒಬ್ಬ ಸಾಮಾನ್ಯ ವ್ಯಕ್ತಿ ಮಾತನಾಡುವುದಕ್ಕೂ, ಅಧಿಕಾರದಲ್ಲಿರುವ ರಾಜಕಾರಣಿ ಮಾತನಾಡುವುದಕ್ಕೂ ವ್ಯತ್ಯಾಸವಿದೆ. ಅಂದರೇ ಸಾಮಾನ್ಯ ವ್ಯಕ್ತಿಯ ಮಾತಿನಲ್ಲಿ ಯಾವುದೇ ವಿಶಿಷ್ಟತಂತ್ರದ ಅಗತ್ಯವಿರುವುದಿಲ್ಲ. ಆದರೆ ರಾಜಕಾರಣಿ ಜನರನ್ನು ತನ್ನತ್ತ ಆಕರ್ಷಿಸಲು ವಿಶಿಷ್ಟ ಶೈಲಿಯ ಭಾಷೆಯನ್ನು ಬಳಸಬೇಕಾಗುತ್ತದೆ. ಮೇಲ್ವರ್ಗದವರ ಭಾಷೆಯಲ್ಲಿ ಮಹಾಪ್ರಾಣಗಳು ಹೆಚ್ಚಾಗಿ ಬಳಕೆಯಾಗುತ್ತವೆ. ಬಹುಪಾಲು ಮೇಲ್ವರ್ಗದವರು 'ಅ' ಕಾರ, 'ಹ' ಕಾರ, 'ಸ' ಕಾರ, 'ಶ' ಕಾರಗಳ ನಡುವಿನ ಭೇದವರಿತು ಸಮಯಕ್ಕೆ, ಸಂದರ್ಭಕ್ಕೆ ತಕ್ಕಂತೆ ಉಚ್ಚರಿಸುತ್ತಾರೆ. ಕೆಳವರ್ಗದವರಿಗೆ ಕೇವಲ ಸಂವಹನ ಮುಖ್ಯವಾಗಿರುತ್ತದೆ. ಭಾಷಿಕ ವ್ಯತ್ಯಾಸ ಮತ್ತು ಬಳಕೆಯ ಅರಿವು ಸಮರ್ಪಕವಾಗಿರುವುದಿಲ್ಲ. (ಇಲ್ಲಿ ವರ್ಗ ಎಂದಾಕ್ಷಣ ಆರ್ಥಿಕ ಹಿನ್ನೆಲೆಯಲ್ಲಿ ಪರಿಗಣಿಸುವಂತಿಲ್ಲ. ಭಾಷಿಕ ಹಿನ್ನೆಲೆಯಲ್ಲಿ ಪರಿಗಣಿಸುವುದು ಸೂಕ್ತ)

ಉದಾ:	ಉನ್ನತ ಭಾಷಿಕ ವರ್ಗ	ಕೆಳವರ್ಗ
	ಹೆಂಡತಿ	ಎಡ್ತಿ
	ಶಂಕರ	ಸಂಕ್ರ
	ಹಾಲು	ಆಲು
	ಹತ್ತು	ಅತ್ತು.

ಹಾಗೆಯೇ ಹಿರಿಯರನ್ನು ಕುರಿತು ಉಲ್ಲೇಖಿಸುವಾಗ ಅಥವಾ ಸಂಬೋಧಿಸುವಾಗ ಗೌರವ ಸೂಚಕ ನುಡಿಯನ್ನು ಬಳಸುವುದುಂಟು. ಇಲ್ಲಿಯೂ ಕೆಲವೊಮ್ಮೆ ಸಾಮಾಜಿಕ ವರ್ಗ ಕಾರ್ಯನಿರ್ವಹಿಸುತ್ತದೆ. ಉದಾ: ನಮ್ಮಲ್ಲಿ ಸಾಮಾಜಿಕವಾಗಿ ಮೇಲ್ವರ್ಗದಲ್ಲಿರುವ ಕಿರಿಯವಯಸ್ಸಿನವರು ಸಾಮಾಜಿಕವಾಗಿ ಕೆಳವರ್ಗದಲ್ಲಿರುವ ತಮ್ಮ ಹಿರಿಯ ಕೆಲಸಗಾರರನ್ನು ಏಕವಚನದಲ್ಲಿ ಸಂಬೋಧಿಸುತ್ತಾರೆ ಮತ್ತು ಆ ರೀತಿ ಸಂಬೋಧಿಸುವಾಗ ನೇರವಾಗಿ ಇಲ್ಲವೆ ಅಡ್ಡ ಹೆಸರುಗಳನ್ನು ಬಳಸುತ್ತಾರೆ. ಕರಿಯ, ಕೆಂಚ, ಮಾದ ಇತ್ಯಾದಿ. ಅಂತೆಯೇ ಹಿರಿಯರಾದ ಕೆಳವರ್ಗದವರು ಮೇಲ್ವರ್ಗದ ಕಿರಿಯರನ್ನು ಬಹುವಚನದಲ್ಲಿ ಮಾತನಾಡಿಸುವುದನ್ನು ಕಾಣುತ್ತೇವೆ. ಸ್ವಾಮಿ, ಚಿಕ್ಕಧಣಿ, ಚಿಕ್ಕಮ್ಮನೋರು, ಚಿಕ್ಕಬುದ್ದಿ ಇತ್ಯಾದಿ.

'ಕೆಳವರ್ಗದ ಸಂಸ್ಕೃತಿಯಿಂದ ಮೇಲ್ವರ್ಗದ ಸಂಸ್ಕೃತಿ ಹುಟ್ಟಿತು'. ಎಂದು ಡಾ.ರಾ.ಗೌ ಅವರು ಹೇಳುತ್ತಾರೆ. ಹಾಗೆಯೇ ಕೆಳವರ್ಗದ ಭಾಷೆಯಿಂದ ಮೇಲ್ವರ್ಗದ ಭಾಷೆ ಹುಟ್ಟಿತು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಆದರೂ ಭಿನ್ನ ರೀತಿಯಲ್ಲಿ ಬಳಕೆಯಾಗುತ್ತಿರುವುದನ್ನು ಕಾಣಬಹುದಾಗಿದೆ.

ಭಾಷೆ ಮತ್ತು ಜಾತಿ: ಭಾರತೀಯ ಸಮಾಜದಲ್ಲಿ ಏಕಕಾಲದಲ್ಲಿ ವರ್ಗ ಮತ್ತು ಜಾತಿಗಳೆರಡೂ ವಿಹರಿಸುತ್ತಿವೆ. ಪ್ರತಿಯೊಂದು ಜಾತಿಯ ಮೂಲಭೂತವಾಗಿ ಭಿನ್ನವಾದ, ನಂಬಿಕೆ, ರೀತಿ, ನಡವಳಿಕೆಗಳನ್ನು ಜೀವನ ಕ್ರಮವನ್ನು ರೂಢಿಸಿಕೊಂಡು ಬಂದಿರುತ್ತದೆ. ಆದ್ದರಿಂದ ಭಾಷಿಕ ಸಮುದಾಯದ ಒಳಭಿನ್ನತೆಗಳಿಗೆ ಸಾಮಾಜಿಕವಾದ ಜಾತಿವ್ಯವಸ್ಥೆಯೂ ಕಾರಣವಾಗುತ್ತವೆ. ಉದಾ: ಅಣಬೆ ಮತ್ತು ನಾಯಿಕೊಡೆ ಎಂಬ ಎರಡು ಪದರೂಪಗಳು ಕನ್ನಡ ಭಾಷೆಯಲ್ಲಿವೆ. ಇದರಲ್ಲಿ ಅಣಬೆ ಎಂಬ ಪದವನ್ನು, ಅದನ್ನು ಸಸ್ಯಾಹಾರವಾಗಿ ಸ್ವೀಕರಿಸುವವರು ಬಳಸಿದರೇ, ನಾಯಿಕೊಡೆ ಎಂಬ ಪದವನ್ನು ಅದನ್ನು ಆಹಾರವಾಗಿ ಸ್ವೀಕರಿಸದವರು ಬಳಸುತ್ತಾರೆ.

ಹಾಗೆಯೇ ಒಂದು ನಿರ್ದಿಷ್ಟ ಜಾತಿ ಸಮುದಾಯದ ಎಲ್ಲೆಯೊಳಗೆ ಮಾತ್ರ ಬಳಕೆಯಾಗಬಹುದಾದ ವಿಶಿಷ್ಟಪದಗಳು ಕ್ರಿಯಾತ್ಮಕತೆಯ, ಅರ್ಥದ ದೃಷ್ಟಿಯಿಂದ ಬೇರೆ ಜಾತಿ ಸಮುದಾಯಗಳ ಬಳಕೆಗಿಂತ ಭಿನ್ನವಾದ ಆಯಾಮವನ್ನು ಪಡೆದಿರುವುದನ್ನು ನೋಡಬಹುದು. ಉದಾ: 'ಹುಳಿ ಎನ್ನುವುದನ್ನು ಬ್ರಾಹ್ಮಣರು ಅದೊಂದು ಸೇವಿಸಲು ಸಿದ್ಧಗೊಂಡ ಆಹಾರ ಎಂಬರ್ಥದಲ್ಲಿ ಬಳಸುತ್ತಾರೆ. ಆದರೆ ಇತರೆ ಜಾತಿಯವರು ಇದನ್ನು ಒಂದು ರುಚಿಸೂಚಕ ಪದವಾಗಿ ಮಾತ್ರ ಬಳಸುತ್ತಾರೆ'[೧]. ಅಂತೆಯೇ ಕನ್ನಡದಲ್ಲಿ ಕೆಲವು ನಾಮಪದ, ಗುಣವಾಚಕ, ಕ್ರಿಯಾಪದಗಳಿಗೆ ಎರಡೆರಡು ಪರ್ಯಾಯ ಪದಗಳಿದ್ದು, ಸ್ಥೂಲವಾಗಿ ಇವುಗಳು ಉನ್ನತ ಜಾತಿ ಮತ್ತು ಕೆಳಜಾತಿಗಳ ನಡುವೆ ಪ್ರತ್ಯೇಕವಾಗಿ ಬಳಕೆಯಲ್ಲಿವೆ. ವಿಶೇಷವೆಂದರೆ ಈ ಎರಡೂ ರೂಪಗಳು ಪರಿಚಯ ಇಬ್ಬರಿಗೂ ಇರುತ್ತದೆ. ಆದರೇ ಬಳಸುವುದು ಮಾತ್ರ ತಮ್ಮ ಪರಂಪರೆಯ ಹಿನ್ನೆಲೆಯಲ್ಲಿಯೆ.

ಉದಾ:	**ಉನ್ನತಜಾತಿ**	**ಕೆಳಜಾತಿ**
	ಸಾರು	ಯಸ್ರು
	ಇದ್ದಾರೆ	ಅವ್ರೇ
	ಚೂರು	ಇಂಕ್ರ

ಹೀಗೆ ಯಾವುದೇ ಸಾಹಿತ್ಯ ಕೃತಿಯಲ್ಲಾಗಲಿ, ಸಮೂಹ ಮಾಧ್ಯಮಗಳಲ್ಲಾಗಲಿ ಈ ರೀತಿಯ ವ್ಯತ್ಯಸ್ಥ ಭಾಷೆಯನ್ನು ಬಳಕೆ ಮಾಡಿ ಪಾತ್ರಗಳ ಜಾತಿ ಮತ್ತು ಸ್ಥಾನವನ್ನು ಬಿಂಬಿಸುವುದುಂಟು.

ಭಾಷೆ ಮತ್ತು ವಯಸ್ಸು : ಸಮಾಜದ ವ್ಯಕ್ತಿಗಳ ವಯಸ್ಸಿಗನುಗುಣವಾಗಿ ಭಾಷೆಯು ಭಿನ್ನ ಸ್ವರೂಪವನ್ನು ತಾಳುತ್ತದೆ. ಇದನ್ನು ಬಾಲಭಾಷೆ, ಪ್ರೌಢಭಾಷೆ, ವೃದ್ಧಭಾಷೆ ಎಂದು ಮೂರು ಭಾಗಗಳನ್ನಾಗಿ

---

೧. ಕೆ.ವಿ ನಾರಾಯಣ:ಭಾಷೆ:ವಿಶ್ವಕೋಶ:ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ :ಡಾ. ಡಿ.ಪಾಂಡುರಂಗಬಾಬು (ಲೇ): ಭಾಷೆಯ ಸಾಮಾಜಿಕ ಚಹರೆ : ಪ್ರ.ವ. ೨೦೦೭, ಪು.ಸಂ. ೫೧.

ಮಾಡಬಹುದು. ಸಾಮಾನ್ಯವಾಗಿ ಕಿರಿಯರ ಭಾಷೆಯು ಹೆಚ್ಚು ಸರಳವಾಗಿದ್ದು, ಅನುಭವ ಕಡಿಮೆ ಇರುವುದರಿಂದ ಅಂತಹ ಗಹನವಾದ ವಿಚಾರಗಳ ಚರ್ಚೆ ಇವರದಾಗಿರುವುದಿಲ್ಲ. ತತ್ವರಹಿತವಾಗಿ, ಆಧ್ಯಾತ್ಮಿಕ ವಿಚಾರಕ್ಕೆ ಹೊರತಾಗಿ, ದೈನಂದಿನ ಊಟೋಪಚಾರಗಳು, ಆಟ-ಪಾಠ ಇತರೆ ಸಾಮಾನ್ಯ ವಿಷಯ ಚರ್ಚೆಯಾಗುತ್ತವೆ. ಮಧ್ಯಮ ವಯಸ್ಕರ ಭಾಷೆಯು ಹೆಚ್ಚು ಗಂಭೀರ ಸ್ವರೂಪದಲ್ಲಿದ್ದು ಸ್ಫುಟವಾಗಿರುತ್ತದೆ. ಆಗ ತಾನೇ ಅನುಭವದ ಮೆಟ್ಟಿಲನ್ನು ಹತ್ತಿ ಹಲವಾರು ಶಬ್ದ ಭಂಡಾರ, ನೀತಿ, ತತ್ವಗಳನ್ನು ತಮ್ಮದಾಗಿಸಿಕೊಂಡಿರುತ್ತಾರೆ. ವೃತ್ತಿಯ ಪರಿಭಾಷೆ ಮತ್ತು ವ್ಯವಹಾರಿಕ ಪದ ಸಂಪತ್ತು ಇವರಲ್ಲಿ ಹೆಚ್ಚಾಗಿ ಇರುತ್ತದೆ. ವೃದ್ಧರ ಭಾಷೆಯು ಅನುಭವಾತೀತವಾಗಿರುತ್ತದೆ. ಗಾದೆ, ಒಗಟು, ನಾಣ್ಣುಡಿಗಳು ಮಿಳಿತಗೊಳ್ಳುತ್ತಿರುತ್ತವೆ, ತತ್ತ್ವ ಸಹಿತವಾಗಿರುತ್ತದೆ.

ಭಾಷೆ ಮತ್ತು ಶಿಕ್ಷಣ : ಸಮಾಜದಲ್ಲಿ ಭಾಷಿಕ ಭಿನ್ನತೆಗೆ ಶಿಕ್ಷಣವೂ ಕಾರಣವಾಗುತ್ತದೆ. ಭಾಷೆ ಮತ್ತು ಉಪಭಾಷೆಗಳಲ್ಲಿ ಭಿನ್ನತೆ ಕಾಣುವುದೂ ಈ ಶಿಕ್ಷಣದಿಂದಲೆ. ಇದನ್ನು ಶಿಕ್ಷಿಕರ ಭಾಷೆ ಮತ್ತು ಅಶಿಕ್ಷಿತರ ಭಾಷೆ ಎಂದು ವಿಭಾಗಿಸಿಕೊಳ್ಳಬಹುದು. ಶಿಕ್ಷಣದಿಂದ ಇಂದು ಭಾಷೆಯು ಹೆಚ್ಚು ಪ್ರಮಾಣೀಕೃತವಾಗಿರುತ್ತದೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಎರಡಕ್ಕಿಂತ ಹೆಚ್ಚು ಭಾಷೆಗಳನ್ನು ಕಡ್ಡಾಯವಾಗಿ ಕಲಿಯುವ ಅನಿವಾರ್ಯತೆ ಇರುತ್ತದೆ. ಆ ಸಂದರ್ಭದಲ್ಲಿ ವಿದ್ಯಾವಂತರ ಭಾಷಿಕ ನೆಲೆಗಟ್ಟು, ಅವಿದ್ಯಾವಂತರಿಗಿಂತ ಹೆಚ್ಚು ಸುಭದ್ರವಾಗಿರುತ್ತದೆ. ಶಿಕ್ಷಿತರ ಭಾಷೆಯು ಹೆಚ್ಚು ಸ್ಫುಟವಾಗಿರುತ್ತದೆ. ಶಿಷ್ಟವಾಗಿರುತ್ತದೆ. ಭಿನ್ನ ಮತ್ತು ವಿಶಿಷ್ಟವಾದ ಶಬ್ದಗಳ ಬಳಕೆಗಳು ಅವೂ ಶಿಷ್ಟವಾಗಿದ್ದು, ಪಕ್ವ ವೈಚಾರಿಕತೆಯಿಂದ ಕೂಡಿರುತ್ತದೆ. ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಇವರ ಭಾಷೆಯಲ್ಲಿ ಹಿಂದಿ ಇಂಗ್ಲೀಷ್ ಸಹಜವಾಗಿಯೇ ಮಿಳಿತವಾಗಿರುತ್ತದೆ. ಅಶಿಕ್ಷಿತರು ಅವಿದ್ಯಾವಂತರೆಂಬ ಕಲ್ಪನೆ ಸಲ್ಲದು. ಅವರು ಅಕ್ಷರ ಜ್ಞಾನಿಗಳಲ್ಲದಿರಬಹುದು ಅವರಲ್ಲಿ ಗಾದೆ, ಒಗಟು, ನಾಣ್ಣುಡಿ, ಗೀತೆ ಮುಂತಾದ ಭಾಷಿಕಾಂಶವನ್ನು ಎತ್ತಿ ಹಿಡಿವ ಸಾಮರ್ಥ್ಯವಿದೆ. ಅವರ ಸಂಸ್ಕೃತಿ, ಆಚರಣೆಗೆ ಅನುಗುಣವಾಗಿ ಇವರ ಭಾಷೆ ಇರುತ್ತದೆ.

ಭಾಷೆ ನಗರ ಮತ್ತು ಗ್ರಾಮ: ಭಾಷೆ ಸರ್ವವ್ಯಾಪಿ. ನಗರ ಸಮಾಜವು ಜಾಗತೀಕರಣದ ನೆಲೆಬೀಡಾಗಿರುವುದು ತಿಳಿದಿರುವ ವಿಚಾರ, ಯಂತ್ರ-ತಂತ್ರಗಳ ಬೆಳವಣಿಗೆ, ಹೊಸ-ಹೊಸ ಆವಿಷ್ಕಾರ ಔದ್ಯೋಗಿಕ ವಲಯದಲ್ಲಿ ತನ್ನದೇ ಆದ ಪರಿಭಾಷೆ, ವಿಶಿಷ್ಟ ಅನ್ಯದೇಶ-ಅನ್ಯ ಭಾಷೆಗಳಿಂದ ಮಾತೃಭಾಷೆಯ ಶಬ್ದಭಂಡಾರ ಬೆಳವಣಿಗೆಯಾಗಿರುತ್ತದೆ. ಹೀಗೆ ವಿಕಾಸಗೊಂಡ ಹೊಸ ಶಬ್ದಗಳ ಪರಿಚಯ ಗ್ರಾಮೀಣವಲಯದವರಿಗೆ ನಿಲುಕುವುದು ಕಷ್ಟ. ಇದಕ್ಕೆ ಭೌಗೋಳಿಕ, ಸಾಂಸ್ಕೃತಿಕ ಕಾರಣಗಳಿವೆ. ಆಯಾ ಗ್ರಾಮ ಸಮುದಾಯಕ್ಕೆ ಅದರದೇ ಆದ ಸಾಂಸ್ಕೃತಿಕ ಪದಕೋಶವಿರುತ್ತದೆ. ಕೃಷಿವಲಯದ, ತಮ್ಮ ಆಚರಣೆಯ ವಲಯದ ಪದಗಳು ಹೆಚ್ಚಾಗಿ ಕಾಣುತ್ತವೆ. ನಗರ ಮತ್ತು ಗ್ರಾಮೀಣ ಪ್ರದೇಶದ ಜನರ ಭಾಷಾ ಉಚ್ಚಾರಣೆಯು ಭಿನ್ನವಾಗುತ್ತದೆ.

ಉದಾ:	ನಗರ ಭಾಷೆ	ಗ್ರಾಮೀಣ ಭಾಷೆ
	ದೇವರು	ದ್ಯಾವ್ರು
	ಸ್ವಲ್ಪ	ನಿಂಕ್ರ
	ಕಗ್ಗತ್ತಲು	ಗವ್ವಗತ್ತಲು

ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ ಬಳಸುವ ಕವಣೆ, ಮಡೆ, ಬಳ್ಳ, ಕುಕ್ಕೆ, ಹಸೆಕಲ್ಲು ಮುಂತಾದ ಪದಗಳು ನಗರ ಪ್ರದೇಶದವರಿಗೆ ಅಪರಿಚಿತವೇ ಆಗಿರುತ್ತವೆ.

ಭಾಷೆ ಮತ್ತು ಲಿಂಗ : ಸಮಾಜದಲ್ಲಿ ಒಂದೇ ಜಾತಿ, ಒಂದೇ ವರ್ಗದವರಾಗಿದ್ದರೂ ಸ್ತ್ರೀ-ಪುರುಷರ ಭಾಷಾ ಬಳಕೆಯು ಭಿನ್ನವಾಗಿರುತ್ತದೆ. ಕನ್ನಡ ಭಾಷಿಕ ಸಮಾಜದಲ್ಲಿ ಪುರುಷರ ಹೆಸರುಗಳನ್ನು ಜಾತಿವಾಚಕ, ವೃತ್ತಿ ವಾಚಕ ಉಕ್ತಿಗಳು ಹೆಸರಿನೊಂದಿಗೆ ಸೇರುತ್ತವೆ. ಸ್ತ್ರೀಯರ ಹೆಸರುಗಳಲ್ಲಿ ಇವು ಕಾಣುವುದಿಲ್ಲ. ಉದಾ: ಲಕ್ಕಪ್ಪ ಬಡಿಗೇರ, ಗುಂಡಾ ಭಟ್ಟ ಮುಂತಾದವು. ಇತ್ತೀಚೆಗೆ ಪತಿಯನಾಮ, ಜಾತಿಯ ನಾಮ ತಂದೆಯ ಹೆಸರು ಸ್ತ್ರೀಯರ ಹೆಸರಿನ ಮುಂದೆ ಬರುತ್ತಿರುವುದನ್ನು ಕಾಣುತ್ತೇವೆ. ಉದಾ: ಸುಮಂಗಲಾ ಹಿರೇಮಠ, ಸಂಗೀತ ಕಟ್ಟಿ ಮುಂತಾದವು.

ಹಾಗೆಯೇ ಕೆಲವು ನಿರ್ದಿಷ್ಟ ಭಾಷಾ ವರ್ತನೆಗಳು ಸ್ತ್ರೀಯರಿಗೆ ಸೀಮಿತ ಎಂದು, ಮತ್ತೆ ಕೆಲವು ಪುರುಷರಿಗೆ ಸೀಮಿತ ಎಂದು ಒಂದು ಸಮುದಾಯ ಭಾವಿಸಿರುತ್ತದೆ. ಅಂತಹ ಸಮಾಜದಲ್ಲಿ ಭಿನ್ನ ಭಾಷಾ ಬಳಕೆಯನ್ನು ಕಾಣಬಹುದು. ಈ ನಿಟ್ಟಿನಲ್ಲಿ ಸಮಾಜದಲ್ಲಿ ಬಳಕೆಯಾಗುವ ಬೈಗುಳಗಳನ್ನು ಉದಾಹರಿಸಬಹುದು. ನಿನ್ ಮನೆ ಹಾಳಾಗ, ನಿನ್ನ ಸಿಗ್ದು ತೋರಣ ಕಟ್ತೀನಿ ಈ ಎರಡು ಸಾಲುಗಳಲ್ಲಿ ಮೊದಲನೆಯದು ಸ್ತ್ರೀ ಸಾಮಾಜಿಕ ವಲಯಕ್ಕೂ, ಎರಡನೆಯದು ಪುರುಷರ ಸಾಮಾಜಿಕ ವಲಯಕ್ಕೂ ಅನ್ವಹಿಸುತ್ತವೆ. ಅಂತೆಯೇ ಕನ್ನಡದಲ್ಲಿ ಸ್ತ್ರೀ ಪುರುಷರು ಅದರಲ್ಲೂ ವಿವಾಹಿತರು ಒಬ್ಬರನ್ನೊಬ್ಬರು ಸಂಬೋಧಿಸುವ ರೀತಿ ಬೇರೆ-ಬೇರೆಯಾಗಿದೆ ಮತ್ತು ಆ ಸಂಬೋಧನೆಯು ನಾಮ ರಹಿತ ವಾಗಿರುವುದು ಹೆಚ್ಚು. ಉದಾ: ಮಹಿಳೆಯರು ನಮ್ಮೆ ಜಮಾನ್ರು, ನಮ್ಮನೆಯವ್ರು, ರೀ, ಏನು ಅಂದ್ರೆ, ಎಂದೂ ಪುರುಷರು ನಮ್ಮನೆಯವ್ರು, ನನ್ಹೆಂಡ್ತಿ, ಇವ್ಳೇ, ಏನೇ ಹೀಗೆ ಪದಗಳನ್ನು ಬಳಸುತ್ತಾರೆ. ಒಂದು ಸಮಾಜವು ಸ್ತ್ರೀ ಪುರುಷರ ನಡುವೆ ಕೆಲವು ಭಾಷಿಕ ನಿರ್ಬಂಧ, ನಿಯಮಗಳನ್ನು ಹಾಕಿರುತ್ತದೆ. ಭಾಷೆ ಆ ನಿರ್ಬಂಧಿತ ವಲಯದೊಳಗೆ ಬಳಕೆಯಾಗಬೇಕು ಇಲ್ಲವಾದಲ್ಲಿ ಸಮಾಜ ಅವರನ್ನು ಬೇರೆ ರೀತಿಯೇ ಪರಿಗಣಿಸುತ್ತದೆ.

ಇಷ್ಟಲ್ಲದೇ ಯಾವುದೇ ಸಾಹಿತ್ಯ ಕೃತಿಯಾಗಲಿ, ವಿಮರ್ಶೆಯಾಗಲಿ, ಸಂಶೋಧನೆಯಾಗಲಿ, ಇತಿಹಾಸವಾಗಲಿ ಬರಹದ ಮಾದರಿಯಲ್ಲಿ ಅವು ಪುರುಷವಾಚಿಯಾಗಿವೆ. ಉದಾ: ಮಾನವ, ಮನುಷ್ಯ, ಸಂಶೋಧಕ, ವಿಮರ್ಶಕ ಇತ್ಯಾದಿ. ಸ್ತ್ರೀಯರ ಬರವಣಿಗೆಗಳಲ್ಲೂ ಇದು ಹೊರತಾಗಿಲ್ಲ. ಇಂದು ಬಹುವಚನ ಪ್ರತ್ಯೇಯವನ್ನು ಸೇರಿಸುವ ಮೂಲಕ ಈ ಸಮಸ್ಯೆಯನ್ನು ಪರಿಹರಿಸುವ ಪ್ರಯತ್ನ ನಡೆದಿದೆ. ಉದಾ:

ಮಾನವರು, ಮನುಷ್ಯರು, ಮಾಡುತ್ತಾರೆ, ವಿಮರ್ಶಕರು, ಇತ್ಯಾದಿ.

ಕಡೆಯದಾಗಿ ಹೇಳಬಹುದಾದ ವಿಚಾರವೆಂದರೆ ಪ್ರತಿಯೊಂದು ಸಮಾಜವು ತನ್ನ ಭಾಷೆಯನ್ನು ಪ್ರಬಲ ಶಕ್ತಿಯನ್ನಾಗಿ, ಬಲಿಷ್ಠವನ್ನಾಗಿ ಮಾಡಲು ಬಯಸುತ್ತದೆ. ಆದರೆ ವಾಸ್ತವದಲ್ಲಿ ಯಾವ ಭಾಷೆಯೂ ಮೇಲಲ್ಲ, ಯಾವ ಭಾಷೆಯೂ ಕೀಳಲ್ಲ. ಹೀಗೆ ಭಾಷೆ ಮತ್ತು ಸಮಾಜ ಒಂದನ್ನುಳಿದು ಮತ್ತೊಂದು ಇರುವುದಿಲ್ಲ. ಭಾಷೆ ಮತ್ತು ಸಮಾಜ ಒಂದನ್ನೊಂದು ಪೋಷಿಸುತ್ತ ಪುನರ್ ರೂಪಿಸುತ್ತಾ ಸಾಗಿವೆ. ಜೀವಂತ ಮಾಧ್ಯಮ ಮತ್ತು ಘಟಕಗಳಾಗಿವೆ. ಭಾಷೆ ಒಂದೇ ಆದರೂ ವ್ಯಕ್ತಿ, ಜಾತಿ, ವರ್ಗ, ಶಿಕ್ಷಣ, ವಯಸ್ಸು, ನಗರ, ಗ್ರಾಮ, ಲಿಂಗ ಮುಂತಾದ ಸಾಮಾಜಿಕ ಅಂಶಗಳ ಹಿನ್ನೆಲೆಯಲ್ಲಿ ಅದು ಭಿನ್ನ-ಭಿನ್ನ ಸ್ವರೂಪವನ್ನು ತಾಳುತ್ತದೆ. ಭಾಷೆಯನ್ನು ಮನುಷ್ಯರು ಒಂದಿಲ್ಲೊಂದು ಸಾಮಾಜಿಕ ಸಂದರ್ಭಗಳಲ್ಲಿಯೇ ಬಳಸುತ್ತಾರೆ. ಒಟ್ಟಿನಲ್ಲಿ ಸಮಾಜವಿಲ್ಲದೆ ಭಾಷೆಯಿಲ್ಲ, ಭಾಷೆಯಿಲ್ಲದೆ ಸಮಾಜ ವಿಲ್ಲ.

ಭಾಷೆ ಮತ್ತು ಸಂಸ್ಕೃತಿ:

ಇತ್ತೀಚಿನ ದಿನಗಳಲ್ಲಿ ಚರ್ಚೆಗೆ ಒಳಗಾಗುತ್ತಿರುವ ವಿಷಯಗಳಲ್ಲಿ ಸಂಸ್ಕೃತಿ ಪ್ರಧಾನವಾದದ್ದು. ಕಲ್ಚರ್ ಎನ್ನುವ ಪದ ಪ್ರಾಚೀನವಾದದ್ದು ಇದನ್ನು ‘‘ದಾಖಲಾತಿ ರೂಪದಲ್ಲಿ ಇ.ಬಿ. ಟೈಲರ್ ಅವರು ೧೮೬೫ರಲ್ಲಿ ಪ್ರಕಟವಾಗಿದ್ದ ತಮ್ಮ ಮನುಕುಲದ ಪೂರ್ವೇತಿಹಾಸದ ಸಂಶೋಧನೆಗಳು ಎಂಬ ಗ್ರಂಥದ ಆರಂಭದಲ್ಲಿ ಬಳಸಿದ್ದಾರೆ. ಅನಂತರ ೧೮೭೧ರಲ್ಲಿ ೨ ಸಂಪುಟಗಳಲ್ಲಿ ಪ್ರಿಮಿಟಿವ್ ಕಲ್ಚರ್ ಎಂಬ ಗ್ರಂಥವನ್ನು ಟೈಲರನ್ನು ಪ್ರಕಟಿಸಿದನು. ಈ ಗ್ರಂಥದ ಪ್ರಥಮ ವಾಕ್ಯವಾಗಿಯೇ ಟೈಲರ್ ಸಂಸ್ಕೃತಿ ಸೂತ್ರವನ್ನು ರೂಪಿಸಿದ್ದಾನೆ’’.[೧] ಹಾಗೆಯೇ Culture ಎಂಬ ಇಂಗ್ಲಿಷ್ ಪದ Kultur ಎಂಬ ಜರ್ಮನ್ ಶಬ್ದದಿಂದ ನಿಷ್ಪನ್ನವಾಗಿದೆ, ಜರ್ಮನಿಯಲ್ಲಿ ಈ ಎರಡು ರೂಪಗಳು ಬಳಕೆಯಲ್ಲಿದ್ದವು, ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಸಂಸ್ಕೃತಿ ಎಂಬ ಪದವಿದೆ. ಸಂಸ್ಕೃತಿ ಕುರಿತು ಹಲವಾರು ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನಗಳನ್ನು ಮಂಡಿಸಿದ್ದಾರೆ.

‘‘ಇ.ಬಿ. ಟೈಲರ್: ಮಾನವ ಶಾಸ್ತ್ರಜ್ಞರಾದ ಇವರು ನೀಡಿರುವ ಸಂಸ್ಕೃತಿ ಕುರಿತಾದ ವ್ಯಾಖ್ಯಾನ ಹೆಚ್ಚು ವ್ಯಾಪಕವಾಗಿದೆ. ಸಂಸ್ಕೃತಿಯು ಜ್ಞಾನ, ನಂಬುಗೆ, ಕಲೆ, ನೈತಿಕ ನಿಯಮ, ಕಾನೂನು, ರೂಢಿ ಮತ್ತು ಮಾನವನು ತನ್ನ ಸಮಾಜದ ಸದಸ್ಯನಾಗಿದ್ದುಕೊಂಡು ಸಾಧಿಸಿದ ಇನ್ನುಳಿದ ಸಾಮರ್ಥ್ಯಗಳನ್ನು ನೈಪುಣ್ಯಗಳನ್ನು ಒಳಗೊಂಡಿರುವ ಅಖಂಡವಾದ ಒಂದು ಸಂಕೀರ್ಣ ವ್ಯವಸ್ಥೆಯಾಗಿದೆ’ ಎಂದಿದ್ದಾರೆ.

ಮೆಲಿನವಸ್ಕಿ: ಮಾನವ ಶಾಸ್ತ್ರಜ್ಞರಾದ ಇವರು, ಮಾನವ ತನ್ನ ಜೀವನದ ಗೊತ್ತುಗುರಿಯನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಸಾಧನವೇ ಸಂಸ್ಕೃತಿಯಾಗಿದೆ ಎಂದಿದ್ದಾರೆ.

ಮೆಕೀವರ್ ಮತ್ತು ಪೇಜ್: ಸಂಸ್ಕೃತಿಯು ನಮ್ಮ ಜೀವನದ ಶೈಲಿಯ ಮೌಲ್ಯಗಳ ಭಾವನಾತ್ಮಕ ಬಂಧನಗಳ ಹಾಗೂ ಬೌದ್ಧಿಕ ಸಾಧನಗಳ ಪ್ರಪಂಚವೇ ಆಗಿದೆ ಎಂದಿದ್ದಾರೆ.

---

೧. ನಂ. ತಪಸ್ವಿಕುಮಾರ್:ಸಂಸ್ಕೃತಿ ವಿಕಾಸ: ಪ್ರ.ವ. : ೧೯೯೫: ಪು.ಸಂ. ೨೭

ಟಿ.ಎಸ್. ಎಲಿಯಟ್: ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಸಮಗ್ರ ಜೀವನ ವಿಧಾನವೇ ಸಂಸ್ಕೃತಿ ಎಂದಿದ್ದಾನೆ. ಕನ್ನಡದಲ್ಲಿಯೂ ಈ ಬಗ್ಗೆ ಅನೇಕರು ಚರ್ಚಿಸಿದ್ದಾರೆ''[೧].

ರಹಮತ್ ತರೀಕೆರೆಯವರು: ಸಂಸ್ಕೃತಿ ಎಂದರೆ ಜನ ಜೀವನದ ಮೊತ್ತ ಎಂದಿದ್ದಾರೆ.

ಎಲ್.ಶ್ರೀಕಂಠಯ್ಯನವರು: ಮಾನವ ಸಮಾಜವು ಗಳಿಸಿರುವ, ಅಭಿವೃದ್ಧಿ ಮಾಡಿಕೊಂಡಿರುವ ವ್ಯವಸ್ಥೆಗಳ, ಸಂಬಂಧಗಳ, ಜ್ಞಾನ, ವಿಜ್ಞಾನ, ಭಾವನೆಗಳು, ಸಾಹಿತ್ಯ ಕಲೆ, ಸಂಗೀತ, ಭಾಷೆ, ಉಪಕರಣಗಳು, ರೀತಿ-ನೀತಿಗಳು ಮತ್ತು ಇವುಗಳನ್ನು ಪ್ರತಿಬಿಂಬಿಸುವ ಜನಜೀವನವೇ ಸಂಸ್ಕೃತಿ ಎಂದಿದ್ದಾರೆ.

ಒಟ್ಟಾರೆ ಈ ಎಲ್ಲಾ ವ್ಯಾಖ್ಯೆಗಳನ್ನು ಅಧ್ಯಯನ ಮಾಡಿದಾಗ ತಿಳಿದು ಬರುವ ಸಾಮಾನ್ಯ ಅರ್ಥವೆಂದರೆ ಸಂಸ್ಕೃತಿ ಮಾನವನಿಂದ ನಿರ್ಮಾಣವಾದದ್ದು. ಇದು ಏಕಕಾಲದಲ್ಲಿ ಸ್ಥಿರವೂ, ಚಲನಶೀಲವೂ ಆಗಿದೆ. ಸಂಸ್ಕೃತಿಯನ್ನು ರೂಪಿಸುವ ಮಾನವ ತನನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಒಟ್ಟಾರೆ ಮಾನವ ಜೀವನದ ಭೌತಿಕ, ಬೌದ್ಧಿಕ ಅಂಶಗಳಿಂದ ಕೂಡಿದ ಸಮಗ್ರ ಮೊತ್ತವೇ ಸಂಸ್ಕೃತಿ.

ಸಂಸ್ಕೃತಿಯು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುವ ಅಮೂರ್ತ ಸ್ವರೂಪ, ಇದು ವಿಶಿಷ್ಟವಾಗಿ ಆಯಾ ಗುಂಪಿಗೆ ಸೇರಿರುತ್ತದೆ. ಇದಕ್ಕೆ ಮೂರ್ತರೂಪವನ್ನು ಕೊಡುವುದೇ ಭಾಷೆ. ಭಾಷೆಯು ಸಂಸ್ಕೃತಿಯ ವಾಹಕ, ಸಂಸ್ಕೃತಿ ಕಾಲದಿಂದ ಕಾಲಕ್ಕೆ ವಹನವಾಗಲು ಭಾಷೆಯೇ ಕಾರಣ. ಅದು ದೃಶ್ಯವಾಗಬಹುದು, ಧ್ವನಿ ಬದ್ಧವಾಗಬಹುದು ಪ್ರತಿ ವ್ಯಕ್ತಿಯೂ ಭೌತಿಕವಾಗಿ, ಬೌದ್ಧಿಕವಾಗಿ ಒಂದು ಸಂಸ್ಕೃತಿಗೆ ಒಳಪಟ್ಟಿರುತ್ತಾನೆ. ಈ ಅಂಶ ಬಿಂಬಿತವಾಗುವುದು ಭಾಷೆಯಿಂದ. ಒಂದು ಸಮಾಜ ಮತ್ತು ಸಂಸ್ಕೃತಿಗಳು ಬದಲಾದರೆ ಅದನ್ನು ಅನುಸರಿಸಿ ಆ ಭಾಷೆಯ ಪದಸಂಪತ್ತೂ ಬದಲಾಗುತ್ತದೆ. ಒಂದು ಭಾಷೆಯನ್ನಾಡುವ ಜನರನ್ನು ಅಧ್ಯಯನಕ್ಕೆ ಒಳಪಡಿಸಿದರೆ ಆ ಜನರ ಸಂಸ್ಕೃತಿ ನಮಗೆ ಗೋಚರವಾಗುತ್ತದೆ. ಆದ್ದರಿಂದ ಭಾಷೆ ಸಂಸ್ಕೃತಿಯ ಕನ್ನಡಿ (Language is a Index of Culture) ಎಂದು ಕರೆಯಬಹುದು.

ಭಾಷೆಯು ಸಂಸ್ಕೃತಿಯ ಒಂದು ಅಂಗ. ಅಗಾಧವಾದ ಸಾಂಸ್ಕೃತಿಕ ಅಂಶಗಳು ಭಾಷೆಯ ಸಹಕಾರವಿಲ್ಲದೆ ಅಭಿವ್ಯಕ್ತಿಗೊಳ್ಳಲಾರವು. ಭಾಷೆ ಮೊದಲ ಹಂತದಲ್ಲಿ ಒಂದು ಭೌತಾತೀತ ಕ್ರಿಯೆ. ಅದು ಅಭೌತೀತ ಲಕ್ಷಣವನ್ನು ಹೊಂದಿದೆ. ಸಂಸ್ಕೃತಿ ಮತ್ತು ಭಾಷೆಗಳು ಒಬ್ಬನಿಗೆ ಸೀಮಿತವಾದುದ್ದಲ್ಲ. ಇವು ಸಮುದಾಯದ ಸಮಷ್ಟಿ ನೆಲೆಯಲ್ಲಿ ನಿಲ್ಲುವಂತಹದ್ದು. ಇವೆರಡು ಪರಸ್ಪರ ಬೆಸೆದುಕೊಂಡಿವೆ. ಭಾಷೆಗೆ ಲಿಪಿ ಸ್ವರೂಪವನ್ನು ಕೊಟ್ಟವನೂ ಮಾನವನೇ. ಬರಹವು ಸಂವಹನದ ಮತ್ತೊಂದು ಆಯಾಮುವಾಯಿತು. ಈ ಹಿನ್ನೆಲೆಯಲ್ಲಿ ಅಚ್ಚು, ಮರ, ಕಲ್ಲಚ್ಚು, ಕಾಗದ, ಶಾಹಿ, ಮಸಿ, ಓಲೆಗರಿ,

೧. ಚ.ನ. ಶಂಕರ್‌ರಾವ್ :ಸಮಾಜಶಾಸ್ತ್ರ :ಜೈಭಾರತ ಪ್ರಕಾಶನ, ಮಂಗಳೂರು :ಪ್ರ.ವ. ೧೯೯೮, ಪು.ಸಂ. ೧೭೬

ತಾಳೆಗರಿ, ಸೀಸ, ಡಿ.ಟಿ.ಪಿ. ಎಂಬ ಹೊಸ-ಹೊಸ ಪದಗಳು ಸೃಷ್ಟಿಯಾದವು. ಭೌತಿಕ ವಸ್ತುಗಳ ಬಳಕೆ ಹೆಚ್ಚಾದಂತೆ ಹೆಚ್ಚು ಪದಗಳ ಅವಶ್ಯಕತೆ ಇರುತ್ತದೆ. ಇದನ್ನು ತುಂಬಿಕೊಳ್ಳಲು ಆಯಾ ಸಾಂಸ್ಕೃತಿಕ ವಲಯದಲ್ಲಿ ಅಥವಾ ಮತ್ತೊಂದು ಭಾಷೆಯಿಂದ ಪದಗಳನ್ನು ಸ್ವೀಕರಿಸಿ ಬೇಕಾಗುತ್ತದೆ. ಉದಾ: Mobile > ಸಂಚಾರಿ-ದೂರವಾಣಿ, File > ಕಡತ, Software> ತಂತ್ರಾಂಶ, Hard ware > ಯಂತ್ರಾಂಶ ಈ ಇಂಗ್ಲೀಷ್ ಪದಗಳ ಕನ್ನಡ ರೂಪವನ್ನು ಬಳಸಲು ಸೌಲಭ್ಯಾಕಾಂಕ್ಷಿಯಾದ ಮಾನವ ಹಿಂಜರಿಯುತ್ತಾನೆ. ಆ ಸಂದರ್ಭದಲ್ಲಿ ಅನ್ಯಭಾಷೆಯಿಂದ ಸಾಂಸ್ಕೃತಿಕ ಸ್ವೀಕರಣ ಅತ್ಯಾವಶ್ಯಕ.

ಭಾಷೆಯನ್ನು ಪ್ರಾಣಿಗಳಿಗೂ ಕಲಿಸಬಹುದು. ಆದರೇ ಆ ಪ್ರಾಣಿ ಅಲ್ಲಿನ ಸಮುದಾಯಕ್ಕೆ ಕಲಿಸಲು ಸಮರ್ಥವಾಗಿರುವುದಿಲ್ಲ. ಭಾಷೆ ಕಲಿತ ಮಾನವ ಅದನ್ನು ಇತರರಿಗೂ ಕಲಿಸಬಲ್ಲ, ಆದ್ದರಿಂದ ಭಾಷೆ ಎಂಬ ಸಂಸ್ಕೃತಿ ಮಾನವ ಮತ್ತು ಪ್ರಾಣಿಗಳು ಭಿನ್ನ ಎಂಬುದನ್ನು ತೋರಿಸುತ್ತದೆ. ಒಬ್ಬ ಮಾನವನ ಜ್ಞಾನ ಒಂದು ಸಮಾಜದ ಜ್ಞಾನವಾಗಿ ಬೆಳೆಯುತ್ತದೆ. ಇದು ಯಾವ ಘಟ್ಟದಲ್ಲಿಯಾದರೂ ಎಲ್ಲರಿಗೂ ತಲುಪುತ್ತದೆ. ಒಂದು ತಲೆಮಾರಿನಲ್ಲಿರುವ ಸಾಂಸ್ಕೃತಿಕ ಜ್ಞಾನ ಮುಂದಿನ ತಲೆಮಾರಿಗೆ ಲಭ್ಯವಾಗಬೇಕಾದರೆ ಅದು ಭಾಷಾ ಮಾಧ್ಯಮದಿಂದ ಮಾತ್ರ. ಎಂತಹ ಆಧುನಿಕತೆ, ಜಾಗತೀಕರಣದ ಉತ್ಕೃಷ್ಟ ನೆಲೆಗಟ್ಟಿನಲ್ಲಿ ಜೀವಿ ಇದ್ದರೂ ಆತನನ್ನು ಆತನ ಮೂಲಸಂಸ್ಕೃತಿಯ ಸೆಲೆ ನಿಯಂತ್ರಿಸುತ್ತಿರುತ್ತದೆ. ಬುಡಕಟ್ಟು ಜನಾಂಗದ ಭಾಷೆ, ಆಚರಣೆ ಬದುಕುವ ಕ್ರಮ ಮುಂದಿನ ಪೀಳಿಗೆಗೆ ಪ್ರವಹಿಸುತ್ತದೆ. ಕಾಲಾನಂತರದಲ್ಲಿ ಅದು ಬೇರೆ ಭಾಷೆ, ಆಚರಣೆ, ಸಂಸ್ಕೃತಿಗೆ ಬದಲಾಗುವ ಸಾಧ್ಯತೆ ಇದೆ. ಉದಾ: ಅಮೇರಿಕಾದಗ ನೀಗ್ರೋ ಜನರು ತಮ್ಮ ಸಂಸ್ಕೃತಿ, ನಡವಳಿಕೆಗಳು ಮತ್ತು ಭಾಷೆಯನ್ನು ಕೈಬಿಟ್ಟು ಅಮೇರಿಕಾದ ವಸಾಹತುಷಾಹಿ ಸಂಸ್ಕೃತಿ, ಭಾಷೆಯನ್ನು ಒಪ್ಪಿಕೊಂಡಿದ್ದಾರೆ. ಆಫ್ರಿಕಾದ ಮೂಲನಿವಾಸಿಗಳೂ ತಮ್ಮ ಭಾಷೆಯನ್ನು ಬಿಟ್ಟು ಇಂಗ್ಲೀಷ್ ಭಾಷೆ ಅನುಸರಿಸುತ್ತಿದ್ದಾರೆ. ಆದರೇ ಇವರಲ್ಲಿ ಅವರದೇ ಆದ ವಿಶಿಷ್ಟ ಹಬ್ಬಗಳ ಆಚರಣೆ ಇದ್ದೆ ಇವೆ. ಅಂದರೇ ಸಂಸ್ಕೃತಿಯ ಮೂಲ ಸೆಲೆ ಸಮಾಜದ ವ್ಯಕ್ತಿಗಳನ್ನು ನಿಯಂತ್ರಿಸುತ್ತಿರುತ್ತದೆ. ಭಾರತಕ್ಕೆ ವಲಸೆ ಬಂದಿರುವ ಟಿಬೆಟನ್ನರು ಇದಕ್ಕೆ ಉತ್ತಮ ನಿದರ್ಶನ.

ಯಾವ ಭಾಷೆಯೂ ಮೇಲಾಗಲಿ ಯಾವ ಭಾಷೆಯೂ ಕೀಳಾಗಲಿ ಅಲ್ಲ. ಸಂಸ್ಕೃತಿಯೂ ಹಾಗೆಯೇ ಪ್ರತಿಯೊಬ್ಬರಲ್ಲಿಯೂ ಅವರವರ ಮಿತಿಯಲ್ಲಿ ಇರುತ್ತದೆ. ಆದ್ದರಿಂದ ಭಾಷೆ ಮತ್ತು ಸಂಸ್ಕೃತಿಗೆ ತರತಮ ಭಾವ ಸಲ್ಲುವುದಿಲ್ಲ. ಸಾಹಿತ್ಯದಲ್ಲಿ ೬೪ ವಿದ್ಯೆಯ ಬಗ್ಗೆ ಚರ್ಚಿಸಲಾಗುತ್ತದೆ. ಹಿಂದೆ ರಾಜಮನೆತನದವರು ಕಲಿಯುತ್ತಿದ್ದ ಇಷ್ಟು ವಿದ್ಯೆಗಳಲ್ಲಿ ಕಳ್ಳತನವೂ ಒಂದು ವಿದ್ಯೆಯಾಗಿ ಪರಿಗಣಿತವಾಗುತ್ತಿತ್ತು. ಸಂಸ್ಕೃತಿ ವಿಶ್ಲೇಷಣೆಯಲ್ಲಿ ಈ ಮಾತು ಬಹಳ ಮುಖ್ಯವಾದದ್ದು. ಬರಗೂರು ರಾಮಚಂದ್ರಪ್ಪ ಅವರು ಉಪ ಸಂಸ್ಕೃತಿ ಎನ್ನುವ ಮಾತನ್ನು ಬಳಸಿದ್ದಾರೆ. ಹಾಗೆಯೇ ಕ್ರೈಸ್ತರು ಲ್ಯಾಟಿನನ್ನು

ಮುಸ್ಲಿಂರು ಅರಾಬಿಕನ್ನು, ಯಹೂದಿಗಳು ಹೀಬ್ರೂವನ್ನು, ಭಾರತದಲ್ಲಿ ಸಂಸ್ಕೃತವನ್ನು ಶ್ರೇಷ್ಠ ಭಾಷೆಗಳೆಂದು, ಈ ಭಾಷೆಯನ್ನು ಬಳಸುವವರ ಸಂಸ್ಕೃತಿಯೇ ಶ್ರೇಷ್ಠವೆಂದು ನಂಬಿದ್ದರು. ಆದರೆ ಈ ನಂಬಿಕೆಯಲ್ಲಿ ಯಾವ ಹುರುಳೂ ಇಲ್ಲ, ಎಲ್ಲ ಭಾಷೆಗಳೂ, ಎಲ್ಲಾ ಸಂಸ್ಕೃತಿಗಳು ತಮಗೆ ತಾವೇ ಮುಖ್ಯವೆನಿಸಿವೆ.

ಭಾಷೆಯ ಬಳಕೆಗೆ ಸಾಮಾಜಿಕ, ಸಾಂಸ್ಕೃತಿಕ ಕಾರಣಗಳಿರುತ್ತಿದ್ದವು. ಇದನ್ನು ಭಾಷೆಯ ಸಾಂಸ್ಕೃತಿಕ ಅಸಮಾನತೆ ಎಂದು ಕರೆಯಬಹುದು. ಉದಾ: ಜರ್ಮನಿಯ ಚಾರ್ಲ್ಸ್‌ನು ಗಂಡಸರೊಡನೆ ಫ್ರೆಂಚ್‌ನಲ್ಲೂ, ಹೆಂಗಸರೊಡನೆ ಇಟಾಲಿಯನ್‌ನಲ್ಲೂ, ದೈವದೊಡನೆ ಸ್ಪ್ಯಾನಿಷ್‌ನಲ್ಲೂ, ಕುದುರೆಗಳೊಡನೆ ಜರ್ಮನ್‌ನಲ್ಲೂ ಮಾತನಾಡುತ್ತಿದ್ದನೆಂಬ ಐತಿಹ್ಯವಿದೆ. ಅಂತೆಯೇ ಕರ್ನಾಟಕದ ತಮಿಳರು, ಮುಸ್ಲಿಂರು, ತುಳು ಜನಾಂಗದವರು ಮನೆಯಲ್ಲಿ ಅವರವರ ಮಾತೃ ಭಾಷೆಯನ್ನು, ಹೊರಗೆ ಸಾಮಾಜಿಕ, ರಾಜಕೀಯ ಇತರೆ ಕಾರಣದಿಂದ ಕನ್ನಡವನ್ನು ಮಾತನಾಡುತ್ತಾರೆ. ಸಂಸ್ಕೃತ ನಾಟಕಗಳಲ್ಲಿ ಪುರುಷ ಪಾತ್ರಗಳು ಮೇಲು ಎಂದು ತೋರಿಸಲು ಸಂಸ್ಕೃತದಲ್ಲಿ ಮಾತನಾಡಿಸುವ, ಸ್ತ್ರೀಪಾತ್ರಗಳು ಕೀಳು ಎಂಬಾರ್ಥದಲ್ಲಿ ಪ್ರಾಕೃತದಲ್ಲಿ ಮಾತನಾಡಿಸುವ ಪರಿಪಾಠವಿತ್ತು. ತೆಲುಗಿನಲ್ಲಿ 'ಅದಿ' ಎಂಬ ನಪುಂಶಕವಾಚಿ ಪದವನ್ನು ಸ್ತ್ರೀಯರನ್ನು ಸಂಬೋಧಿಸುವಾಗ ಬಳಸುತ್ತಾರೆ. ಸ್ತ್ರೀಯನ್ನು ಜೀವಿಯಾಗಿ ಪರಿಗಣಿಸದೆ ವಸ್ತುವಾಗಿ ಪರಿಗಣಿಸಿದ್ದಾರೆ. ಇದರಿಂದ ಅಲ್ಲಿನ ಸಂಸ್ಕೃತಿ ಹಾಗೂ ಭಾಷಾ ವೈಖರಿಯನ್ನು ತಿಳಿಯಬಹುದು. ಕೆಲವರು ತಮ್ಮದು ಪ್ರಾಚೀನ ಭಾಷೆ, ಶುಶ್ರಾವ್ಯವಾದ ಭಾಷೆ, ಲಿಪಿಬದ್ಧ ಭಾಷೆ ಎಂಬ ಕಾರಣದಿಂದ ತಮ್ಮ ಭಾಷೆ ಶ್ರೇಷ್ಠ ಎಂದು ನಂಬಿದ್ದರು. ಆದರೇ ಇದು ವೈಜ್ಞಾನಿಕ ಸತ್ಯವಲ್ಲ.

ಸಂಸ್ಕೃತಿಯು ಬಹಳ ಆಳವಾದದ್ದು, ದಟ್ಟವಾದದ್ದು, ಭಾಷೆಯು ಅಂತೆಯೆ ಕೇವಲ ಶಬ್ದ ಅರ್ಥಗಳಿಂದ ಗ್ರಹಿಸುವಂತಹದ್ದಲ್ಲ. ಇವೆರಡೂ ಪ್ರತಿಯೊಬ್ಬರ ಆಲೋಚನೆ, ಮಿತಿಯನ್ನು ಆಧರಿಸಿರುತ್ತವೆ. ಭಾಷೆ ಒಂದು ಮಾತಾಗಿದ್ದಾಗ ಮನುಷ್ಯ ಸಾಮಾನ್ಯ ಸ್ಥಿತಿಯಲ್ಲಿರುತ್ತಾನೆ. ಈ ಮಾತು ಸಾಂಸ್ಕೃತಿಕ ಸ್ವರೂಪವನ್ನು ಪಡೆದುಕೊಂಡಾಗ ವ್ಯಕ್ತಿಯೂ ವಿಕಾಸವಾಗುತ್ತಾನೆ. ಭಾಷಿಕ ಸ್ವೀಕರಣದಲ್ಲಿ ಸಾಂಸ್ಕೃತಿಕ ಸ್ವೀಕರಣ, ಪ್ರೇರಣಾತ್ಮಕ ಸ್ವೀಕರಣ, ಉಪಭಾಷಾ ಸ್ವೀಕರಣ ಎಂಬ ಮೂರು ವಿಧಗಳನ್ನು ಕಾಣಬಹುದು. ಒಂದು ಸಂಸ್ಕೃತಿ ಮತ್ತೊಂದು ಸಂಸ್ಕೃತಿಯಿಂದ ಬೇಕಾದದ್ದನ್ನು ಸ್ವೀಕರಿಸುತ್ತದೆ, ಇದನ್ನು ಸಂಸ್ಕೃತಿ ಸ್ವೀಕರಣ ಎಂದು ಕರೆಯಬಹುದು. ಉದಾ: ಕಾಲರ್, ಕೋಟ್, ಜೀನ್ಸ್ ಮುಂತಾದವು ಪರಕೀಯ ಸಂಸ್ಕೃತಿಯ ಕೊಡುಗೆಗಳು. ಸಾಂಸ್ಕೃತಿಕ ಶಬ್ದಗಳು ಎಲ್ಲಾ ಭಾಷೆಗಳಲ್ಲಿಯೂ ಸಮಾನವಾಗಿದ್ದರೂ ಎಷ್ಟೋವೇಳೆ ಅವು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಸುಲಭವಾಗಿ ಸ್ವೀಕಾರವಾಗಲಾರವು.

ಭಾಷೆ ಮತ್ತು ಸಂಸ್ಕೃತಿಗಳು ಒಂದಕ್ಕೊಂದು ಪೂರಕವೂ ಪ್ರೇರಕವೂ ಆಗಿವೆ. ಉಪಭಾಷೆ ಮತ್ತು

ಉಪಸಂಸ್ಕೃತಿಗಳ ನೆಲೆಯಲ್ಲಿ ಹೇಳುವುದಾದರೇ, ಭಾಷೆ ಹೆಚ್ಚು ಕ್ರಿಯಾಶೀಲವಾಗಿರುವುದು ಇಂತಹ ಉಪ ಸಂಸ್ಕೃತಿಗಳ ಮೂಲಕವೆ. ಬಹುಭಾಷಿಕ ಬಹುಸಂಸ್ಕೃತಿಯ ದೃಷ್ಟಿಯಿಂದ ಹೇಳಬಹುದಾದರೇ, ಸಂಸ್ಕೃತಿ ವಲಯಗಳು ವಿಸ್ತರಿಸುತ್ತಾ ಹೋದಂತೆ ಸಂಸ್ಕೃತಿಗಳೂ ಹೆಚ್ಚಾಗುತ್ತವೆ. ಇದರಿಂದ ಸ್ವೀಕರಣ ಹೆಚ್ಚಾಗಿ ಬಹುಸಂಸ್ಕೃತಿಯು ಸೃಷ್ಟಿಯಾಗುತ್ತದೆ. ಇಂತಹ ಸಾಂಸ್ಕೃತಿಕ ಭಿನ್ನತೆಗೆ ಭಾಷೆಯು ಒಳಗಾಗುತ್ತದೆ ಮತ್ತು ಕಾರಣವಾಗುತ್ತದೆ.

ಏಕ ಸಂಸ್ಕೃತಿ ಮತ್ತು ಏಕಭಾಷಾ ವಿಚಾರದ ಚರ್ಚೆ ಬಹಳ ಮುಖ್ಯವಾದುದು. ವ್ಯಕ್ತಿಯದು ಯಾವ ಭಾಷೆಯೇ ಆಗಿರಲಿ ಯಾವ ಸಂಸ್ಕೃತಿಯೇ ಆಗಿರಲಿ ಅವನ ಮೇಲೆ ಒಂದೇ ರೀತಿಯ ಸಾಂಸ್ಕೃತಿಕ ಮತ್ತು ಭಾಷಾ ಶಿಸ್ತುಗಳನ್ನು ಹೇರುವುದನ್ನು ನಾವು ಏಕ ಸಂಸ್ಕೃತಿ ಮತ್ತು ಭಾಷೆ ಎಂದು ಕರೆಯುತ್ತೇವೆ. ಈಗ ಜಾಗತೀಕರಣ ಈ ಕಾರ್ಯವನ್ನು ಮಾಡುತ್ತಿದೆ. ನಮ್ಮವರಿಗೆ ಸೌಲಭ್ಯಕೊಡುವ ರೀತಿಯಲ್ಲಿ ನಮ್ಮ ಸಂಸ್ಕೃತಿ ಭಾಷೆಗಳಿಗೆ ಆಘಾತಕಾರಿಯಾಗಿದೆ. ಪರೋಕ್ಷವಾಗಿ ವಸಾಹತುಷಾಹಿ ಧೋರಣೆಯನ್ನು ತೋರುತ್ತಿದೆ. ಈ ನಿಟ್ಟನಲ್ಲಿ ಇಂಗ್ಲಿಷ್ ಭಾಷೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳನ್ನು ಉದಾಹರಿಸಿದರೆ ತಪ್ಪಾಗಲಾರದು.

ಇಂದು ಸಂಸ್ಕೃತಿಯ ಆಯಾಮ ಬದಲಾಗಿರುವುದು ತಿಳಿದಿರುವ ವಿಚಾರ. ಒಳ್ಳೆಯ ನಡವಳಿಕೆಯೇ ಸಂಸ್ಕೃತಿ ಎಂದು ಮೊದಲು ತಿಳಿಯಲಾಗಿತ್ತು ಹಾಗೂ ಉಪಸಂಸ್ಕೃತಿ ಎಂಬುದು ಇದೆ ಎಂದು ವ್ಯಾಖ್ಯಾನಿಸಲಾಗುತ್ತಿತ್ತು. ಆದರೇ ಇಂದು ಪ್ರಧಾನ ಮತ್ತು ಅಧೀನ ಸಂಸ್ಕೃತಿ ಎಂಬ ಪರಿಕಲ್ಪನೆಯನ್ನು ಕಾಣಬಹುದು. ಹಿಂದೆ ಭಾರತದಲ್ಲಿನ ಮುಸ್ಲಿಂ, ಕ್ರೈಸ್ತ ಮುಂತಾದವರ ಸಂಸ್ಕೃತಿಯನ್ನು ಉಪಸಂಸ್ಕೃತಿ ಎಂದು ಕರೆಯಲಾಗುತ್ತಿತ್ತು. ಅವರು ಅಲ್ಪ ಸಂಖ್ಯಾತರು ಎಂದ ಮಾತ್ರಕ್ಕೆ ಅವರದು ಉಪಸಂಸ್ಕೃತಿ ಎಂದು ಹೇಳಲಾಗುವುದಿಲ್ಲ. ಈ ನಿಟ್ಟನಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ ಎಂಬ ಪರಿಕಲ್ಪನೆ ಸಮಂಜಸವಾಗಿದೆ. ಯಾವುದು ಪ್ರಬಲವಾಗಿದೆಯೋ ಅದು ದುರ್ಬಲ ಸಂಸ್ಕೃತಿಯನ್ನು ನಾಶಮಾಡಿ ತನ್ನ ಪ್ರಧಾನ ಅಸ್ಥಿತ್ವವನ್ನು ಸಾಧಿಸುತ್ತದೆ. ಉದಾ: ಅಮೇರಿಕಾದವರ ಸಂಸ್ಕೃತಿ ಪ್ರಧಾನವಾದರೇ ಅಲ್ಲಿನ ನೀಗ್ರೋ ಜನಾಂಗದ ಸಂಸ್ಕೃತಿ ಅಧೀನವಾಗಿದೆ. ಭಾಷೆಯೂ ಇದಕ್ಕೆ ಹೊರತಾಗಿಲ್ಲ. ಕರ್ನಾಟಕದಲ್ಲಿ ಕನ್ನಡವೇ ಆಡಳಿತಕ್ಕೆ ಅಧಿಕೃತಗೊಂಡ ಭಾಷೆ. ಇಲ್ಲಿ ತುಳು, ಮಲೆಯಾಳಂ, ತಮಿಳು, ಉರ್ದು, ಲಂಬಾಣಿ ಭಾಷೆಗಳನ್ನು ಆಡುವ ಜನರಿದ್ದಾರೆ. ಆದರೂ ವ್ಯವಹಾರಿಕ ಪ್ರಧಾನ ಭಾಷೆ ಕನ್ನಡವನ್ನೇ ಬಳಸುವುದು. ಅನಿವಾರ್ಯವಾಗಿದೆ. ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಉಳಿದವೆಲ್ಲಾ ಅಧೀನ ಭಾಷೆಗಳಾಗಿವೆ.

ಭಾಷೆ ಮತ್ತು ಭಾಷಾಂತರ :

ಭಾಷೆ ಮತ್ತು ಭಾಷಾಂತರಗಳು ಅನನ್ಯವಾದವು. ಒಂದು ಭಾಷೆಯ ಪಠ್ಯ ವಸ್ತುವನ್ನು ಸಮಾನ ಅರ್ಥದೊಂದಿಗೆ ಇನ್ನೊಂದು ಭಾಷೆಗೆ ವರ್ಗಾಯಿಸುವ ಕಾರ್ಯ ಭಾಷಾಂತರದಲ್ಲಾಗುತ್ತದೆ. ಭಾಷಾಂತರ ಎಂಬುದಕ್ಕೆ ಇಂಗ್ಲಿಷ್‌ನಲ್ಲಿ Translation ಎಂಬ ಶಬ್ದವಿದೆ. ಇದು Translatus ಎಂಬ ಲ್ಯಾಟಿನ್ ಪದದ ಮೂಲವಾಗಿದೆ. To Carry over ಎಂಬುದು ಇದರ ಅರ್ಥ. ಭಾಷಾಂತರವು ಭಾಷೆಯ ಅಭ್ಯುದಯಕ್ಕೆ ಕಾರಣವಾಗುತ್ತದೆ. ಭಾಷೆಯನ್ನು ಪರಿಪಕ್ವಗೊಳಿಸುತ್ತದೆ.

ಭಾಷಾಂತರ ಎಂಬುದಕ್ಕೆ Version, Rendering ಎಂಬ ಇಂಗ್ಲಿಷ್ ಅರ್ಥಗಳೂ ಉಂಟು. Version ಎಂಬುದು ಬೈಬಲ್ಲಿನ ಅನುವಾದಕ್ಕೆ ವಿಶಿಷ್ಟವಾಗಿ ಸಂಬಂಧಿಸಿದ್ದಾಗಿದೆ. ಭಾಷಾಂತರಕ್ಕೆ ಸಜೀವ ಸ್ವರ್ಗಾರೋಹಣ ಎಂಬ ಅರ್ಥವೂ ಇದೆ. ಭಾಷಾಂತರ ಕುರಿತು ಹಲವಾರು ವಿದ್ವಾಂಸರು ವ್ಯಾಖ್ಯಾನವನ್ನು ನೀಡಿದ್ದಾರೆ.

"ಡಾ.ಜಾನ್‌ಸನ್ : ಈತ ಮೊಟ್ಟಮೊದಲಿಗೆ ಇಂಗ್ಲಿಷ್ ನಿಘಂಟನ್ನು ರಚಿಸಿದ. ಈತ 'To change into another language retaining Sence', ಅರ್ಥವನ್ನು ಕಾಯ್ದುಕೊಂಡು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಕೊಂಡೊಯ್ಯುವ ಕ್ರಿಯೆ ಭಾಷಾಂತರ ಎಂದು ಕರೆದನು.

ವಿಲಮೋವಿಟ್ಸ್: ಅವರು 'True translation is metempsychosis' ಎಂದು ತಿಳಿಸಿದ್ದಾರೆ. ಅಂದರೇ ನಿಜವಾದ ಭಾಷಾಂತರ ಪರಕಾಯ ಪ್ರವೇಶವಿದ್ದಂತೆ ಎಂಬುದು ಇದರರ್ಥ.

ಸಿ.ಪಿ. ಕೃಷ್ಣಕುಮಾರ್ : ಭಾಷಾಂತರ ಒಂದು ಪ್ರಜ್ಞಾಪೂರ್ವಕ ಕಲೆ.

ದೇಜಗೌ : ಇವರ ಪ್ರಕಾರ ಭಾಷಾಂತರವೆಂದರೆ ಒಂದು ಭಾಷಾ ಮಾಧ್ಯಮದಿಂದ ಇನ್ನೊಂದು ಭಾಷಾ ಮಾಧ್ಯಮಕ್ಕೆ ಕೊಂಡೊಯ್ಯುವ ಕಾರ್ಯ. ಭಾಷಾ ಸಮುದಾಯಗಳೊಳಗೆ ಸಂಬಂಧ ಕುದುರಿಸಿ, ವಿಶ್ವ ಬಾಂಧವ್ಯದ ಸಾಧನೆಗೆ ಇದು ತಂತ್ರ ಎಂದಿದ್ದಾರೆ"[೧].

'Nothing moves without translation' (ಇ.ಎಸ್. ಬೇಟ್ಸನ್) ಎಂಬ ಈ ವಾಕ್ಯ ಒಂದು ಭಾಷೆಗೆ ಭಾಷಾಂತರ ಎಷ್ಟು ಅಗತ್ಯ ಎಂಬುದನ್ನು ತಿಳಿಸುತ್ತದೆ. ಭಾಷಾಂತರ ಸಾಹಿತ್ಯ, ತಂತ್ರಜ್ಞಾನ ಎಲ್ಲಾ ವಲಯಗಳಲ್ಲೂ ವಿಸ್ತರಿಸಿದೆ. ಅಂದರೆ ಒಂದು ಭಾಷೆಗೆ ಇರುವ ವ್ಯಾಪ್ತಿಯನ್ನು ಮೀರಿ ಭಾಷಾಂತರ ನಿಲ್ಲುತ್ತದೆ ಎಂದರೆ ತಪ್ಪಾಗಲಾರದು. ಜ್ಞಾನಕ್ಕೆ ಭಾಷೆ ಮಾಧ್ಯಮವಾಗುತ್ತದೆ. ಅನುಭವದ ಅಭಿವ್ಯಕ್ತಿಯ ಮಾಧ್ಯಮವಾಗಿ ಭಾಷೆ ಇದೆ. ಆದರೇ ಒಂದು ಸಮಾಜದ ಭಾಷೆ ತನ್ನದೇ ಆದ ಒಂದು ಆವರಣವನ್ನು ಸೃಷ್ಟಿಸಿಕೊಂಡಿರುತ್ತದೆ. ಈ ಗೋಡೆಯನ್ನು ತೊಡೆದು ಹಾಕಿ ಭಾಷೆ-ಭಾಷೆಗಳ ನಡುವೆ, ಸಮುದಾಯ-ಸಮುದಾಯಗಳ ನಡುವೆ,

---

೧. ಭಾಷಾಂತರ ಕಲೆ : ಡಾ.ಪ್ರಧಾನ್‌ಗುರುದತ್ತ್:ಪ್ರಕಾಶನ:ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ : ಮೈಸೂರು : ಪ್ರ.ವ.೨೦೦೦ ಪು.ಸಂ.೧೧

ರಾಷ್ಟ್ರ-ರಾಷ್ಟ್ರಗಳ ನಡುವೆ ಭಾಷಿಕವಾಗಿ, ಸಾಂಸ್ಕೃತಿಕವಾಗಿ, ಬೌದ್ಧಿಕವಾಗಿ ಬೆಸೆಯುವ ಕಾರ್ಯವನ್ನು ಭಾಷಾಂತರ ಮಾಡುತ್ತದೆ. ಹೊಸ-ಹೊಸ ಅಗತ್ಯತೆಗಳಿಗೆ ಅನುಗುಣವಾಗಿ ನಮ್ಮ ಭಾಷೆ ಬದಲಾಗುತ್ತಿರುವುದನ್ನು ದಿನನಿತ್ಯ ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಭಾಷಾಂತರವೂ ಭಾಷಾ ಬೆಳವಣಿಗೆಗೆ ನೆರವಾಗುತ್ತದೆ. ಭಾಷೆಗೆ ಹೊಸ ಆಯಾಮ, ಹೊಳಪು, ಹುರಪನ್ನು ಕಲ್ಪಿಸಿಕೊಡುವ ಸಂಜೀವನಿ ಎಂದರೆ ಭಾಷಾಂತರ. ಇಂತಹ ಭಾಷಾಂತರದಲ್ಲಿ ಹಲವಾರು ಪ್ರಭೇದಗಳಿವೆ.

ಭಾಷಾಂತರ : ಇಲ್ಲಿ ಮೂಲ ಕೃತಿಗೂ ಭಾಷಾಂತರವಾದ ಕೃತಿಗೂ ಇರುವ ಒಂದು ವ್ಯತ್ಯಾಸವೆಂದರೆ ಅದು ಭಾಷೆ. ಪ್ರತಿಯೊಂದು ಭಾಷೆಯು ಅಲ್ಲಿನ ಜನಗಳ, ಪರಿಸರದ, ಪರಿಣಾಮಕ್ಕೆ ಒಳಗಾಗಿರುತ್ತದೆ. ಒಂದು ಭಾಷೆಯಲ್ಲಿರುವ ವಿಶಿಷ್ಟ ಸಂಸ್ಕೃತಿಯ ಪದಗಳು ಮತ್ತೊಂದು ಭಾಷೆಯಲ್ಲಿ ಯಥಾವತ್ತಾಗಿ ಇರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಇದಕ್ಕೆ ತತ್ಸಮಾನವಾದ ಕೆಲವು ಪದಗಳನ್ನು ಬಳಸಿಕೊಂಡು ಒಂದು ಭಾಷೆಯ ಕೃತಿಯನ್ನು ಮತ್ತೊಂದು ಭಾಷೆಗೆ ಕೊಂಡೊಯ್ಯುವುದೇ ಭಾಷಾಂತರ. ಇದೊಂದು ಆದರ್ಶಕಾರ್ಯ, ಭಾಷಾ ದೃಷ್ಟಿಯಿಂದ ಇದೊಂದು ಬಗೆಯ ಮರುಸೃಷ್ಟಿ ಕಾರ್ಯವೆನ್ನಬಹುದು.

ಅನುವಾದ : ಭಾಷಾಂತರ ಭಾಷೆಗೆ, ಅವುಗಳ ಸಂವಾದಿ ಪದಗಳಿಗೆ ಹೆಚ್ಚು ಒತ್ತು ಕೊಟ್ಟರೆ, ಅನುವಾದ ಅರ್ಥ ಮತ್ತು ಭಾವಕ್ಕೆ ಹೆಚ್ಚು ಒತ್ತನ್ನು ನೀಡುತ್ತದೆ. ಮೂಲಕೃತಿಯ ಶಬ್ದ, ಶೈಲಿ, ಭಾವಗಳನ್ನು ಆದಷ್ಟು ಪರಿಪೂರ್ಣವಾಗಿ ಉಳಿಸಿಕೊಳ್ಳುವ ಪ್ರಯತ್ನ ಇಲ್ಲಿ ನಡೆಯುತ್ತಿರುತ್ತದೆ. ಮೂಲ ಭಾಷೆಯ ಹಾಗೂ ಮೂಲ ಕೃತಿ, ಅಲ್ಲಿನ ಪರಿಸರ, ಸಂಸ್ಕೃತಿಯ ಅರಿವಿಲ್ಲದ ವ್ಯಕ್ತಿಯನ್ನು ಮೂಲಕ್ಕೆ ಕರೆದೊಯ್ಯುವ ಕಾರ್ಯ ಇಲ್ಲಿ ನಡೆಯುತ್ತದೆ. ಭಾಷಾಂತರ ಒಮ್ಮೊಮ್ಮೆ ಕೃತಕ ಎನ್ನಿಸಿದರೂ ಅನುವಾದ ಕೃತಕ ಎನ್ನಿಸುವುದಿಲ್ಲ. ಭಾಷಾಂತರಕ್ಕಿಂತ ಕೊಂಚ ಸ್ವತಂತ್ರ ಅನುವಾದದಲ್ಲಿರುತ್ತದೆ ಎಂದರೇ ತಪ್ಪಾಗಲಾರದು. ಇದನ್ನು ಓದಿದವರು ಮೂಲವನ್ನು ಓದಿದೆ ಎಂದು ಪರಿಭಾವಿಸಬಹುದು.

ಭಾವಾನುವಾದ : ಭಾಷಾಂತರ, ಅನುವಾದಗಳಿಗಿಂತ ಇಲ್ಲಿ ಭಾಷಾಂತರಕಾರನಿಗೆ ಹೆಚ್ಚಿನ ಸ್ವಾತಂತ್ರ್ಯ ಇಲ್ಲಿರುತ್ತದೆ. ಮೂಲದ ಭಾವವನ್ನು ತಾನು ಅರಗಿಸಿಕೊಂಡು ಅದನ್ನು ಅಷ್ಟೇ ಪದಗಳಲ್ಲಿ ಅಥವಾ ಅದಕ್ಕೂ ಮೀರಿದ ಪದಗಳಲ್ಲಿ ಭಾಷಾಂತರ ಕಾರ್ಯ ಇಲ್ಲಿ ನಡೆಯುತ್ತದೆ. ಮೂಲವನ್ನು ಯಥಾವತ್ತಾಗಿ ಅನುಸರಿಸುವುದು. ಬಿಡುವುದು ಭಾಷಾಂತರಕಾರನ ವಿವೇಚನೆಗೆ ಒಳಪಟ್ಟಿರುತ್ತದೆ. ಮೂಲ ಕೃತಿಯ ಆಶಯ, ಉದ್ದೇಶಗಳನ್ನು ತನ್ಮೂಲಕ ತಿಳಿಸುವ ಕ್ರಿಯೆ ಇಲ್ಲಿ ಏರ್ಪಟ್ಟಿರುತ್ತದೆ.

ರೂಪಾಂತರ : ಮೂಲಕೃತಿಯನ್ನು ಯಾವ ಭಾಷೆಗೆ ಭಾಷಾಂತರ ಮಾಡುವರೋ ಅಲ್ಲಿನ ಸಾಮಾಜಿಕ ಸ್ಥಿತಿ ಐತಿಹಾಸಿಕ ಸನ್ನಿವೇಶ, ಸಂಸ್ಕೃತಿಯನ್ನು ಅಳವಡಿಸಿ, ಮೂಲಕೃತಿಯನ್ನು ತಮ್ಮದಾಗಿಸಿಕೊಳ್ಳುವುದಕ್ಕೆ ರೂಪಾಂತರ ಎನ್ನಲಾಗುತ್ತದೆ. ಷೇಕ್ಸ್‌ಪಿಯರ್‌ನ ಹಾಮ್ಲೆಟ್ ಕೃತಿಯನ್ನು ಆಧರಿಸಿದ ರಕ್ತಾಕ್ಷಿ ಒಂದು ರೂಪಾಂತರ ಎಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಸೃಷ್ಟ್ಯಂತರ : ಇದನ್ನು ಪ್ರತಿಸೃಷ್ಟಿ, ಪ್ರತಿನಿರ್ಮಿತಿ ಎಂದೂ ಕರೆಯಬಹುದು. ಇದರಲ್ಲಿ ಮೂಲದ ಶಬ್ದ, ಶೈಲಿ, ಪ್ರತಿಮೆಗಳನ್ನು ನಿರೀಕ್ಷಿಸುವಂತಿಲ್ಲ. ಇದನ್ನು ರೂಪಾಂತರದ ಭಾಗ ಎಂದೂ ಕರೆಯಬಹುದು. ಮೂಲಕೃತಿ ವ್ಯಕ್ತಿಯ ಮೇಲೆ ಯಾವ ಪ್ರಭಾವವನ್ನು ಬೀರುತ್ತದೋ, ಅಂತಹ ಪ್ರಭಾವವನ್ನೇ ಇದೂ ಬೀರುತ್ತದೆ ಎಂದರೇ ತಪ್ಪಾಗಲಾರದು. ಮೂಲಕೃತಿಯ ಸೃಷ್ಟಿಯನ್ನು ಇದು ಪ್ರತಿಸೃಷ್ಟಿಸುತ್ತದೆ ಎಂದು ಹೇಳಬಹುದು.

ಸಾರಾಂಶ : ಇದು ಮೂಲಕೃತಿಯ ಸಾರವನ್ನು ಕೆಲವು ಸಾಲುಗಳಲ್ಲಿ ಹಿಡಿದಿಡುತ್ತದೆ. ನೇರವಾಗಿ ಇದನ್ನು ಭಾಷಾಂತರ ಎಂದು ಕರೆಯುವುದು ತಪ್ಪಾಗುತ್ತದೆ. ಆದರೂ ಇದರಲ್ಲಿ ಅನ್ಯ ಭಾಷೆಯ ಕೃತಿಯ ವಿಚಾರವೇ ಮತ್ತೊಂದು ಭಾಷೆಗೆ ಬಂದಿರುತ್ತದೆ. ಆದ್ದರಿಂದ ಇದನ್ನು ಭಾಷಾಂತರ ಒಂದು ಭಾಗ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಮೂಲಕೃತಿಯ ಸಂಗ್ರಹ ಭಾಷಾಂತರ ಎಂದು ಕರೆಯಬಹುದು.

ಲಿಪ್ಯಂತರ : ಮೂಲ ಭಾಷೆಯ ಧ್ವನಿಸಂಕೇತಗಳಿಗೆ ಉದ್ದಿಷ್ಟ ಭಾಷೆಯ ಧ್ವನಿಸಂಕೇತಗಳನ್ನು ಅಳವಡಿಸಿದರೇ ಅದನ್ನು ಲಿಪ್ಯಂತರ ಎಂದು ಕರೆಯಲಾಗುತ್ತದೆ. ಉದಾ: Engineer ಎಂಬುದನ್ನು ಕನ್ನಡದಲ್ಲಿ ಎಂಜಿನಿಯರ್ ಎಂದು ಬರೆದರೆ ಅದು ಲಿಪ್ಯಂತರ, ಅಭಿಯಂತರ ಎಂದು ಹೇಳಿದರೇ ಅದು ಅನುವಾದ ಅಥವಾ ಭಾಷಾಂತರವಾಗುತ್ತದೆ. ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ಪರಿಭಾಷೆಗಳನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವುದು ಭಾಷಾಂತರದಲ್ಲಿ ಉತ್ತಮ.

ಭಾಷಾಂತರದ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಮುಖ್ಯವಾಗಿ ಭಾಷೆ, ವಿಷಯ ಹಾಗೂ ಸಾಂಸ್ಕೃತಿಕ ವಿವರಣೆ ಭಾಷಾಂತರಕಾರನಿಗೆ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಭಾಷಾಂತರಿಸುವಾಗ ಆ ಭಾಷೆಯ ಸ್ವರೂಪದ ಅರಿವು ಅತ್ಯಗತ್ಯ. ಮೂಲಭಾಷೆ ಹಾಗೂ ಉದ್ದಿಷ್ಟಭಾಷೆಗೂ ಇರುವ ಸಮಾನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಧ್ವನಿ, ಪದ, ಅರ್ಥ, ಭಾವ ಇವು ಮೂಲ ಕೃತಿಗೆ ಹೊಂದಿಕೆಯಾಗುವವೇ ಎಂಬುದನ್ನು ಸ್ಪಷ್ಟ ಪಡಿಸಿಕೊಳ್ಳಬೇಕು. ಹಾಗೆಯೇ ಮೂಲ ಭಾಷೆಯ ವಿಶಿಷ್ಟ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪದಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಬಹುದು. ವಾಕ್ಯರಚನೆ, ವ್ಯಾಕರಣಾಂಶಗಳು ಒಂದು ಭಾಷೆಗೂ ಮತ್ತೊಂದು ಭಾಷೆಗೂ ಭಿನ್ನವಾಗಿರುತ್ತವೆ. ಆದ್ದರಿಂದ ಅವುಗಳ ಸ್ಪಷ್ಟ ಅರಿವು ಭಾಷಾಂತರಕಾರನಿಗೆ ಅಗತ್ಯ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಭಾಷಾಂತರಿಸುವಾಗ ಶಬ್ದಕೋಶ ಮಾತ್ರಸಾಲದು, ಅಲ್ಲಿನ ಸಾಂಸ್ಕೃತಿಕ ಪರಿಭಾಷೆಯ ಅರಿವೂ ಅನಿವಾರ್ಯ. ಉದಾ: ಹಿಂದೂ ಸಂಸ್ಕೃತಿಯಲ್ಲಿ ಅರಿಶಿನ, ಕುಂಕುಮ, ಮಂಗಳಾರತಿ, ತಾಂಬೂಲ ಮುಂತಾದ ಸಾಂಸ್ಕೃತಿಕ ಪದಗಳಿದ್ದು, ಈ ಸಂಸ್ಕೃತಿಯಿಂದ ವಿಮುಖವಾಗಿರುವವರಿಗೆ ಇವುಗಳ ಅರಿವು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಭಾಷಾಂತರಕಾಲ ಜಾಗರೂಕತೆಯಿಂದಿರಬೇಕು. ಒಂದು ಕೃತಿಯ ಭಾಷಾಂತರ ಎಂದರೆ

ಮೂಲತಃ ಅದು ಒಂದು ಭಾಷೆಯ, ಒಂದು ಜನಾಂಗದ ಸಾಮಾಜಿಕ, ಸಾಂಸ್ಕೃತಿಕ ಜೀವನದ ರವಾನೆಯೆ ಆಗಿರುತ್ತದೆ. ಆದ್ದರಿಂದ ಭಾಷಾಂತರದ ಕಾರ್ಯವು ಹೆಚ್ಚು ಜವಾಬ್ದಾರಿಯುತವಾದದ್ದು.

ಭಾಷಾಂತರದಲ್ಲಿ ಸಾಂಸ್ಕೃತಿಕ ಭಾಷಾಂತರ, ಸೃಜನಶೀಲ ಕೃತಿಗಳ ಭಾಷಾಂತರ ಕಠಿಣವಾದದ್ದು. ಆದರೆ ಇತರ ಜ್ಞಾನಶಿಸ್ತುಗಳ ಭಾಷಾಂತರ ಸಾಂಸ್ಕೃತಿಕ ಭಾಷಾಂತರಕ್ಕಿಂತ ಜಟಿಲವಲ್ಲ. ಉದಾ: ವಿಜ್ಞಾನ, ಮಾನವಿಕ ವಿಚಾರಗಳು. ಭಾಷಾಂತರಕಾರನ ದೃಷ್ಟಿ ಕೇಂದ್ರೀಕೃತವಾಗಬೇಕಾದುದು ವಿಷಯ ಗ್ರಹಣ ಮತ್ತು ನಿರೂಪಣೆ ಹಾಗೂ ಪರಿಭಾಷಿಕ ಪದಗಳಲ್ಲಿನ ಸಾಮಾನ್ಯ ವಿವೇಚನೆಯಲ್ಲಿ. ಪಾರಿಭಾಷಿಕ ಪದಗಳು ಆಡಳಿತ ಭಾಷೆಯ ಒಳಮಜ್ಜಲಿಗೆ ಸೇರಿದಂತಹವು. ಇವುಗಳನ್ನು ಆಯಾ ಕ್ಷೇತ್ರದಲ್ಲಿ ಕಾರ್ಯ ಪ್ರವೃತ್ತರಾದವರು ಮಾತ್ರ ಬಳಸುತ್ತಾರೆ. ಇವುಗಳನ್ನು ಭಾಷಾಂತರಿಸುವಾಗ ಸೂಕ್ಷ್ಮದೃಷ್ಟಿ ಅಗತ್ಯ. ಸಾಹಿತ್ಯ ಕೃತಿಯಲ್ಲಿ ರಸ, ಧ್ವನಿ, ಅಲಂಕಾರ, ಭಾವಗಳು ಕಲಾತ್ಮಕವಾಗಿ ಮಿಳಿತಗೊಂಡಿರುತ್ತವೆ. ಇವುಗಳು ಕೃತಿಯ ಸ್ವಾಭಾವಿಕ ಅಂಗಗಳಾಗಿರುತ್ತವೆ. ಆದ್ದರಿಂದ ಇವುಗಳನ್ನು ಬಿಟ್ಟು ಭಾಷಾಂತರಿಸುವಂತಿಲ್ಲ. ಹಾಗೆ ಮಾಡಿದರೆ ಕವಿಯ ಮೂಲ ಶಕ್ತಿ ಹಾಗೂ ಕೃತಿಗೆ ದಕ್ಕೆತಂದಂತಾಗುತ್ತದೆ. ಓದುಗನನ್ನು ಪರವಶನನ್ನಾಗಿ, ತನ್ಮಯನನ್ನಾಗಿ ಮಾಡಲು ಮೂಲ ಕೃತಿಯಷ್ಟೇ ಸಮರ್ಪಕವಾಗಿ ಉದ್ದಿಷ್ಟ ಕೃತಿಯೂ ಇರಬೇಕಾಗುತ್ತದೆ. ಸಾಹಿತ್ಯದ ಭಾಷಾಂತರ ಕೌಶಲ, ಭಾಷಾಸಾಮ್ಯ, ಅರ್ಥ ಸಾಮ್ಯ, ಭಾವಸಾಮ್ಯ ಹಾಗೂ ಪ್ರಭಾವ ಸಾಮ್ಯಗಳನ್ನು ಸಾಧಿಸಬೇಕಾಗುತ್ತದೆ. ಮೂಲಕೃತಿಗೆ ಯಾವ ರೀತಿಯಲ್ಲೂ ದಕ್ಕೆ ಬಾರದಂತೆ ಉದ್ದಿಷ್ಟಕೃತಿ ಇರಬೇಕು. ಒಟ್ಟನಲ್ಲಿ ಭಾಷಾಂತರಕಾರನಿಗೆ ಭಾಷಾಂತರ ಮಾಡುವ ಹಾಗೂ ಮಾಡಬೇಕಾಗಿರುವ ಭಾಷೆಗಳ ಸಂಪೂರ್ಣ ಅರಿವಿರಬೇಕು. ಭಾರತೀಯ ಸಂಸ್ಕೃತಿಯಲ್ಲಿ ಬಿಳಿ ಬಣ್ಣ ಶಾಂತಿಯ ಸಂಕೇತವಾದರೇ, ಜಪಾನ್‌ನಲ್ಲಿ ಅದು ಶೋಕದ ಸಂಕೇತ. ಇಂತಹ ಸಾಂಸ್ಕೃತಿಕ ಅರಿವು ಭಾಷಾಂತರಕಾರನಿಗೆ ಇರಬೇಕಾಗುತ್ತದೆ. ಒಟ್ಟನಲ್ಲಿ ಭಾಷಾಂತರಕ್ಕೆ ಮೂಲಸಾಮಗ್ರಿಯೇ ಭಾಷೆ.

ಭಾಷೆ ಮತ್ತು ಭಾಷಾಂತರಕ್ಕೆ ಕೇವಲ ಅಂತರ ಸಂಬಂಧವಿಲ್ಲ, ಆಂತರಿಕ ಸಂಬಂಧವೂ ಇದೆ. ಹಳಗನ್ನಡದಿಂದ ಹೊಸಗನ್ನಡಕ್ಕೆ, ನಡುಗನ್ನಡದಿಂದ ಹೊಸಗನ್ನಡಕ್ಕೆ, ಸಾಮಾಜಿಕ, ಪ್ರಾದೇಶಿಕ ಉಪಭಾಷೆಗಳಿಂದ ಪ್ರಮಾಣಭಾಷೆಗೆ ವರ್ಗಾಯಿಸುವುದೂ ಭಾಷಾಂತರವೇ. ಇದನ್ನು 'ಏಕಭಾಷಾ ಭಾಷಾಂತರ' ಎಂದು ಕರೆಯಬಹುದು. ಅಂತೆಯೇ ಮೂಲ ಕೃತಿಯು ಭಾಷಾಂತರವಾದ ಅನಂತರ ಉದ್ದಿಷ್ಟ ಕೃತಿಯನ್ನು ಮತ್ತೆ ಮತ್ತೊಂದು ಭಾಷೆಗೆ ಭಾಷಾಂತರಿಸುವುದುಂಟು. ಇದನ್ನು ಪರೋಕ್ಷ ಭಾಷಾಂತರವೆನ್ನಬಹುದು. ಇಂತಹ ಕಾರ್ಯ ಅಭ್ಯಸಿಕೊಳ್ಳುವ ದೃಷ್ಟಿಯಿಂದ ಅಗತ್ಯವಾದರೂ ಭಾಷಾಂತರ ಕ್ಷೇತ್ರದಲ್ಲಿ ಇಂತಹವುಗಳಿಗೆ ಮಹತ್ವ ಕಡಿಮೆ. ಭಾಷಾಂತರಕಾರನಿಗೆ ಸಾಧನ ಸಾಮಗ್ರಿಯಾದ ಭಾಷೆಯ ಮೇಲೆ ಹಿಡಿತವಿರಬೇಕು. ಪದಗಳನ್ನು ಅಗತ್ಯಕ್ಕನುಗುಣವಾಗಿ ಸ್ವೀಕರಿಸಬೇಕು. ಅಗತ್ಯವಿದ್ದಲ್ಲಿ ಪರಿಭಾಷೆಯಿಂದ ಅದನ್ನು ನಮ್ಮ ಭಾಷೆಗೆ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಎಲ್ಲಾ ಶಬ್ದಗಳನ್ನು

ಭಾಷಾಂತರಿಸುತ್ತೇವೆ ಎಂಬ ಹಠದಿಂದ ನಮ್ಮ ಭಾಷೆಯ ಸ್ವರೂಪವನ್ನು ವಿಕೃತಗೊಳಿಸಬಾರದು. ಉದಾ:ಸಿಮೆಂಟ್ ಎಂಬ ಇಂಗ್ಲಿಷ್ ಪದವನ್ನು ಬಲವಂತವೆಂಬಂತೆ ವಜ್ರಚೂರ್ಣ ಎಂದು ಭಾಷಾಂತರಿಸಲಾಗಿದೆ. ಇದು ಒಂದು ರೀತಿಯ ಆಭಾಸವೇ ಸರಿ. ಹೀಗೆ ಮಾಡುವುದರಿಂದ ಭಾಷಾಂತರದ ಭಾಷೆ ಹೆಚ್ಚು ಕೃತಕವಾಗಿ ಬಿಡುತ್ತದೆ. ಇದರಿಂದ ಓದುಗರಿಗೆ ಇಂತಹ ಭಾಷೆಯ ಮೇಲೆ ಸಹಜವಾಗಿಯೇ ಒಲವು ಕಡಿಮೆಯಾಗುತ್ತದೆ. ಅಂದರೇ ಭಾಷೆಯ ನೈಜತೆ ಭಾಷಾಂತರದ ಮೂಲಕ ಪ್ರಕಾಶಿಸುವ ಅಗತ್ಯವಿದೆ.

ನಿರ್ದಿಷ್ಟತೆ, ಸ್ಪಷ್ಟತೆ, ಸಂಕ್ಷಿಪ್ತತೆ, ಸರಳತೆ, ಶುದ್ಧತೆ, ಮಾಧುರ್ಯ ಇವು ಉತ್ತಮ ಭಾಷಾಂತರ ಲಕ್ಷಣಗಳಾಗಿವೆ. ವಿಧೇಯತೆ, ಮೂಲಭಾಸತತ್ತ್ವತ, ಲಕ್ಷ್ಯ ಮತ್ತು ಸಮಕಾಲೀನತ್ವ, ಆನಂದ, ಅನುರೂಪತೆ ಇವು ಭಾಷಾಂತರದ ತತ್ವಗಳಾಗಿವೆ. ದೇ.ಜ.ಗೌಡ ಅವರು ಭಾಷಾಂತರ ಸೋಮಾರಿಗಳ ಕೆಲಸವಲ್ಲ. ಅದು ಪ್ರತಿಭಾವಂತರು ಕೈಗೊಳ್ಳಬೇಕಾದ ಕಾರ್ಯ ಎಂದಿದ್ದಾರೆ. ಪ್ರತಿಭೆ, ವಿದ್ವತ್ತು, ವಿನಯ, ವ್ಯುತ್ಪತ್ತಿ, ಅಭ್ಯಾಸ, ತಾಳ್ಮೆ, ಶ್ರಮಸಹಿಷ್ಣುತೆ, ಲೋಕಾನುಭವ, ಅನ್ಯಶಾಸ್ತ್ರ-ಸಂಸ್ಕೃತಿಗಳ ಜ್ಞಾನ ಇವು ಏಕಕಾಲದಲ್ಲಿ ಒಬ್ಬ ಸಂಶೋಧಕ ಹಾಗೂ ಭಾಷಾಂತರಕಾರನಿಗೆ ಇರಬೇಕಾದ ಅರ್ಹತೆಗಳು.

ವಿಧೇಯತಾ ತತ್ತ್ವ : ಇದು ಭಾಷಾಂತರ ಮೊದಲ ತತ್ತ್ವವಾಗಿದೆ. ಭಾಷಾಂತರಕಾರನಿಗೆ ಇರಲೇಬೇಕಾದ ಗುಣ ಇದು ಎಂದು ಪೋಸ್ಟ್‌ಗೇಟ್ ಎಂಬ ವಿದ್ವಾಂಸರು ತಿಳಿಸುತ್ತಾರೆ. ಮೂಲದ ವಸ್ತು, ಭಾಷೆ, ರೀತಿ, ಶೈಲಿ, ಮುಂತಾದವುಗಳಿಗೆ ಯಾವ ಮಹತ್ವವಿರುತ್ತದೋ, ಅದಕ್ಕೆ ಯಾವ ಊನವೂ ಆಗದಂತೆ, ಬಹಳ ವಿಧೇಯವಾಗಿ ಭಾಷಾಂತರಕಾರ ಭಾಷಾಂತರಿಸಬೇಕಾಗುತ್ತದೆ. ವೈಯಕ್ತಿಕವಾದ ಬುದ್ಧಿಮತ್ತೆಗನುಗುಣವಾಗಿ ಭಾಷಾಂತರಕಾರ ಯಾವ ಬದಲಾವಣೆಯನ್ನು ಮಾಡಿಕೊಳ್ಳಲು ಸ್ವತಂತ್ರನಲ್ಲ. ಒಂದು ಭಾಷಾಂತರ ಕೃತಿಯು ಮೂಲಕ್ಕೆ ಎಷ್ಟು ವಿಧೇಯವಾಗಿದೆ ಎಂಬುದರ ಮೇಲೆ ಅದರ ಮೌಲ್ಯ ನಿರ್ಧಾರವಾಗುತ್ತದೆ.

ಆನಂದ ತತ್ತ್ವ : ಭಾಷಾಂತರದ ಕಾರ್ಯ ಓದುಗನನ್ನು ಮುಟ್ಟಿ ಆನಂದವನ್ನುಂಟುಮಾಡುವುದೇ ಆಗಿದೆ. ಕ್ಲೇಶ, ಜಿಗುಪ್ಸೆ, ಬೇಸರವನ್ನು ತರುವ ಭಾಷಾಂತರ ಕೃತಿಗಳು ವ್ಯರ್ಥ. ಮನುಷ್ಯನನ್ನು ಸಂಪೂರ್ಣವಾಗಿ ಕ್ರಿಯಾಶೀಲ ಗೊಳಿಸುವೆಡೆಗೆ ಭಾಷಾಂತರಕಾರ ಗಮನಹರಿಸಬೇಕು. ಮೂಲಕೃತಿಯಿಂದ ತನಗೆ ದೊರಕುವ ಆನಂದವನ್ನು ಆತ ಯಥಾವತ್ತಾಗಿ ಓದುಗನಿಗೆ ತಲುಪಿಸಬೇಕು. ಇದು ಆತನ ಆದ್ಯ ಕರ್ತವ್ಯವೆಂದರೆ ತಪ್ಪಾಗಲಾರದು. ಪೋಪ್ ಎಂಬ ವಿದ್ವಾಂಸರು ಆನಂದತತ್ವದ ಆಶ್ರಯದಲ್ಲಿ ಸ್ವತಂತ್ರವಹಿಸುವ ಭಾಷಾಂತರಕಾರ ಯಾವುದೇ ತಿದ್ದುಪಡಿಗೆ ಕೈಹಾಕಬಾರದೆಂದು ಎಚ್ಚರಿಸಿದ್ದಾರೆ.

ಮೂಲಭಾಸ ತತ್ತ್ವ: ಭಾಸ ಎಂದರೇ ಕಾಣುವುದು ಎಂದರ್ಥ. ಮೂಲದ ಹಾಗೆಯೇ ಕಾಣುವುದನ್ನು ಮೂಲಭಾಸ ತತ್ತ್ವ ಎಂದು ಕರೆಯಬಹುದು. ಒಂದು ಮೂಲ ಕೃತಿಯು ಎಷ್ಟು

ಚೆನ್ನಾಗಿದೆಯೋ ಉದ್ದಿಷ್ಟ ಕೃತಿಯೂ ಅಷ್ಟೇ ಚೆನ್ನಾಗಿರಬೇಕು. ಮೂಲ ಅರ್ಥವಾಗುವಂತೆ ಇದ್ದರೇ ಭಾಷಾಂತರ ಕಾರ್ಯವು ಯಶಸ್ವಿಯಾದಂತೆ. 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' ಎಂಬ ಸಂಸ್ಕೃತದ ಸಾಲನ್ನು 'ಎಲ್ಲಿ ನಾರಿಯರನ್ನು ಪೂಜನೀಯವಾಗಿ ಕಾಣುತ್ತಾರೋ, ಅಲ್ಲಿ ದೇವತೆಗಳು ನೆಲೆಸಿರುತ್ತಾರೆ' ಎಂದು ಅರ್ಥಬದ್ಧವಾಗಿ, ಸುಲಭರೂಪದಲ್ಲಿ ಅನುವಾದಿಸಿರುವುದು ಮೂಲಭಾಸ ತತ್ತ್ವಕ್ಕೆ ಹೊಂದಿಕೊಳ್ಳುತ್ತದೆ.

ಅನುರೂಪತಾ ತತ್ತ್ವ: ಭಾಷಾಂತರದಲ್ಲಿ ಅನುರೂಪತೆ ಕಾಯ್ದುಕೊಳ್ಳುವುದು ಬಹಳ ಕಷ್ಟದ ಸಂಗತಿಯಾಗಿದೆ. ಅದರಲ್ಲೂ ಕಾವ್ಯದ ಅನುವಾದದ ಸಂದರ್ಭದಲ್ಲಿ ಇದು ತೊಡಕಿನ ವಿಚಾರವೇ ಸರಿ. ಏಕೆಂದರೆ ಕಾವ್ಯದಲ್ಲಿ ಅತಿಕಡಿಮೆ ಪದಗಳಿದ್ದು, ಅವು ಹೆಚ್ಚು ಅರ್ಥಬದ್ಧವಾಗಿರುತ್ತವೆ. ಇವುಗಳಿಗೆ ಸಂವಾದಿ ಪದಗಳನ್ನು ಹುಡುಕುವುದು ತೊಡಕಿನ ಸಂಗತಿ. ಇಲ್ಲಿ ಪದಗಳ ಅರ್ಥಕ್ಕಿಂತ ಭಾವಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿರುತ್ತದೆ. ಆ ಅರ್ಥದ ಭಾವವನ್ನು ಅರ್ಥೈಸಿಕೊಂಡ ಭಾಷಾಂತರಕಾರ ಮತ್ತೊಂದು ಭಾಷೆಗೆ ಭಾವವನ್ನು ವರ್ಗಾಯಿಸುವಾಗ ಹೆಚ್ಚು ಸೂಕ್ಷ್ಮಗ್ರಾಹಿಯಾಗಿರಬೇಕಾಗುತ್ತದೆ.

ಪರಿಹಾರತತ್ತ್ವ: ಮೂಲಕೃತಿಯ ನಿಯಮಕ್ಕನುಸಾರವಾಗಿ ಉದ್ದಿಷ್ಟ ಕೃತಿಯನ್ನು ಅನುವಾದಿಸಲು ಕೆಲವೊಂದು ಸಂದರ್ಭದಲ್ಲಿ ಸಾಧ್ಯವಿಲ್ಲ. ಅರ್ಥ, ಲಯ, ಭಾವ, ರೂಪಗಳು ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಮೂಲ ಭಾಷೆಯ ಜಾಯಮಾನಕ್ಕೆ ಸರಿದೂಗುವಂತೆ, ಉದ್ದಿಷ್ಟ ಭಾಷೆಯಲ್ಲಿ ಅರ್ಥ, ಲಯ, ಭಾವ, ರೂಪಗಳನ್ನು ಹೊಂದಿಸಿಕೊಂಡು, ಮೂಲಕೃತಿ ಎಷ್ಟು ಪರಿಣಾಮಕಾರಿಯಾಗಿರುತ್ತದೋ, ಅಷ್ಟೇ ಪರಿಣಾಮಕಾರಿಯಾಗಿ ನೆಲೆಗೆ ಈ ಉದ್ದಿಷ್ಟ ಭಾಷೆಯನ್ನು ಕೊಂಡೊಯ್ಯಬೇಕಾಗುತ್ತದೆ. ಇದನ್ನು ಪರಿಹಾರ ತತ್ತ್ವ ಬೋಧಿಸುತ್ತದೆ.

ಇಂತಹ ತತ್ತ್ವಗಳನ್ನು ಆಧಾರವಾಗಿಟ್ಟುಕೊಂಡು ಭಾಷಾಂತರ ಕಾರ್ಯವನ್ನು ಕೈಗೊಂಡಲ್ಲಿ ಭಾಷೆ ಹಾಗೂ ಸಮಾಜಗಳು ಕ್ರಿಯಾಶೀಲವಾಗುತ್ತವೆ. ಇದು ಭಾಷಾ ಸಮೃದ್ಧಿಗೆ ಕಾರಣವಾಗುತ್ತದೆ.

ಒಂದು ಭಾಷೆಯ ಜೀವಂತ ಸ್ಪಂದನದ ಪ್ರತೀಕಗಳೆಂದರೆ ಗಾದೆ ಮತ್ತು ನುಡಿಗಟ್ಟುಗಳು, ಅರ್ಥ-ಔಚಿತ್ಯಗಳಿಗನುಗುಣವಾಗಿ ಇವುಗಳನ್ನು ಅನುವಾದಿಸದಿದ್ದರೆ. ಭಾಷೆ ಯಾಂತ್ರಿಕವೂ, ಕೃತಕವೂ ಎನ್ನಿಸಿಕೊಳ್ಳುತ್ತದೆ. 'He Kick the Bucket' ಎಂಬ ಇಂಗ್ಲೀಷ್‌ನ ನುಡಿಗಟ್ಟನ್ನು 'ಅವನು ಬಕೇಟನ್ನು ಹೊದ್ದ' ಎಂದು ಅನುವಾದಿಸುವಂತಿಲ್ಲ. ಏಕೆಂದರೆ ಇದರ ಅರ್ಥ 'ಅವನು ಇಹಲೋಕವನ್ನು ತೊರೆದ' ಎಂಬುದಾಗುತ್ತದೆ. ಯಥಾವತ್ತಾದ ಶಾಬ್ದಿಕ ಅನುವಾದದಿಂದ ಇಂತಹ ಆಭಾಸಗಳಾಗುವ ಸಾಧ್ಯತೆ ಹೆಚ್ಚು. lion's Share = ಸಿಂಹಪಾಲು ಎಂದು ಭಾಷಾಂತರಿಸುವುದು ಸಹಜವಾಗಿ ತೋರುತ್ತದೆ. ಅಲ್ಲದೇ ಭಾಷೆಗೆ ಹೊಸ ಕಲ್ಪನೆಗಳನ್ನೂ ಸೇರಿಸಿದಂತಾಗುತ್ತದೆ.

[illegible]

[illegible]

[illegible]

[illegible]

ಭಾಷೆಯಲ್ಲಿ ಬರುವ ಗಾದೆಗಳನ್ನು ಯಥಾವತ್ತಾಗಿ ಅನುವಾದಿಸಿಕೊಳ್ಳಬಹುದಾದರೂ ಅಷ್ಟು ಪರಿಣಾಮಕಾರಿಯಾಗಿರುವುದಿಲ್ಲ. ಅದರ ಬದಲು ನಮ್ಮಲ್ಲಿರುವ ಸಮರ್ಥಕ ಗಾದೆಗಳನ್ನು ಉಚಿತವರಿತು ಬಳಸಿಕೊಳ್ಳಬಹುದು. ಉದಾ: 'All the glitters is not gold' ಎಂಬ ಗಾದೆಯನ್ನು 'ಹೊಳೆಯುವುದೆಲ್ಲಾ ಚಿನ್ನವಲ್ಲ' ಎಂದು ಅನುವಾದಿಸಬಹುದು. ಆದರೇ ಇದರ ಭಾವ ಸಾರ್ವಜನಿಕರಿಗೆ ಅಷ್ಟು ಪರಿಣಾಮ ಬೀರುವುದಿಲ್ಲ. ಆದ್ದರಿಂದ ನಮ್ಮ ಸಂಸ್ಕೃತಿಗೆ ಹೊಂದಿಕೊಳ್ಳುವ ಎಲ್ಲರೂ ತಿಳಿದಿರುವ ಅಂಶವನ್ನಿಟ್ಟುಕೊಂಡು ಅನುವಾದಿಸಿದರೆ ಪರಿಣಾಮಕಾರಿಯಾಗಿರುತ್ತದೆ. 'ಬೆಳ್ಳಗಿರುವುದೆಲ್ಲಾ ಹಾಲಲ್ಲ' ಎಂಬ ಅನುವಾದ ಸರ್ವರಿಗೂ ವೇದ್ಯವಾಗುತ್ತದೆ.

ಭಾಷೆ ಮತ್ತು ಪಾರಿಭಾಷಿಕ ಪದಗಳ ಭಾಷಾಂತರವನ್ನು ಕುರಿತು ಇಲ್ಲಿಯೇ ಚರ್ಚಿಸಬಹುದು. ಪಾರಿಭಾಷಿಕ ಪದಗಳು ನಿರ್ದಿಷ್ಟ ಉದ್ದೇಶಕ್ಕಾಗಿ ಖಚಿತವಾಗಿ ಬಳಕೆಯಾಗುವಂಥವು. ಇಂತಹವುಗಳನ್ನು ಹಾಗೇ ಎತ್ತಿಕೊಂಡು ಭಾಷಾಂತರಿಸಲಾಗುತ್ತದೆ. ಕೆಲವೊಮ್ಮೆ ಸ್ವಲ್ಪ ಬದಲಾಯಿಸಿಕೊಳ್ಳಬಹುದು. ಉದಾ: Non Stop-ತಡೆರಹಿತ, know-how- ಹೇಗೆ ತಿಳಿ ಇತ್ಯಾದಿ. ಕೆಲವು ಪದಗಳನ್ನು ಭಾಷಾಂತರ ಮಾಡುವ ಬದಲು ಅನುವಾದ ಮಾಡಬಹುದು. ಅನುವಾದ ಎಂದರೇ ಪರಭಾಷೆ ಪದಗಳನ್ನು ಅರ್ಥೈಸಿಕೊಂಡು, ಯಾವ ಸನ್ನಿವೇಶಕ್ಕಾಗಿ ಬಳಕೆಯಾಗುತ್ತಿದೆ ಎಂಬುದನ್ನು ಅರ್ಥೈಸಿಕೊಂಡು, ಅದಕ್ಕೆ ನಮ್ಮ ಭಾಷೆಯ ಪದಗಳನ್ನು ಅಳವಡಿಸುವುದು. ಉದಾ: Brain wash-ತಲೆತೊಳೆ ಇದು ಭಾಷಾಂತರ. watchman- ಕಾವಲುಗಾರ ಇದು ಅನುವಾದ watchman ಎಂಬುದನ್ನು ಗಡಿಯಾರ ಮಾನವ, ಸಮಯ ಮಾನವ ಎಂಬುದಾಗಿ ಭಾಷಾಂತರಿಸಿದರೇ ಆಭಾಸವಾಗುತ್ತದೆ. ಜಾಗತೀಕರಣದ ಪ್ರಭಾವದಿಂದ ಹೊಸ-ಹೊಸ ಆವಿಷ್ಕಾರಗಳಾಗುತ್ತವೆ. ಅದಕ್ಕೆ ತಕ್ಕಂತೆ ಹೊಸ-ಹೊಸ ಪಾರಿಭಾಷಿಕ ಪದಗಳು ಹುಟ್ಟಿಕೊಳ್ಳುತ್ತವೆ. ಸೂಕ್ಷ್ಮ ಸಂವೇದನೆಯ ಮೂಲಕ ನಮ್ಮ ಭಾಷೆಯ ಪಾರಿಭಾಷಿಕ ಪದಗಳನ್ನು ಬೆಳೆಸಬಹುದು. ಇದರಿಂದ ಭಾಷೆ ಸಮೃದ್ಧಿಯಾಗುತ್ತದೆ.

ಪಾಶ್ಚಾತ್ಯರು ಭಾಷಾಂತರ ಎಂಬುದು ಬಹಿಷ್ಕೃತವಾದದ್ದು. ಸಾಹಿತ್ಯಿಕ ವಲಯದಲ್ಲಿ ಭಾಷಾಂತರಗಳಿಗೆ ಮೂಲಕೃತಿಗಳಷ್ಟು ಬೆಲೆ ಇಲ್ಲ. ಇದು ಒಂದು ಪಾಪ ಪ್ರಜ್ಞೆಯ ಕೆಲಸ ಎಂದು ನಂಬಿದ್ದರು. ಪಾಶ್ಚತ್ಯ ಸಂಸ್ಕೃತಿಯಲ್ಲಿ ಏಕಭಾಷತ್ವ ಕಾಣುತ್ತದೆ. ಆದ್ದರಿಂದ, ಭಾಷಾಂತರ ಪ್ರಕ್ರಿಯೆಗೆ ವಿರೋಧವೆಸಗುವುದು ಸಹಜ. ಆದರೇ ಭಾರತ ಬಹುಭಾಷಾರಾಷ್ಟ್ರ. ಆದ್ದರಿಂದ ಭಾಷಾಂತರದ ಅಗತ್ಯತೆ ಇದ್ದೇ ಇದೆ. ಬೈಬಲ್‌ನ 'Authorised version' (೧೬೧೧) ಇದು ಪಾಶ್ಚಾತ್ಯರ ಮಹತ್ವಪೂರ್ಣ ಅನುವಾದಿತ ಕೃತಿ. ಆದಿಕವಿ ಎಂದು ಪಾಶ್ಚಾತ್ಯರಲ್ಲಿ ಪ್ರಖ್ಯಾತವಾಗಿರುವ ಛಾಸರ್ ಅನುವಾದದ ಮೂಲಕವೇ ತನ್ನ ಕ್ಯಾಂಟರ್ ಬರಿ ಟೇಲ್ಸ್ ಕಥೆಗಳನ್ನು ರೂಪಿಸಿಕೊಂಡನೆಂಬುದನ್ನು ವಿದ್ವಾಂಸರು ತಿಳಿಸಿದ್ದಾರೆ. ಇಂದಿನ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳಿಗೂ ಭಾಷಾಂತರ ಅತ್ಯಗತ್ಯ.

ಭಾಷೆ ಮತ್ತು ಭಾಷಾಂತರ ಪರಸ್ಪರ ಪೂರಕವಾದವು. ಪ್ರಪಂಚದಾದ್ಯಂತ ಒಂದೇ ಒಂದು ಭಾಷೆ ಬಳಕೆಯಲ್ಲಿದ್ದಿದ್ದರೆ ಭಾಷಾಂತರದ ಅಗತ್ಯವೇ ಕಂಡುಬರುತ್ತಿರಲಿಲ್ಲ. ಆದರೆ ಇಂದು ಪ್ರಪಂಚದಾದ್ಯಂತ ಸಾವಿರಾರು ಭಾಷೆ ಮತ್ತು ಉಪಭಾಷೆಗಳು ಬಳಕೆಯಲ್ಲಿವೆ. ಭಾಷೆ ಮಾನವ ಬದುಕಿನ ಅವಿಭಾಜ್ಯ ಅಂಗವಾಗಿ ಪರಿಣಮಿಸಿದೆ. ಇಂದು ಮನುಷ್ಯನ ಎಲ್ಲ ವ್ಯವಹಾರಗಳಿಗೂ ವಿಚಾರವಿನಿಮಯಗಳಿಗೂ ಭಾಷೆ ಎಷ್ಟು ಅಗತ್ಯವೋ ಭಾಷಾಂತರ ಕೂಡ ಅಷ್ಟೇ ಅಗತ್ಯವಾಗಿ ಪರಿಣಮಿಸಿದೆ.

ಜನರಾಡುವ ಎಲ್ಲಾ ಭಾಷೆಗಳಿಗೂ ತಮ್ಮದೇ ಆದ ವಿಶಿಷ್ಟ ಶಾಬ್ದಿಕ, ಪದ, ವಾಕ್ಯ, ಅರ್ಥ ವ್ಯವಸ್ಥೆಗಳಿರುವುದರಿಂದ ಉತ್ತಮವಾದ ಭಾಷಾಂತರ ಇದನ್ನು ನಮಗೆ ಮನದಟ್ಟುಮಾಡಿಸಿಕೊಡುತ್ತದೆ. ಭಾಷಾಂತರದಲ್ಲಿ ಭಾಷೆ ಯಾವುದೇ ಆಗಿದ್ದರೂ ಆ ಭಾಷೆಯಲ್ಲಿರುವ ಮೂಲವನ್ನು ಅಷ್ಟೇ ಸಮರ್ಥ ಹಾಗೂ ಸಮರ್ಪಕವಾಗಿ ಮತ್ತೊಂದು ಭಾಷೆಗೆ ತರುವುದು ತುಂಬ ಅವಶ್ಯಕವಾದದು. ಅದು ಸಾಧ್ಯವಾಗದಿದ್ದರೆ ಅಂತಹ ಭಾಷಾಂತರ ಪ್ರಯೋಜನಕ್ಕೆ ಬರುವುದಿಲ್ಲ.

ಮಾನವನ ಎಲ್ಲಾ ವ್ಯವಹಾರಗಳಿಗೂ ಭಾಷೆಯ ಅವಶ್ಯಕತೆಯಿರುವುದರಿಂದ ಅದು ಮಾನವ ಜೀವನದಲ್ಲಿ ಒಂದು ಅನಿವಾರ್ಯ ಅಂಗವಾಗಿದೆ. ಇಂದು ವಿವಿಧ ದೇಶಗಳ ನಡುವೆ ಸಂಪರ್ಕ, ಸ್ನೇಹ ಸೌಹಾರ್ದ ಸ್ಥಾಪಿಸಿಕೊಳ್ಳಲು ಭಾಷೆ ಮಹತ್ವದ ಸಾಧನ. ಎಲ್ಲರೂ ಎಲ್ಲ ಭಾಷೆಗಳನ್ನು ಕಲಿಯಲು, ಓದಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಭಾಷಾಂತರವು ಮಹತ್ವದ ಪಾತ್ರವನ್ನು ವಹಿಸುತ್ತದೆ. 'ಒಬ್ಬನಾಗಿ ಉಂಡ ಊಟ ಹಬ್ಬವಲ್ಲ', 'ಒಬ್ಬನೇ ಸವಿತ ರಸ ರುಚಿಯಲ್ಲ' ಎಂಬ ನಾಣ್ಣುಡಿಯಂತೆ ಇತರ ಭಾಷೆಗಳನ್ನು ಬಲ್ಲವರು. ಆ ಭಾಷೆಗಳಲ್ಲಿ ಪರಿಣಿತರಾದವರು. ಆ ಭಾಷೆಗಳಲ್ಲಿನ ಹಿನ್ನೆಲೆ, ಪರಿಸರ, ಸಂಸ್ಕೃತಿ ಮೊದಲಾದ ಅಂಶಗಳನ್ನು ಇನ್ನಿತರ ಭಾಷೆಗಳಲ್ಲಿ ತರುವ ಪ್ರಯತ್ನ ಮಾಡಿದಾಗ ಭಾಷಾಂತರಗಳು ಮೈದಳೆಯುತ್ತವೆ. ಬಹುಭಾಷಿಕ ರಾಷ್ಟ್ರವಾದ ಭಾರತದಂತಹ ದೇಶದಲ್ಲಿ ಭಾಷಾಂತರದ ಜವಾಬ್ದಾರಿ ಬಹಳದೊಡ್ಡದು.

ದೇಶ-ದೇಶಗಳ ನಡುವಣ ಸಾಮರಸ್ಯಕ್ಕೂ ಭಾಷಾಂತರ ಅತ್ಯಾವಶ್ಯಕ, ಸಾಹಿತ್ಯಕವಾಗಿ, ರಾಜಕೀಯವಾಗಿ, ಆರ್ಥಿಕ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉತ್ತಮ ಅಂತರ ರಾಷ್ಟ್ರೀಯ ಸಂಪರ್ಕ, ಅರಿವು ಮತ್ತು ಸಹಕಾರವನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸ್ಥಾಪಿಸಿಕೊಳ್ಳಲು ಭಾಷೆ ಮತ್ತು ಭಾಷಾಂತರ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ದೇಶದ ಆಗು-ಹೋಗುಗಳನ್ನು ನಿರ್ಧರಿಸುವಂತಹ ಮಹತ್ವದ ಮಾತುಕತೆಗಳು ನಡೆಯುವ ಸಂದರ್ಭಗಳಲ್ಲಿಯೂ ಭಾಷಾಂತರ ಮಹತ್ವದ ಪಾತ್ರ ವಹಿಸುತ್ತದೆ.

ಭಾರತದಲ್ಲಿ ೧೯೫೭ರಲ್ಲಿ ಸ್ಥಾಪಿತಗೊಂಡ ನ್ಯಾಷನಲ್ ಬುಕ್ ಟ್ರಸ್ಟ್, ೧೯೫೪ರಲ್ಲಿ


ಸ್ಥಾಪನೆಯಾದ ಸಾಹಿತ್ಯ ಅಕಾಡೆಮಿ, ಹಾಗೂ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ, ಮದ್ರಾಸು - ಇವು ಭಾಷಾಂತರ ಕಾರ್ಯಕ್ಕೆ ನೆರವಾಗುತ್ತಿವೆ. ಪತ್ರಿಕೋದ್ಯಮ ರಂಗ ಕೂಡ ಭಾಷಾಂತರಕ್ಕೆ ಪ್ರೋತ್ಸಾಹ ನೀಡಿದೆ. ಇತ್ತೀಚೆಗೆ ಕರ್ನಾಟಕ ಭಾಷಾಂತರ ಅಕಾಡೆಮಿ ಸ್ಥಾಪನೆಯಾಗಿದ್ದು, ಸಾಕಷ್ಟು ಅನುವಾದ ಕಾರ್ಯ ನಡೆಯುತ್ತದೆ. ಕಸ್ತೂರಿ, ಮಯೂರ, ಪುಸ್ತಕ ಪ್ರಪಂಚ, ಅನಿಕೇತನ ಮುಂತಾದ ಪತ್ರಿಕೆಗಳು ಈ ಭಾಷಾಂತರಕ್ಕೆ ಪ್ರೋತ್ಸಾಹಿಸಿವೆ. ಆದರೆ ಒಂದು ವಿಷಾದದ ಸಂಗತಿ ಎಂದರೇ ಅನ್ಯಕೃತಿಗಳು ಕನ್ನಡ ಭಾಷೆಗೆ ಅನುವಾದವಾಗುವಷ್ಟು ಕನ್ನಡ ಕೃತಿಗಳು ಅನ್ಯಭಾಷೆಗೆ ಭಾಷಾಂತರವಾಗುತ್ತಿಲ್ಲ. ನಮ್ಮ ಕರ್ನಾಟಕ ಬಹುಭಾಷೆ, ಬಹುಸಂಸ್ಕೃತಿಯಿಂದ ಕೂಡಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಲು ಬಹುಭಾಷೆ, ಬಹುಸಂಸ್ಕೃತಿಗಳ ಅರಿವು ಇರಲೇಬೇಕು. ಈ ಸಾಮಾಜಿಕ ಕಾರ್ಯವನ್ನು ಭಾಷಾಂತರ ನಿರ್ವಹಿಸುತ್ತದೆ.

ಭಾಷೆಯನ್ನು ಕುರಿತಾದ ಚಿಂತನೆ, ಜಿಜ್ಞಾಸೆ ಇಂದು ವಿಶೇಷ ಆಯಾಮವನ್ನು ಪಡೆದುಕೊಳ್ಳುತ್ತಿದೆ. ನಮ್ಮ ನಾಡು-ನುಡಿಗಳ ಮೇಲೆ ಅಕ್ಕರೆ, ಆಸ್ಥೆ, ಅಭಿಮಾನಗಳು ಇಂದು ಪ್ರತಿ ಭಾಷಿಗರಲ್ಲೂ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಮನೆಮಾಡಿದೆ. ಇದಕ್ಕೆ ಭಾಷಾಂತರ ಪ್ರವೃತ್ತಿಯೂ ಕಾರಣ ಎಂಬುದನ್ನು ಮರೆಯುವಂತಿಲ್ಲ. ಈ ನಿಟ್ಟಿನಲ್ಲಿ ಹೊಸ-ಹೊಸ ಅಗತ್ಯಗಳಿಗೆ ಅನುಗುಣವಾಗಿ ಭಾಷೆ ತನ್ನ ಶಕ್ತಿ-ಸಾಮರ್ಥ್ಯಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಲ್ಲಿ 'ಭಾಷಾಂತರ ಭಾಷೆಯ ಶಕ್ತಿಗೆ ಸವಾಲುಗಳನ್ನೊಡ್ಡುತ್ತಿದೆ, ಹೀಗಾಗಿ ಭಾಷೆಗೆ ಹೊಸ-ಹೊಸ ಆಯಾಮಗಳು ಮೂಡುತ್ತವೆ' ಎಂಬ ಪ್ರಧಾನ್ ಗುರುದತ್ತ ಅವರ ನುಡಿಗಳು ಮನನೀಯವಾಗಿವೆ.

ಇಂದಿನ ಪ್ರಪಂಚದಲ್ಲಿ ಕ್ಷಣ-ಕ್ಷಣಕ್ಕೂ ಅರಿವಿನ ಸ್ಫೋಟವಾಗುತ್ತಿದೆ. ಜ್ಞಾನದ ವಾಹಕ ಭಾಷೆ ಶಾಬ್ದಿಕ, ಅಶಾಬ್ದಿಕ ಭಾಷಾ ಚೌಕಟ್ಟಿನಲ್ಲಿ ಜ್ಞಾನ ವಿಹರಿಸುತ್ತಿರುತ್ತದೆ. ಭಾಷಾಂತರವು ಆ ಚೌಕಟ್ಟನ್ನು ತೊಡೆದು ಹಾಕಿ ಜ್ಞಾನವನ್ನು ಯಾವ ಹಂಗೂ ಇಲ್ಲದೇ ಸರ್ವರಿಗೂ ವೇದ್ಯವಾಗಿಸುತ್ತದೆ. ಅಂತರಶಿಸ್ತೀಯ ಅಧ್ಯಯನ ಭಾಷಾವಲಯ, ಸಾಮಾಜಿಕವಲಯ, ಸಾಹಿತ್ಯಿಕ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ವಲಯ, ವೈಜ್ಞಾನಿಕ ಹಾಗೂ ಎಲ್ಲಾ ಮಾನವಿಕ ಅಧ್ಯಯನಗಳ ವಲಯಕ್ಕೂ ವ್ಯಾಪಿಸಿದೆ. ಈ ಹಿನ್ನೆಲೆಯಲ್ಲಿ ಒಂದನ್ನು ಹೊರತುಪಡಿಸಿ ಮತ್ತೊಂದು ಅಸ್ತಿತ್ವದಲ್ಲಿ ಉಳಿಯಲಾರದು.

ಅಧ್ಯಾಯ-ಐದು

ಭಾಷೆಯ ಪ್ರಸ್ತುತತೆ ಮತ್ತು ಪ್ರಯೋಜನ



ಭಾಷೆಯ ಪ್ರಸ್ತುತತೆ :

ಕನ್ನಡ ಭಾಷೆ ವಿಜ್ಞಾನ-ತಂತ್ರಜ್ಞಾನ, ಗಣಕೀಕರಣ, ಜಾಗತೀಕರಣ, ವಾಣಿಜ್ಯೀಕರಣ ಮುಂತಾದವುಗಳ ಪ್ರಭಾವದಿಂದ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲು ಹೋರಾಡುತ್ತಿದೆ. ಇದರಿಂದ ಭಾಷೆಯಲ್ಲಿ ಆಧುನೀಕರಣ ಪ್ರಕ್ರಿಯೆ ಆರಂಭವಾಗಿದೆ. ಸು.೧೯ನೇ ಶತಮಾನದ ಕೊನೆಯ ಭಾಗದಲ್ಲೇ ಭಾಷಾ ಶಾಸ್ತ್ರಜ್ಞರು ಈ ಕುರಿತು ಚರ್ಚಿಸಿದ್ದಾರೆ. 'ಹೊಸ ಜಗತ್ತಿನ ಅಗತ್ಯಗಳಿಗೆ ಅನುಗುಣವಾಗಿ ಒಂದು ಭಾಷೆಯನ್ನು ಸಜ್ಜುಗೊಳಿಸುವ ಯೋಜಿತ ಕ್ರಿಯೆಯನ್ನು ಆಧುನೀಕರಣ ಎನ್ನುತ್ತೇವೆ'.[೧] ಒಂದು ಭಾಷೆಯನ್ನು ಆ ಭಾಷಿಕ ಜನಾಂಗ ಕಾಪಾಡಿಕೊಳ್ಳುವ ಬಗೆ ಹೇಗೆ ಎಂಬುದು ಇಂದು ಭಾಷಿಕ ಜನಾಂಗವನ್ನು ಕಾಡುತ್ತಿರುವ ಸಮಸ್ಯೆಯಾಗಿದೆ.

ಪಾಶ್ಚಾತ್ಯ ಭಾಷೆಗಳಾದಂತಹ ಸ್ವೀಡಿಷ್, ಡೇನಿಷ್ ಮುಂತಾದ ಭಾಷೆಗಳು ಫ್ರೆಂಚ್, ಜರ್ಮನ್, ಇಂಗ್ಲಿಷ್ ಮುಂತಾದ ಭಾಷೆಗಳ ದಟ್ಟಪ್ರಭಾವದಿಂದ ಬಿಡಿಸಿಕೊಳ್ಳಲು ಹೋರಾಡುತ್ತಿವೆ. ಇಂಗ್ಲಿಷ್ ಹಿಂದಿ ಭಾಷೆಗಳ ಎದುರು ಕನ್ನಡದ ಗತಿಯೂ ಇದೇ ಆಗಿದೆ. ಸಾಂಪ್ರದಾಯಿಕ ಭಾಷಾ ವಿಧಾನವು ಇಂದಿನ ತಂತ್ರಜ್ಞಾನದ ಯುಗಕ್ಕೆ ಅಮುಖ್ಯವಾಗಿ ತೋರುತ್ತದೆ. ಇದಕ್ಕೆ ಹೊಂದಿಕೊಳ್ಳುವ ಆಧುನಿಕ ಪದಕೋಶಗಳನ್ನು ರಚನೆ ಮಾಡುವುದು ಅತ್ಯಗತ್ಯ. ಆದರೇ ಪದಕೋಶ ರಚಿಸಲು ಇಂಗ್ಲಿಷ್‌ನ ಮೊರೆ ಹೋಗುತ್ತಿರುವುದು ಕನ್ನಡದ ವಿಪರ್ಯಾಸವೇ ಸರಿ. ಆ ನಿಟ್ಟಿನಲ್ಲಿ ಇಂಗ್ಲೀಷ್‌ನಿಂದ ಕನ್ನಡಕ್ಕೆ ಬಂದು ಸೇರಿದ ಹೊಸಧ್ವನಿಗಳು, ಒಂದು ಓಷ್ಠ್ಯಘರ್ಷ (F) ಧ್ವನಿ, ಮತ್ತೊಂದು ದಂತ್ಯಘರ್ಷ (Z) ಧ್ವನಿಯಾಗಿದೆ. ಈ ರೂಪಗಳು ಅನಿವಾರ್ಯವಾಗಿ ಕನ್ನಡಕ್ಕೆ ಬಂದು ಸೇರಿವೆ. ಉದಾ: Coffee ಮತ್ತು Xerox ಇವುಗಳು ಕನ್ನಡ ಲಿಪ್ಯಂತರ 'ಕಾಫಿ', 'ಝೆರಾಕ್ಸ್' ಆಗಿದೆ.

ಹೊರಜಗತ್ತಿನ ಭಾಷೆಯನ್ನು ಸ್ವೀಕರಿಸುವುದು ನಮ್ಮ ಭಾಷೆಗೆ ಪೂರಕವಾಗಿರಬೇಕೇ ಹೊರತು ಮಾರಕವಾಗಿರಬಾರದು. ಒಂದು ಭಾಷೆಗೆ ರಾಜಕೀಯ ಬಲವಿದ್ದಾಗ ಅದು ಸಾಂಸ್ಕೃತಿಕವಾಗಿ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಬಲಗೊಳ್ಳುತ್ತದೆ ಎಂಬುದನ್ನು ಇತ್ತೀಚಿನ ಕನ್ನಡದ ಸ್ಥಿತಿ-ಗತಿಗಳಿಂದ ಮನಗಂಡಿದ್ದೇವೆ. ೧೯೬೩ ನವೆಂಬರ್ ೧ರಂದು ಕರ್ನಾಟಕದಲ್ಲಿ ಕನ್ನಡ 'ಆಡಳಿತ ಭಾಷೆ' ಎಂದು ಅಧಿಕೃತವಾಗಿ ಘೋಷಿಸಲಾಯಿತು. ೧೯೭೧ರ ನವೆಂಬರ್ ೧ರಂದು ರಾಜ್ಯದ ಉಪವಿಭಾಗದ ಕಛೇರಿಗಳಲ್ಲಿ ಕನ್ನಡ ಬಳಕೆ ಆದೇಶ ಬಂದಿತು. ೧೯೭೩ ನವೆಂಬರ್ ೧ರಂದು ನ್ಯಾಯಾಲಯದಲ್ಲಿ ವಾದ-ಪ್ರತಿವಾದ ಹಾಗೂ ತೀರ್ಪನ್ನು ನೀಡಲು ಕನ್ನಡವನ್ನು ಬಳಸಬೇಕೆಂದು ತೀರ್ಮಾನಿಸಲಾಯಿತು. ಇದರಿಂದ ಭಾಷೆ ತೀವ್ರವಾಗಿ ಅಂತರ್ಮುಖಿಯಾದಂತೆ ಆಗುತ್ತದೆ. ಅಲ್ಲದೇ ಕನ್ನಡವು ಉಳಿದು ಬೆಳೆಯುವ ಗುರುತರ ಕಾರ್ಯವಾಗುತ್ತದೆ

ಎಂದು ನಂಬಲಾಯಿತು. ಆದರೇ ರಾಜಕೀಯ ಕಾರಣಗಳ ಹಿನ್ನೆಲೆಯಲ್ಲೇ ಕನ್ನಡ ಅಂತರ್ಮುಖಿಯಾಗದೇ ಉಳಿದದ್ದು ಉಂಟು. ನವವಸಾಹತೀಕರಣ, ಜಾಗತೀಕರಣಗಳ ಅಸ್ತಿತ್ವಕ್ಕೆ ರಾಜಕೀಯ ಅಂಶಗಳು ಪ್ರಬಲ ಕಾರಣವಾಗುತ್ತವೆ. ಇವುಗಳು ಶೈಕ್ಷಣಿಕ ವಲಯದಲ್ಲಿ ತಮ್ಮ ಸ್ಥಾನವನ್ನು ಗಿಟ್ಟಿಸಿಕೊಂಡಿವೆ. ಇಂತಹ ಶಿಕ್ಷಣಕ್ಕೆ ಸರ್ಕಾರವು ಅನುಮತಿ ನೀಡುವುದು ಇಂದಿನ ಆಧುನಿಕ ಸಮಾಜದಲ್ಲಿ ಅನಿವಾರ್ಯವೇ ಆಗಿದೆ. ಈ ನಿಟ್ಟಿನಲ್ಲಿ ಕನ್ನಡದ ಬಗೆಗಿನ ಕಟ್ಟು-ನಿಟ್ಟಾದ ನಿಯಮಗಳನ್ನು ಪಾಲಿಸುವಲ್ಲಿ ಸರ್ಕಾರದ ಬದ್ಧತೆ ಸಾಲದಾಗಿದೆ.

ಹೊಸ-ಹೊಸ ತಂತ್ರಜ್ಞಾನ, ಆವಿಷ್ಕಾರಗಳು ಆಧುನಿಕ ಸಮಾಜದಲ್ಲಿ ನಡೆಯುತ್ತಲಿವೆ. ಈ ವೇಗಕ್ಕೆ ತಕ್ಕಂತೆ ಕನ್ನಡ ಬೆಳೆಯಬೇಕಾಗಿದೆ, ಆಧುನೀಕರಣವನ್ನು ಅರಗಿಸಿಕೊಳ್ಳಬೇಕಾಗಿದೆ. ಒಮ್ಮೊಮ್ಮೆ ಕನ್ನಡ ಭಾಷೆ ಕೃತವಾಗುತ್ತಿದೆ. ಇದನ್ನು ಸ್ಪಷ್ಟೀಕರಿಸಲು ಕೆ.ವಿ.ನಾರಾಯಣ್ ಅವರು ನೀಡಿರುವ ಉದಾಹರಣೆಯನ್ನು ಗಮನಿಸಬಹುದು. ಉದಾ: ನಾವು ಸಾರ್ವಜನಿಕ ಸೇವೆಗಳ ಬಗೆಗೆ ದೂರು ಸಲ್ಲಿಸುವಾಗ ಅಥವಾ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಕರೆಮಾಡಿದಾಗ 'ನೀವು ಪ್ರಯತ್ನಿಸುತ್ತಿರುವ ಮಾರ್ಗದ ಎಲ್ಲಾ ಲೈನುಗಳು ದುರಸ್ಥಿಯಲ್ಲಿವೆ' ಎಂಬ ಸಿದ್ಧ ಉತ್ತರ ಕೇಳಿಸುತ್ತದೆ. ಹೀಗೆ ಆಧುನಿಕತೆಯ ಭರದಲ್ಲಿ ಕನ್ನಡ ಕೃತಕವಾಗುವ ತನ್ನ ಸ್ವಂತಿಕೆಯನ್ನು ಕಳೆದುಕೊಳ್ಳುವ ಅಪಾಯ ಕೂಡ ತಪ್ಪಿದ್ದಲ್ಲ. ಭವಿಷ್ಯದಲ್ಲಿ ಕನ್ನಡದ ಸ್ಥಿತಿಗತಿಗಳು ಗಂಭೀರವಾಗುವ ಸಾಧ್ಯತೆಗಳು ಹೆಚ್ಚಾಗಿ ಕಾಣಿಸುತ್ತಿವೆ.

೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳು ರೂಪುಗೊಂಡವು. ಈ ಸಂದರ್ಭದಲ್ಲಿ ಆಯಾಯ ಭಾಷೆಯು ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಲು ಸೌಹಾರ್ದಯುತವಾಗಿರಲು, ಸಂಸ್ಕೃತಿಯನ್ನು ಬೆಳೆಸಲು ಇಂತಹ ಪ್ರಾಂತ್ಯವಾರು ವಿಂಗಡಣೆ ಮಾಡುವುದು ಒಂದು ಉತ್ತಮ ಕಾರ್ಯ ಎಂದು ಭಾವಿಸಲಾಗಿತ್ತು. ಆದರೇ ಇಂದು ಇಂತಹ ವಿಂಗಡಣೆಯಿಂದ ಕೆಲವು ಕಡೆ ಭಾಷಾ ದುರಾಭಿಮಾನ; ಕೆಲವು ಕಡೆ ರಾಷ್ಟ್ರೀಯ ಮನೋಭಾವದ ಕೊರತೆ ತಾಂಡವವಾಡುತ್ತಿದೆ. ಈ ನಡುವೆ ಸರ್ವರಿಗೂ, ಸಮಪಾಲು, ಸರ್ವರಿಗೂ ಸಮಬಾಳು ಎಂದು ಎಲ್ಲರನ್ನು ಕೈಬೀಸಿ ಕರೆಯುವ, ಎಲ್ಲಾ ಭಾಷೆ ಸಂಸ್ಕೃತಿಯನ್ನು ಸೌಹಾರ್ದಯುತವಾಗಿ ನಡೆಸಿಕೊಳ್ಳುವ ಕರ್ನಾಟಕ ಹಾಗೂ ಕನ್ನಡದ ಭಾಷೆ ಮಿಡುಕಾಡುವಂತಾಗಿದೆ. ಕನ್ನಡವನ್ನು ಆಯಾ ಕಾಲಘಟ್ಟಕ್ಕನುಗುಣವಾಗಿ ಅಭಿವೃದ್ಧಿ ಪಡಿಸುತ್ತಾ, ಪ್ರಮಾಣ ಪದಕೋಶಗಳನ್ನು ಸಿದ್ಧಪಡಿಸುತ್ತಾ ಬಂದರೇ ಕನ್ನಡದ ಏಳಿಗೆಯಾಗುತ್ತದೆ ಎಂಬುದು ಒಂದು ಆಶಯ. ಆದರೇ ಇಂತಹ ಆಧುನೀಕರಣವು ಹಲವಾರು ಸಮಸ್ಯೆಗಳನ್ನು ಹುಟ್ಟಿಸುತ್ತವೆ. ಮೊದಲು ಅಂಚೆ ಕಛೇರಿಯ ವಲಯಕ್ಕೆ ಸೇರುವ 'ತುರ್ತುತಂತಿ' ಎಂಬುದು ಲಭ್ಯವಿದ್ದ ತಂತ್ರಜ್ಞಾನ. ನಮ್ಮ ಸಮಾಚಾರಗಳನ್ನು ತುರ್ತಾಗಿ ಮುಟ್ಟಿಸಲು ಇದ್ದ ಏಕೈಕ ತಂತ್ರಜ್ಞಾನ ಇದಾಗಿತ್ತು. ಆದರೇ ಇದು ತನ್ನದೇ ಆದ ಮಿತಿಯನ್ನು ಹೊಂದಿತ್ತು. ತಂತಿಯಲ್ಲಿ ಕೆಲವೇ ಪದಗಳ ಮಿತಿಯಲ್ಲಿ ಸಮಗ್ರ ವಿಷಯವನ್ನು

ಹಿಡಿದಿಡಬೇಕಾಗಿತ್ತು. ಇಂತಹ ಪದಪುಂಜಗಳುಳ್ಳ ಕೈಪಿಡಿಯ ಅಗತ್ಯತೆ ಇಲ್ಲಿ ಎದ್ದುತೋರುತ್ತದೆ. ಕನ್ನಡವನ್ನು ಉಳಿಸಲು ಶ್ರಮ ಪಡುವುದೇ ಆದರೇ ಈ ನಿಟ್ಟನಲ್ಲಿ ನಾವು ಕಾರ್ಯಪ್ರೌವೃತ್ತರಾಗಬೇಕು. ಇಂತಹ ಸೂಕ್ಷ್ಮವಾದ ಅಂಗಗಳು ಬಹಳಷ್ಟಿರುತ್ತವೆ. ಇದು ಒಂದು ಸಣ್ಣ ಉದಾಹರಣೆಯಷ್ಟೆ. ಇಂತಹವೇ ಮುಂದೆ ಭಾಷೆಯ ತಳವನ್ನು ಬಲಿಷ್ಠವಾಗಿಸಲು ಸಹಕಾರಿಯಾಗುತ್ತವೆ.

ಜಾಗತೀಕರಣದ ಬಲದಿಂದಾಗಿ ಅನ್ಯಭಾಷೆಗಳ ಜೊತೆಗೆ ಕನ್ನಡ ಅನುಸಂಧಾನ ಮಾಡಿಕೊಳ್ಳಬೇಕಾದ ತನ್ನ ಅಸ್ಥಿತ್ವವನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಏಕೀಕರಣಕ್ಕೂ ಮೊದಲು ಇಂಗ್ಲಿಷನ್ನು ಕನ್ನಡಕ್ಕೆ ಪೂರಕವಾಗಿ ಬಳಸಬೇಕು. ಇದರ ಜೊತೆ-ಜೊತೆಯಲ್ಲಿಯೇ ಕನ್ನಡದ ಸ್ವಾಯತತ್ತೆಯನ್ನು ಕಾಪಾಡಿಕೊಳ್ಳಬೇಕು ಎಂಬ ವಾದ ಕೇಳಿಬರುತ್ತಿತ್ತು. 'ಕುವೆಂಪು' ಒಂದು ಸಾಮಾಜಿಕ ಸಂದರ್ಭದಲ್ಲಿ 'ಇಂಗ್ಲೀಷ್ ಕಲಿಯದೇ ಹೋಗಿದ್ದರೆ ತಾವು ಯಾರದೋ ಮನೆಯ ಕೊಟ್ಟಿಗೆಯಲ್ಲಿ ಕೆಲಸ ಮಾಡಿಕೊಂಡು ಇರಬೇಕಾಗುತ್ತಿತ್ತು' ಎಂದಿದ್ದಾರೆ. ಜ್ಞಾನಾರ್ಜನೆಯ ಉದ್ದೇಶದಿಂದ, ಪ್ರತಿಷ್ಠೆಗಾಗಿ, ಸಂಪರ್ಕಕ್ಕಾಗಿ ವ್ಯವಹಾರಿಕ ಕಾರಣಗಳಿಂದ ನಾವು ಮತ್ತೊಂದು ಭಾಷೆಯನ್ನು ಕಲಿಯಲು ಅದರ ಸಾಂಸ್ಕೃತಿಕ ಅಂಶಗಳನ್ನು ಸ್ವೀಕರಿಸಲು ಮುಂದಾದೆವು. ಅದು ಮಿತಿಮೀರಿದ್ದರಿಂದ ಭಾಷಿಕ ಸಮಸ್ಯೆ ಸೃಷ್ಟಿಯಾಗಿದೆ. ಇಂಗ್ಲಿಷ್ ಬೇಕು,ಆದರೆ ಯಾರಿಗೆ ಎಷ್ಟು ಬೇಕು ಎಂಬುದರ ಬಗ್ಗೆ ಈ ತೀರ್ಮಾನವಾಗಬೇಕಾಗಿದೆ. ಎಲ್ಲರಿಗೂ ಇಂಗ್ಲಿಷ್ ಬೇಕಿಲ್ಲ ಎಂಬುದು ನಾವು ತಿಳಿದುಕೊಳ್ಳಬೇಕಾದ ಸಂಗತಿಯಾಗಿದೆ. ಕನ್ನಡದಲ್ಲಿ ಇಂಗ್ಲೀಷ್‌ನ ಪಾಲುಗಾರಿಕೆ ಎಷ್ಟೆಂದರೆ ಸಂಬಂಧ ಸೂಚಕ ಪದಗಳು, ಸಾಂಸ್ಕೃತಿಕ ನಾಮಪದಗಳು, ಬಹುಪಾಲು ಇಂಗ್ಲೀಷ್‌ನಿಂದ ಸ್ವೀಕರಿಸಿದವೇ ಆಗಿವೆ. ಇದಕ್ಕೆ ಸಾಮಾಜಿಕ ಸ್ತರವೂ ಕಾರಣ ಎಂದು ಹೇಳಬಹುದು. ಉದಾ: ಅಂಕಲ್-ಚಿಕ್ಕಪ್ಪ, ಮಾವ, ದೊಡ್ಡಪ್ಪ, ಆಂಟಿ-ಚಿಕ್ಕಮ್ಮ, ಅತ್ತೆ, ದೊಡ್ಡಮ್ಮ, ಕಜಿ಼ನ್-ತಂದೆ ಹಾಗೂ ತಾಯಿಯ ಅಕ್ಕ-ತಂಗಿ ಅಣ್ಣತಮ್ಮಂದಿರ ಮಕ್ಕಳೆಲ್ಲರಿಗೂ ಇರುವ ಸಂಬಂಧವಾದ ಪದ. ಬ್ರದರ್-ಅಣ್ಣ, ತಮ್ಮ, ಸಿಸ್ಟರ್-ಅಕ್ಕ, ತಂಗಿ ಹೀಗೆ ಇಂಗ್ಲೀಷ್‌ನ ಸಂಬಂಧ ಸೂಚಕ ಪದಗಳು ಪರ್ಯಾಯವಾಗಿ ನಮ್ಮಲ್ಲಿ ಬಂದು ಸೇರಿವೆ. ಅಲ್ಲದೇ, ಕಾರು-ನಾಲ್ಕು ಚಕ್ರದ ವಾಹನ, ಸ್ಕೂಟರ್-ದ್ವಿಚಕ್ರ ವಾಹನ, ಪೆನ್ಸಿಲ್-ಸೀಸದ ಕಡ್ಡಿ, ಪೆನ್-ಲೇಖನಿ ಮುಂತಾದ ಸಾಂಸ್ಕೃತಿಕ ಪದಗಳು ಕನ್ನಡದ ಪದಗಳೇ ಎಂಬಂತೆ ಕನ್ನಡದಲ್ಲಿ ಬೆರೆತು ಹೋಗಿವೆ.

ಮಾನವ ಸೌಲಭ್ಯಾಕಾಂಕ್ಷಿ ಆತ ಎಂದೂ ಭಾಷೆಯಲ್ಲಿ ಕ್ಲಿಷ್ಠತೆಯನ್ನು ಒಪ್ಪುವುದಿಲ್ಲ. ಆದ್ದರಿಂದ ಕೆಲವೇ ಶಬ್ದಗಳಲ್ಲಿ ಹಲವನ್ನು ಹಿಡಿದಿಡುವ ಇಂಗ್ಲೀಷ್ ಪದಗಳನ್ನು ಬಳಸುತ್ತಾರೆ. ಹೀಗೆ ಸ್ವೀಕರಿಸುವಾಗ ಕನ್ನಡದ ಅಕ್ಷರಗಳಲ್ಲಿ ಹೆಚ್ಚು ಬಳಕೆಯಲ್ಲಿರುವ 'ಉ' ಎಂಬ ಸ್ವರವನ್ನು ಸೇರಿಸಿ ಕನ್ನಡದ ಛಾಯೆಯನ್ನು

ನೀಡುತ್ತಾರೆ. ಉದಾ: ಅಂಕಲ್ಲು, ಬ್ರದರು, ಸಿಸ್ಟರು, ಪೆನ್ನು, ಪೆನ್ಸಿಲ್ಲು, ಕಾರು, ಬಸ್ಸು, ಬುಕ್ಕು, ಬೆಂಚು, ಸ್ಕೂಲು, ಕಾಲೇಜು ಮುಂತಾದವು.

ಸಮಕಾಲೀನ ಸಂದರ್ಭ ಕನ್ನಡ ಮತ್ತು ಇಂಗ್ಲಿಷ್ ಇವುಗಳ ನಡುವಿನ ಹೋರಾಟದ ಸಂಧಿಕಾಲ, ಎಚ್ಚರವಾದ ಕನ್ನಡಿಗರು, ಕನ್ನಡ ಸಾಹಿತಿಗಳು, ಕನ್ನಡದ ಮೌಲ್ಯವನ್ನು ಎತ್ತಿ ಹಿಡಿಯುತ್ತಿದ್ದಾನೆ. ವಿಪರ್ಯಾಸವೆಂದರೇ ಅಖಿಲ ಭಾರತ ವ್ಯಾಪ್ತಿಯಲ್ಲಿ ಕನ್ನಡದ ಕುರಿತ ಚರ್ಚೆಗಳು ನಡೆಯುವುದು ಮಾತ್ರ ಇಂಗ್ಲೀಷ್ ಭಾಷೆಯಲ್ಲೇ ಆಗಿದೆ. ಆದರೇ ಇಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಕನ್ನಡದ ಅಳಲನ್ನು ತೋರಿಸಲು ಇಂಗ್ಲಿಷ್ ಭಾಷೆಯನ್ನೇ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಳ್ಳಬೇಕಾಗಿದೆ. ಇಂದು ಶುದ್ಧ ಕನ್ನಡ ಎಂದರೇ ಇಂಗ್ಲಿಷ್ ಬೆರತ ಕನ್ನಡವಲ್ಲ, ಸಂಸ್ಕೃತ ಬೆರೆತ ಕನ್ನಡ ಎಂಬ ಕಲ್ಪನೆ ಇದೆ. ಅಂದರೇ ಕನ್ನಡವನ್ನೇ ಉಳಿಸಿ-ಬೆಳೆಸಿ-ಬಳಸಬೇಕೆಂದುಕೊಂಡ ಕನ್ನಡಿಗರು ಕನ್ನಡದೊಳಗಿನ ಇಂಗ್ಲಿಷ್ ಪದಗಳನ್ನು ಬಳಸಲು ನಿರಾಕರಿಸುತ್ತಾರೆ. ಆದರೆ ತಾವು ಮಾತನಾಡುವಾಗ ಅರಿವಿಲ್ಲದೆಯೇ ಹಲವಾರು ಸಂಸ್ಕೃತ ಪದಗಳನ್ನು ಬಳಸುತ್ತಾರೆ. ಅಂದರೇ ಅನ್ಯದೇಶ್ಯ, ಅನ್ಯಭಾಷೆಗಳ ಪ್ರಭಾವದಿಂದ ಕನ್ನಡ ವಿಮುಖವಾಗುವುದು ಕನಸಿನ ಮಾತು.

ಭಾರತ ಬಹುಭಾಷಾ ರಾಷ್ಟ್ರವಾಗಿದೆ. ೧೯೬೧ರ ಜನಗಣತಿಯ ಪ್ರಕಾರ ೧೬೫೨ ಮಾತೃಭಾಷೆಗಳಿವೆ. ಕರ್ನಾಟಕದಲ್ಲಿ ೧೬೬ ಮಾತೃ ಭಾಷೆಗಳಿರುವುದು ಖಚಿತವಾಗಿದೆ. ಕರ್ನಾಟಕ ರಾಜ್ಯದ ಪ್ರಮಾಣ ಭಾಷೆ, ಆಡಳಿತಭಾಷೆ, ಅಧಿಕೃತ ಭಾಷೆ ಕನ್ನಡ ಆದರೆ ಇದನ್ನುಳಿದ ಉರ್ದು, ತೆಲುಗು, ಮರಾಠಿ, ತಮಿಳು, ಮಲಯಾಳಂ, ಹಿಂದಿ, ತುಳು, ಕೊಂಕಣಿ, ಲಂಬಾಣಿ ಭಾಷೆಗಳನ್ನು ಮಾತೃಭಾಷೆಯಾಗಿ ಹೊಂದಿರುವ ಜನರಿದ್ದಾರೆ. ೧೯೭೧ರ ಜನಗಣತಿ ಆಧಾರದ ಮೇಲೆ ಕನ್ನಡವನ್ನು ಮಾತೃಭಾಷೆಯನ್ನಾಗಿ ಬಳಸುವ ಜನರ ಸಂಖ್ಯೆ ಶೇ.೬೫.೯೪, ಉರ್ದು ಶೇ.೯.೦೦, ತೆಲುಗು ಶೇ.೮.೭. ಉಳಿದದ್ದು ಇನ್ನಿತರ ಭಾಷೆಗಳ ಬಳಕೆಯನ್ನು ಸೂಚಿಸುತ್ತದೆ.

೧೯೮೧ರ ಜನಗಣತಿಯ ಪ್ರಕಾರ ವಿವಿಧ ಜಿಲ್ಲೆಗಳಲ್ಲಿ ವಿವಿಧ ಮಾತೃಭಾಷೆಗಳನ್ನು ಹೊಂದಿರುವವರ ಸಂಖ್ಯೆಯನ್ನು ಈ ಕೆಳಗಿನಂತೆ ನೋಡಬಹುದು.

ಕ್ರ.ಸಂ.	ಜಿಲ್ಲೆಗಳು	ಒಟ್ಟು ಜನಸಂಖ್ಯೆ	ಕನ್ನಡ	ಮರಾಠಿ	ತೆಲುಗು	ತಮಿಳು	ಮಲೆಯಾಳಂ	ಉರ್ದು	ಕೊಂಕಣಿ	ತುಳು
೧	ಬೆಂಗಳೂರು	೪೯,೪೭,೬೧೦	೨೩,೮೪,೭೭೦	೧,೦೨,೯೭೯೯	೭,೭೫,೩೪೪	೭,೯೩,೬೪೨	೯೩,೧೦೦	೫,೪೬,೩೪೦	೨೨,೧೦೦	೧೨,೨೧೧
೨	ಬೆಳಗಾಂ	೨೯,೮೦,೪೪೦	೧೯,೯೮,೧೯೪	೬,೨೭,೩೬೩	೨೪,೬೦೩	೫,೭೪೪	೧,೮೯೩	೨,೬೦,೨೯೩	೧೨,೧೭೬	೧,೨೧೯
೩.	ಬಳ್ಳಾರಿ	೧೪,೮೯,೨೨೫	೧೦,೬೭,೯೬೧	೧೪,೦೧೯	೧,೪೫,೨೫೯	೩೧,೩೬೫	೨,೩೮೨	೧,೬೦,೬೧೩	೧,೩೦೨	–
೪.	ಬೀದರ್	೯,೯೫,೯೬೧	೫,೩೬,೬೯೬	೧,೮೪,೬೬೦	೫೧,೪೮೯	–	–	೧,೮೨,೨೮೮	–	–
೫.	ವಿಜಾಪುರ	೨೪,೦೧,೭೮೨	೧೯,೬೧,೩೨೯	೫೮,೪೬೩	೧೬,೫೨೪	೨,೮೮೬	–	೨,೭೧,೬೪೩	–	–
೬.	ಚಿಕ್ಕಮಗಳೂರು	೯,೧೧,೭೬೯	೬,೫೪,೭೨೧	೯,೫೨೨	೨೫,೧೨೬	೪೪,೯೮೨	೨೫,೮೧೯	೫೮,೬೬೬	೧೭,೬೬೫	೫೦,೨೪೪
೭.	ಚಿತ್ರದುರ್ಗ	೧೭,೭೭,೪೯೯	೧೩,೧೮,೫೬೮	೧೮,೨೯೧	೨,೦೪,೧೮೩	೨೨,೭೬೭	೨,೦೩೫	೧,೫೧,೯೦೨	೨,೧೭೭	೧,೦೩೪
೮.	ದಕ್ಷಿಣ ಕನ್ನಡ	೨೩,೭೬,೭೨೪	೫,೪೪,೭೦೧	೪೩,೨೦೯	೪,೬೪೭	೧೩,೮೧೧	೩,೦೩,೨೭೨	೫೫,೧೧೮	೩,೦೧,೩೦೬	೧೦,೭೪,೨೦೨
೯.	ಧಾರವಾಡ	೨೯,೪೫,೪೮೭	೨೩,೦೮,೮೯೪	೫೯,೫೬೯	೪೫,೦೪೮	೧೨,೦೭೨	೧,೮೪೧	೩,೮೩,೮೧೦	೧೬,೩೬೧	೨,೬೨೮
೧೦.	ಗುಲ್ಬರ್ಗಾ	೨೦,೮೦,೬೪೩	೧೩,೮೪,೮೯೪	೬೦,೮೩೭	೧,೩೩,೫೯೦	೩,೧೬೨	೧,೧೬೨	೩,೫೧,೯೫೧	–	–
೧೧.	ಹಾಸನ	೧೩,೪೭,೦೧೪	೧೧,೬೯,೨೭೩	೮,೩೪೭	೩೧,೩೭೫	೨೫,೪೪೪	೧೧,೨೦೬	೬೮,೫೩೩	೩,೬೮೩	೧೩,೮೯೩
೧೨.	ಕೊಡಗು	೪,೬೧,೮೮೮	೧,೬೫,೩೪೫	೩,೧೦೯	೭,೭೦೯	೩೧,೯೩೦	೧೦೪,೩೪೪	೧೨,೦೩೧	೬,೩೪೭	೩೯,೮೧೪
೧೩.	ಕೋಲಾರ	೧೯,೦೫,೪೯೨	೫,೦೭,೨೯೫	೧೫,೧೪೦	೯,೭೮,೫೦೪	೧,೬೩,೭೪೪	೩,೯೮೬	೨,೧೫,೧೮೯	–	–
೧೪.	ಮಂಡ್ಯ	೧೪,೧೮,೧೦೯	೧೨,೯೫,೩೫೪	೭,೨೫೬	೩೧,೧೩೧	೨೫,೬೭೮	೧,೯೯೮	೫೫,೦೩೭	–	–
೧೫.	ಮೈಸೂರು	೨೫,೯೫,೯೦೦	೨೧,೦೪,೮೭೪	೨೬,೪೬೫	೯೩,೩೬೩	೧,೨೩,೬೮೫	೧೦,೯೨೦	೧,೬೫,೫೪೭	೩,೪೦೦	೪,೦೨೫
೧೬.	ರಾಯಚೂರು	೧೭,೮೩,೮೨೨	೧೩,೭೯,೬೭೪	೧೧,೬೨೬	೧,೫೪,೯೮೫	೮,೮೪೨	೧,೦೩೪	೧,೭೫,೧೩೩	೧,೪೫೮	–
೧೭.	ಶಿವಮೊಗ್ಗ	೧೬,೫೬,೭೩೧	೧೨,೨೯,೫೫೦	೩೪,೮೪೮	೭೦,೭೯೧	೬೭,೫೫೪	೧೩,೭೬೧	೧,೫೯,೪೭೩	೨೪,೩೯೭	೯,೪೩೬
೧೮.	ತುಮಕೂರು	೧೯,೭೭,೮೫೪	೧೫,೮೯,೫೨೭	೧೪,೫೬೮	೧,೮೬,೦೪೪	೧೧,೨೦೯	೧,೩೬೦	೧,೪೧,೦೩೯	–	–
೧೯.	ಉತ್ತರ ಕನ್ನಡ	೧೦,೭೨,೦೩೪	೬,೦೦,೦೨೪	೯೧,೨೧೦	೧೪,೬೯೧	೫,೨೮೭	೯,೦೧೫	೯೮,೨೨೨	೨,೨೪,೨೭೮	೯,೪೩೬
೨೦	ರಾಜ್ಯದಒಟ್ಟು ಜನಸಂಖ್ಯೆ	೩,೭೧,೩೫,೭೧೪	೨,೪೧,೯೯,೪೭೬	೧೩,೯೧,೩೧೧	೨೯,೯೩,೫೦೧	೧೩,೮೫,೩೧೩	೫,೯೦,೭೦೯	೩೫,೧೨,೮೩	೧೬,೪೦,೭೩೮	೧೨,೧೨,೨೩೪

(ಕೆ.ವಿ.ನಾರಾಯಣ್ (ಸಂ) : ಭಾಷೆ : ವಿಶ್ವಕೋಶ, ಹಂಪಿ: ಸಾಂಬಮೂರ್ತಿ (ಲೇ) :ಕರ್ನಾಟಕ ಭಾಷಾ ಪರಿಸ್ಥಿತಿ : ಪ್ರ.ವ. ೨೦೦೭. ಪು.ಸಂ. ೩೭೭)

<u>೧೯೯೧ರ ಜನಗಣಪತಿಯ ಪ್ರಕಾರ ಕರ್ನಾಟಕದಲ್ಲಿ ವಿವಿಧ ಭಾಷೆಗಳನ್ನಾಡುವ ಶೇಕಡವಾರು ಅಂಕಿ ಅಂಶ :</u>

ಕನ್ನಡ	ಮರಾಠಿ	ತೆಲುಗು	ತಮಿಳು	ಮಲೆಯಾಳಂ	ಉರ್ದು	ಕೊಂಕಣಿ	ತುಳು	ಹಿಂದಿ	ಕೊಡವ
೬೪.೭೫%	೩.೯೫%	೮.೩೪%	೩.೮೨%	೧.೬೯%	೯.೭೨%	೧.೭೮%	೩.೩೮%	೧.೮೭%	೦.೨೫%

ಈ ಪಟ್ಟಿಯನ್ನು ಗಮನಿಸಿದಾಗ ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಿಗೂ ವಿವಿಧ ಭಾಷೆಗಳನ್ನು ಮಾತೃಭಾಷೆಗಳನ್ನಾಗಿ ಹೊಂದಿರುವ ಜನರನ್ನು ಕಾಣಬಹುದು.

ಬೇರೆ-ಬೇರೆ ಭಾಷೆಗಳಲ್ಲಿರುವ ಗ್ರಂಥಗಳನ್ನು ಅಭ್ಯಸಿಸಿ ಜ್ಞಾನ ಸಂಪಾದನೆ ಮಾಡಿಕೊಳ್ಳಲು, ಆ ಭಾಷಾ ಸಮುದಾಯದ ಸಂಸ್ಕೃತಿಯನ್ನು ಅರಿಯಲು, ವ್ಯವಹಾರ, ಸಾಮಾಜಿಕ ಕಾರ್ಯ, ಧರ್ಮಪ್ರಚಾರ, ಮುಂತಾದ ಕಾರಣಗಳಿಗಾಗಿ, ಪ್ರತಿಷ್ಠೆಗಾಗಿ, ಸಂಪರ್ಕ ಸಾಧಿಸಲು, ಆಸಕ್ತಿ ಕುತೂಹಲಗಳಿಂದ ನಾವು ಮತ್ತೊಂದು ಭಾಷೆಯನ್ನು ಕಲಿಯುತ್ತೇವೆ. ಸಾಂಸ್ಕೃತಿಕವಾಗಿ, ಪ್ರೇರಣಾತ್ಮಕವಾಗಿ, ಉಪಭಾಷೆಗಳ ಹಂತದಲ್ಲಿ, ಬೇರೆ ಭಾಷೆಯ ಪದಗಳು ನಮ್ಮ ಕನ್ನಡಕ್ಕೆ ಬಂದು ಸೇರುತ್ತವೆ. ವಿಜಯನಗರ ಸಾಮ್ರಾಜ್ಯ (ಸು.೧೩೩೬-೧೬೪೬) ಪತನಹೊಂದಿದ ಅನಂತರ ಕರ್ನಾಟಕದ ಹಲವು ಭಾಗಗಳು ಮುಸ್ಲಿಂ ಮತ್ತು ಮರಾಠರ ಆಳ್ವಿಕೆಗೆ ಒಳಪಟ್ಟವು. ಬಹಮನಿ (೧೩೪೭) ಸುಲ್ತಾನರು, ಬಿಜಾಪುರದ ಆದಿಲ್‌ಷಾಹಿಗಳು, ಭಾರತವನ್ನು ಆಳಿದರು ಈ ಸಂದರ್ಭದಲ್ಲಿ ಕನ್ನಡ ಭಾಷೆಯೂ ಆಡಳಿತ ಭಾಷೆಯಾಗಿತ್ತು. ಈ ಕಾಲದಲ್ಲಿ ಪಾರಿಸಿ, ಅರಬ್ಬಿ, ಮರಾಠಿ ಮತ್ತು ಕನ್ನಡಗಳು ಸೇರಿಕೊಂಡು 'ರೇಖ್ತಾ' ಎನ್ನುವ ಭಾಷೆ ಹುಟ್ಟಿತು. ಮುಂದೆ ಇದೇ ಉರ್ದು ಭಾಷೆಗೆ ಎಡೆಕೊಟ್ಟಿತು. ಈ ಸಂದರ್ಭದಲ್ಲಿ-ಅಸಲಿ, ನಕಲಿ, ಮೊಕದ್ದಮೆ, ಇನಾಂ, ಮೊಹರು, ಫೌಜು ಮುಂತಾದ ಪದಗಳು ಕನ್ನಡಕ್ಕೆ ಸೇರಿಹೋದವು.

೧೩೯೯-೧೯೪೭ರವರೆಗೆ ಮೈಸೂರು ಒಡೆಯರು ಆಳ್ವಿಕೆ ನಡೆಸಿದರು. ಇವರ ಕಾಲದಲ್ಲಿ ಆಡಳಿತ ಕನ್ನಡ ಮತ್ತಷ್ಟು ವಿಕಾಸವಾಯಿತು. ಚಿಕ್ಕದೇವರಾಯನ ಕಾಲದಲ್ಲಿ ಅಠಾರ ಕಛೇರಿ ಎಂಬ ಹಿಂದಿ ಮತ್ತು ಮರಾಠಿ ಮೂಲದ ಪದವು ಆಡಳಿತ ಕೇಂದ್ರದ ನಾಮವಾಗಿ ಬಂದು ಸೇರಿತು. ಟಿಪ್ಪು ಮತ್ತು ಹೈದರ್‌ನ ಕಾಲದಲ್ಲಿ ಮರಾಠಿ, ಪಾರ್ಸಿ ಪದಗಳಾದ ಅಮಲ್ದಾರ, ಶಿರಸ್ತೇದಾರ, ಗುಮಾಸ್ತ, ಮುಂತಾದ ಪದಗಳು ಕನ್ನಡದಲ್ಲಿ ಲೀನವಾದವು. ಸಂಸ್ಕೃತದಿಂದ ಪೃಥ್ವಿ, ಭಾಷೆ, ವೇದ, ಪುರಾಣ, ಮತ, ಔಷಧ, ಜೀವನ ಮುಂತಾದ ಪದಗಳು ಬಂದು ಸೇರಿವೆ. ಹಿಂದಿಯಿಂದ ದಾಖಲೆ, ಜನಾಬ್, ದಾವ, ಪೈಸಾ ಮುಂತಾದ ಶಬ್ದಗಳು ಕನ್ನಡಕ್ಕೆ ಬಂದು ಸೇರಿದವು.

ಕನ್ನಡವನ್ನು ಉಳಿಸಿ-ಬೆಳೆಸಿ ಹಾಗೂ ಬಳಸುವುದು ಕನ್ನಡಿಗರ ಆಧ್ಯಕರ್ತವ್ಯ. ಸರ್ಕಾರ ಈ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ೧೯೬೩ರಲ್ಲಿ ಕನ್ನಡ ಆಡಳಿತ ಭಾಷೆ ಎಂದು ಘೋಷಿಸಿತು. ೧೯೭೦, ನವೆಂಬರ್ ೧ರಲ್ಲಿ ಕನ್ನಡವನ್ನು ಎಲ್ಲಾ ಜಿಲ್ಲೆಗಳ ಉಪವಿಭಾಗ ಕಛೇರಿಗಳಲ್ಲೂ ಬಳಸಬೇಕು ಎಂದು ನಿಯಮ ತರಲಾಯಿತು. ಹಾಗೂ ೧೯೭೧ರಲ್ಲಿ ಸಿವಿಲ್ ನ್ಯಾಯಾಲಯದಲ್ಲೂ ಕನ್ನಡ ಬಳಸಬೇಕು ಎಂದು ನಿಯಮತರಲಾಯಿತು. ಹಾಗೂ ೧೯೭೧ರಲ್ಲಿ ಸಿವಿಲ್ ನ್ಯಾಯಾಲಯದಲ್ಲೂ ಕನ್ನಡ ಬಳಸಬೇಕು ಎಂಬ ನಿಯಮ ಬಂದಿತು. ಪ್ರಾಥಮಿಕ ಹಂತದಲ್ಲಿ ಮಾತೃಭಾಷಾ ಶಿಕ್ಷಣವನ್ನು ಕಡ್ಡಾಯಗೊಳಿಸಲಾಯಿತು. ಕನ್ನಡೇತರರಿಗೂ ಐದರಿಂದ ಏಳನೇತರಗತಿಯವರೆಗೆ ಕನ್ನಡ ಅಧ್ಯಯನ ಕಡ್ಡಾಯವಾಯಿತು. ಕನ್ನಡವನ್ನು ಪ್ರಥಮ, ದ್ವಿತೀಯ, ತೃತೀಯ ಪತ್ರಿಕೆಯಾಗಿ ತೆಗೆದುಕೊಂಡು ಉತ್ತೀರ್ಣರಾದರೇ ಆ ಹಂತದ

ವಿದ್ಯಾಭ್ಯಾಸಕ್ಕೆ ಮನ್ನಣೆ ಇದ್ದಿತು. ಸಮೂಹ ಮಾಧ್ಯಮಗಳಾದ ಆಕಾಶವಾಣಿ, ದೂರದರ್ಶನ, ದಿನಪತ್ರಿಕೆ ಮುಂತಾದ ಕಡೆಗಳಲ್ಲಿ ಅವಧಿಯನ್ನು ನಿರ್ಧರಿಸುವಾಗ ಪುಟ್ಟಸಂಖ್ಯೆ ನಿರ್ಧರಿಸುವಾಗ ಕನ್ನಡಕ್ಕೆ ಅಗ್ರಸ್ಥಾನ ನೀಡಲಾಯಿತು. ಕನ್ನಡ ಸಂಸ್ಕೃತಿ ಹಾಗೂ ಭಾಷಾ ಅಭಿವೃದ್ಧಿಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಬ್ರಿಟಿಷರು ಭಾರತದಲ್ಲಿ ಸುಮಾರು ಇನ್ನೂರು ವರ್ಷಗಳ ಕಾಲ ಆಳ್ವಿಕೆನಡೆಸಿದರು. ಇವರ ಆಳ್ವಿಕೆಯ ಕಾಲದಲ್ಲಿ ಆಯಾ ರಾಜ್ಯದಲ್ಲಿ ಆಯಾ ಭಾಷೆಗಳೇ ವ್ಯವಹಾರಿಕ ಭಾಷೆಗಳಾಗಿದ್ದವು. ಆಗ ಕನ್ನಡ ಭಾಷೆಗೆ ಹಲವಾರು ಇಂಗ್ಲೀಷ್, ಪೋರ್ಚುಗೀಸ್ ಪದಗಳು ಸೇರಿದವು. ಇದನ್ನು ಆರಂಭದಿಂದಲೇ ಚರ್ಚಿಸಲಾಗಿದೆ. ಇಂತಹ ಪದಗಳಿಗೆ ಕನ್ನಡದ ಪಾರಿಭಾಷಿಕ ಪದಗಳನ್ನು ಹೊಂದಿಸುವ ಕಾರ್ಯವೂ ನಡೆಯುತ್ತದೆ.

ಒಟ್ಟಾರೇ ಈ ಎಲ್ಲಾ ಚರ್ಚೆಗಳಿಂದ ತಿಳಿಯುವ ಮುಖ್ಯವಾದ ಅಂಶವೆಂದರೇ ಕನ್ನಡ ಒಂದು ಸ್ವತಂತ್ರ ಭಾಷೆ, ಇದು ಹಲವಾರು ಪ್ರಭಾವಶಾಲಿ ಭಾಷೆಗಳೊಡನೆ ಸೆಣಸುತ್ತಾ ಸಾವಿರಾರು ವರ್ಷಗಳಿಂದ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿದೆ. ಕಾಲಕ್ಕನುಗುಣವಾಗಿ ಕನ್ನಡದ 'ಪದಕೋಶ' ವಿಕಾಸವಾಗುತ್ತ, ಬದಲಾಗುತ್ತಾ ಬಂದಿದೆ. ಆದರೇ ವ್ಯಾಕರಣಾಂಶದಲ್ಲಿ ಗುರುತರವಾದ ವ್ಯತ್ಯಾಸಗಳಿಲ್ಲ. ಇಂದು ಇಂಗ್ಲೀಷ್ ಭಾಷೆ ಕನ್ನಡ ಭಾಷೆಯ ಮೇಲೆ ಯಜಮಾನಿಕೆಯ ಧೋರಣೆ ತಾಳಿದೆ. ಇದಕ್ಕೆ ನಮ್ಮ ಆಧುನಿಕ ತಂತ್ರಜ್ಞಾನ, ಜಾಗತೀಕರಣವೇ ಪ್ರಮುಖ ಕಾರಣ. ಈ ಎಲ್ಲಾ ಅಂಶಗಳು ಸ್ಪಷ್ಟವಾದ ಮೇಲೆ ಶುದ್ಧ ಕನ್ನಡ ಎಂಬುದರ ಬಗೆಗೆ ನಮ್ಮ ನಿಲುವು ಬೇರೆಯೇ ಆಗುತ್ತದೆ.

ಭಾಷೆಯಿಂದಾಗುವ ಪ್ರಯೋಜನ:

ಭಾಷೆಯ ಅಗತ್ಯ ನಿಮಗಿದೆಯೇ ಎಂಬ ಪ್ರಶ್ನೆಯನ್ನು ಯಾರಾದರು ಕೇಳಿದರೇ ನಾವು ಅದನ್ನು ಪ್ರಶ್ನೆ ಎಂದು ಪರಿಗಣಿಸುವುದಿಲ್ಲ. ಏಕೆಂದರೇ ನಿಮಗೆ ಉಸಿರಾಡುವ ಅಗತ್ಯವಿದೆಯೇ ಎಂಬ ಪ್ರಶ್ನೆಯನ್ನು ಕೇಳಿದಾಗ ಹೇಗೆ ಸುಮ್ಮನಾಗುತ್ತೇವೆಯೋ ಹಾಗೆ ತಟಸ್ಥರಾಗಿ ಬಿಡುತ್ತೇವೆ. ಇಂತಹ ಪ್ರಕ್ರಿಯೆಗೆ ಕಾರಣ ಭಾಷೆ ಇಂದು ನಮ್ಮ ಜೀವನದ ಅತ್ಯಮೂಲ್ಯ ಅಂಗವಾಗಿದೆ. ಭಾಷೆಯನ್ನು ಕಲಿಯದಿದ್ದರೆ ಮೂಕರೆಂದು ವಿಕಲ ಚೇತನರ ಗುಂಪಿಗೆ ಸೇರಿಸುವುದನ್ನು ನಾವು ಈ ಸಂದರ್ಭದಲ್ಲಿ ಮರೆಯುವಂತಿಲ್ಲ.

ಸಮಾಜದಲ್ಲಿ ವ್ಯಕ್ತಿ ತನ್ನಷ್ಟಕ್ಕೆ ಸರ್ವಸ್ವತಂತ್ರನಾಗಿರದೆ ಆಯಾ ಸಮುದಾಯದ ಅವಿಚ್ಛಿನ್ನ ಘಟಕವಾಗಿರುತ್ತಾನೆ. ''ವ್ಯಕ್ತಿಯ ದೈನಂದಿನ ವ್ಯವಹಾರಗಳಿಗೆ ಭಾವನೆ, ಆಲೋಚನೆ, ಅಭಿಪ್ರಾಯಗಳ ಅಭಿವ್ಯಕ್ತಿಗೆ, ಶಿಕ್ಷಣ ಮತ್ತು ಆಡಳಿತ ವ್ಯವಹಾರಗಳಿಗೆ, ಸಂಸ್ಕೃತಿ ಬೆಳವಣಿಗೆ ಮತ್ತು ಪ್ರಸಾರಕ್ಕೆ ರಾಷ್ಟ್ರೀಯ ಮತ್ತು ಭಾವನಾತ್ಮಕ ಐಕ್ಯತೆಗೆ, ಸಾಹಿತ್ಯ ಮತ್ತು ಕಲೆಯ ಬೆಳವಣಿಗೆಗೆ, ವಿಜ್ಞಾನ ಮತ್ತು ಸಂಶೋಧನೆಗಳ ವಿಕಾಸಕ್ಕೆ ಜ್ಞಾನಾರ್ಜನೆಗಾಗಿ, ವ್ಯಕ್ತಿತ್ವದ ವಿಕಾಸಕ್ಕೆ, ಆಧುನಿಕ ಜಗತ್ತಿನ ವಿದ್ಯಾಮಾನಗಳನ್ನು ತಿಳಿಯಲು, ಆಧುನಿಕ ಜೀವನ ಶೈಲಿಗೆ ಹೊಂದಿಕೆಯಾಗಲು, ಮಾಹಿತಿ ಮತ್ತು ಜ್ಞಾನವನ್ನು ದಾಖಲು ಮಾಡಲು, ಬೋಧನ ಪ್ರದವಾಗಿ, ಕ್ರಿಯಾತ್ಮಕವಾಗಿ, ಪರ್ಯಾತ್ಮಕವಾಗಿ ಭಾಷೆ ಕಾರ್ಯನಿರ್ವಹಿಸುತ್ತದೆ''.[೧] ಅಂದರೇ

೧. ಅನುಸೂಯ.ವಿ.ಪರಂಗಿ:ಮಾತೃಭಾಷೆಯ ಸಾಮಾನ್ಯ ತತ್ವಗಳು :ಪ್ರ.ವ.:೨೦೦೦:ಪು.ಸಂ. ೩೫

ಸರ್ವಕ್ಷೇತ್ರಗಳಿಗೂ ಭಾಷೆ ಅಗತ್ಯವಾಗಿ ಬೇಕು.

ಭಾಷೆ ಉಪಯೋಗಗಳು ಅನಂತ. ಭಾಷೆ ಮನುಷ್ಯನ ಜೀವನವನ್ನು ಬೆಳಗಿಸುವ ದೀಪ, ಭಾಷಿಸಲು ಅಸಕ್ತರಾದವರು ತಮ್ಮ ಜೀವನದಲ್ಲಿ ಅತಿ-ಮುಖ್ಯವಾದದ್ದನ್ನು ಕಳೆದುಕೊಂಡಂತೆಯೇ, ಭಾಷೆ ಮಾನವನ ಅನುಭವವನ್ನು ಪರಸ್ಪರ ಅಭಿವ್ಯಕ್ತಿಸಲು ಇರುವ ಸಂವಹನ ಮಾಧ್ಯಮ. ಕುವೆಂಪು ಅವರು ಬಳಸಿದ ಮಾತಿನಲ್ಲಿ ಹೇಳುವುದಾದರೇ ಭಾಷೆ ಇಂತಹ ಕಡೆಗಳಲ್ಲಿ 'ಲೋಕೋಪಯೋಗಿ'. ಭಾಷೆಯಲ್ಲಿ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥಗಳಿರುತ್ತವೆ. ಭಾಷೆ ಆರಂಭದಲ್ಲಿ ವಾಚ್ಯಾರ್ಥವನ್ನು ಸ್ಫುರಿಸುತ್ತದೆ. ಲಕ್ಷ್ಯಾರ್ಥ ಹಾಗೂ ವ್ಯಂಗ್ಯಾರ್ಥಗಳನ್ನು ಗ್ರಹಿಸಲು ಆ ಭಾಷೆಯ ಬಗೆಗೆ ಹೆಚ್ಚಿನ ಅರಿವು ಇರಬೇಕು. ಭಾಷೆ ಕೇವಲ ಭಾವನೆಗಳ ಅಭಿವ್ಯಕ್ತಿಗೆ ಮಾತ್ರ ಸೀಮಿತವಾಗಿಲ್ಲ. ಭಾವೋಪಯೋಗಿಯಾಗಿಯೂ ಇದೆ. ಉದಾ: ರೈಲಿಗಾಗಿ ಕಾಯುವಾಗ ಅದು ಎರಡು-ಮೂರು ಗಂಟೆ ತಡವಾಗಿ ಬರುತ್ತದೆ ಎಂದಾದರೇ, ಆ ಸಂದರ್ಭದಲ್ಲಿ ಹಸಿವು ಹೆಚ್ಚಿದ್ದರೆ, ನಮ್ಮ ಬಳಿ ಹೆಚ್ಚಿಗೆ ಹಣವೂ ಇಲ್ಲದಿದ್ದರೆ ನಾವು ಕೋಪ, ದುಃಖ, ಉದ್ವೇಗಕ್ಕೆ ಒಳಗಾಗುತ್ತೇವೆ. ಈ ಉದ್ವೇಗದ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಲು, ಮಾನಸಿಕ ಒತ್ತಡದಿಂದ ಹೊರಬರಲು ನಾವು ಆ ರೈಲಿಗೆ ಶಾಪ ಹಾಕುತ್ತೇವೆ. ಇಲ್ಲಿ ನಮಗೆ ರೈಲಿನ ಮೇಲೆ ಇರುವ ಕೋಪ ಯಾರೊಡನೆಯು ಸಂವಹನಗೊಳ್ಳುವುದಿಲ್ಲ, ಅದು ಸ್ವತಃ ನಾವೇ ನಮ್ಮೊಡನೆ ಮಾಡಿಕೊಂಡ ಭಾವೋಪಯೋಗಿಯಾಗಿರುತ್ತದೆ. ಅಂದರೇ ಭಾಷಾ ಮನುಷ್ಯವನ್ನು ಎಲ್ಲಾ ಹಂತಗಳಲ್ಲೂ ನಿಯಂತ್ರಿಸುತ್ತಿರುತ್ತದೆ ಎಂಬುದು ಸ್ಪಷ್ಟ.

ಮಾನವನ ಜೀವನ ಸುಗಮವಾಗಿ ಸಾಗಲು ಭಾಷೆ ಅವಶ್ಯಕ. ಇದು ಮನುಷ್ಯನ ಮನಸ್ಸನ್ನು ಪ್ರಕಾಶಪಡಿಸುವ ಸಾಧನಗಳಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ. ಆಂಗಿಕವಾದ ಸಂಜ್ಞೆಗಳ ಮೂಲಕ ಕೆಲವು ವೇಳೆ ಮನಸ್ಸಿನ ಭಾವನೆಗಳನ್ನು ವ್ಯಕ್ತ ಪಡಿಸುವುದುಂಟು. ಮೂಕರಂತೂ ಇಂತಹ ನೂರಾರು ಸಂಜ್ಞೆಗಳನ್ನು ವ್ಯಕ್ತಪಡಿಸುವುದುಂಟು. ಇವುಗಳು ತಮ್ಮದೇ ಆದ ಮಿತಿಯನ್ನು ಹೊಂದಿವೆ. ಮಾತು ಬಾರದ ಒಬ್ಬ ವ್ಯಕ್ತಿಗೆ ಬಾಯಾರಿಕೆಯಾಗಿದ್ದರೆ ಆತ ಸರಳವಾಗಿ ಆಂಗಿಕ ಸಂಜ್ಞೆಗಳ ಮೂಲಕ ತೋರಿಸಬಲ್ಲ. ಆದರೇ ಆತನಿಗೆ ಸಕ್ಕರೆ ಕಡಿಮೆ ಇರುವ, ಹಾಲು ಕಡಿಮೆ ಇರುವ ಆಹ್ಲಾದಕರವಾದ ಕಾಫಿ ಬೇಕು ಎಂದಾಗ ಆತ ಈ ಎಲ್ಲಾ ಬಯಕೆಗಳನ್ನು ತನ್ನ ಸಂಜ್ಞೆಗಳ ಮೂಲಕ ತೋರಿಸಲು ವಿಫಲವಾಗುತ್ತಾನೆ. ಇದರಿಂದ ಮಾನವನ ಸುಗಮ ಜೀವನ ನಿರ್ವಹಣೆಯಲ್ಲಿ ಭಾಷೆ ಎಷ್ಟು ಮಹತ್ವದ್ದು ಎಂಬುದು ಅರಿವಾಗುತ್ತದೆ.

ಭಾಷೆಯು ವ್ಯಕ್ತಿ-ವ್ಯಕ್ತಿಗಳ ನಡುವೆ ಸೌಹಾರ್ದತೆಯನ್ನು ಕಾಪಾಡಲು ಸಹಾಯಕವಾಗಿದೆ. ಭಾಷೆಯಿಂದ ಮಾನವನ ಸಮೂಹದಲ್ಲಿ ಅನೇಕ ವರ್ಗಗಳು ಸೃಷ್ಟಿಯಾಗುತ್ತವೆ. ಈ ವರ್ಗಗಳ ನಡುವೆ ವ್ಯವಹಾರ ನಡೆಸಲು ಹಾಗೂ ವಿಭಿನ್ನ ವರ್ಗಗಳನ್ನು ಒಂದು ಗೂಡಿಸಲು ಭಾಷೆಯ ನೆರವು ಬೇಕು. ವಿವಿಧ ದೇಶಗಳ ನಡುವೆ ಸಂಪರ್ಕ ಸ್ನೇಹ, ಕಾಯ್ದುಗೊಳ್ಳಲು, ಅವುಗಳ ನಡುವೆ ಆರ್ಥಿಕ, ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ, ವಾಣಿಜ್ಯ ಕಾರಣಗಳಿಗಾಗಿ ಸಂಪರ್ಕವಿಟ್ಟುಕೊಳ್ಳಲು ಭಾಷೆ ನೆರವಾಗುತ್ತದೆ. ಇಷ್ಟೇ ಅಲ್ಲದೆ ಭಾಷೆ ಮನುಷ್ಯನ ಆಲೋಚನೆಯ ಸಾಧನವಾಗಿದೆ. ಬುದ್ಧಿಜೀವಿಯಾದ ಮಾನವ ಒಂದು ನಿಮಿಷವೂ ಯಾವ

ಆಲೋಚನೆಯು ಇಲ್ಲದೆ ಕ್ಷಣಕಾಲವೂ ಇರಲಾರ. ಆತ ನಿರಂತರವಾಗಿ ವಿಚಾರಮಗ್ನನಾಗಿರುತ್ತಾನೆ. ಮನುಷ್ಯರು ಚಿಂತಿಸುವಾಗ ಕೆಲವೊಮ್ಮೆ ಧ್ವನಿ ಉಚ್ಚಾರವಾಗುತ್ತದೆ. ಕೆಲವೊಮ್ಮೆ ಕೈಕಾಲುಗಳು ಚಲಿಸುತ್ತವೆ. ಕೆಲವೊಮ್ಮೆ ತುಟಿಯು ಚಲಿಸುತ್ತದೆ. ಇದಕ್ಕೆ ಕಾರಣ ಆಲೋಚನೆಯ ಒತ್ತಡ, ಅಂದರೇ ಮನುಷ್ಯ ಯೋಚಿಸುವಾಗ ಆತ ಬಳಸಿಕೊಳ್ಳುವುದೇ ಭಾಷೆಯನ್ನಲ್ಲವೆ?

ಭಾಷೆ ಸಮಾಜದ ಉನ್ನತಿಗೆ ಅವಶ್ಯವಾದ ಮಾಹಿತಿಯನ್ನು ತಲೆಮಾರಿನಿಂದ, ತಲೆಮಾರಿಗೆ ವ್ಯವಸ್ಥಿತವಾಗಿ ದಾಟಿಸುತ್ತಿರುತ್ತವೆ. ಸಾವಿರಾರು ವರ್ಷಗಳಿಂದ ಒಂದು ಸಮಾಜ ಹೇಗೆ ಬೆಳೆದುಕೊಂಡು ಬಂದಿದೆ, ಹೇಗೆ ಬದಲಾಗಿದೆ ಎಂಬುದನ್ನು ತಿಳಿಯಬೇಕಾದರೆ ಭಾಷೆಯ ಸಹಾಯ ಅಪಾರವಾಗಿರುತ್ತದೆ. ಹಿಂದೆ ಇದ್ದ ತ್ಯಾಗ, ಬಲಿದಾನ, ಉದಾತ್ತಾಧ್ಯೇಯ, ಸಂಸ್ಕೃತಿಗಳ ಪ್ರಸಾರ, ಹಾಗೂ ಅವುಗಳ ಅರಿವು ಇಂದಿಗೂ ನಮ್ಮಲ್ಲಿ ಇರುವುದಕ್ಕೆ ಕಾರಣ ಭಾಷೆ. ಉದಾ: ಸ್ವಾತಂತ್ರ್ಯಕ್ಕಾಗಿ ಹೋರಾಡಿ ಭಾರತಕ್ಕೆ ಸ್ವತಂತ್ರ ತಂದುಕೊಟ್ಟ ಗಾಂಧಿ ಮಹಾತ್ಮರ ಬಗ್ಗೆ ನಾವು ಅರಿಯಲು ಭಾಷೆಯೇ ಕಾರಣ. ಅದಕ್ಕೂ ಹಿಂದೆ ದೇಶ ರಕ್ಷಣೆಗಾಗಿ ಹೋರಾಡಿ ಮಡಿದ ಯೋಧರ ಪತ್ನಿಯರ ಸಹಗಮನ ಮಾಡುತ್ತಿದ್ದರು. ಇದು ನಮ್ಮ ಸಂಸ್ಕೃತಿಯ ಆಚರಣೆಯ ಭಾಗವಾಗಿತ್ತು ಎಂಬುದನ್ನು ಇಂದು ನಾವು ತಿಳಿಯಲು ಕಾರಣವೇ ಭಾಷೆ.


'ಮಾತು ಆಡಿದರೆ ಹೊಯ್ತು, ಮುತ್ತು ಹೊಡೆದರೆ ಹೊಯ್ತು, ಮಾತು ಮಾಣಿಕ್ಯದಂತಿರಬೇಕು, ನುಡಿದರೆ ಮುತ್ತಿನ ಹಾರದಂತಿರಬೇಕು, ಮಾತೇ ಮುತ್ತು, ಮಾತೇ ಮಿತ್ತು' ಎಂಬ ನುಡಿಗಟ್ಟುಗಳನ್ನು ಗಮನಿಸಿದರೆ ಭಾಷೆ ಮಾನವನ ವ್ಯಕ್ತಿತ್ವವನ್ನು ಪ್ರತಿ ಬಿಂಬಿಸುತ್ತದೆ ಎಂಬುದು ಸತ್ಯ. ಮನುಷ್ಯ ಜ್ಞಾನಿಯಾಗಬೇಕಾದರೆ ಭಾಷೆ ಅತ್ಯಗತ್ಯ, ತತ್ತ್ವಜ್ಞಾನಿಯ ಚಿಂತನೆ, ರಾಜಕಾರಣಿಯ ವಿವಿಧ ತಂತ್ರಗಳು, ಸಾಹಿತಿಯ ಕೃತಿನಿರ್ಮಾಣ, ವಿಜ್ಞಾನಿಯ ವಿಚಾರಧಾರೆ, ಇವೆಲ್ಲ ಭಾಷೆಯ ಮೂಲಕವೇ ಅಭಿವ್ಯಕ್ತಿ ಪಡೆಯುತ್ತವೆ. ಭಾಷೆ ಮಾನವನ ಅತ್ಯಮೂಲ್ಯ ಆಸ್ತಿಗಳಲ್ಲಿ ಒಂದು. ಪ್ರಾಣಿ ಮತ್ತು ಮನುಷ್ಯನನ್ನು ಬೇರ್ಪಡಿಸುವುದೇ ಭಾಷೆ. ಭಾಷೆ ಸಮೂಹದ ಭಾಗಿಯಾಗಿರುತ್ತದೆ. ಸಮಾಜದಿಂದ ಭಾಷೆ ಕಲಿತರೂ ಸಮಾಜ ಕ್ರಿಯಾಶೀಲವಾಗಲು ಅಲ್ಲಿನ ಭಾಷೆಯೇ ಕಾರಣವಾಗಿರುತ್ತದೆ. ಭಾಷೆಯು ಸಾಮಾಜಿಕ ಹೊಣೆಯನ್ನು ಹೊತ್ತಿರುತ್ತದೆ.

ಹೀಗೆ ಭಾಷೆಯ ಉಪಯೋಗಗಳು ಅಷ್ಟಿಷ್ಟಲ್ಲ. ಮನುಷ್ಯ ಸ್ವಪ್ರಯತ್ನದಿಂದ ಕಲಿತ ಭಾಷೆ ಇಂದು ಅವನ ವ್ಯಕ್ತಿತ್ವವನ್ನು ರೂಪಿಸುವ, ನಿಯಂತ್ರಿಸುವ ಹಂತಕ್ಕೆ ಬೆಳೆದು ನಿಂತಿದೆ. ಭಾಷೆಯಿಲ್ಲದ ಮನುಷ್ಯನೆ ಇಲ್ಲ. ಮೂಕರೂ ತಮ್ಮ ಮನದಲ್ಲಿ ಭಾಷೆಯನ್ನು ಕಟ್ಟಿಕೊಂಡಿರುತ್ತಾರೆ. ಭಾಷೆ ಒಂದು ಸಾರ್ವತ್ರಿಕ ಪ್ರಕ್ರಿಯೆ. ಸಮಾಜದಲ್ಲಿ ನಡೆಯುವ ಒಳಿತನ್ನು ಪ್ರಶಂಸಿಸುವ ಹಾಗೂ ಕೆಡಕುಗಳನ್ನು ವಿರೋಧಿಸುವ ಶಕ್ತಿ ಭಾಷೆಯಾಗಿದೆ

ಸಮಾರೋಪ : ಭಾಷಾ ಲೋಕವನ್ನು ಅರಿಯುವುದು ಭಾಷಿಕರೆಲ್ಲರ ಆದ್ಯಕರ್ತವ್ಯ. ಭಾಷೆಯು ತನ್ನದೇ ಆದ ಸ್ವಭಾವ, ರೂಪ, ಅಂಗ, ವ್ಯಾಪ್ತಿಯನ್ನು ಹೊಂದಿದೆ. ಭಾಷೆ ಬದುಕಿನ ಭಾಗ ಎಂದಮೇಲೆ ಅದರ ಮಹತ್ವ, ಉಪಯೋಗ ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಭಾಷೆಯು ಭೌಗೋಳಿಕ ವಲಯ, ರಾಜಕೀಯ, ಜನಾಂಗ, ಸಮಾಜದ ರಚನೆ ಇತ್ಯಾದಿಗಳ ಆಧಾರದ ಮೇಲೆ ವ್ಯಕ್ತಿ ಭಾಷೆಯಾಗಿ ದ್ವಿಸ್ತರದಲ್ಲಿ ನಿಲ್ಲುತ್ತದೆ. ಉಪಭಾಷೆಗಳಾಗಿ ಸಾಮಾಜಿಕ, ಪ್ರಾದೇಶಿಕ ವಲಯಗಳಲ್ಲಿ ವಿಹರಿಸುತ್ತದೆ. ಪ್ರಮಾಣೀಕೃತವಾಗಿ, ಅಧಿಕೃತವಾಗಿ, ಶಿಷ್ಟ ಭಾಷೆಯ ಸ್ವರೂಪವನ್ನು ತಾಳಿದೆ. ಧ್ವನಿ, ಧ್ವನಿಮಾ, ಆಕೃತಿಮಾ, ವಾಕ್ಯ ಇವುಗಳನ್ನು ಕುರಿತ ವೈಜ್ಞಾನಿಕ ವಿವೇಚನೆಯಿಂದ ಭಾಷಾ ವಿಜ್ಞಾನ ಶಾಖೆಯೇ ಶೈಕ್ಷಣಿಕ, ಸಂಶೋಧನ ವಲಯಗಳಲ್ಲಿ ನೆಲೆಯನ್ನು ಗಿಟ್ಟಿಸಿದೆ. ಭಾಷೆಯು ಸಾಹಿತ್ಯ, ಸಮಾಜ, ಸಂಸ್ಕೃತಿ, ಭಾಷಾಂತರ ಮುಂತಾದವುಗಳ ಅಸ್ತಿತ್ವಕ್ಕೆ ಬೆಳವಣಿಗೆಗೆ ಕಾರಣವಾಗಿದೆ. ಆದ್ದರಿಂದ ಪ್ರಸ್ತುತದಲ್ಲಿ ಭಾಷೆ ಅಂತರ್ ಶಿಸ್ತೀಯ ಅಧ್ಯಯನಕ್ಕೆ ಒಳಪಟ್ಟಿದೆ.

ಭಾಷೆಯನ್ನು ಕುರಿತು ಮಾತನಾಡುವಾಗ ನಾವು ಭಾಷೆಯನ್ನೇ ಬಳಸುತ್ತೇವೆ. ಮಾತು ಮಾಣಿಕ್ಯ, ಮಾತು ಬಲ್ಲವ ಜಗವನ್ನೇ ಗೆಲ್ಲುವ, ಭಾಷೆ ಮಾನವನನ್ನು ಕ್ರಿಯಾ ಶೀಲನನ್ನಾಗಿಸುತ್ತದೆ. ಸ್ವತಃ ಭಾಷೆ ಮಾನವನ ಚಟುವಟಿಕೆಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ಭಾಷೆ ಒಂದು ಪರಿಕಲ್ಪನೆ, ವ್ಯಕ್ತಿ ಭಾಷೆ, ಉಪಭಾಷೆ, ಪ್ರಮಾಣ ಭಾಷೆ ಎಂಬ ರೂಪಗಳನ್ನು ಹೊಂದಿರುವ ಪ್ರಕ್ರಿಯೆ. ಧ್ವನಿ, ಧ್ವನಿಮಾ, ಆಕೃತಿಮಾ ವಾಕ್ಯಗಳೆಂಬ ಅಂಗಗಳುಳ್ಳ ವಿಜ್ಞಾನ ಹಾಗೂ ಸಾಹಿತ್ಯ, ಸಮಾಜ, ಸಂಸ್ಕೃತಿ ಮುಂತಾದ ನೆಲೆಗಟ್ಟಿನಲ್ಲಿ ಚರ್ಚಿತವಾಗುವ ಅಂತರ ಶಿಸ್ತೀಯ ಅಧ್ಯಯನ ಹಾಗೂ ಮನುಕುಲದ ಜೀವಿತದ ಅವಧಿಯಲ್ಲಿ ಅನುಸ್ಯೂತವಾಗಿ ಚರ್ಚೆಯಾಗುವ ವಿಶಿಷ್ಟ ಜ್ಞಾನ ಶಾಖೆಯಾಗಿದೆ. ಎಷ್ಟು ವಿಶಾಲವೂ, ಅಷ್ಟೇ ವ್ಯಾಪಕವೂ ಆದ ಭಾಷೆ ಮಾನವ ಜೀವಿತದಲ್ಲಿ ಪ್ರತ್ಯೇಕಿಸಲಾಗದಂತೆ ಬೆರೆತು ಹೋಗಿದೆ.

ಅನುಬಂಧ



ಪರಾಮರ್ಶನ ಗ್ರಂಥಗಳು

೧. ಅನುಸೂಯ ವಿ. ಪರಗಿ — ಮಾತೃ ಭಾಷೆಯ ಸಾಮಾನ್ಯ ತತ್ತ್ವಗಳು (೨೦೦೦)

೨. ಕುಶಾಲಪ್ಪಗೌಡ ಕೆ. — ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ : ಪ್ರಸಾರಾಂಗ : ಮೈಸೂರು ವಿಶ್ವವಿದ್ಯಾನಿಲಯ (೧೯೮೬)

೩. ಕುಶಾಲಪ್ಪಗೌಡ ಕೆ. — ಕನ್ನಡ ಸಂಕ್ಷಿಪ್ತ ವ್ಯಾಕರಣ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ:ಹಂಪಿ (೨೦೦೭)

೪. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂ.) — ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾ ಮಂಜರಿ : ಪ್ರಸಾರಾಂಗ : ಮೈಸೂರು ವಿಶ್ವವಿದ್ಯಾನಿಲಯ (೧೯೯೮)

೫. ಕೃಷ್ಣಯ್ಯ ಎಂ.ಎಚ್. — ಸಂಕ್ಷಿಪ್ತ ಕನ್ನಡ ಭಾಷಾ ಚರಿತ್ರೆ : ಸುವಿದ್ಯಾ ಪ್ರಕಾಶನ : ಬೆಂಗಳೂರು : (೧೯೯೩)

೬. ಕೃಷ್ಣಸ್ವಾಮಿ ಅಯ್ಯಂಗಾರ್ ಎಚ್.ಎಸ್. — ಆಡಳಿತ ಕನ್ನಡ : ಪ್ರಕಟಣೆ : ಚೇತನಾ ಬುಕ್ ಹೌಸ್ : ಮೈಸೂರು (೧೯೯೪)

೭. ಕೆಂಪೇಗೌಡ ಕೆ. — ಸಾಮಾನ್ಯ ಭಾಷಾ ವಿಜ್ಞಾನ : ಪ್ರಸಾರಾಂಗ: ಮೈಸೂರು ವಿಶ್ವವಿದ್ಯಾನಿಲಯ (೧೯೯೬)

೮. ಚಿದಾನಂದ ಮೂರ್ತಿ ಎಂ. — ಭಾಷಾ ವಿಜ್ಞಾನದ ಮೂಲತತ್ವಗಳು : ಡಿ.ವಿ.ಕೆ. ಮೂರ್ತಿ ಪ್ರಕಾಶನ : ಮೈಸೂರು (೧೯೯೮)

೯. ತಪಸ್ವಿಕುಮಾರ್ ನಂ. — ಸಂಸ್ಕೃತಿ ವಿಕಾಸ (೧೯೯೫)

೧೦. ನರಸಿಂಹಾಚಾರ್ ಡಿ.ಎಲ್. (ಸಂ.) — ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ : ಡಿ.ವಿ.ಕೆ. ಮೂರ್ತಿ : ಪ್ರಕಾಶಕರು : ಮೈಸೂರು (೨೦೦೧)

೧೧. ನಾಗರಾಜ್ ಡಿ.ಆರ್. — ಅಮೃತ ಮತ್ತು ಗರುಡ : ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ಕರ್ನಾಟಕ (೨೦೦೩)

೧೨. ನಾರಾಯಣ ಕೆ.ವಿ. — ಬೇರು ಕಾಂಡ ಚಿಗುರು : ವಿವೇಕ ಪ್ರಕಾಶನ : ಬೆಂಗಳೂರು (೧೯೯೭)

೧೩. ನಾರಾಯಣ ಕೆ.ವಿ. — ಕನ್ನಡ ಜಗತ್ತು ಅರ್ಧಶತಮಾನ : ಪ್ರಸಾರಾಂಗ : ಕನ್ನಡ ವಿಶ್ವವಿದ್ಯಾಲಯ: ಹಂಪಿ (೨೦೦೭)

೧೪. ನಾರಾಯಣ ಕೆ.ವಿ. (ಸಂ.) — ಭಾಷೆ : ವಿಶ್ವಕೋಶ : ಪ್ರಸಾರಾಂಗ : ಕನ್ನಡ ವಿಶ್ವವಿದ್ಯಾಲಯ : ಹಂಪಿ (೨೦೦೭)

೧೫. ಪುಟ್ಟಪ್ಪ ಕೆ.ವಿ. (ಸಂ.) — ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ : ಪ್ರಸಾರಾಂಗ: ಮೈಸೂರು ವಿಶ್ವವಿದ್ಯಾನಿಲಯ (೨೦೦೪)

೧೬. ಪ್ರಧಾನ್ ಗುರುದತ್ತ — ಭಾಷಾಂತರ ಕಲೆ : ಪ್ರಕಾಶನ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ : ಮೈಸೂರು (೨೦೦೦)

೧೭. ಬಿಳಿಗಿರಿ ಎಚ್.ಎಸ್. — ವರ್ಣನಾತ್ಮಕ ವ್ಯಾಕರಣ (೧೯೭೦)

೧೮. ಮಹಾದೇವಯ್ಯ ಪಿ. — ಸಾಮಾಜಿಕ ಉಪಭಾಷೆ : ಪ್ರಸಾರಾಂಗ : ಕನ್ನಡ ವಿಶ್ವವಿದ್ಯಾಲಯ : ಹಂಪಿ (೨೦೦೦)

೧೯. ಮುಗಳಿ ರಂ.ಶ್ರೀ — ಕನ್ನಡ ಸಾಹಿತ್ಯ ಚರಿತ್ರೆ : ಸಮಾಜ ಪುಸ್ತಕಾಲಯ : ಧಾರವಾಡ (೨೦೦೬)

೨೦. ರಹಮತ್ ತರೀಕೆರೆ — ಕನ್ನಡ ಸಂಶೋಧನೆ ತಾತ್ವಿಕ ವಿಚಾರ (೨೦೦೭)

೨೧. ರಾಜಪ್ಪ ದಳವಾಯಿ — ಕನ್ನಡ ಸಾಹಿತ್ಯ ಕೋಶ : ಶ್ರೀ ರಾಘವೇಂದ್ರ ಪ್ರಕಾಶನ : ಬೆಂಗಳೂರು (೨೦೦೬)

೨೨. ರಾಜೇಶ್ವರಿ ಮಹೇಶ್ವರಯ್ಯ — ಆಧುನಿಕ ವರ್ಣನಾತ್ಮಕ ಭಾಷಾ ವಿಜ್ಞಾನ : ಸಮಾಜ ಪುಸ್ತಕಾಲಯ : ಧಾರವಾಡ (೨೦೦೩)

೨೩. ಶಂಕರ್‌ರಾವ್ ಚ.ನ. — ಸಮಾಜ ಶಾಸ್ತ್ರ : ಜೈ ಭಾರತ ಪ್ರಕಾಶನ : ಮಂಗಳೂರು (೧೯೯೮)

೨೪. ಶಂಕರ್‌ರಾವ್ ಚ.ನ. — ಭಾರತೀಯ ಸಮಾಜ : ಜೈಭಾರತ ಪ್ರಕಾಶನ : ಮಂಗಳೂರು (೧೯೯೮)

೨೫. ಶಂಕರ್ ಭಟ್ ಡಿ.ಎನ್. — ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ : ಭಾಷಾ ಪ್ರಕಾಶನ : ಮೈಸೂರು (೨೦೦೬)

೨೬. ಶಂಸ ಐತಾಳ — ಭಾಷಾಂತರ ಕೈಪಿಡಿ : ತಳಗವಾದಿ ಪ್ರಕಾಶನ: ಮೈಸೂರು (೧೯೯೫)

೨೭. ಶಾಮರಾಯ ತ.ಸು. — ಕನ್ನಡ ಸಾಹಿತ್ಯ ಚರಿತ್ರೆ: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ : ಮೈಸೂರು (೧೯೯೭)

೨೮. ಶಾಮರಾಯ ತ.ಸು. ನಂಜೇಗೌಡ ಹೆಚ್. (ಸಂ.) — ಶಬ್ದಮಣಿ ದರ್ಪಣಂ : ಪ್ರಕಾಶನ : ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ : ಮೈಸೂರು (೧೯೯೯)

೨೯. ಶಾಸ್ತ್ರಿ ಜಿ.ವಿ. — ಬಸವಣ್ಣನವರ ವಚನಗಳು : ಪಾರು ಪ್ರಕಾಶನ :ಗದಗ

೩೦. ಶಿವರುದ್ರಪ್ಪ ಜಿ.ಎಸ್. — ಗತಿಬಿಂಬ : ಸುರುಚಿ ಪ್ರಕಾಶನ : ಮೈಸೂರು : (೧೯೯೬)

೩೧. ಸಂಗಮೇಶ ಸವದತ್ತಿ ಮಠ — ಕನ್ನಡ ಭಾಷಾ ಸ್ವರೂಪ : ರೂಪರಶ್ಮಿ ಪ್ರಕಾಶನ : ಧಾರವಾಡ (೨೦೦೭)

೩೨. ಹಾ.ಮಾ. ನಾಯಕ (ಸಂ.) — ಶಾಸ್ತ್ರ ಸಾಹಿತ್ಯ ನಿರ್ಮಾಣ : ಕನ್ನಡ ಅಧ್ಯಯನ ಸಂಸ್ಥೆ : ಮೈಸೂರು ವಿಶ್ವವಿದ್ಯಾಲಯ (೧೯೭೫)

AKSHARA GRANTHALAYA
ACC.NO. 130099